ಮಂಗಳವಾರ, ಜುಲೈ 16, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 197 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,664	24,586	₹75,500 (ಬೆಂಗಳೂರು)	₹94,600 (ಬೆಂಗಳೂರು)	83.61

ಶೇ 27.50ರಷ್ಟು ಫಿಟ್‌ಮೆಂಟ್ • 31ರಷ್ಟು ತುಟ್ಟಿಭತ್ಯೆ ಮೂಲವೇತನಕ್ಕೆ ವಿಲೀನ

ಪರಿಷ್ಕೃತ ವೇತನ ಆ. 1ಕ್ಕೆ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಳನೇ ವೇತನ ಆಯೋಗದ ಶಿಫಾರಸನ್ನು ಜಾರಿಗೊಳಿಸಲು ಸರ್ಕಾರ ತೀರ್ಮಾನಿಸಿದ್ದು, ಪರಿಷ್ಕೃತ ವೇತನ ಶ್ರೇಣಿ ಆಗಸ್ಟ್ 1ರಿಂದ ನೌಕರರಿಗೆ ಸಿಗಲಿದೆ.

ಪರಿಷ್ಕೃತ ವೇತನ ಶ್ರೇಣಿ ಜಾರಿ ಮಾಡದೇ ಇದ್ದರೆ ಇದೇ ತಿಂಗಳ 29ರಿಂದ ಕೆಲಸ ಸ್ಥಗಿತದ ಮುಷ್ಕರ ನಡೆಸುವುದಾಗಿ ರಾಜ್ಯ ಸರ್ಕಾರಿ ನೌಕರರ ಸಂಘ ಎಚ್ಚರಿಸಿತ್ತು. ಅಲ್ಲದೇ, ಎರಡು ಹಂತಗಳಲ್ಲಿ ಪ್ರತಿಭಟನೆಯನ್ನೂ ನಡೆಸಿತ್ತು. ಈ ಬೆಳವಣಿಗೆ ಬೆನ್ನಲ್ಲೇ, ಸೋಮವಾರ ನಡೆದ ಸಚಿವ ಸಂಪುಟ ಸಭೆ ವೇತನ ಪರಿಷ್ಕರಣೆ ಮಾಡುವ ನಿರ್ಧಾರ ಕೈಗೊಂಡಿದೆ.

ವೇತನ ಪರಿಷ್ಕರಣೆಗಾಗಿ ನಿವೃತ್ತ ಮುಖ್ಯ ಕಾರ್ಯದರ್ಶಿ ಸುಧಾಕರ್ ರಾವ್ ನೇತೃತ್ವದ ಏಳನೇ ವೇತನ ಆಯೋಗವನ್ನು ಸರ್ಕಾರ ರಚಿಸಿತ್ತು. ಶೇಕಡ 31ರಷ್ಟು ತುಟ್ಟಿಭತ್ಯೆಯನ್ನು ಮೂಲವೇತನದಲ್ಲಿ ವಿಲೀನಗೊಳಿಸುವ ಜತೆಗೆ, ಶೇ 27.50ರಷ್ಟು ಫಿಟ್‌ಮೆಂಟ್ ನೀಡುವಂತೆ ಆಯೋಗ ಶಿಫಾರಸು ಮಾಡಿತ್ತು. 2023ರ ಏಪ್ರಿಲ್ 1ರಿಂದ ಅನ್ವಯವಾಗುವಂತೆ ಶೇ 17ರಷ್ಟು ಮಧ್ಯಂತರ ಪರಿಹಾರ ನೀಡುವ ನಿರ್ಧಾರವನ್ನು ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಕೈಗೊಂಡಿತ್ತು. ಬಾಕಿ ಉಳಿದಿರುವ ಶೇ 10.50ರಷ್ಟು ನೀಡಲು ಸೋಮವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ. 2022ರ ಜುಲೈನಿಂದ ಪೂರ್ವಾನ್ವಯವಾಗುವಂತೆ ವೇತನ ಪರಿಷ್ಕರಣೆಯನ್ನು ಜಾರಿ ಮಾಡುವಂತೆ ಆಯೋಗ ಶಿಫಾರಸು ಮಾಡಿತ್ತು. ಆಯೋಗದ ಬಹುತೇಕ ಶಿಫಾರಸುಗಳಿಗೆ ಒಪ್ಪಿಗೆ ನೀಡಲಾಗಿದೆ ಎಂದೂ ಮೂಲಗಳು ಹೇಳಿವೆ.

ಈಗಾಗಲೇ ಶೇ17ರಷ್ಟು ವೇತನ ಕೊಡಲಾಗುತ್ತಿದೆ. ಅದಕ್ಕಾಗಿ, ವಾರ್ಷಿಕ ₹10 ಸಾವಿರ ಕೋಟಿ ವೆಚ್ಚ ಮಾಡಲಾಗುತ್ತಿದೆ. ಆಯೋಗದ ಶಿಫಾರಸಿನಂತೆ ಶೇ 27.50ಕ್ಕೆ ಹೆಚ್ಚಿಸಿದರೆ ವಾರ್ಷಿಕ ಸುಮಾರು ₹8 ಸಾವಿರ ಕೋಟಿ ಹೆಚ್ಚುವರಿಯಾಗಿ ಬೇಕಾಗುತ್ತದೆ ಎನ್ನಲಾಗಿದೆ.

ಆಯೋಗದ ಶಿಫಾರಸು ಏನು?: ಸುಧಾಕರ್ ರಾವ್ ನೇತೃತ್ವದ ಏಳನೇ ವೇತನ ಆಯೋಗವು ಇದೇ ಮಾರ್ಚ್ 16ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ 244 ಪುಟಗಳ ವರದಿಯನ್ನು ಸಲ್ಲಿಸಿತ್ತು.

6ನೇ ಪುಟ ನೋಡಿ

ಯಾವುದೆಲ್ಲ ಹೆಚ್ಚಳ?

- ವೇತನ ಶ್ರೇಣಿಗೆ ಅನುಗುಣವಾಗಿ, ವಾರ್ಷಿಕ ವೇತನ ಬಡ್ತಿ ದರ ಕನಿಷ್ಠ ₹400 ಇರುವವರಿಗೆ ಗರಿಷ್ಠ ₹650ಕ್ಕೆ ಹೆಚ್ಚಳ. ಕನಿಷ್ಠ ಇರುವವರಿಗೆ ₹3,100ರಿಂದ ₹5 ಸಾವಿರಕ್ಕೆ
- ಸಮವಸ್ತ್ರ ಭತ್ಯೆ, ಪ್ರಯಾಣ ಭತ್ಯೆ, ದಿನಭತ್ಯೆಗಳು ಶೇ 25ರಷ್ಟು ಹೆಚ್ಚಳ
- ಅಂಗವಿಕಲ ಮಕ್ಕಳ ಶೈಕ್ಷಣಿಕ ಭತ್ಯೆ ₹1 ಸಾವಿರದಿಂದ ₹2 ಸಾವಿರಕ್ಕೆ ಹೆಚ್ಚಳ
- ಗೃಹ ನಿರ್ಮಾಣ ಮುಂಗಡ ₹40 ಲಕ್ಷದಿಂದ ₹65 ಲಕ್ಷದವರೆಗೆ ಹೆಚ್ಚಳ
- ಗ್ರೂಪ್ ಸಿ, ಡಿ ವೃಂದದ ವೈದ್ಯಕೀಯ ಭತ್ಯೆ ₹200ರಿಂದ ₹500ಕ್ಕೆ ಹೆಚ್ಚಳ

ಸರ್ಕಾರಿ ನೌಕರರಿಗೆ ಜುಲೈ 2022ರಿಂದ ಕಾಲ್ಪನಿಕವಾಗಿ ವೇತನ ನಿಗದಿ ಮಾಡಿ, ಆಗಸ್ಟ್ 2024ರಿಂದ ಆರ್ಥಿಕ ಸೌಲಭ್ಯವನ್ನು ನೀಡಲು ಆಯೋಗ ಮಾಡಿದ ಶಿಫಾರಸಿನಂತೆ ಶೇ 27.50 ವೇತನ ನಿಗದಿಗೆ ಸಂಪುಟ ಸಭೆ ಅನುಮೋದನೆ ನೀಡಿದೆ. ರಾಜ್ಯ ಸರ್ಕಾರಕ್ಕೆ ಅಭಿನಂದನೆ

ಸಿ.ಎಸ್. ಷಡಾಕ್ಷರಿ, ಅಧ್ಯಕ್ಷ, ರಾಜ್ಯ ಸರ್ಕಾರಿ ನೌಕರರ ಸಂಘ

ಡಿಕೆಶಿ ಅರ್ಜಿ: 'ಸುಪ್ರೀಂ'ನಿಂದ ವಜಾ

ಆದಾಯ ಮೀರಿ ಆಸ್ತಿ: ಸಿಬಿಐ ಪ್ರಕರಣ ರದ್ದುಗೊಳಿಸುವ ಕೋರಿಕೆಗೆ ಸಿಗದ ಮನ್ನಣೆ

ಪ್ರಜಾವಾಣಿ ವಾರ್ತೆ


ಶಿವಕುಮಾರ್

ನವದೆಹಲಿ: ಆದಾಯ ಮೀರಿ ಆಸ್ತಿ ಗಳಿಸಿದ ಆರೋಪದಲ್ಲಿ ಸಿಬಿಐ ದಾಖಲಿಸಿರುವ ಎಫ್‌ಐಆರ್ ರದ್ದುಗೊಳಿಸುವಂತೆ ಕೋರಿ ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ಪರಿಗಣಿಸಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

ಶಿವಕುಮಾರ್ ಪರವಾಗಿ ಹಿರಿಯ ವಕೀಲ ಮುಕುಲ್ ರೋಹಟಗಿ ಅವರ ವಾದವನ್ನು ಆಲಿಸಿದ ಬಳಿಕ ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಹಾಗೂ ಸತೀಶ್ ಚಂದ್ರ ಶರ್ಮಾ ಪೀಠವು ಶಿವಕುಮಾರ್ ಅರ್ಜಿಯನ್ನು ವಜಾಗೊಳಿಸಿತು.

'ಅರ್ಜಿದಾರರದ್ದು ಎಂದು ಹೇಳಲಾದ ಕಚೇರಿಗಳ ಮೇಲೆ ಆದಾಯ ತೆರಿಗೆ ಅಧಿಕಾರಿಗಳು 2017ರ ಆಗಸ್ಟ್ 2ರಂದು ದಾಳಿ ನಡೆಸಿದ್ದರು. ಒಂದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡು ಪ್ರಕ್ರಿಯೆಗಳು ನಡೆಯಲು ಸಾಧ್ಯವಿಲ್ಲ. ಆದಾಯ ತೆರಿಗೆ ಇಲಾಖೆಯ ಪ್ರಕ್ರಿಯೆ ಜಾರಿಯಲ್ಲಿರುವಾಗ ಸಿಬಿಐ ಮತ್ತೊಂದು ಪ್ರಕ್ರಿಯೆ ನಡೆಸಲು ಸಾಧ್ಯವಿಲ್ಲ' ಎಂದು ರೋಹಟಗಿ ವಾದಿಸಿದರು.

'2018ರ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ 17ಎ ಪ್ರಕಾರ ಜನಪ್ರತಿನಿಧಿಗಳ ವಿಚಾರಣೆ ನಡೆಸುವ ಮುನ್ನ ಪೂರ್ವಾನುಮತಿ ಪಡೆಯುವುದು ಕಡ್ಡಾಯ. ಈ ನಿಯಮದ ಅನುಸಾರ ಪೂರ್ವಾನುಮತಿ ಪಡೆಯುವವರೆಗೆ ತನಿಖೆ ಮತ್ತು ವಿಚಾರಣೆಗೆ ಅವಕಾಶ ಇಲ್ಲ. ಎಫ್‌ಐಆರ್ ದಾಖಲಾಗಿರುವುದು 2020ರ ಅಕ್ಟೋಬರ್ 3ರಂದು. ಆದ್ದರಿಂದ ಸೆಕ್ಷನ್ 17ಎ ಇದಕ್ಕೆ ಅನ್ವಯವಾಗುತ್ತದೆ' ಎಂದು ಪ್ರತಿಪಾದಿಸಿದರು.

ಪ್ರಕರಣವೇನು?: 2013ರ ಏಪ್ರಿಲ್ 1ರಿಂದ 2018ರ ಏಪ್ರಿಲ್ 30ರ ಅವಧಿಯಲ್ಲಿ ಶಿವಕುಮಾರ್ ಅಕ್ರಮವಾಗಿ ₹74.93 ಕೋಟಿ ಮೌಲ್ಯದ ಆಸ್ತಿ ಗಳಿಸಿದ್ದಾರೆ ಎಂದು ಸಿಬಿಐ ಎಫ್‌ಐಆರ್ ದಾಖಲಿಸಿತ್ತು.

2013ರ ಮಾರ್ಚ್ 31ರ ವೇಳೆಗೆ ಶಿವಕುಮಾರ್ ಕುಟುಂಬ ₹33.92 ಕೋಟಿ ಆಸ್ತಿ ಹೊಂದಿತ್ತು. ಐದು ವರ್ಷಗಳಲ್ಲಿ ಅವರ ಕುಟುಂಬ ₹166.79 ಕೋಟಿಯನ್ನು ವರಮಾನ ಮತ್ತು ಇತರ ರೂಪದಲ್ಲಿ ಪಡೆದಿದೆ. ಇದೇ ಅವಧಿಯಲ್ಲಿ ₹ 113.12 ಕೋಟಿ ವೆಚ್ಚ ಮಾಡಲಾಗಿದೆ ಎಂಬ ಅಂಶ ಸಿಬಿಐ ಎಫ್‌ಐಆರ್‌ನಲ್ಲಿತ್ತು.

2018ರ ಏ.30ರ ವೇಳೆಗೆ ಆರೋಪಿತರ ಕುಟುಂಬ ₹128.60 ಕೋಟಿ ಆಸ್ತಿ ಹೊಂದಿತ್ತು. ವರಮಾನ, ಸ್ವೀಕೃತಿ ಮತ್ತು ವೆಚ್ಚಕ್ಕೆ ಹೋಲಿಸಿದರೆ ಶೇಕಡ 44.93ರಷ್ಟು ಹೆಚ್ಚುವರಿ ಆಸ್ತಿ ಇರುವುದು ಪ್ರಾಥಮಿಕ ತನಿಖೆ ವೇಳೆ ಪತ್ತೆಯಾಗಿದೆ ಎಂದು ಸಿಬಿಐ ಎಫ್‌ಐಆರ್‌ನಲ್ಲಿ ಉಲ್ಲೇಖಿಸಿತ್ತು. ಶಿವಕುಮಾರ್ ವಿರುದ್ಧ 2020ರ ಅ. 3ರಂದು ಪ್ರಕರಣ ದಾಖಲಿಸಿದ್ದ ಸಿಬಿಐ, ತನಿಖೆ ನಡೆಸುತ್ತಿತ್ತು. ಸಿಬಿಐ ತನಿಖೆಗೆ ನೀಡಿದ್ದ ಅನುಮತಿಯನ್ನು ಹಿಂಪಡೆದಿದ್ದ ಕಾಂಗ್ರೆಸ್ ಸರ್ಕಾರ, ಪ್ರಕರಣದ ತನಿಖೆಯನ್ನು ಲೋಕಾಯುಕ್ತಕ್ಕೆ ವಹಿಸಿತ್ತು. ಇದನ್ನು ಹೈಕೋರ್ಟ್‌ನಲ್ಲಿ ಸಿಬಿಐ ಪ್ರಶ್ನಿಸಿದ್ದು, ವಿಚಾರಣಾ ಹಂತದಲ್ಲಿದೆ.

ಹೈಕೋರ್ಟ್ ಆದೇಶಕ್ಕೆ ನ್ಯಾಯಪೀಠ ಅಚ್ಚರಿ

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಜನಪ್ರತಿನಿಧಿಗಳ ವಿರುದ್ಧ ತನಿಖೆ ಮತ್ತು ವಿಚಾರಣೆ ನಡೆಸುವ ಮುನ್ನ ಪೂರ್ವಾನುಮತಿ ಪಡೆಯಬೇಕು ಎಂಬ ವಿಷಯಕ್ಕೆ ಸಂಬಂಧಿಸಿದಂತೆ 2024ರ ಜನವರಿ 16ರಂದು ಸುಪ್ರೀಂ ಕೋರ್ಟ್ ವಿಭಜಿತ ತೀರ್ಪು ನೀಡಿದೆ. ಇದನ್ನು ಪ್ರಸ್ತಾಪಿಸಿದ ಮುಕುಲ್ ರೋಹಟಗಿ, 'ಈ ವಿಷಯವು ವಿಸ್ತೃತ ಪೀಠದ ಮುಂದಿದ್ದರೂ ಸೆಕ್ಷನ್ 17ಎ ನಿಯಮಕ್ಕೆ ಸಂಬಂಧಿಸಿದಂತೆ ನ್ಯಾಯಮೂರ್ತಿಗಳು ನನ್ನ ವಾದದ ಪರವಾಗಿದ್ದಾರೆ' ಎಂದರು. ಆಗ ನ್ಯಾಯಪೀಠವು 'ಯಾವುದೇ ಪ್ರಕರಣವನ್ನು ರದ್ದುಗೊಳಿಸಲು ವಿಭಜಿತ ತೀರ್ಪು ಆಧಾರವಾಗದು' ಎಂದು ಅಭಿಪ್ರಾಯಪಟ್ಟಿತು.

ಆಗ ರೋಹಟಗಿ, 'ಅರ್ಜಿದಾರರ ವಿರುದ್ಧದ ಜಾರಿ ನಿರ್ದೇಶನಾಲಯದ ಪ್ರಕರಣವನ್ನು ಸುಪ್ರೀಂ ಕೋರ್ಟ್ ಈಗಾಗಲೇ ರದ್ದುಗೊಳಿಸಿದೆ' ಎಂದರು. ಆದರೆ, ನ್ಯಾಯಪೀಠ, 'ಸಿಬಿಐ ಪ್ರಕರಣ ಪ್ರತ್ಯೇಕ ಹಾಗೂ ವಿಭಿನ್ನವಾದುದು. ಈ ಪ್ರಕರಣದಲ್ಲಿ ₹41 ಲಕ್ಷ ಪತ್ತೆಯಾಗಿದೆ. ಹೀಗಾಗಿ, ಪ್ರಕರಣವನ್ನು ರದ್ದುಗೊಳಿಸಲಾಗದು' ಎಂದು ಸ್ಪಷ್ಟಪಡಿಸಿತು.

ವಿಚಾರಣೆಯ ಆರಂಭದಲ್ಲಿ ನ್ಯಾಯಪೀಠವು, 'ರಾಜ್ಯ ಸರ್ಕಾರ ನೀಡಿರುವ ಪೂರ್ವಾನುಮತಿಯ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಲು ಹೇಗೆ ಸಾಧ್ಯ? ಈ ಬಗ್ಗೆ ನಾವೆಂದೂ ಕೇಳೇ ಇಲ್ಲ' ಎಂದು ಅಚ್ಚರಿ ವ್ಯಕ್ತಪಡಿಸಿತು.

ಸತತ ಮಳೆ ಮೈದುಂಬಿದ ನದಿಗಳು

ಮಂಗಳೂರು/ಶಿವಮೊಗ್ಗ: ರಾಜ್ಯದ ಮಲೆನಾಡು, ಕರಾವಳಿ ಜಿಲ್ಲೆಗಳು ಸೇರಿದಂತೆ ಬಹುತೇಕ ಕಡೆಗಳಲ್ಲಿ ಸೋಮವಾರ ಉತ್ತಮ ಮಳೆಯಾಗಿದೆ. ನದಿಗಳು ಮೈದುಂಬಿದ್ದರೆ, ಜಲಪಾತಗಳು ಧುಮ್ಮಿಕ್ಕುತ್ತಿವೆ. ಪಶ್ಚಿಮ ಘಟ್ಟ ಪ್ರದೇಶದಲ್ಲಿ ಸುರಿದ ಭಾರಿ ಮಳೆಯಿಂದಾಗಿ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಕುಮಾರಧಾರಾ ನದಿ ಉಕ್ಕಿ ಹರಿದು ಸ್ನಾನಘಟ್ಟ ಮುಳುಗಡೆಯಾಗಿದೆ. 4B

'ಸಿ.ಎಂ ಮೂಗಿನಡಿ ದಲಿತರ ಹಣ ಲೂಟಿ'

ಬೆಂಗಳೂರು: 'ವಾಲ್ಮೀಕಿ ಅಭಿವೃದ್ಧಿ ನಿಗಮದ ₹187 ಕೋಟಿ ಲೂಟಿ ಪೂರ್ವಯೋಜಿತ ಸಂಚು. ದಲಿತರ ಹಣವನ್ನು ಚುನಾವಣೆಗಾಗಿ ಗೋಲ್‌ಮಾಲ್ ಮಾಡಿ ಲಪಟಾಯಿಸಲಾಗಿದೆ. ದಲಿತರ ಶಾಪ ನಿಮಗೆ ತಟ್ಟದೇ ಬಿಡದು' ಎಂದು ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. 6

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯ ರಸ್ತೆ, ಬೆಂಗಳೂರು–560 099.
ಫೋನ್: 080–27835122, ಫ್ಯಾಕ್ಸ್: 080–27836569, www.anekal.tpa.gov.in, www.e-vinyasa.kar.nic.in

ಸಂ:ಆಯೋಪ್ರ/ಭೂ.ಉ.ನಿ/12/2024–25 ದಿನಾಂಕ: 12.07.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ.ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಎಸ್.ಎಂ. ವೆಂಕಟರೆಡ್ಡಿ ಬಿನ್ ಲೇ. ಮುನಿಯಪ್ಪ, ಶ್ರೀ ಎಸ್.ಎಂ. ಪಾಪರೆಡ್ಡಿ ಬಿನ್ ಲೇ. ಮುನಿಯಪ್ಪ ಮತ್ತು ಶ್ರೀ ಎಸ್.ಎಂ. ಗೋಪಾಲರೆಡ್ಡಿ ಬಿನ್ ಲೇ. ಮುನಿಯಪ್ಪ,	ಆನೇಕಲ್	ಸರ್ಜಾಪುರ	ಸೋಂಪುರ	26/3	0–07.08	ಕೈಗಾರಿಕೆ	ವಾಣಿಜ್ಯ
2	ಶ್ರೀ ಎಂ. ವೆಂಕಟರೆಡ್ಡಿ ಬಿನ್ ಲೇ. ಮುನಿಯಪ್ಪ, ಶ್ರೀಮತಿ ಎಸ್.ಪಿ. ನಾಗಲೀಲಾವತಿ, ಶ್ರೀಮತಿ ಎಸ್.ಪಿ. ಲಕ್ಷ್ಮೀ ಬಿನ್ ಪಾಪಾರೆಡ್ಡಿ	ಆನೇಕಲ್	ಸರ್ಜಾಪುರ	ಸೋಂಪುರ	26/7	0–14	ಕೈಗಾರಿಕೆ	ವಾಣಿಜ್ಯ

ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗವಕಾಶ ಸೃಷ್ಟಿಯಾಗುತ್ತದೆ. ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡಿದಂತಾಗುತ್ತದೆ. ಇದರಿಂದ ನಗರ ಪ್ರದೇಶದ ಸಮಗ್ರ ಅಭಿವೃದ್ಧಿ ಹೊಂದುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ಕೈಗಾರಿಕಾ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಸದಸ್ಯ ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್.

ವಾಸಾಸಂಇ/ವಾಪ್ರ/ಜಿಎ/931/2024–25

SOBHA LIMITED

CIN : L45201KA1995PLC018475
Regd. Office: 'SOBHA'
Sarjapur – Marathahalli Outer Ring Road (ORR), Devarabisanahalli, Bellandur Post
Bangalore - 560 103
Ph: +91-80-49320000
email: investors@sobha.com
www.sobha.com

SOBHA
PASSION AT WORK

NOTICE OF 29TH ANNUAL GENERAL MEETING, E-VOTING INFORMATION AND RECORD DATE/BOOK CLOSURE

NOTICE is hereby given that the 29th Annual General Meeting (AGM) of the members of the Company will be held on Wednesday, the 07th day of August 2024 at 3.00 p.m. (IST) through Video Conferencing (VC) facility / Other Audio-Visual Means (OVAM), to transact the business as set out in the Notice of AGM. In accordance with the General Circular 09/2023 dated September 25, 2023 and other Circular issued by the Ministry of Corporate Affairs and Circular SEBI/HO/CFD/PoD-2/P/CIR/2023/167 dated October 07, 2023 and other Circular issued by Securities and Exchange Board of India (hereinafter collectively referred to as "the Circulars"), the Annual Report 2023-24, containing the Notice of Annual General Meeting is being despatched through electronic mode by M/s. Link Intime India Private Limited on 15th July, 2024 to those Members whose e-mail addresses are registered with the Company or Registrar and Transfer Agent and Depositories.

The Annual Report 2023-24 of the Company, inter alia, containing the Notice setting out the ordinary business and special business proposed to be transacted at the meeting and the Explanatory Statement of the 29th AGM is available on the website of the Company at www.sobha.com and on the websites of the Stock Exchanges viz. www.bseindia.com and www.nseindia.com A copy of the same is also available on the website of Link Intime India Private Limited i.e. https://instavote.linkintime.co.in

The Members are requested to refer the AGM Notice, for instructions for attending the AGM through VC/ OAVM.

Remote e-Voting:

In compliance with Section 108 of the Companies Act, 2013 ('the Act') read with Rule 20 of the Companies (Management and Administration) Rules, 2014, as amended from time to time, the Secretarial Standard on General Meetings ('SS-2') issued by the Institute of Company Secretaries of India and Regulation 44 of the SEBI (Listing Obligations and Disclosure Requirements) Regulations, 2015, the Company is providing to its Members the facility of remote e-Voting before as well as during the AGM in respect of the business to be transacted at the AGM and the Company has appointed Link Intime India Private Limited (Link Intime) for facilitating voting through electronic means.

The detailed instructions for remote e-Voting are given in the Notice of the AGM. Members are requested to note the following:

a. The remote e-Voting facility shall commence on **Sunday, August 04, 2024, at 9.00 a.m. (IST) and ends on Tuesday 06, 2024, at 5.00 p.m. (IST).** The e-Voting Module shall be disabled by Link Intime for voting thereafter. Once the vote on a resolution is cast by a member, it cannot be changed subsequently.

b. Those members, who will be present at the AGM through VC / OAVM facility and have not cast their vote on the resolutions through remote e-voting and are otherwise not barred from doing so, shall be eligible to vote through e-Voting system during the AGM.

c. A person whose name is recorded in the Register of Members / Register of Beneficial Owners as on the Cut-off Date i.e. **Thursday, August 01, 2024,** only shall be entitled to avail the facility of remote e-Voting / e-Voting at the AGM.

d. The members who have caste their vote(s) by remote e-Voting may also attend the AGM but shall not be entitled to caste their vote(s) again at the AGM.

e. Any person who acquires shares of the Company and becomes a Member of the Company after the dispatch of the Notice and holds shares as on the Cut-off Date, may obtain the login-id and password for remote e-Voting by sending a request at evoting@linkintime.co.in / enotices@linkintime.co.in or may contact on toll free number 022-49186000, as provided by Link Intime. A person who is not a Member as on the Cut-off Date should treat the Notice of the AGM for information purposes only.

Procedure for registration of e-mail address and bank details by shareholders:

a. **For Temporary Registration for Demat shareholders:** The Members of the Company holding Equity Shares of the Company in Demat Form and who have not registered their e-mail addresses may temporarily get their e-mail addresses registered with Link Intime India Private Limited by clicking the link: https://linkintime.co.in/emailreg/email_register.html at their web site www.linkintime.co.in at the Investor Services tab by choosing the E-mail Registration heading and follow the registration process as guided therein. The members are requested to provide details such as Name, DPID, Client ID/ PAN, mobile number and e-mail id. In case of any query, a member may send an e-mail to RTA at rnt.helpdesk@linkintime.co.in On submission of the shareholders details, an OTP will be received by the shareholder which needs to be entered in the link for verification.

b. **For Permanent Registration for Demat shareholders:** Members holding shares in demat form are requested to update the same with their Depository Participant by following the procedure prescribed by the Depository Participants.

c. **Registration of email id for shareholders holding physical shares:** The Members of the Company holding Equity Shares of the Company in physical Form and who have not registered their e-mail addresses may get their e-mail addresses registered with M/s. Link Intime India Pvt Ltd, by clicking the link: https://linkintime.co.in/emailreg/email_register.html at their web site www.linkintime.co.in at the Investor Services tab by choosing the E-mail / Bank Registration heading and follow the registration process as guided therein. The members are requested to provide details such as Name, Folio Number, Certificate number, PAN, mobile number and e-mail id and also upload the image of share certificate in PDF or JPEG format (up to 1 MB). In case of any query, member may send an e-mail to RTA at rnt.helpdesk@linkintime.co.in

d. **Registration of Bank Details for physical shareholders:** The Members of the Company holding Equity Shares of the Company in physical Form and who have not registered their bank details can get the same registered with Link Intime India Pvt. Ltd., by clicking the link: https://linkintime.co.in/emailreg/email_register.html at their web site www.linkintime.co.in at the Investor Services tab by choosing the E-mail / Bank Registration heading and follow the registration process as guided therein. The members are requested to provide details such as Name, Folio Number, Certificate number, PAN, e-mail id along with the copy of the cheque leaf with the first named shareholders name imprinted at the face of the cheque leaf containing bank name and branch, type of account, bank account number, MICR details and IFSC code in PDF or JPEG format. In case of any query, a member may send an e-mail to RTA at rnt.helpdesk@linkintime.co.in On submission of the shareholders details an OTP will be received by the shareholder which needs to be entered in the link for verification.

The Members who require technical assistance before / during the Meeting to access and participate at the AGM may refer the Frequently Asked Questions ('FAQs') and InstaVote e-Voting manual available at https://instavote.linkintime.co.in under Help section or send an email to enotices@linkintime.co.in or contact on: - Tel: 022 - 4918 6000/6270.

Record Date/Book Closure and Dividend:

The Record date for the purpose of determining entitlement of shareholders for the final dividend for the F.Y. 2023-24 is Friday, July 26, 2024, and the Register of Members and the Share Transfer Books of the Company will remain closed on Friday, July 26, 2024. The final dividend of ₹ 3.00 per equity share of ₹ 10/- recommended by the Board of Directors, if approved by the members of the Company at the AGM, will deposited in a separate bank account within 5 days from the date of AGM and will be paid to the shareholders as per the provisions of the Companies Act, 2013. In case the Company is unable to pay the dividend to any Member in their bank accounts through electronic or any other means, due to non-registration of bank account details by the Members, the Company shall dispatch the dividend warrant / cheque to such Members through postal services/courier services.

Option to seek speakers' registration:

Members who would like to express their views or ask questions during the AGM may register themselves as a speaker by sending their request from their registered email address mentioning their name, DP ID and Client ID/folio number, PAN, mobile number at investors@sobha.com from August 01, 2024 (9:00 a.m. IST) to August 05, 2024 (5:00 p.m. IST). Those Members who have registered themselves as a speaker will only be allowed to express their views/ask questions during the AGM. The Company reserves the right to restrict the number of speakers depending on the availability of time for the AGM.

Members may note that as per the Income-tax Act, 1961, dividend income is taxable in the hands of Members and the Company is required to deduct tax at source (TDS) from dividend paid to the members at rates prescribed in the Income Tax Act, 1961. Members are requested to submit the documents in accordance with the provisions of Income Tax Act, 1961 at investors@sobha.com

In case of any queries or grievances, please write to rnt.helpdesk@linkintime.co.in/ investors@sobha.com or contact to Tel: 022 - 4918 6270.

By order of the Board
for Sobha Limited
Sd/-
Bijan Kumar Dash
Company Secretary and Compliance Officer

Bengaluru, India
July 15, 2024

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಹೈರಿಂಗ್‌ಬ್ಲ್ಯಾಕ್‌ಸ್ಮಿತ್_15ಎನ್‌ಓ_ಎಸ್‌ಎನ್‌ಟಿ ದಿನಾಂಕ : 10–07–2024
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿ ಎಸ್&ಟಿ ನಿರ್ವಹಣಾ ಚಟುವಟಿಕೆಗಳಲ್ಲಿ ಸಹಾಯಕ್ಕಾಗಿ ಕಮ್ಮಾರರ ಹೊರಗುತ್ತಿಗೆ.	ರೂ. 1,29,90,120/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 01–08–2024 ರಂದು 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್ ಇಂಜಿನಿಯರ್, ಬೆಂಗಳೂರು
ಪಿಯುಬಿ/263/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25
South Western Railway - SWR SWRRLY SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಎಸ್‌ಎನ್‌ಟಿ_ಟಿಎಂಎಸ್‌ವರ್ಕ್_ಟಿಡಿವಿ_ಆರ್‌ಇಪಿಐ_ಎಸ್‌ಕೆಪಿಟಿ ದಿನಾಂಕ : 10–07–2024
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದ ತೊಂಡೇಭಾವಿ, ರಂಗೆಪಲ್ಲಿ ಮತ್ತು ಸೋಮನಾಯಕ್ಕನಪಟ್ಟಿ ನಿಲ್ದಾಣಗಳಲ್ಲಿ ಟ್ರ್ಯಾಕ್ ಮೆಶೀನ್ ಸೈಡಿಂಗ್ ಕಾಮಗಾರಿಗೆ ಸಂಬಂಧಿಸಿದಂತೆ ಎಸ್&ಟಿ ಕಾಮಗಾರಿಗಳು.	ರೂ. 1,00,87,414.56

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 01–08–2024 ರಂದು 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್ ಇಂಜಿನಿಯರ್, ಬೆಂಗಳೂರು
ಪಿಯುಬಿ/262/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25
South Western Railway - SWR SWRRLY SWRRLY


ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಹೈರಿಂಗ್_ಎಂಪಿಎಫ್‌ಓಐಎಸ್_ರೈಲ್‌ನೆಟ್_ಎಸ್‌ಬಿಸಿ, ದಿನಾಂಕ : 10–07–2024
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ಮತ್ತು ಯಶವಂತಪುರದಲ್ಲಿನ ಡಿಆರ್‌ಎಂ ಕಟ್ಟಡ ಸಂಬಂಧಿತ ಕಛೇರಿಗಳು, ರೈಲ್ವೆ ಕಾಲೋನಿಯಲ್ಲಿ ಹೊಸ ಸಂಪರ್ಕವನ್ನು ಒದಗಿಸುವುದರೊಂದಿಗೆ ರೈಲ್‌ನೆಟ್ / ಎಫ್‌ಓಐಎಸ್ ನೆಟ್‌ವರ್ಕ್‌ನ ನಿರ್ವಹಣೆ ಮತ್ತು ಮೇಲ್ವಿಚಾರಣೆಗಾಗಿ ಹೆಚ್ಚು ಕೌಶಲ್ಯಪೂರ್ಣ, ಅರೆ–ಕೌಶಲ್ಯ ಮತ್ತು ಕೌಶಲ್ಯ ರಹಿತ ಮಾನವ ಸಂಪನ್ಮೂಲವನ್ನು 2 ವರ್ಷಗಳ ಅವಧಿಗೆ ಗುತ್ತಿಗೆ ಪಡೆಯುವುದು.	ರೂ. 88,80,408/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 01–08–2024 ರಂದು 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್ ಇಂಜಿನಿಯರ್, ಬೆಂಗಳೂರು
ಪಿಯುಬಿ/261/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25
South Western Railway - SWR SWRRLY SWRRLY

ಬೋರಲಿಂಗಯ್ಯ ಜಾನಪದ ಪರಿಷತ್ತಿನ ಅಧ್ಯಕ್ಷ



ಬೆಂಗಳೂರು: ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾಗಿ ಹಿ.ಚಿ. ಬೋರಲಿಂಗಯ್ಯ ಆಯ್ಕೆಯಾಗಿದ್ದಾರೆ.

ಕರ್ನಾಟಕ ಜಾನಪದ ಪರಿಷತ್ತಿನಲ್ಲಿ ಸೋಮವಾರ ನಡೆದ 128ನೇ ಆಡಳಿತ ಮಂಡಳಿ ಸಭೆಯಲ್ಲಿ ಹಿ.ಚಿ. ಬೋರಲಿಂಗಯ್ಯ ಅವರನ್ನು ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು ಎಂದು ಪ್ರಕಟಣೆ ತಿಳಿಸಿದೆ.

ಕೇಂದ್ರೀಯ ರೇಷ್ಮೆ ತಾಂತ್ರಿಕ ಸಂಶೋಧನ ಸಂಸ್ಥೆ

ಕೇಂದ್ರೀಯ ರೇಷ್ಮೆ ಮಂಡಳಿ
ಜವಳಿ ಮಂತ್ರಾಲಯ–ಭಾರತ ಸರ್ಕಾರ
ಸಿಎಸ್‌ಬಿ ಕಾಂಪ್ಲೆಕ್ಸ್, ಬಿಟಿಎಮ್ ಬಡಾವಣೆ, ಮಡಿವಾಳ, ಬೆಂಗಳೂರು – ೫೬೦ ೦೬೮ ಕರ್ನಾಟಕ

File No.CSB-CSTRI/3(284)/2024-ES **ನೇರ–ಸಂದರ್ಶನ** ದಿನಾಂಕ: 16-07-2024

30.11.2025 ರವರೆಗಿನ ಅವಧಿಗೆ **ಪ್ರಾಜೆಕ್ಟ್ ಅಸಿಸ್ಟೆಂಟ್** (1ಸಂ.) ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. (ಯೋಜನೆಯ ಹೆಸರು: "ರೇಷ್ಮೆ ಕೈಮಗ್ಗ ಉದ್ಯಮದಲ್ಲಿ ಎರಡನೇ ತಲೆಮಾರಿನ ಉದ್ಯಮಿಗಳ ಗುಣಲಕ್ಷಣಗಳು ಮತ್ತು ಮನವೊಲಿಸುವ ಅಂಶಗಳ ಮೇಲೆ ಅಧ್ಯಯನ") ಪ್ರಾಜೆಕ್ಟ್ ಅಸಿಸ್ಟೆಂಟ್ ಅವಧಿಯು, ಯೋಜನೆಯ ಅವಧಿಯೊಂದಿಗೆ ಮುಕ್ತಾಯವಾಗುತ್ತದೆ.

ಆಸಕ್ತ ಅಭ್ಯರ್ಥಿಗಳು **06.08.2024** ರಂದು ಬೆಳಿಗ್ಗೆ **10.00 ಗಂಟೆಗೆ** ವಾಕ್–ಇನ್–ಸಂದರ್ಶನಕ್ಕೆ ಹಾಜರಾಗಬಹುದು. ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟನ್ನು ನೋಡಿ: **csb.gov.in** ಮತ್ತು **cstri.res.in**

ನಿರ್ದೇಶಕ
CBC 41109/12/0006/2425

ಭಾರತ ಸರ್ಕಾರ
ಸಂಪರ್ಕ ಸಚಿವಾಲಯ, ದೂರಸಂಪರ್ಕ ಇಲಾಖೆ

ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ, ನವದೆಹಲಿ, ಇಲ್ಲಿ ಪೂರ್ಣಾವಧಿಯ ಸದಸ್ಯರ ಎರಡು ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ

ಭಾರತ ಸರ್ಕಾರ, ಸಂಪರ್ಕ ಸಚಿವಾಲಯ, ದೂರಸಂಪರ್ಕ ಇಲಾಖೆಯು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರದಲ್ಲಿ (TRAI) ಎರಡು ಪೂರ್ಣಾವಧಿಯ ಸದಸ್ಯರ ಹುದ್ದೆಗಳಿಗೆ ಭಾರತೀಯ ಪ್ರಜೆಗಳಿಂದ ಅರ್ಜಿಗಳನ್ನು ಆಹ್ವಾನಿಸುತ್ತದೆ.

TRAI ಭಾರತೀಯ ಟೆಲಿಕಾಂ ನಿಯಂತ್ರಣ ಪ್ರಾಧಿಕಾರ ಕಾಯಿದೆ, 1997 ರ ಅಡಿಯಲ್ಲಿ ಸ್ಥಾಪಿಸಲಾದ ಶಾಸನಬದ್ಧ ಸ್ವಾಯತ್ತ ಸಂಸ್ಥೆಯಾಗಿದೆ. ಇದು ದೂರಸಂಪರ್ಕ ಸೇವೆಗಳನ್ನು ನಿಯಂತ್ರಿಸಲು, ವಿವಾದಗಳನ್ನು ನಿರ್ಣಯಿಸಲು, ಮೇಲ್ಮನವಿಗಳನ್ನು ವಿಲೇವಾರಿ ಮಾಡಲು ಮತ್ತು ಟೆಲಿಕಾಂ ಕ್ಷೇತ್ರದ ಸೇವಾ ಪೂರೈಕೆದಾರರು ಹಾಗೂ ಗ್ರಾಹಕರ ಹಿತಾಸಕ್ತಿಗಳನ್ನು ರಕ್ಷಿಸುವುದು ಮತ್ತು ಟೆಲಿಕಾಂ ಕ್ಷೇತ್ರದ ಕ್ರಮಬದ್ಧ ಬೆಳವಣಿಗೆಯನ್ನು ಉತ್ತೇಜಿಸುವುದು ಈ ಪ್ರಾಧಿಕಾರದ ಹೊಣೆಯಾಗಿದೆ.

ವಿವರವಾದ ಅರ್ಹತಾ ಷರತ್ತುಗಳು ಮತ್ತು ನೇಮಕಾತಿಯ ಇತರ ನಿಯಮಗಳು ಮತ್ತು ಷರತ್ತುಗಳನ್ನು ವೆಬ್‌ಸೈಟ್‌ಗಳಲ್ಲಿ www.dot.gov.in ಅಥವಾ http://www.trai.gov.in ಅಥವಾ http://www.dopt.gov.in ನೋಡಬಹುದು.

CBC-06201/11/0003/2425

ಚಿತ್ರಕಲಾ ಸ್ಪರ್ಧೆ

ಬೆಂಗಳೂರು: 'ಕಲಾದರ್ಪಣ ಆರ್ಟ್ ರಿಫ್ಲೆಕ್ಟ್' ಸಂಸ್ಥೆ ಸ್ವಾತಂತ್ರ್ಯೋತ್ಸವದ ಅಂಗವಾಗಿ ಆಗಸ್ಟ್ 4ರಂದು ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ಬಸವನಗುಡಿಯ ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಆಯೋಜಿಸಿದೆ.

ಸ್ಪರ್ಧೆಯನ್ನು 3 ವರ್ಗಗಳಾಗಿ ವಿಂಗಡಿಸಿದ್ದು, 8, 12 ಮತ್ತು 16 ವರ್ಷದ ಮಕ್ಕಳು ಪಾಲ್ಗೊಳ್ಳಬಹುದು. ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ಮಕ್ಕಳಿಗೆ ಪ್ರಮಾಣಪತ್ರ, ವಿಜೇತರಿಗೆ ಬಹುಮಾನ ನೀಡಲಾಗುವುದು. ಆಸಕ್ತರು 93806 71947 ಸಂಖ್ಯೆಗೆ ಕರೆ ಮಾಡಿ ನೋಂದಾಯಿಸಿಕೊಳ್ಳಬಹುದು ಎಂದು ಸಂಸ್ಥೆಯ ಕಾರ್ಯದರ್ಶಿ ವಿನಾಯಕ ಪಾಟೀಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಾಂಧಿನಗರ ಮತ್ತು ಬನಶಂಕರಿ 2ನೇ ಹಂತದಲ್ಲಿರುವ ಯಾದವ ವಿದ್ಯಾರ್ಥಿ ನಿಲಯದ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

2024–25ನೇ ಶೈಕ್ಷಣಿಕ ಸಾಲಿನಲ್ಲಿ ಪಿಯುಸಿ, ತಾಂತ್ರಿಕ ಮತ್ತು ವೈದ್ಯಕೀಯ ವಿಷಯಗಳಲ್ಲಿ ಓದುತ್ತಿರುವ ಯಾದವ (ಗೊಲ್ಲ) ಜನಾಂಗದ ಶೇಕಡ 85ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು ಆ. 3ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಗೌರವ ಕಾರ್ಯದರ್ಶಿ, ಯಾದವ ವಿದ್ಯಾರ್ಥಿನಿಲಯ, ಗಾಂಧಿನಗರ, ಬೆಂಗಳೂರು–09. ಮಾಹಿತಿಗೆ: 080–22261320.



Lowicz Folk Dance, Poland



Gaudi's La Sagrada Familia Cathedral, Spain

ವೀಣಾ ವರ್ಲ್ಡ್ ಯೂರೋಪ್

ನಾರ್ದರ್ನ್ ಯೂರೋಪ್, ವೆಸ್ಟರ್ನ್ ಯೂರೋಪ್, ಈಸ್ಟರ್ನ್ ಯುರೋಪ್, ಬಾಲ್ಟಿಕ್ ಯೂರೋಪ್, ಮೆಡಿಟರೇನಿಯನ್ ಯೂರೋಪ್...

ಯು ನೇಮ್ ಇಟ್, ವಿ ಹ್ಯಾವ್ ಇಟ್....

ವೀಣಾ ವರ್ಲ್ಡ್ ಯೂರೋಪ್ ಗಾಗಿ ವಿಶಾಲ ಶ್ರೇಣಿಯ ಆಯ್ಕೆಗಳನ್ನು ಹೊಂದಿದೆ. ವೀಣಾ ವರ್ಲ್ಡ್ ರಿಯಾಯಿತಿ ಹಾಗೂ ಇತರ ಯಾವುದೇ ಅಡಗಿದ ವೆಚ್ಚ ಅಥವಾ ಗಿಮಿಕ್ ಗಳನ್ನು ಹೊಂದಿಲ್ಲ! ನಿಮ್ಮ ಪ್ರೀತಿಪಾತ್ರರೊಂದಿಗೆ ಸಂತೋಷದ ಕ್ಷಣಗಳನ್ನು ಆನಂದಿಸುವಂತೆ ಮಾಡುವುದು ವೀಣಾ ವರ್ಲ್ಡ್ ರವರ ಪ್ಯಾಶನ್ ಆಗಿದೆ. ಅದಕ್ಕಾಗಿಯೇ ಕಳೆದ ಏಪ್ರಿಲ್ ನಿಂದ ಜೂನ್ ವರೆಗಿನ ಮೂರು ತಿಂಗಳಲ್ಲಿ 11 ಸಾವಿರ ಪ್ರವಾಸಿಗರು ವೀಣಾ ವರ್ಲ್ಡ್ ನೊಂದಿಗೆ ಯುರೋಪ್ ಗೆ ಪ್ರಯಾಣಿಸಿ ಯುರೋಪ್ ನೋಡುವ ಕನಸನ್ನು ನನಸು ಮಾಡಿಕೊಂಡಿದ್ದಾರೆ.

ನೌ ಲೆಟ್ಸ್ ಗೋ... ಲೆಟ್ಸ್ ಗೋ!

ವೀಣಾ ವರ್ಲ್ಡ್ ಟೂರ್ ನೊಂದಿಗೆ ಸಮಸ್ಯಾರಹಿತವಾಗಿ ಪ್ರಯಾಣಿಸಿ ಮ್ಯಾನೇಜರ್ ಟೂರ್ ನಲ್ಲಿ ನಿಮ್ಮ ಸೇವೆಯಲ್ಲಿ



Hot Air Balloons. Goreme, Cappadocia, Turkey

ಚಲೋ, ಭಾಗ್ ಭರೋ, ನಿಕಾಲ್ ಪಡೋ ಟು ಯೂರೋಪ್ ವಿತ್ ವೀಣಾ ವರ್ಲ್ಡ್!

50+ ಯೂರೋಪ್ ಟೂರ್ ಆಯ್ಕೆಗಳು ಮತ್ತು ಪ್ರಯಾಣದ ವಿವರಗಳಿಗಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮತ್ತೇಕೆ ಕಾಯುತ್ತಿದ್ದೀರಿ? ಟೂರ್ ವೇಗವಾಗಿ ಭರ್ತಿಯಾಗುತ್ತಿದೆ... ಇಂದೇ ಬುಕ್ ಮಾಡಿ!

ಯೂರೋಪಿಯನ್ ಹೈಲೈಟ್ಸ್	ಸ್ವಿಸ್ ಆಸ್ಟ್ರಿಯಾ	ಇಂಗ್ಲೆಂಡ್ ಸ್ಕಾಟ್ಲ್ಯಾಂಡ್ ಐರ್ಲ್ಯಾಂಡ್ ವೇಲ್ಸ್ ಲಂಡನ್	ಸ್ಕ್ಯಾಂಡಿನೇವಿಯಾ ನಾರ್ದರ್ನ್ ಲೈಟ್ಸ್	ಉಜ್ಬೆಕಿಸ್ತಾನ್ ಕಜಕಿಸ್ತಾನ್ ಕಿರ್ಗಿಸ್ತಾನ್	ಬೆಸ್ಟ್ ಆಫ್ ಜಾರ್ಜಿಯಾ	ಆಲ್ ಆಫ್ ಈಸ್ಟರ್ನ್ ಯೂರೋಪ್	ಬೆಸ್ಟ್ ಆಫ್ ಟರ್ಕಿ	ಸ್ಪೇನ್ ಪೋರ್ಚುಗಲ್
270000	235000	335000	375000	180000	150000	305000	155000	280000
11D - Oct 14	8D - Aug 27	13D - Oct 10	9D - Dec 5	9D - Aug 18	7 Days - Aug 21	15D - Sept 23	10D - Sept 14	13D - Aug 16
EMI ₹ 15072	EMI ₹ 7924	EMI ₹ 11296	EMI ₹ 20785	EMI ₹ 6070	EMI ₹ 5058	EMI ₹ 10285	EMI ₹ 7418	EMI ₹ 15616

ವೀಣಾ ವರ್ಲ್ಡ್‌ನ ಎಲ್ಲವನ್ನೂ ಒಳಗೊಂಡ ಗುಂಪು ಪ್ರವಾಸಗಳಿಂದ ಆಯ್ಕೆಮಾಡಿ. veenaworld.comನಲ್ಲಿ ಭಾರತ ಮತ್ತು ಪ್ರಪಂಚದಾದ್ಯಂತ ಇನ್ನೂ ಅನೇಕ ರೋಮಾಂಚಕಾರಿ ಪ್ರವಾಸಗಳನ್ನು ಹುಡುಕಿ

ಯೂರೋಪ್ - ವೆಸ್ಟರ್ನ್ ಈಸ್ಟರ್ನ್ ನಾರ್ದರ್ನ್ ಮೆಡಿಟರೇನಿಯನ್ - 50+ ಟೂರ್ ಆಯ್ಕೆಗಳು

ಯೂರೋಪಿಯನ್ ಎಕ್ಸ್‌ಪ್ಲೋರರ್ (27D) 525000-545000
ಯೂರೋಪಿಯನ್ ಡ್ರೀಮ್ (23D) 475000 - 495000
ಯೂರೋಪಿಯನ್ ಮ್ಯಾಜಿಕ್ (20D) 435000-455000
ಯೂರೋಪಿಯನ್ ಮಾರ್ವೆಲ್ಸ್ (17D) 375000-390000
ಯೂರೋಪಿಯನ್ ಜ್ಯುವೆಲ್ಸ್ ವಿತ್ ವರ್ಸೇಲ್ಸ್/ಡಿಸ್ನಿಲ್ಯಾಂಡ್ (15D) 350000 - 365000
ಯೂರೋಪಿಯನ್ ವಂಡರ್ಸ್ (13D) 280000-295000
ಯುರೋಪಿಯನ್ ಡಿಲೈಟ್ (13D) 300000 - 315000
ಯುರೋಪಿಯನ್ ಹೈಲೈಟ್ಸ್ (11D/12D) 270000-295000
ಯುರೋಪಿಯನ್ ಸ್ಪ್ಲೆಂಡರ್ಸ್ (10D) 225000-235000
ಯುರೋಪಿಯನ್ ಪನೋರಮಾ (8D) 200000-215000
ಲಂಡನ್ ಪ್ಯಾರಿಸ್ ಸ್ವಿಸ್ ಇಟಲಿ (9D) 255000-265000
ಬೆಸ್ಟ್ ಆಫ್ ಸ್ಕ್ಯಾಂಡಿನೇವಿಯಾ (9D) 290000-300000
ಸ್ಕ್ಯಾಂಡಿನೇವಿಯಾ ನಾರ್ದರ್ನ್ ಲೈಟ್ಸ್ (9D/10D) 375000-395000
ಐಸ್ಲ್ಯಾಂಡ್ ಸ್ಕ್ಯಾಂಡಿನೇವಿಯಾ (14D) 465000-480000
ಐಸ್ಲ್ಯಾಂಡ್ ಸ್ಕ್ಯಾಂಡಿನೇವಿಯಾ ನಾರ್ದರ್ನ್ ಲೈಟ್ಸ್ (14D/15D) 495000-545000
ಈಸ್ಟರ್ನ್ಯೂರೋಪ್ (8D/11D/15D) 200000-310000
ರಷ್ಯಾ / ಹಂಗೇರಿ (7D/8D) 200000 - 225000
ಬಾಲ್ಟಿಕ್ ಯುರೋಪ್ ಎಸ್ಟೋನಿಯಾ ಲಾಟ್ವಿಯಾ ಲಿಥುವೇನಿಯಾ (8D) 215000
ಬಾಲ್ಟಿಕ್ ಯುರೋಪ್ + ಸ್ಕ್ಯಾಂಡಿನೇವಿಯಾ (15D/23D ಈಸ್ಟರ್ನ್ ಯುರೋಪ್) 415000 - 675000
ಸ್ವಿಸ್ ಪ್ಯಾರಿಸ್ ಆಮ್ ಸ್ಟರ್ಡ್ಯಾಮ್ ಬ್ರಸೆಲ್ (11D) 280000 - 290000
ಸ್ವಿಸ್ ಪ್ಯಾರಿಸ್ ಲಂಡನ್ (11D) 305000 - 315000
ಸ್ವಿಸ್ ಪ್ಯಾರಿಸ್ /ಸ್ವಿಸ್ ಇಟಲಿ /ಸ್ವಿಸ್ ಆಸ್ಟ್ರಿಯಾ (8D) 225000 - 235000
ಸ್ವಿಸ್ ಪ್ಯಾರಿಸ್ ಇಟಲಿ / ಸ್ವಿಸ್ ಆಸ್ಟ್ರಿಯಾ ಇಟಲಿ / ಸ್ವಿಸ್ ಪ್ಯಾರಿಸ್ ಆಸ್ಟ್ರಿಯಾ (11D) 275000 - 285000
ಇಟಲಿ/ಸ್ವಿಟ್ಜರ್ಲೆಂಡ್/ಆಸ್ಟ್ರಿಯಾ (8D) 225000-260000
ಸ್ಪೇನ್ ಪೋರ್ಚುಗಲ್ (13D) 280000 - 290000
ಸ್ಪೇನ್ ಪೋರ್ಚುಗಲ್ ಮೊರಾಕೋ (16D) 325000-340000
ಪೋರ್ಚುಗಲ್/ಈಜಿಪ್ಟ್ (8D/9D) 175000-225000
ಸ್ಪೇನ್ (10D/15D) 225000 - 340000
ಗ್ರೀಸ್ ಟರ್ಕಿ (12D/15D ಈಜಿಪ್ಟ್) 305000-355000
ಈಜಿಪ್ಟ್ ಜೋರ್ಡಾನ್ (9D) 195000 - 205000
ಟರ್ಕಿ (7D/10D/15D) 155000 - 250000
ಗ್ರೀಸ್ (6D/8D/10D/15D) 200000 - 395000
ಟುನೀಶಿಯಾ ಮಾಲ್ಟಾ ಸಿಸಿಲಿ (10D) 290000
ಬೆಸ್ಟ್ ಆಫ್ ಬಾಕು ಅಜೆರ್ಬೈಜಾನ್ (7D) 120000-130000
ಜಾರ್ಜಿಯಾ ಆರ್ಮೇನಿಯನ್ ಅಜೆರ್ಬೈಜಾನ್ (10D) 190000
ಉಜ್ಬೇಕಿಸ್ತಾನ್ ಕಜಕಿಸ್ತಾನ್ ಕಿರ್ಗಿಸ್ತಾನ್ (9D) 180000 - 190000

ಅಂಟಾರ್ಟಿಕಾ ಆಸ್ಟ್ರೇಲಿಯಾ ಆಫ್ರಿಕಾ ಅಮೇರಿಕಾ

ಅಂಟಾರ್ಟಿಕಾ -ದ 7ನೇ ಕಾಂಟಿನೆಂಟ್ (13D) Dec 11-1275000
ಆಸ್ಟ್ರೇಲಿಯಾ (7D/9D/14D) 200000 - 450000
ನ್ಯೂಜಿಲ್ಯಾಂಡ್ (10D/14D) 335000 - 450000
ಆಸ್ಟ್ರೇಲಿಯಾ ನ್ಯೂಜಿಲ್ಯಾಂಡ್ (17D) 540000-565000
ಅಮೇರಿಕನ್ ಡ್ರೀಮ್ ವಿತ್ ಬಹಾಮಾಸ್ ಕ್ರೂಸ್ (19D) 650000 - 665000
ಅಮೇರಿಕಾ USA (13D/15D) 450000 - 565000
USA ಈಸ್ಟ್ ಕೋಸ್ಟ್ (7D) 275000 - 290000
USA+ಯೆಲ್ಲೋಸ್ಟೋನ್+ಮೌಂಟ್ ರಶ್ಮೋರ್+ ಆಂಟೆಲೋಪ್ ವ್ಯಾಲಿ (21D) 725000
ಕ್ಯಾಲಿಫೋರ್ನಿಯಾ ಕಾರ್ನಿವಲ್ USA (9D)Sept 21-354000-365000
ಸೌತ್ ಅಮೆರಿಕಾ (8D/11D/14D/21D,Nov 17-1190000)
ಬೆಸ್ಟ್ ಆಫ್ ಸೌತ್ ಆಫ್ರಿಕಾ (9D) 210000 - 230000
ಬೆಸ್ಟ್ ಆಫ್ ಕೀನ್ಯಾ (7D) Aug 19 - 220000
ತಾಂಜಾನಿಯಾ ಜಂಜಿಬಾರ್ (10D) 360000
ಬೆಸ್ಟ್ ಆಫ್ ಮಾರಿಷಸ್ (7D) 140000 - 150000
ದುಬೈ ಅಬುಧಾಬಿ (5D/7D) 75000 - 115000
ಕತಾರ್/ಓಮನ್/ಸೌದಿ ಅರೇಬಿಯಾ (5D/7D/7D) 125000 - 185000
ಭೂತಾನ್ (9D/12D) 80000 - 100000
ನೇಪಾಳ/ಶ್ರೀಲಂಕಾ (8D/7D) 70000 - 100000

ಸೌತ್ ಈಸ್ಟ್ ಅಂಡ್ ಫಾರ್ ಈಸ್ಟ್ ಏಷ್ಯಾ

ಸಿಂಗಾಪುರ್ ಥೈಲ್ಯಾಂಡ್ ಮಲೇಷಿಯಾ (10D) 160000-170000
ಸಿಂಗಾಪುರ್ ಮಲೇಷ್ಯಾ ಬಾಲಿ (10D) 185000-195000
ಸಿಂಗಾಪುರ್ ಮಲೇಷಿಯಾ+ಕ್ರೂಸ್ (9D) 180000-190000
ಸಿಂಗಾಪುರ್ ಮಲೇಷಿಯಾ (7D) 135000 - 145000
ಸಿಂಗಾಪುರ್ ಬಾಲಿ (8D) 165000 - 175000
ವಿಯೆಟ್ನಾಂ ಕಾಂಬೋಡಿಯಾ (10D) 175000-185000
ವಿಯೆಟ್ನಾಂ (5D/7D/13D) 90000 - 230000
ಬೆಸ್ಟ್ ಆಫ್ ಬಾಲಿ (7D) 125000 - 135000
ಬೆಸ್ಟ್ ಆಫ್ ಸಿಂಗಾಪುರ್ (4D) 100000 - 115000
ಥೈಲ್ಯಾಂಡ್ (4D/6D) 50000 - 85000
ಬ್ಯಾಂಕಾಕ್ ಪಟ್ಟಾಯ ಫುಕೆಟ್ ಕ್ರಾಬಿ (8D) 125000-130000
ಚಿಯಾಂಗ್ ಮಾಯ್ ಚಿಯಾಂಗ್ ರೈ ಫುಕೆಟ್ ಕ್ರಾಬಿ (9D) 150000
ಫಿಲಿಪ್ಪೈನ್ಸ್ ಮನಿಲಾ ಸೆಬು (8D) Jan 14 - 195000
ಹಾಂಗ್ ಕಾಂಗ್ ಮಕಾವ್ಲೊ ಶೆನ್ಜೆನ್ (7D) 155000-170000
ಹಾಂಗ್ ಕಾಂಗ್ ಮಕಾವ್ಲೊ ಶೆನ್ಜೆನ್ ತೈವಾನ್ (10D) 235000
ಜಪಾನ್ (7D/11D) 220000 - 365000
ಜಪಾನ್ ಕೊರಿಯಾ (9D) 295000 - 305000
ಕೊರಿಯಾ ತೈವಾನ್ (7D/11D) 215000 - 290000
ಜಪಾನ್ ಕೊರಿಯಾ ತೈವಾನ್ (12D) 335000-350000
ಸೌತ್ ಕೊರಿಯಾ (8D) 240000

ಗ್ರೂಪ್ ಟೂರ್ಸ್ - ಇಂಡಿಯಾ

ಲಡಾಖ್ (7D/9D ಕಾರ್ಗಿಲ್) 65000 - 85000
ಆಲ್ ಆಫ್ ಲಡಾಖ್ (13D) 99000 - 110000
ಕಾಶ್ಮೀರ (5D/6D/7D/8D/11D) 50000 - 90000
ಶಿಮ್ಲಾ ಮನಾಲಿ (ಮುಂಬೈ-ಡೆಲ್ಲಿ-ಮುಂಬೈ) (6D) 30K-40K
ಶಿಮ್ಲಾ ಮನಾಲಿ (ಮುಂಬೈ-ಚಂಡೀಗಢ-ಮುಂಬೈ) (8D) 47000 - 55000
ಡಾಲ್ಹೌಸಿ ಧರ್ಮಶಾಲಾ ಅಮೃತಸರ (8D) 47000-55000
ನೈನಿತಾಲ್ ಮಸ್ಸೂರಿ ಹರಿದ್ವಾರ (6D/9D ಕಾರ್ಬೆಟ್ ಪಾರ್ಕ್) 40000 - 60000
ಅಸ್ಸಾಂ ಮೇಘಾಲಯ (7D/12D ಅರುಣಾಚಲ) 80000-105000
ಸಿಕ್ಕಿಂ ಡಾರ್ಜಿಲಿಂಗ್ ಗ್ಯಾಂಗ್ಟಾಕ್ (7D/9D ಲಾಚುಂಗ್) 60K-75K
ರಾಜಸ್ಥಾನ (6D/8D/9D/15D) 30000 - 75000
ಗುಜರಾತ್ (5D/7D/10D/15D) 30000 - 90000
ಮಧ್ಯ ಪ್ರದೇಶ (5D/9D/13D/17D) 35000-105000
ವಾರಣಾಸಿ ಅಯೋಧ್ಯೆ ಲಕ್ನೋ (8D) 55000-65000
ಭುವನೇಶ್ವರ ಪುರಿ ಕೋನಾರ್ಕ್ ಚಿಲ್ಕಾ (6D) 50000-60000
ಕರ್ನಾಟಕ ಕೊಡಗು/ದಾಂಡೇಲಿ (6D/8D) 50K-70K
ಕಲ್ಚರಲ್ ತಮಿಳುನಾಡು (12D) 79000 - 85000
ಕೇರಳ (6D/8D/10D/15D) 30000 - 90000
ಅಂಡಮಾನ್ (7D) 70000-80000

ವಿಮೆನ್ಸ್ ಸ್ಪೆಷಲ್
66 ಟೂರ್ ಆಪ್ಷನ್ಸ್



ಸೀನಿಯರ್ಸ್ ಸ್ಪೆಷಲ್
53 ಟೂರ್ ಆಪ್ಷನ್ಸ್



ಹನಿಮೂನ್ ಟೂರ್ಸ್
8 ಟೂರ್ ಆಪ್ಷನ್ಸ್



ಕಾರ್ಪೊರೇಟ್ ಟೂರ್ಸ್ MICE
ಫಾರ್ ಕಾನ್ಫರೆನ್ಸ್, ಇನ್ಸೆಂಟೀವ್ ಟೂರ್ಸ್ ಅಂಡ್ ಅವಾರ್ಡ್ ಫಂಕ್ಷನ್ಸ್



ಕಸ್ಟಮೈಸ್ಡ್ ಹಾಲಿಡೇಸ್
ಯುವ ರ್ ಪ್ರೈವೇಟ್ ಹಾಲಿಡೇ, ಜಸ್ಟ್ ದ ವೇ ಯು ಲೈಕ್ ಇಟ್



0% ಕನ್ವೀನಿಯನ್ಸ್ ಫೀ
ರುಪೇ, ವೀಸಾ ಮತ್ತು ಮಾಸ್ಟರ್‌ಕಾರ್ಡ್ ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್‌ಗಳಲ್ಲಿ



Group tour price includes return airfare, transport, accommodation, all meals: breakfast-lunch-dinner, sightseeing with entrance fees, driver and guide tips, travel insurance*, services of a Tour Manager and VISA fee (except for Free Visa Countries). USA tours for valid US visa holders only. EMI (24 months) subject to financial partner's approval.

veenaworld.com | Call: 1800 22 7979 | Mon-Sat 10 to 7

1st Flr, Sharada Plaza, 9th Main Rd, 3rd block, Jayanagar, Opp. SBI, Bengaluru 560011, Call: 8879972217

Veena World Sales Partners: Karnataka: Belgaum-College Rd 9980428880 • Belgaum-Goaves Circle 7338685500 • Belgaum-Tilakwadi 9845092772 Dharwad 9036715969 • Hubli 7204411007 • Malleshwaram 9845066469 • Basavanagudi 9900268233 • Vijaynagar 9036610005 Chikodi 9448627771 • Udupi 9448372824 • Gulburga 9632655010 • Vijayapur 9980857595 • Tamil Nadu: Coimbatore 9994666522

Tours can also be booked at the Veena World Sales Offices in Maharashtra, Gujarat, Rajasthan, Goa, Madhya Pradesh, West Bengal... For office addresses & contact details, visit veenaworld.com

Applications invited for Sales Partners/ Agents across Southern Region. Call : 887 997 9733

VEENA WORLD
Travel. Explore. Celebrate Life.

All group tours are ex-Mumbai. Tour price is per person and on twin sharing basis. These tour prices are nett and no discount is applicable. At the time of booking, tour price to be paid in full INR by UPI/NEFT/RTGS/Cheque, in the name of 'Veena Patil Hospitality Pvt. Ltd.' No cash transactions at Veena World. Government taxes apply. Any increase in YQ taxes, airport taxes, VISA fees, surcharges (if any) will have to be borne by the travellers. T&C apply.

ಕ್ಷೇಮ ಕುಶಲ

ಬಾಯಿ ಆಹಾರಕ್ಕೂ ಆರೋಗ್ಯಕ್ಕೂ ಬಾಗಿಲು



ಡಾ. ಸತ್ಯನಾರಾಯಣ ಭಟ್ ಪಿ.

ಶಿಶಿರ, ವಸಂತ, ಗ್ರೀಷ್ಮ, ವರ್ಷ, ಶರತ್ ಮತ್ತು ಹೇಮಂತ ಎಂಬ ಷಡೃತುಗಳು ದೇಹದ ದೋಷಗಳ ಚಯ, ಪ್ರಕೋಪ ಮತ್ತು ಪ್ರಶಮಕ್ಕೆ ಕಾರಣ.

ಕುತ್ತಿಗೆಯ ಮೇಲಣ ಅಂಗಗಳು ಮೂಗು, ಬಾಯಿ. ಗಂಟಲು, ಕಣ್ಣು, ಕಿವಿಗಳು. ಅವುಗಳಿಗೆ ಸದಾ ಕಫದ ಕಾಯಿಲೆಗಳ ಬಾಧೆ. ಹಾಗಾಗಿ ಅವುಗಳ ಆರೋಗ್ಯವನ್ನು ಸದಾ ಕಾಪಾಡಲು ಕಫದ ತೊಂದರೆ ತಡೆಯುವ ಕಾಳಜಿ ಅನಿವಾರ್ಯ. ಆಯಾ ಋತುವಿಗೆ ಅನುಸಾರವಾಗಿ ಹೊಂಗೆ, ಎಕ್ಕ, ಮತ್ತಿ, ಕರವೀರ, ಆಲ, ಅತ್ತಿ, ಬಸರಿ ಮುಂತಾದ ಸಸ್ಯಮೂಲದ ದಂತಕೂರ್ಚ, ಅಂದರೆ 'ಟೂತ್ ಬ್ರಷ್'ಗಳ ಬಳಕೆ ಹಿಂದಿನ ಕಾಲದಲ್ಲಿ ಪ್ರಚಲಿತವಾಗಿತ್ತು. ನಾಲಿಗೆಯನ್ನು ಸ್ವಚ್ಛಗೊಳಿಸಲು ಬಳಸುವ ವಿಧಾನ ಬಾಯಿಯ ಆರೋಗ್ಯವನ್ನು ಕಾಪಾಡಲು ಅತಿ ಮುಖ್ಯ. ಒಂದು ಮಾತು ಇಲ್ಲಿ ಬಹಳ ಪ್ರಸ್ತುತ. ದೇಹವೆಂಬ ಯಂತ್ರಾಗಾರಕ್ಕೆ ಬಾಯಿಯೇ ಹೆದ್ದಾರಿ! ಅದರ ಆರೋಗ್ಯವನ್ನು ಸದಾ ಕಾಯಲು ಬಾಯಿಯ ಶುಚಿತ್ವ ಖಂಡಿತ ಅತ್ಯಗತ್ಯ. ಹಿಂದೆ ಚಿನ್ನ, ಬೆಳ್ಳಿ, ತಾಮ್ರದ ಸರಿಗೆ ಬಳಸಿ ಎಚ್ಚರಿಕೆಯಿಂದ ನಾಲಿಗೆಯನ್ನು ಶುಚಿಗೊಳಿಸುತ್ತಿದ್ದರು. ಮಾವಿನ ಅಥವಾ ಗೇರು(ಗೋಡಂಬಿ), ಹಲಸು ಎಲೆಗಳನ್ನು ಬಳಸಿ ಹಲ್ಲುಗಳನ್ನು ಉಜ್ಜುವ ಪರಂಪರೆ ಇನ್ನೂ ಜೀವಂತ. ಎಲೆಯ 'ನಡುನರ'ವನ್ನು (ಮಿಡ್ ರಿಬ್) ಸಹ ಬಳಸಿ ಒಗೆಯುವ ಅದ್ಭುತ 'ಟಂಗ್ ಕ್ಲೀನರ್'! ಮೆಸ್‌ವಾಕ್ ಎಂಬ ಬಯಲು ಸೀಮೆಯ ಮರಕ್ಕೆ ಅಂತಹದೇ ದಂತಕೂರ್ಚದ ಪಟ್ಟ ಇದೆ.



ತಾಂಬೂಲವನ್ನು ಜಗಿಯಲು ಆಯುರ್ವೇದದಲ್ಲಿ ಮನ್ನಣೆ ಇದೆ. ಆದರೆ ತಂಬಾಕು ಅಥವಾ ಗುಟಕಾದಂತಹ ಅದರ ಯಾವುದೇ ಉತ್ಪನ್ನಗಳನ್ನು ದೂರವಿಡಿ. ರಕ್ತದ ಏರೊತ್ತಡ, ಕ್ಯಾನ್ಸರ್, ಮಿದುಳು ರಕ್ತಸ್ರಾವ, ಗುಂಡಿಗೆ ಕಾಯಿಲೆಗಳಿಗದು ರಹದಾರಿ ಎಂಬುದು ನೆನಪಿರಲಿ. ತಂಬಾಕಿನ ಬಳಕೆಯಿಂದ ಬಾಯಿಯ ಅಂಗ ಪ್ರತ್ಯಂಗಗಳಲ್ಲಿ ಹಲವು ಕಾಯಿಲೆಗಳು ಕಾಣಿಸಿಕೊಳ್ಳಬಹುದು. 'ಲೋಳ್ಪದರ' (ಮ್ಯೂಕಸ್ ಮೆಂಬ್ರೇನ್) ಬಣ್ಣ ಬದಲಾದರೆ, ನೆತ್ತರು ಒಸರಿದರೆ ಅಪಾಯ ಇದೆ. ಇದು ಯಾವುದೇ ವಯಸ್ಸಿನಲ್ಲಿ ಉಂಟಾದೀತು. ಎಚ್ಚರವಿರಲಿ. ಮರೆಗುಳಿತನ, ಅನಿದ್ರೆ, ಬಹಳ ಆಯಾಸ ಮತ್ತು ತಲೆತಿರುಗುಗಳಂತಹ ಸಣ್ಣ ತೊಂದರೆ ದೊಡ್ಡ ಅಪಾಯಗಳ ಹೆದ್ದಾರಿ. ಹಾಗಾಗಿ ಬಾಯಿಯ ಆರೋಗ್ಯಕ್ಕೆ, ದೇಹಾರೋಗ್ಯಕ್ಕೆ ಮೂಲಮಂತ್ರ ತಂಬಾಕು ಮತ್ತು ಧೂಮಪಾನದಿಂದ ಸದಾಕಾಲ ದೂರವಿರುವುದು ಒಳಿತು.

ವೀಳ್ಯದೆಲೆ, ಸಾದಾ ಅಡಿಕೆ, ಸುಣ್ಣ, ಲವಂಗ, ಕಾಚು, ಪಚ್ಚೆ ಕರ್ಪೂರ, ಏಲಕ್ಕಿ, ಜಾಕಾಯಿಯಂತಹ ಸುವಸ್ತುಗಳ ತಾಂಬೂಲ ಚರ್ವಣದ ಉಲ್ಲೇಖ ಆಯುರ್ವೇದ ಸಂಹಿತೆಗಳಲ್ಲಿದೆ. ಹಿತಮಿತದ ಬಳಕೆಯ ಮೂಲ ಉದ್ದೇಶ ಬಾಯಿ ಮತ್ತು ಅದರ ಒಳ ಅಂಗ, ಪ್ರತ್ಯಂಗಗಳ ಆರೋಗ್ಯ ಪಾಲನೆ. ಅಂತಹ ಕಟ್ಟು ನಿಟ್ಟಿನ ತಾಂಬೂಲ ಸೇವನೆಯಿಂದ ದವಡೆ, ಹಲ್ಲುಸಾಲುಗಳ ಮಲ ನಾಶ. ಮಾತು ಸ್ಪಷ್ಟ. ದನಿ, ಸ್ವರಶುದ್ಧಿಗಳಾಗುತ್ತವೆ. ನಾಲಿಗೆ ಸ್ವಚ್ಛವಾಗುತ್ತದೆ. ಕಿವಿ, ಕಣ್ಣು, ಮೂಗು, ಗಂಟಲುಗಳು ನಿರ್ಮಲ. ಅನಗತ್ಯ ಜೊಲ್ಲು ಸುರಿತಕ್ಕೂ ಕಡಿವಾಣ. ಬಾಯಿಯ ರುಚಿವರ್ಧನೆ. ಹೃದಯದ ಆರೋಗ್ಯಕ್ಕೂ ಪೂರಕ.

ಆಹಾರ, ಅದನ್ನು ತಿನ್ನುವ ವಿಧಾನಕ್ಕೂ ಮತ್ತು ಬಾಯಿಯ ಆರೋಗ್ಯಕ್ಕೆ ನೇರ ಸಂಬಂಧವಿದೆ. ಹುಳಿಯನ್ನು ಜಾಸ್ತಿ ತಿಂದರೆ ಹಲ್ಲುಗಳಿಗೆ ಜುಮುಜುಮುತನವಾದೀತು. ಅತಿಯಾಗಿ ಮಧುರ ವಸ್ತು ತಿಂದರೆ ಕಫ ವೃದ್ಧಿ. ಬಾಯಿಯ ಕಾಯಿಲೆಗಳೂ ಕಾಣಿಸಿಕೊಂಡಾವು. ಆದರೆ ಅತಿಮಧುರ ಅಥವಾ ಜೇಷ್ಠಮಧುರ ಎಂಬ ಬೇರಿನ ಬಳಕೆಯಿಂದ ಬಾಯಿಹುಣ್ಣು ವಾಸಿಯಾಗುತ್ತದೆ. ಗಂಟಲು ಮತ್ತು ಸ್ವರ ಶುದ್ಧಿ. ಕಷಾಯ ಮಾಡಿ ಕುಡಿದರೆ ಅಥವಾ ಬಾಯಿ ಮುಕ್ಕುಳಿಸಿದರೆ ಸಾಕು. ಸರಳ ಮನೆ ಮದ್ದು ಇದು.

ರಾತ್ರಿಯವೇಳೆ ಅಥವಾ ಮುಂಜಾನೆ ತೆಂಗಿನೆಣ್ಣೆಯ 'ಗಂಡೂಷ', ಎಂದರೆ ಬಾಯಿಯನ್ನು ಮುಕ್ಕುಳಿಸುವಿಕೆಯಿಂದ ಹಲ್ಲು ಮತ್ತು ಬಾಯಿಯ ಇತರ ಉಪಾಂಗಗಳಿಗೆ ಆರೋಗ್ಯ; ಒಳಪದರಗಳಿಗೆ ಬಲ. ಮೊಗದ ಕಾಂತಿ ವೃದ್ಧಿಗೆ ಪೂರಕ. ಉಣ್ಣುವ ಆಹಾರವನ್ನು ಹತ್ತಾರು ಬಾರಿ ಜಗಿದು ಉಣಬೇಕು ಎನ್ನುವ ಮಾತು ಪ್ರಸಿದ್ಧ. ಸುಭಾಷಿತವೊಂದರ ತುಣುಕು ಹೀಗಿದೆ: 'ಆಡಿನ ಹಾಗೆ ನಾವು ಚೆನ್ನಾಗಿ ಜಗಿದು ತಿನ್ನತಕ್ಕದ್ದು'. ಹೀಗೆ ತಿಂದು ಬಾಯಿಯ ಕಾಯಿಲೆಗಳನ್ನು ದೂರವಿಡುವಾ.

ನೆತ್ತಿಗೊತ್ತಿದ ಎಣ್ಣೆ ನೇರವಾಗಿ ಕೆಳಗಿಳಿದು ಮುಖಾರೋಗ್ಯಕ್ಕೆ ಸಹಕಾರಿ. ಎಣ್ಣೆಯ ಸಂಗಡ ತುಪ್ಪ ಬೆರಸಿ ಹದ ಬಿಸಿ ಮಾಡಿರಿ. ನೆತ್ತಿಗೊತ್ತಿರಿ. ದೇಹದ 'ಹೀಟ್'ಅನ್ನು ತೊಡೆದು ಹಾಕಿರಿ. ಮೂಗು ಕಟ್ಟುವ ತೊಂದರೆಯಿಂದಲೂ ಪರಿಹಾರ. ಇದು ಬಾಯಿಹುಣ್ಣು ನಿರೋಧಕ ಉಪಚಾರವೂ ಹೌದು. ಗಂಟಲುಬೇನೆಯನ್ನು ನೀಗಲೂ ಇಂತಹ ಸರಳ ಉಪಾಯ ಸಾಕು. ❖

ನಿದ್ರೆಯಲ್ಲಿದೆ ರೋಗನಿರೋಧಕ ಶಕ್ತಿ



ಡಾ. ಅನಿರುದ್ಧ ಉಡುಪ

ನೀವು ನಿಮ್ಮ ನಿದ್ರೆಯನ್ನು ಹಗುರವಾಗಿ ತೆಗೆದುಕೊಂಡಿದ್ದೀರಾ? ಹಾಗಾದರೆ ನೀವು ಈ ಬರೆಹವನ್ನು ಕಡ್ಡಾಯವಾಗಿ ಓದಲೇಬೇಕು; ಜೊತೆಗೆ ನಿಮ್ಮ ನಿಲುವನ್ನು ಸರಿಪಡಿಸಿಕೊಳ್ಳಲೇಬೇಕು.

ನಿದ್ರೆಯು ದೈನಂದಿನ ಯಾಂತ್ರಿಕ ಕ್ರಿಯೆಗಳಲ್ಲಿ ಒಂದಷ್ಟೆ – ಎಂದು ಅನೇಕರು ಪರಿಗಣಿಸಿರಬಹುದು. ಆದರೆ, ದೇಹಕ್ಕೂ ಮನಸ್ಸಿಗೂ ಸಂಪೂರ್ಣ ವಿಶ್ರಾಂತಿಯನ್ನು ಕೊಟ್ಟು, ಮರುದಿನದ ಚಟುವಟಿಕೆಗಳಿಗೆ ಚೈತನ್ಯವನ್ನು ತುಂಬುವ ಅಗಾಧ ಶಕ್ತಿಯು ನಿದ್ರೆಗೆ ಇದೆ. ಅಷ್ಟೇ ಅಲ್ಲ, ವೈದ್ಯವಿಜ್ಞಾನವು ವ್ಯಕ್ತಿಯ ನಿದ್ರೆ ಮತ್ತು ಪ್ರತಿರಕ್ಷಣಾ ವ್ಯವಸ್ಥೆಯ ನಡುವೆ ಇರುವ ನೇರ ಸಂಬಂಧದ ಬಗ್ಗೆಯೂ ಈಗಾಗಲೇ ದೃಢಪಡಿಸಿದೆ. ನಿದ್ರೆಯು ವ್ಯಕ್ತಿಯ ಪ್ರತಿರಕ್ಷಣಾ ವ್ಯವಸ್ಥೆಯ ಮೇಲೆ ಗಮನಾರ್ಹ ಪರಿಣಾಮವನ್ನು ಬೀರುತ್ತದೆ. ಶರೀರಕ್ಕೆ ತಗಲುವ ಯಾವುದೇ ಸೋಂಕು ನಮ್ಮನ್ನು ಆಯಾಸಗೊಳಿಸುವುದಷ್ಟೇ ಅಲ್ಲದೆ ನಿದ್ರೆಯನ್ನೂ ಹೆಚ್ಚಿಸುತ್ತದೆ. ಆದರೆ ನಿದ್ರೆ ಯಾವುದೇ ಕಾಯಿಲೆಗೆ ಅತ್ಯುತ್ತಮ ಔಷಧವಾಗಬಲ್ಲದು ಎಂಬುದನ್ನು ಎಲ್ಲರೂ ಅರಿತಿರಬೇಕು.

ಕೆಲವು ಬಗೆಯ ವೈರಾಣು ಮತ್ತು ಬ್ಯಾಕ್ಟೀರಿಯಾ ಸೋಂಕುಗಳು ವ್ಯಕ್ತಿಯ ನಿದ್ರೆಯ ಗುಣಮಟ್ಟವನ್ನು ವ್ಯತ್ಯಯಗೊಳಿಸುತ್ತವೆ. ಸಮರ್ಪಕ ನಿದ್ರೆಯಿಲ್ಲದೆ ವ್ಯಕ್ತಿ ನಿತ್ರಾಣನಾಗುತ್ತಾನೆ. ಈ ಬಗೆಯ ನಿದ್ರಾಹೀನತೆಯು ಪ್ರತಿರಕ್ಷಣಾ ವ್ಯವಸ್ಥೆಯನ್ನು ಮತ್ತಷ್ಟು ದುರ್ಬಲಗೊಳಿಸುತ್ತದೆ.

ನಮಗೆಲ್ಲರಿಗೂ ತಿಳಿದಿರುವಂತೆ ವ್ಯಕ್ತಿಯ ಪ್ರತಿರಕ್ಷಣಾ ವ್ಯವಸ್ಥೆಯು ವೈರಾಣು, ಬ್ಯಾಕ್ಟೀರಿಯಾ ಮತ್ತು ಇತರ ಪರಾವಲಂಬಿ ಸೂಕ್ಷ್ಮಾಣುಗಳು ಮತ್ತು ಅವು ಸ್ರವಿಸುವ ಹಾನಿಕಾರಕ ರಾಸಾಯನಿಕಗಳಂತಹ ಆಕ್ರಮಣಕಾರಕ ದಾಳಿಗಳಿಂದ ಶರೀರವನ್ನು ರಕ್ಷಿಸುತ್ತದೆ. ಹಲವು ಅಂಗಗಳು ಮತ್ತು ಜೀವಕೋಶಗಳನ್ನೊಳಗೊಂಡ ದೊಡ್ಡ ವ್ಯವಸ್ಥೆ ಇದಾಗಿದೆ. ಸಮರ್ಪಕ ನಿದ್ರೆಯು ಈ ಎಲ್ಲ ಅಂಗಗಳಿಗೆ ಮತ್ತು ಜೀವಕೋಶಗಳಿಗೆ ಹೊಸ ಚೈತನ್ಯವನ್ನು ಕೊಡುವುದಲ್ಲದೆ, ಮರುದಿನ ಕ್ಷಮತೆಯಿಂದ ಕಾರ್ಯನಿರ್ವಹಿಸಲು ಶರೀರ ಮತ್ತು ಮನಸ್ಸುಗಳನ್ನು ಅಣಿ ಮಾಡುತ್ತದೆ. ಕೇವಲ ನಿದ್ರೆಯ ಅವಧಿ ಮಾತ್ರವಲ್ಲದೆ, ಅದರ ಗುಣಮಟ್ಟ ಕೂಡ ಮಹತ್ವದ್ದು ಎಂಬುದನ್ನೂ ನಾವು ನೆನಪಿನಲ್ಲಿಡಬೇಕು.

ನಿದ್ರೆ ಮತ್ತು ರಾತ್ರಿಪಾಳಿ

ರಾತ್ರಿಪಾಳಿಯಲ್ಲಿ ಕೆಲಸ ಮಾಡುವವರಲ್ಲಿ ಸಮರ್ಪಕ ನಿದ್ರೆಯ ಕೊರತೆ ಉಂಟಾಗುವುದು ಸಹಜ. ಅಂಥವರಲ್ಲಿ ಸೋಂಕುಗಳು ಮತ್ತು ಕ್ಯಾನ್ಸರ್ ಸೇರಿದಂತೆ ಇತರ ದೀರ್ಘಕಾಲದ ಅಸಾಂಕ್ರಮಿಕ ಕಾಯಿಲೆಗಳ ಸಂಭವ ಹೆಚ್ಚು. ಹಾಗಾಗಿಯೇ ಇದೀಗ ವಿಶ್ವ ಆರೋಗ್ಯ ಸಂಸ್ಥೆಯು ರಾತ್ರಿ ಪಾಳಿ ಕೆಲಸವನ್ನು 'ಸಂಭವನೀಯ ಕ್ಯಾನ್ಸರ್‌ಕಾರಕ' ಎಂದು ವರ್ಗೀಕರಿಸಿದೆ. ನಿದ್ರೆಯ ಕೊರತೆಯು ದೇಹದ ಎಲ್ಲ ಅಂಗಾಂಗವ್ಯೂಹಗಳ ಕಾರ್ಯಕ್ಷಮತೆಯನ್ನು ಕುಂಠಿತಗೊಳಿಸುತ್ತದೆ; ವಿವಿಧ ಗ್ರಂಥಿಗಳು ಸ್ರವಿಸುವ ರಸದೂತಗಳ ಪ್ರಮಾಣದಲ್ಲಿಯೂ ವ್ಯತ್ಯಾಸವನ್ನು ತರುತ್ತದೆ.

ಸೋಂಕುಗಳನ್ನು ತಡೆಯಲು ದೇಹಕ್ಕೆ ನೀಡುವ ಲಸಿಕೆಯು ಸಹ ದಿನಕ್ಕೆ ಏಳು ಗಂಟೆಗಳ ಕಾಲ ನಿದ್ರಿಸುವವರಲ್ಲಿ ಹೆಚ್ಚು ಪರಿಣಾಮಕಾರಿ ಎನ್ನುತ್ತವೆ ಅಧ್ಯಯನಗಳು. ಅಂತೆಯೇ ಐದು ತಾಸಿಗೂ ಕಡಿಮೆ ನಿದ್ರೆ ಮಾಡುವವರಲ್ಲಿ ಲಸಿಕೆಗಳು ಗರಿಷ್ಠ ಪರಿಣಾಮವನ್ನುಬೀರುವಲ್ಲಿವಿಫಲವಾಗಿವೆಎಂಬುದೂಅಧ್ಯಯನಗಳಿಂದಸಾಬೀತಾಗಿದೆ. ಕೇವಲ ನಿದ್ರೆಯ ಅವಧಿಯೊಂದೇ ಅದರ ಪರಿಣಾಮವನ್ನು ನಿರ್ಧರಿಸದು. ದಿನವೂ ನಿದ್ರೆಯ ವೇಳಾಪಟ್ಟಿ ಒಂದೇ ಸಮನಾಗಿರಬೇಕು. ಗುಣಮಟ್ಟ ಕೂಡ ಗರಿಷ್ಠ ಮಟ್ಟದ್ದಾಗಿರಬೇಕು. ಹಾಗಾದಾಗ ಮಾತ್ರ ವ್ಯಕ್ತಿ ಆರೋಗ್ಯವಂತನಾಗಿರುವುದು ಸಾಧ್ಯ. ❖

ಸೊಂಪಾದ ನಿದ್ರೆಗೆ ಸೂತ್ರಗಳು

- ದಿನವೂ ನಿಗದಿತ ಸಮಯದಲ್ಲಿಯೇ ಮಲಗುವ ಮತ್ತು ಏಳುವ ಅಭ್ಯಾಸವನ್ನು ರೂಢಿಸಿಕೊಳ್ಳಿರಿ. ನಿಮ್ಮ ನಿದ್ರೆಯ ವೇಳಾಪಟ್ಟಿ ಸ್ಥಿರವಾಗಿರಲಿ. ಇದು ಉತ್ತಮ ಗುಣಮಟ್ಟದ ನಿದ್ರೆಯನ್ನು ಪಡೆಯಲು ಮೊಟ್ಟಮೊದಲ ಹೆಜ್ಜೆ.
- ಹಗಲುನಿದ್ರೆಯನ್ನು ಆದಷ್ಟು ತಪ್ಪಿಸಿ. ಇಲ್ಲವಾದಲ್ಲಿ ರಾತ್ರಿ ಮಲಗಿದ ಕೂಡಲೇ ನಿದ್ರೆ ಆವರಿಸದೆ ಹಾಸಿಗೆಯಲ್ಲಿ ಹೊರಳಾಡುವಂತಾಗುತ್ತದೆ.
- ಮಧ್ಯಾಹ್ನದ ಬಳಿಕ ಕಾಫಿ ಅಥವಾ ಚಹಾ ಸೇವನೆಯನ್ನು ಆದಷ್ಟು ಕಡಿಮೆ ಮಾಡಿ. ಇಲ್ಲವಾದಲ್ಲಿ ನರವ್ಯೂಹ ಪ್ರಚೋದನೆಗೊಂಡು ನಿದ್ರೆಗೆ ಭಂಗವಾಗಬಹುದು.
- ಮಲಗಲು ಅಣಿಯಾಗುವಾಗ ಮನಸ್ಸು ತಿಳಿಯಾಗಿರಲಿ. ಆತಂಕ, ಚಿಂತೆ ದುಗುಡ ತುಂಬಿದ ಮನಸ್ಸು ಸುಖನಿದ್ರೆಯನ್ನು ತಡೆಯುತ್ತದೆ. ಮಲಗುವ ಮುನ್ನ ದೀರ್ಘ ಉಸಿರಾಟ ಮತ್ತು ಧ್ಯಾನದಂತಹ ಪ್ರಕ್ರಿಯೆ ಕೂಡ ಮನಸ್ಸನ್ನು ಸ್ಥಿಮಿತದಲ್ಲಿಡಲು ನೆರವಾಗಬಹುದು.
- ಹಗಲಿನಲ್ಲಿ ನಿರಂತರವಾಗಿ ದೈಹಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಿರಿ. ಕುಳಿತಲ್ಲಿಯೇ ಕುಳಿತಿರಬೇಡಿ. ಬೆಳಗಿನ ವ್ಯಾಯಾಮವನ್ನು ತಪ್ಪಿಸಬೇಡಿ.
- ಸಂಜೆಯ ವೇಳೆ ದೇಹವನ್ನು ಅತಿಯಾಗಿ ದಂಡಿಸುವ ವ್ಯಾಯಾಮಗಳು ಬೇಡ.
- ರಾತ್ರಿಯ ಊಟ ಹಗುರವಾಗಿರಲಿ. ನೀವು ಮಲಗಲು ಹೊರಡುವ ಮೂರು ತಾಸಿಗೂ ಮೊದಲೇ ನಿಮ್ಮ ರಾತ್ರಿ ಊಟ ಮುಗಿದಿರಲಿ. ಊಟವಾದ ತಕ್ಷಣವೇ ಮಲಗಿದಾಗ ನಿದ್ರೆಯ ವೇಳೆಯಲ್ಲಿ ಶರೀರದಲ್ಲಾಗುವ ನಿರ್ವಿಶೀಕರಣ ಪ್ರಕ್ರಿಯೆಯು ಕುಂಠಿತಗೊಂಡು ಪ್ರತಿರಕ್ಷಣಾ ವ್ಯವಸ್ಥೆಯ ಕ್ಷಮತೆ ಕಡಿಮೆಯಾಗುತ್ತದೆ.
- ರಾತ್ರಿ ಬೇಗ ಮಲಗಿ, ಬೆಳಿಗ್ಗೆ ಬೇಗನೇ ಏಳುವ ಅಭ್ಯಾಸವನ್ನು ರೂಢಿಸಿಕೊಳ್ಳಿರಿ. ತಡರಾತ್ರಿಯವರೆಗೆ ಎಚ್ಚರವಿರುವ ಮತ್ತು ಬೆಳಿಗ್ಗೆ ಸೂರ್ಯೋದಯದ ನಂತರ ಏಳುವ ಅಭ್ಯಾಸ ಕೂಡ ಶರೀರದ ಜೈವಿಕ ಗಡಿಯಾರದ ಕಾರ್ಯವೈಖರಿಯಲ್ಲಿ ವ್ಯತ್ಯಯವನ್ನುಂಟುಮಾಡುತ್ತದೆ. ಇದು ನಮ್ಮ ಕ್ರಿಯಾಶೀಲತೆಯನ್ನು ಕಡಿಮೆಮಾಡುತ್ತದೆ.
- ಮಲಗುವ ಕೋಣೆಯಲ್ಲಿ ಪ್ರಖರವಾದ ಬೆಳಕು ಬೇಡ. ಟಿವಿ, ಮೊಬೈಲ್ ಮತ್ತಿತರ ಎಲೆಕ್ಟ್ರಾನಿಕ್ ಉಪಕರಣಗಳನ್ನು ಮಲಗುವ ಕೋಣೆಯಲ್ಲಿ ಬಳಸಬೇಡಿ. ಅಲ್ಲಿ ಮಂದ ಬೆಳಕಿನ ಪ್ರಶಾಂತ ವಾತಾವರಣವನ್ನು ಕಾಪಾಡಿಕೊಳ್ಳಿ.
- ನೀವು ನಿದ್ರೆಯಲ್ಲಿ ಗೊರಕೆ ಹೊಡೆಯುತ್ತಿದ್ದರೆ ಅಥವಾ ಆ ವೇಳೆಯಲ್ಲಿ ಉಸಿರಾಟದೊಂದಿಗೆ ಇನ್ನಾವುದೇ ರೀತಿಯ ಶಬ್ದ ಮಾಡುತ್ತಿದ್ದರೆ ಅಥವಾ ನಿದ್ರೆಯ ಬಳಿಕವೂ ನಿಮಗೆ ತಾಜಾತನದ ಭಾವವಿರದಿದ್ದರೆ ನೀವು ನಿದ್ರೆಯಲ್ಲಿ ಉಸಿರುಕಟ್ಟುವಿಕೆ ಸಮಸ್ಯೆಯಿಂದ ಬಳಲುತ್ತಿರಬಹುದು. ಹಾಗಿದ್ದಾಗ ವೈದ್ಯರನ್ನು ಸಂಪರ್ಕಿಸಿ; ನಿಮ್ಮ ನಿದ್ರೆಯ ನಮೂನೆಯನ್ನು ತಿಳಿದುಕೊಳ್ಳಿ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ – ಗಣಿತ

ಸಮಾಂತರ ಶ್ರೇಢಿ

ಅಭ್ಯಾಸ – 5.3

1. ಕೆಳಗಿನ ಸಮಾಂತರ ಶ್ರೇಢಿಗಳ ಮೊತ್ತವನ್ನು ಕಂಡುಹಿಡಿಯಿರಿ

iii) 0.6, 1.7, 2.5 ..... ರ 100 ಪದಗಳವರೆಗೆ

ಇಲ್ಲಿ $a = 0.6$ $d = 1.7 - (0.6) = 1.1$ $n = 100$

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$

$$S_{100} = \frac{100}{2}[2(0.6)+(100-1)(1.1)]$$

$$S_{100} = 50[1.2+108.9]$$

$$= 50(110.1)$$

$$= 5505$$

0.6, 1.7, 2.5 ..... ರ 100 ಪದಗಳವರೆಗಿನ ಸಮಾಂತರ ಶ್ರೇಢಿಗಳ ಮೊತ್ತ 5505

(iv) $\frac{1}{15}, \frac{1}{12}, \frac{1}{10}$ .... ರ 100 ಪದಗಳವರೆಗೆ

ಇಲ್ಲಿ $a = 1/15$, $n = 11$, $d = \frac{1}{12}, -\frac{1}{15} = \frac{1}{60}$

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$

$$S_{11} = \frac{11}{2}\left[2\left(\frac{1}{15}\right)+(11-1)\left(\frac{1}{60}\right)\right]$$

$$S_{11} = \frac{11}{2}\left(\frac{2}{15}+\frac{1}{6}\right)$$

$$S_{11} = \frac{11}{2}\left(\frac{3}{10}\right)$$

$$S_{11} = \frac{33}{20}$$

$\frac{1}{15}, \frac{1}{12}, \frac{1}{10}$ .... ರ 100ಪದಗಳವರೆಗಿನ ಸಮಾಂತರ ಶ್ರೇಢಿಗಳ ಮೊತ್ತ 33/20

2) ಇವುಗಳ ಮೊತ್ತ ಕಂಡುಹಿಡಿಯಿರಿ

(i) $7 + 10\frac{1}{2} + 14 + \ldots\ldots + 84$

(ii) $34 + 32 + 30 + \ldots + 10$

ಪರಿಹಾರ: (i) $7 + 10\frac{1}{2} + 14 + \ldots\ldots + 84$

ಇಲ್ಲಿ $a = 7$ $d = 10\frac{1}{2} - 7 = 3\frac{1}{2} = \frac{7}{2}$

ನಮಗೆ ಗೊತ್ತಿರುವಂತೆ $l = a + (n-1)d$

$$84 = 7 + (n-1)\frac{7}{2}$$

$$= (n-1)\frac{7}{2} = 84 - 7$$

$$= (n-1)\frac{7}{2} = 77$$

$$= (n-1) = \frac{77}{7/2}$$

$$= (n-1) = \frac{77 \times 2}{7}$$

$$(n-1) = 22$$

$$n = 22 + 1$$

$$n = 23$$

$$S_n = \frac{n}{2}[a+l]$$

$$S_{23} = \frac{23}{2}[7+84]$$

$$S_{23} = \frac{2093}{2}$$

$$S_{23} = 1046\frac{1}{2}$$

(ii) $34 + 32 + 30 + \ldots\ldots + 10$

ಪರಿಹಾರ: ಇಲ್ಲಿ $a = 34$ $l = 10$

$d = 32 - 34 = -2$

ನಮಗೆ ಗೊತ್ತಿರುವಂತೆ $l = a + (n-1)d$

$$10 = 34 + (n-1)(-2)$$

$$= (n-1)(-2) = -12$$

$$(n-1) = \frac{-24}{-2} = 12$$

$$n = 13$$

$$S_n = \frac{n}{2}[a+l]$$

$$S_{13} = \frac{13}{2}[34+10]$$

$$S_{13} = 286$$

3) ಸಮಾಂತರ ಶ್ರೇಢಿಯಲ್ಲಿ

i) $a = 5, d = 3, a_n = 50$ ಆದರೆ n ಮತ್ತು S_n ಕಂಡುಹಿಡಿಯಿರಿ

ii) $a = 7, a_{13} = 35$ ಆದರೆ d ಮತ್ತು S_{13} ಗಳನ್ನು ಕಂಡುಹಿಡಿಯಿರಿ

iii) $a_{12} = 37, d = 3$ ಆದರೆ a ಮತ್ತು S_{12} ಗಳನ್ನು ಕಂಡುಹಿಡಿಯಿರಿ

iv) $a_3 = 15, S_{10} = 125$ ಆದರೆ d ಮತ್ತು a_{10} ಕಂಡುಹಿಡಿಯಿರಿ

v) $d = 5, S_9 = 75$ ಆದರೆ a ಮತ್ತು a_9 ಕಂಡುಹಿಡಿಯಿರಿ

vi) $a = 2, d = 8, S_n = 90$ ಆದಾಗ n ಮತ್ತು a_n ಕಂಡುಹಿಡಿಯಿರಿ

vii) $a = 8, a_n = 62, S_n = 210$ ಆದಾಗ n ಮತ್ತು d ಕಂಡುಹಿಡಿಯಿರಿ

viii) $a_n = 4, d = 2, S_n = -14$ ಆದರೆ n ಮತ್ತು a ಕಂಡುಹಿಡಿಯಿರಿ

ix) $a = 3, n = 8, S = 192$ ಆದರೆ d ಕಂಡುಹಿಡಿಯಿರಿ

ಪರಿಹಾರ: (i) $a = 5, d = 3, a_n = 50$ ಆದರೆ n ಮತ್ತು Sn ಕಂಡುಹಿಡಿಯಿರಿ

ಇಲ್ಲಿ $a = 5$, $d = 3$, $a_n = 50$

ನಮಗೆ ಗೊತ್ತಿರುವಂತೆ $a_n = a + (n-1)d$

$$50 = 5 + (n-1)(3)$$

$$(n-1)(3) = 50 - 5$$

$$(n-1)(3) = 45$$

$$(n-1) = 45/3$$

$$n-1 = 15$$

$$n = 15+1 = 16$$

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$

$$S_n = \frac{16}{2}[2(5)+(16-1)(3)]$$

(ಮುಂದುವರಿಯುವುದು)

II PUC PHYSICS

Chapter – 2

ELECTROSTATIC POTENTIAL AND CAPACITANCE

40. It is advised to be inside a car or a bus than to stand under a tree during thunder storm. Why?

Ans:- During thunder storm, a strong electric field exists in the atmosphere. A car or a bus can be compared to a conductor with a cavity. The electric field inside the cavity of the conductor is zero, hence we are electrostatically shielded inside the car, which is not true under a tree.

41. A large aluminium sheet duly insulated from ground is fixed in the open. Is there any chance of an elecric shock, if someone touches the aluminium sheet the next day?

Ans:- The aluminium sheet and the earth form a capacitor with the insulating slab as dielectric. The down pour of the atmospheric charge will raise the potential of the sheet of aluminium. When we touch the aluminium sheet, charge will flow to the earth through our body. This flow of charge constitutes an electric current and we will experience a shock.

42. 'n' small drops of same size are charged to V volt each. They coalesce to form a bigger drop. Calculate the potential of the bigger drop.

Ans :– Let r be radius of each small drop.

Then, the capacitance of each small drop,

$$C = 4\pi\varepsilon_0 r$$

charge on each small drop,

$$q = CV = (4\pi\varepsilon_0 r)V$$

∴ total charge on 'n' small drops,

$$Q = nq = nCV = n.4\pi\varepsilon_0 r.V$$

When 'n' small drops coalesces, let the bigger drop formed be of radius R

Since, volume of the bigger drop = total volume of 'n' small drops

$$\Rightarrow \frac{4}{3}\pi R^3 = n\left(\frac{4}{3}\pi r^3\right)$$

$$\therefore R = n^{1/3} \times r$$

And since bigger drop will possess the same charge as that of the 'n' small drops, the p.d of the bigger drop is

$$\frac{n \times 4\pi\varepsilon_0 r \times V}{4\pi\varepsilon_0 n^{1/3} \times r} = n^{2/3} \times r$$

43. Near the surface of the earth, the field is about $100Vm^{-1}$. Why do we then not experience an electric shock as we go into the open?

Ans:- Our body and the earth surface are at the same potential. It means there is no potential difference between the earth and our body. Hence, no current flows through our body and therefore we do not experience an electric shock.

44. What is meant by equivalent capacitor?

Ans:- A combination of capacitors in an electric circuit can be replaced by a single capacitor that has the same capacitance as the actual combination of the capacitors. Such capacitor is called equivalent capacitor.

45. Why is Van de Graaff generator enclosed in a steel tank filled with air?

Ans:- Van de Graaff generator is enclosed in a steel tank filled with air in order to prevent the leakage due to ionization of air surrounding the large shell because of very high voltage of the generator.

46. Why is the knowledge of dielectric strength useful to us?

Ans:- The dielectric strength decides the design of a capacitor. It gives the value of the maximum potential difference (voltage) which can be applied to a capacitor without any damage to it or its electric break down.

3 - CURRENT ELECTRICITY

1. Define current density?

Ans:- The current density is defined as the current per unit area through the conductor.

2. What are ohmic substances?

Ans:- Ohmic substances are the electrical devices that obey the Ohm's law. Eg:- Galvanometer, ammeter , voltmeter etc.,

3. What are non ohmic substances?

Ans:- Non - ohmic substances are the electrical devices that do not obey the Ohm's law.

Eg:- electron tubes, voltameters, discharge tubes etc.,

4. Define branch currents.

Ans: - Branch currents - Branch currents are in the inverse ratio of resistances.

$$I_1 = IR_2 / (R_1 + R_2)$$

(current in a branch) = [(main current) (resistance of the other branch) / (sum of the branch resistances)]

5. Why is magnanin used for making standard resistors?

Ans:- Magnanin is used for making standard resistors because it has a low value of temperature co-efficient of resistance and high resistivity.

6. What is Ohm?

Ans:- Ohm is the S.I unit of resistance. It is defined as the electrical resistance of a conductor through which a current of one ampere flows when a potential difference of one volt is applied between its ends.

7. Define the temperature coefficient of resistance?

(Contd.......)

ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

₹1 ಲಕ್ಷ ಇಡುಗಂಟಿಗೆ ಆಗ್ರಹ

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅಕ್ಷರ ದಾಸೋಹ ನೌಕರರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ



ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ನಡೆದ ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ಸದಸ್ಯರು ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಬೆಂಗಳೂರು: ನಿವೃತ್ತಿ ಹೊಂದಿದ ಹಾಗೂ ನಿವೃತ್ತಿ ಹೊಂದುತ್ತಿರುವ ಬಿಸಿಯೂಟ ನೌಕರರಿಗೆ ತಲಾ ₹1 ಲಕ್ಷ ಮೊತ್ತದ ಇಡುಗಂಟು ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ (ಸಿಐಟಿಯು) ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರದಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿದರು.

ರಾಜ್ಯ ವಿವಿಧ ಜಿಲ್ಲೆಗಳಿಂದ ಬಂದಿದ್ದ ನೂರಾರು ಅಕ್ಷರ ದಾಸೋಹ ನೌಕರರು ಸ್ವಾತಂತ್ರ್ಯ ಉದ್ಯಾನದಲ್ಲಿ ಹಾಕಿದ್ದ ತಾತ್ಕಾಲಿಕ ಪೆಂಡಾಲ್‌ನಲ್ಲಿ ಪ್ರತಿಭಟನೆಯಲ್ಲಿ ಭಾಗವಹಿಸಿದರು. ಸೋಮವಾರ ಮಧ್ಯಾಹ್ನ ಸುರಿದ ಮಳೆಗೆ ಪೆಂಡಾಲ್ ಸೋರತೊಡಗಿತು. ಆದರೂ, ಅಕ್ಷರ ದಾಸೋಹ ನೌಕರರು ಛತ್ರಿಗಳನ್ನು ಹಿಡಿದುಕೊಂಡು ಪ್ರತಿಭಟನೆ ಮುಂದುವರಿಸಿದರು.

‘ಅಕ್ಷರ ದಾಸೋಹ ನೌಕರರಿಗೆ ಬಜೆಟ್‌ನಲ್ಲಿ ಹೆಚ್ಚಳ ಮಾಡಿದ ₹1 ಸಾವಿರ ವೇತನ 2023ರ ಜನವರಿಯಿಂದ ಅನ್ವಯವಾಗುವಂತೆ ಜಾರಿಗೊಳಿಸಬೇಕು. ಅಕ್ಷರ ದಾಸೋಹ ಕೈಪಿಡಿಯಲ್ಲಿ ಕೆಲಸದ ಅವಧಿಯನ್ನು 4 ಗಂಟೆಯಿಂದ 6 ಗಂಟೆಗೆ ಬದಲಾಯಿಸಬೇಕು. ಎಸ್‌ಡಿಎಂಸಿ ಸದಸ್ಯರು ಅಡುಗೆ ನೌಕರರಿಗೆ ನೀಡುತ್ತಿರುವ ಕಿರುಕುಳ ನಿಯಂತ್ರಿಸಬೇಕು. ಕೆಲಸದ ಸ್ಥಳದಲ್ಲಿ ಮರಣ ಹೊಂದಿದರೆ ನೌಕರರ ಕುಟುಂಬಕ್ಕೆ ₹25 ಲಕ್ಷ ಪರಿಹಾರ ನೀಡಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

‘ಅಕ್ಷರ ದಾಸೋಹ ಯೋಜನೆಯನ್ನು ಸಂಪೂರ್ಣವಾಗಿ ಶಿಕ್ಷಣ ಇಲಾಖೆ ಅಡಿಯಲ್ಲಿ ಮುಂದುವರಿಸಬೇಕು. ಹಾಜರಾತಿ ಆಧಾರದಲ್ಲಿ ಕೆಲಸದಿಂದ ತೆಗೆಯುವ ಕ್ರಮವನ್ನು ಕೂಡಲೇ ನಿಲ್ಲಿಸಬೇಕು. ಬಿಸಿಯೂಟ ಯೋಜನೆಯನ್ನು ಕಾಯಂಗೊಳಿಸಬೇಕು. ಈ ಯೋಜನೆಯ ಯಾವುದೇ ಸ್ವರೂಪದ ಜವಾಬ್ದಾರಿಯನ್ನು ಖಾಸಗಿ ಸಂಸ್ಥೆಗಳಿಗೆ ನೀಡಬಾರದು’ ಎಂದರು.

‘ಬೇಸಿಗೆ ಮತ್ತು ದಸರಾ ರಜೆಗಳ ವೇತನ ನೀಡಬೇಕು. ಅಪಘಾತದಲ್ಲಿ ಮರಣ ಹೊಂದಿದ ಅಡುಗೆ ಸಿಬ್ಬಂದಿಯ ಕುಟುಂಬದವರಿಗೆ ಕೆಲಸ ನೀಡಬೇಕು. ಪ್ರತಿ ಶಾಲೆಯಲ್ಲಿ ಕನಿಷ್ಠ ಇಬ್ಬರು ಅಡಿಗೆ ಸಿಬ್ಬಂದಿಯನ್ನು ನೇಮಿಸಬೇಕು’ ಎಂದು ಸರ್ಕಾರಕ್ಕೆ ಒತ್ತಾಯಿಸಿದರು.

ಸಿಐಟಿಯು ಗೌರವ ಅಧ್ಯಕ್ಷೆ ಎಸ್. ವರಲಕ್ಷ್ಮಿ, ಅಧ್ಯಕ್ಷೆ ಲಕ್ಷ್ಮಿದೇವಿ, ಖಜಾಂಚಿ ಮಹಾದೇವಮ್ಮ, ಪ್ರಧಾನ ಕಾರ್ಯದರ್ಶಿ ಮಾಲಿನಿ ಮೇಸ್ತ ಭಾಗವಹಿಸಿದ್ದರು.

ಅನುಮತಿ ಇಲ್ಲದೆ ಎರಡು ಚಿತ್ರಗಳ ಹಾಡು ಬಳಕೆ ಆರೋಪ

ರಕ್ಷಿತ್ ಶೆಟ್ಟಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕಾಪಿ ರೈಟ್ ಉಲ್ಲಂಘನೆ ಆರೋಪದಡಿ ಪರಂವಃ ಸ್ಟುಡಿಯೋಸ್ ಪ್ರೈವೆಟ್ ಲಿಮಿಟೆಡ್ ಹಾಗೂ ನಟ, ನಿರ್ಮಾಪಕ ರಕ್ಷಿತ್ ಶೆಟ್ಟಿ ವಿರುದ್ಧ ಯಶವಂತಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ನ್ಯಾಯ ಎಲ್ಲಿದೆ’ ಚಿತ್ರದ ‘ನ್ಯಾಯ ಎಲ್ಲಿದೆ..’ ಹಾಡು ಮತ್ತು ‘ಗಾಳಿ ಮಾತು’ ಚಿತ್ರದ ‘ಒಮ್ಮೆನಿನ್ನನ್ನು’ ಹಾಡನ್ನು ‘ಬ್ಯಾಚುಲರ್ ಪಾರ್ಟಿ’ ಸಿನಿಮಾದಲ್ಲಿ ಅನಧಿಕೃತವಾಗಿ ಬಳಸಲಾಗಿದೆ. ಹಕ್ಕುಸ್ವಾಮ್ಯ ಹಾಗೂ ಪ್ರಸಾರದ ಹಕ್ಕು ಅನ್ನು ಖರೀದಿ ಮಾಡದೇ ಹಾಡುಗಳ ಬಳಕೆಯಾಗಿದೆ’ ಎಂದು ಎಂಆರ್‌ಟಿ ಮ್ಯೂಸಿಕ್ ಪಾಲುದಾರರಾಗಿರುವ ನವೀನ್ ಕುಮಾರ್ ದೂರಿನಲ್ಲಿ ಆರೋಪಿಸಿದ್ದಾರೆ.

‘2024ರ ಜನವರಿಯಲ್ಲಿ ಚಿತ್ರದ ಹಾಡುಗಳ ಬಳಕೆಗೆ ಸಂಬಂಧಿಸಿದಂತೆ ರಾಜೇಶ್ ಎಂಬವರ ಮೂಲಕ ಮಾತುಕತೆಯಾಗಿತ್ತು. ಈ ಸಿನಿಮಾದ ಹಾಡಿನ ಬಳಕೆ ಬಗ್ಗೆ ಮಾತುಕತೆ ಸರಿ ಹೊಂದದ ಕಾರಣ ಅಲ್ಲಿಗೆ ನಿಲ್ಲಿಸಲಾಗಿತ್ತು. ಬಳಿಕ ಮಾರ್ಚ್‌ನಲ್ಲಿ ಒಟಿಟಿಯಲ್ಲಿ ರಕ್ಷಿತ್ ಶೆಟ್ಟಿ ಅವರ ‘ಬ್ಯಾಚುಲರ್ ಪಾರ್ಟಿ’ ಸಿನಿಮಾ ಬಿಡುಗಡೆ ಆಗಿತ್ತು. ಸಿನಿಮಾ ನೋಡಿದಾಗ ಎರಡು ಚಿತ್ರಗಳ ಹಾಡು ಬಳಸಲಾಗಿದೆ’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಅನುಮತಿ ಇಲ್ಲದೆ ಹಾಡುಗಳನ್ನು ಬಳಸಿಕೊಂಡು ಕಂಪನಿಗೆ ಮೋಸ ಮಾಡಿದ್ದಾರೆ. ಹಾಗಾಗಿ ಆರೋಪಿಗಳ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಎಂಆರ್‌ಟಿ ಮ್ಯೂಸಿಕ್, ಸಿನಿಮಾದ ಹಾಡು, ಆಲ್ಬಂ ಹಾಡು ಹಾಗೂ ಇತ್ಯಾದಿ ಹಾಡುಗಳ ಹಕ್ಕುಸ್ವಾಮ್ಯ ಹಾಗೂ ಪ್ರಸರಣದ ಹಕ್ಕು ಖರೀದಿ ಮಾಡಿ ಪ್ರಸಾರ ಮಾಡುವ ಕಂಪನಿಯಾಗಿದೆ.

‘ಪ್ರಕರಣ ಕುರಿತು ವಿಚಾರಣೆಗೆ ಹಾಜರಾಗಲು ಸಂಬಂಧಪಟ್ಟವರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಸಿನಿಮಾ ಚಿತ್ರೀಕರಣ ಸಂಬಂಧ ಹೊರ ಜಿಲ್ಲೆ ಹಾಗೂ ರಾಜ್ಯಗಳಲ್ಲಿ ಇದ್ದಾರೆ. ಅವರು ಬೆಂಗಳೂರಿಗೆ ಬಂದ ಬಳಿಕ ಹಾಜರಾಗುವುದಾಗಿ ಹೇಳಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಹಿಂದೆಯೂ ದೂರು: 2016ರ ಡಿಸೆಂಬರ್ 30ರಂದು ಬಿಡುಗಡೆ ಆದ ‘ಕಿರಿಕ್ ಪಾರ್ಟಿ’ ಸಿನಿಮಾದಲ್ಲಿ ‘ಹೇಯ್ ಹೂ ಆರ್ ಯೂ’ ಹಾಡನ್ನು ಲಹರಿ ಸಂಸ್ಥೆಯ ಅನುಮತಿ ಇಲ್ಲದೆ ಬಳಸಲಾಗಿತ್ತು. ‘ಶಾಂತಿ ಕ್ರಾಂತಿ’ ಚಿತ್ರದ ಹಾಡನ್ನು ಚಿತ್ರದಲ್ಲಿ ಬಳಸಿಕೊಂಡಿದ್ದರಿಂದ ಲಹರಿ ಸಂಸ್ಥೆ 2017ರ ಜ. 11ರಂದು ದೂರು ದಾಖಲಿಸಿತ್ತು.

‘ನ್ಯಾಯಾಲಯದ ಮೊರೆ ಹೋಗುವೆವು’

‘ಬ್ಯಾಚುಲರ್ ಪಾರ್ಟಿ ಸಿನಿಮಾ ತೆರೆ ಕಾಣುವುದಕ್ಕೂ ಮುನ್ನ ನಾವು ಎಂಆರ್‌ಟಿ ಸಂಸ್ಥೆಯ ಮುಖ್ಯಸ್ಥರೊಂದಿಗೆ ಈ ಕುರಿತು ಮಾತುಕತೆ ನಡೆಸಿದ್ದೆವು. ಆದರೆ ಅವರು ನಮ್ಮ ಮುಂದೆ ಇಟ್ಟ ಶುಲ್ಕ ನಮ್ಮ ಬಜೆಟ್ ಅನ್ನು ಮೀರಿತ್ತು. ಎಂಆರ್‌ಟಿ ಸಂಸ್ಥೆ ಶುಲ್ಕದ ಕುರಿತಾಗಿ ಮರು ಮಾತುಕತೆಗೆ ತಯಾರಿರಲಿಲ್ಲ. ಇದು ನಿಜವಾಗಿಯೂ ಹಾಡಿನ ಹಕ್ಕು ಉಲ್ಲಂಘನೆಯೇ? ಹೌದಾಗಿದ್ದೇ ಆದಲ್ಲಿ ನಾವು ತೆರಬೇಕಾದ ದಂಡವಾದರೂ ಎಷ್ಟು? ಏಕೆಂದರೆ ಎಂಆರ್‌ಟಿ ಸಂಸ್ಥೆಯಿಂದ ಕೇಳಲ್ಪಟ್ಟದ್ದು ಬೃಹತ್ ಮೊತ್ತ ಎಂದರೆ ತಪ್ಪಾಗಲಾರದು. ಹಾಗಾಗಿ ನ್ಯಾಯ ಮತ್ತು ಪ್ರಬುದ್ಧತೆಯನ್ನು ಕಾಪಾಡಿಕೊಳ್ಳಲು ನಾವು ನ್ಯಾಯಾಲಯದ ಮೊರೆ ಹೋಗುತ್ತಿದ್ದೇವೆ’ ಎಂದು ಪರಂವಃ ಸ್ಟುಡಿಯೊಸ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

‘ಮದರಸಾಗಳಲ್ಲಿ ವಾರಕ್ಕೆ 2 ದಿನ ಕನ್ನಡ ಕಲಿಕೆ’

ಪ್ರಜಾವಾಣಿ ವಾರ್ತೆ



ಪುರುಷೋತ್ತಮ ಬಿಳಿಮಲೆ

ಬೀದರ್: ‘ರಾಜ್ಯದ ಮದರಸಾಗಳಲ್ಲಿ ವಾರಕ್ಕೆ ಎರಡು ದಿನ ಕನ್ನಡ ಕಲಿಸುವ ಯೋಜನೆ ಅನುಷ್ಠಾನಗೊಳಿಸಲು ನಿರ್ಧರಿಸಲಾಗಿದೆ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ತಿಳಿಸಿದರು.

ಪ್ರಾಯೋಗಿಕವಾಗಿ ರಾಜ್ಯದ ಬೆಂಗಳೂರು, ವಿಜಯಪುರ, ರಾಯಚೂರು ಹಾಗೂ ಕಲಬುರಗಿಯ ಕೆಲ ಆಯ್ದ ಮದರಸಾಗಳಲ್ಲಿ ಶುರು ಮಾಡಲಾಗುವುದು. ಅದರ ಸಾಧಕ–ಬಾಧಕ ನೋಡಿಕೊಂಡು ರಾಜ್ಯದ ಬೇರೆ ಕಡೆಗೂ ವಿಸ್ತರಿಸುವ ಯೋಚನೆ ಇದೆ. ಭಾಷೆಯ ಅಂತರ ದೂರ ಮಾಡುವುದು ಇದರ ಮುಖ್ಯ ಉದ್ದೇಶ. ಅಲ್ಪಸಂಖ್ಯಾತ ಮುಸ್ಲಿಮರಿಂದಲೂ ಇದಕ್ಕಾಗಿ ಬೇಡಿಕೆ ಬಂದಿತ್ತು ಎಂದು ನಗರದಲ್ಲಿ ಸೋಮವಾರ ವಿವಿಧ ಇಲಾಖೆಗಳ ಸಭೆ ನಂತರ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

ಪಿಯು ಪರೀಕ್ಷೆ–3ರ ಫಲಿತಾಂಶ ಇಂದು

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆ–3ರ ಫಲಿತಾಂಶ ಜುಲೈ 16ರಂದು ಮಧ್ಯಾಹ್ನ 3ಕ್ಕೆ ಪ್ರಕಟವಾಗಲಿದೆ.

ಇದೇ ಮೊದಲ ಬಾರಿ ಒಂದು ಶೈಕ್ಷಣಿಕ ಸಾಲಿನ ದ್ವಿತೀಯ ಪಿಯು ವಿದ್ಯಾರ್ಥಿಗಳು ಮೂರು ಪರೀಕ್ಷೆಗಳನ್ನು ಬರೆಯಲು ಅವಕಾಶ ಕಲ್ಪಿಸಲಾಗಿದ್ದು, ಪ್ರಥಮ ಪರೀಕ್ಷೆ ಬರೆದಿದ್ದ 6.80 ಲಕ್ಷ ವಿದ್ಯಾರ್ಥಿಗಳಲ್ಲಿ 5.52 ಲಕ್ಷ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರು. ಶೇಕಡ 81.15ರಷ್ಟು ಫಲಿತಾಂಶ ದೊರೆತಿತ್ತು.

ದ್ವಿತೀಯ ಪಿಯು ಪರೀಕ್ಷೆ–2 ಬರೆದಿದ್ದ 1.48 ಲಕ್ಷ ವಿದ್ಯಾರ್ಥಿಗಳಲ್ಲಿ 52,505 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರು. ಒಟ್ಟಾರೆ ಶೇ 35.25 ಫಲಿತಾಂಶ ಲಭಿಸಿತ್ತು. ಜೂನ್ 24ರಿಂದ ಜುಲೈ 5ರವರೆಗೆ ದ್ವಿತೀಯ ಪಿಯು ಪರೀಕ್ಷೆ–3 ನಡೆದಿತ್ತು.

ಫಲಿತಾಂಶವನ್ನು ಮಂಡಳಿಯ ಜಾಲತಾಣ https://karresults.nic.in ನಲ್ಲಿ ವೀಕ್ಷಿಸಬಹುದು ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಹೇಳಿದೆ.



ತಾಯಿ ಪ್ರೀತಿ... ಚಾಮರಾಜನಗರ ಜಿಲ್ಲೆಯ ಬಂಡೀಪುರ ಅರಣ್ಯದಲ್ಲಿ ಮಳೆಯ ನಡುವೆಯೇ ಚಿರತೆಯು ತನ್ನ ಮರಿಯನ್ನು ಕಚ್ಚಿಕೊಂಡು ಸುರಕ್ಷಿತ ನೆಲೆಯೆಡೆಗೆ ನಡೆದ ಕ್ಷಣ ಚಿತ್ರ: ಅರವಿಂದ್ ಕಾರ್ತಿಕ್, ಬೆಂಗಳೂರು

ರೇಣುಕಸ್ವಾಮಿ ಕೊಲೆ: ಪವಿತ್ರಾ ಸ್ನೇಹಿತೆ ಸಮತಾ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಯೊಬ್ಬನಿಗೆ ಹಣಕಾಸು ನೆರವು ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಪ್ರಮುಖ ಆರೋಪಿ ಪವಿತ್ರಾ ಗೌಡ ಅವರ ಸ್ನೇಹಿತೆ ಸಮತಾ ಅವರಿಂದ ಎಸ್‌ಐಟಿ ಅಧಿಕಾರಿಗಳು ಹೇಳಿಕೆ ಪಡೆದರು.

ಆರೋಪಿ ಧನರಾಜ್‌ಗೆ ₹3 ಸಾವಿರ ಗೂಗಲ್ ಪೇ ಮಾಡಿರುವ ಕುರಿತು ಹೇಳಿಕೆ ನೀಡಿದ ಸಮತಾ, ಆರೋಪಿಗೆ ಈ ಹಿಂದೆ ನೀಡಿದ್ದ ಹಣದ ಬಗ್ಗೆ ದಾಖಲೆಯನ್ನು ಸಹ ಅಧಿಕಾರಿಗಳಿಗೆ ಸಲ್ಲಿಸಿದ್ದಾರೆ.

‘ಧನರಾಜ್ ಪರಿಚಯ ಮೊದಲಿನಿಂದಲೂ ಇತ್ತು. ಆತನಿಗೆ ಹಣದ ಅಗತ್ಯವಿದ್ದಾಗ ಕೇಳಿ ಪಡೆದು, ವಾಪಸ್ ನೀಡುತ್ತಿದ್ದ. ಅದೇ ರೀತಿ ₹3 ಸಾವಿರ ಕೇಳಿದ್ದರಿಂದ ಕೊಟ್ಟಿದ್ದೆ. ಆದರೆ, ರೇಣುಕಸ್ವಾಮಿ ಕೊಲೆ ಬಗ್ಗೆ ಆತ ನನಗೆ ಏನೂ ಹೇಳಿಲ್ಲ’ ಎಂದು ಸಮತಾ ಹೇಳಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ರೇಣುಕಸ್ವಾಮಿ ಅವರಿಗೆ ವಿದ್ಯುತ್ ಶಾಕ್ ನೀಡಲು ಬಳಸಿದ್ದ ‘ಎಲೆಕ್ಟ್ರಿಕ್ ಶಾಕ್ ಟಾರ್ಚ್’ ಆರೋಪಿ ಧನರಾಜ್ ಅಲಿಯಾಸ್ ರಾಜನ ಬಳಿ ಇತ್ತು. ಅವರಿಂದ ಪಡೆದ ಹಣದಿಂದಲೇ ಉಪಕರಣ ಖರೀದಿಸಿರುವ ಸಾಧ್ಯತೆ ಇರಬಹುದು. ಹಾಗಾಗಿ ಅವರಿಂದ ಹೇಳಿಕೆ ಪಡೆಯಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಭೇಟಿ: ನ್ಯಾಯಾಂಗ ಬಂಧನದಲ್ಲಿರುವ ಪವಿತ್ರಾ ಗೌಡ ಅವರನ್ನು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಅವರ ತಂದೆ ಪುಟ್ಟಣ್ಣ, ತಾಯಿ ಶೋಭಾ ಮತ್ತು ಮಗಳು ಭೇಟಿ ಮಾಡಿ, ಕೆಲವು ನಿಮಿಷ ಮಾತುಕತೆ ನಡೆಸಿದರು.

‘ಕಡಿಮೆ ರಕ್ತದೊತ್ತಡ, ಗ್ಯಾಸ್ಟ್ರಿಕ್ ಸಮಸ್ಯೆಯಿಂದ ಬಳಲುತ್ತಿರುವ ಪವಿತ್ರಾ, ಜೈಲಿನ ಊಟವನ್ನು ಸರಿಯಾಗಿ ಮಾಡುತ್ತಿಲ್ಲ’ ಎಂದು ಜೈಲು ಮೂಲಗಳು ತಿಳಿಸಿವೆ.

ಪ್ರಮುಖ ಆರೋಪಿ ಬಂಧನ, ₹12 ಲಕ್ಷ ನಗದು, ತಾಂತ್ರಿಕ ಸಲಕರಣೆ ವಶ

ವೈದ್ಯಕೀಯ ಸೀಟು: ವಂಚನೆ ಜಾಲ ಪತ್ತೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಸರ್ಕಾರಿ ಕಾಲೇಜುಗಳಲ್ಲಿ ವೈದ್ಯಕೀಯ ಸೀಟ್ ಕೊಡಿಸುವುದಾಗಿ ವಿದ್ಯಾರ್ಥಿಗಳನ್ನು ವಂಚಿಸುತ್ತಿದ್ದ ಜಾಲವನ್ನು ಪತ್ತೆ ಮಾಡಿದ ಬೆಳಗಾವಿ ಪೊಲೀಸರು, ತೆಲಂಗಾಣದ ರಂಗಾರೆಡ್ಡಿ ಜಿಲ್ಲೆ ಗಚ್ಚಿಬೌಲಿಯ ಅರಗೊಂಡ ಅರವಿಂದ ಅಲಿಯಾಸ್ ಅರುಣಕುಮಾರ್ ಅರಗೊಂಡ ಪ್ರಕಾಶಂ (47) ಎಂಬ ಆರೋಪಿಯನ್ನು ಮುಂಬೈಯಲ್ಲಿ ಬಂಧಿಸಿದ್ದಾರೆ.

‘ಆರೋಪಿಯಿಂದ ₹12 ಲಕ್ಷ ಹಣ, 5 ಮೊಬೈಲ್, 15 ಸಿಪಿಯು ಮಾನಿಟರ್, 1 ಲ್ಯಾಪ್‌ಟಾಪ್, ತಲಾ ಮೂರು ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್, 12 ಅಡಾಪ್ಟರ್, 1 ಬಯೋಮೆಟ್ರಿಕ್ ಹಾಗೂ 1 ಡಿವಿಆರ್ ವಶಪಡಿಸಿಕೊಳ್ಳಲಾಗಿದೆ. ಆತನ ವಿರುದ್ಧ ಈಗಾಗಲೇ ತೆಲಂಗಾಣದಲ್ಲಿ 6, ಭೂಪಾಲ್‌ನಲ್ಲಿ 1, ಬೆಂಗಳೂರಿನ ಅಶೋಕ ನಗರ ಹಾಗೂ ಆರ್.ಟಿ.ನಗರದ ಪೊಲೀಸ್ ಠಾಣೆಯಲ್ಲಿ ತಲಾ 1 ಪ್ರಕರಣ ದಾಖಲಾಗಿವೆ’ ಎಂದು ಡಿಸಿಪಿ ರೋಹನ್ ಜಗದೀಶ್ ತಿಳಿಸಿದ್ದಾರೆ.

‘ನೀಟ್‌ನಲ್ಲಿ ಕಡಿಮೆ ಅಂಕ ಪಡೆದಿದ್ದರೂ ಸರ್ಕಾರಿ ಕಾಲೇಜಿನಲ್ಲಿ ಎಂಬಿಬಿಎಸ್ ಸೀಟ್ ಕೊಡಿಸುವುದಾಗಿ ಹಣ ಪಡೆದು ವಿದ್ಯಾರ್ಥಿಗಳನ್ನು ನಂಬಿಸಿದ್ದ ಆರೋಪಿ ಎಂಬಿಎ ಪದವೀಧರ. ಕೆಲ ಜಿಲ್ಲಾ ಕೇಂದ್ರಗಳಲ್ಲಿ ಹೈಟೆಕ್ ಕಚೇರಿಗಳನ್ನು ತೆರೆದು, ‘ನೀಟ್’ ತರಬೇತಿ ನೀಡುವುದಾಗಿ ನಂಬಿಸಿದ್ದ’ ಎಂದು ಅವರು ತಿಳಿಸಿದ್ದಾರೆ.

ಜಾಲ ಪತ್ತೆಯಾಗಿದ್ದು ಹೇಗೆ?: 2023ರಲ್ಲಿ ಬೆಳಗಾವಿಯಲ್ಲಿ ನೀಟ್ ಮಾರ್ಗದರ್ಶನ ಕೇಂದ್ರ ತೆರೆದಿದ್ದ ಆರೋಪಿ, ಎಂಬಿಬಿಎಸ್ ಸೀಟ್ ಕೊಡಿಸುವುದಾಗಿ ಬೀದರ್‌ನ ವಿದ್ಯಾರ್ಥಿನಿಯಿಂದ ₹3.75 ಲಕ್ಷ ಪಡೆದಿದ್ದ. 10 ವಿದ್ಯಾರ್ಥಿಗಳಿಂದ ಒಟ್ಟು ₹ 1.31 ಕೋಟಿ ಹಣ ಪಡೆದು ಪರಾರಿಯಾಗಿದ್ದ. ಒಬ್ಬ ವಿದ್ಯಾರ್ಥಿನಿ ಕಳೆದ ನವೆಂಬರ್‌ನಲ್ಲಿ ಇಲ್ಲಿನ ಮಾರ್ಕೆಟ್ ಠಾಣೆಗೆ ದೂರು ನೀಡಿದ್ದರು.

ಆರು ತಿಂಗಳಿಂದ ಹುಡುಕಾಡಿದ ಪೊಲೀಸರಿಗೆ ಆರೋಪಿ ಮುಂಬೈನಲ್ಲಿರುವುದು ಗೊತ್ತಾಯಿತು. ವಿಶೇಷ ತಂಡ ಅಲ್ಲಿಗೆ ಭೇಟಿ ನೀಡಿದಾಗ ‘ಅದ್ವಯ ವಿದ್ಯಾ ಪ್ರವೇಶ ಮಾರ್ಗದರ್ಶಕ ಪ್ರೈ.ಲಿ’ ಎಂಬ ಹೆಸರಲ್ಲಿ ನೀಟ್ ಮಾರ್ಗದರ್ಶನ ಕೇಂದ್ರ ನಡೆಸುತ್ತಿರುವುದು ಖಾತ್ರಿಯಾಗಿತ್ತು.

ನೀಟ್ ಮಾರ್ಗದರ್ಶನದ ಹೆಸರಿನಲ್ಲಿ ವಂಚಿಸುತ್ತಿದ್ದ ಜಾಲ ದೊಡ್ಡದಿದೆ. ಇನ್ನಷ್ಟು ತನಿಖೆ ಆಗಬೇಕಿದೆ. ಜಾಲ ಪತ್ತೆ ಮಾಡಿದ ತಂಡಕ್ಕೆ ಬಹುಮಾನ ನೀಡಲಾಗುವುದು

ರೋಹನ್ ಜಗದೀಶ

ಡಿಸಿಪಿ, ಕಾನೂನು ಮತ್ತು ಸುವ್ಯವಸ್ಥೆ

ಹಾರಂಗಿಯಿಂದ ನದಿಗೆ 20 ಸಾವಿರ ಕ್ಯುಸೆಕ್ ನೀರು

ಸತತ ಮಳೆ: ಮೈದುಂಬಿದ ನದಿಗಳು



ಕುಶಾಲನಗರ ಸಮೀಪದ ಹಾರಂಗಿ ಜಲಾಶಯದಿಂದ ಸೋಮವಾರ 20 ಸಾವಿರ ಕ್ಯುಸೆಕ್ ನೀರನ್ನು ನದಿಗೆ ಹರಿಬಿಡಲಾಯಿತು. ನೀರು ಹೊರಬಂದಾಗ ಕಂಡ ಮನಮೋಹಕ ದೃಶ್ಯ

ಪ್ರಜಾವಾಣಿ ವಾರ್ತೆ

ಮಂಗಳೂರು/ಶಿವಮೊಗ್ಗ: ರಾಜ್ಯದ ಮಲೆನಾಡು, ಕರಾವಳಿ ಜಿಲ್ಲೆಗಳು ಸೇರಿದಂತೆ ಬಹುತೇಕ ಕಡೆಗಳಲ್ಲಿ ಸೋಮವಾರ ಉತ್ತಮ ಮಳೆಯಾಗಿದೆ. ನದಿಗಳು ಮೈದುಂಬಿದ್ದರೆ, ಜಲಪಾತಗಳು ಧುಮ್ಮಿಕ್ಕುತ್ತಿವೆ.

ಭಾರಿ ಮಳೆಯ ಕಾರಣ ಹಾಸನ ಜಿಲ್ಲೆಯ ಕೆಲವೆಡೆ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಮತ್ತು ಕೊಡಗು ಜಿಲ್ಲೆಗಳಲ್ಲಿ ಜುಲೈ 16ರಂದು ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಪಶ್ಚಿಮ ಘಟ್ಟ ಪ್ರದೇಶದಲ್ಲಿ ಸುರಿದ ಭಾರಿ ಮಳೆಯಿಂದಾಗಿ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಕುಮಾರಧಾರಾ ನದಿ ಉಕ್ಕಿ ಹರಿದು ಸ್ನಾನಘಟ್ಟ ಮುಳುಗಡೆಯಾಗಿದೆ. ನದಿಯಲ್ಲಿ ತೀರ್ಥಸ್ನಾನ ಮಾಡದಂತೆ ಯಾತ್ರಿಗಳಿಗೆ ನಿರ್ಬಂಧ ವಿಧಿಸಲಾಗಿದ್ದು, ತೀರ್ಥಸ್ನಾನಕ್ಕೆ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿದೆ.

ಮಳೆ, ಗಾಳಿಗೆ ಉಡುಪಿ ನಗರದ ದೊಡ್ಡಣಗುಡ್ಡೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಅಡುಗೆ ಕೋಣೆಯ ಒಂದು ಬದಿಯ ಗೋಡೆ ಭಾನುವಾರ ರಾತ್ರಿ ಕುಸಿದು ಬಿದ್ದಿದೆ.

ನೀರಿನ ಹರಿವು ಹೆಚ್ಚಳ: ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಳೆ ಅಬ್ಬರಿಸಿದ್ದು, ಜಲಪಾತ ಮತ್ತು ನದಿಗಳಲ್ಲಿ ನೀರಿನ ಹರಿವು ಹೆಚ್ಚಾಗಿದೆ. ಚಂದ್ರದ್ರೋಣ ಪರ್ವತ ಶ್ರೇಣಿಯಲ್ಲಿ ಜಲಪಾತಗಳು ಉಕ್ಕಿ ಹರಿಯುತ್ತಿದ್ದು, ಹೇಮಾವತಿ, ತುಂಗಾ, ಭದ್ರಾ, ವೇದಾವತಿ, ನೇತ್ರಾವತಿ ನದಿಗಳಲ್ಲಿ ನೀರಿನ ಹರಿವು ಹೆಚ್ಚಾಗಿದೆ. ಕೊಪ್ಪ ತಾಲ್ಲೂಕಿನ ನಾರ್ವೆ ಬಳಿ ರಸ್ತೆಗೆ ಮರ ಬಿದ್ದು ಕೊಪ್ಪ–ಜಯಪುರ ರಸ್ತೆಯಲ್ಲಿ ಒಂದು ಗಂಟೆಗೂ ಹೆಚ್ಚು ಕಾಲ ವಾಹನಗಳ ಸಂಚಾರ ಸ್ಥಗಿತಗೊಂಡಿತ್ತು.

ಮಳೆಯ ಆರ್ಭಟಕ್ಕೆ ವರದಾ, ಕುಮದ್ವತಿ ಹಾಗೂ ಶರಾವತಿ ನದಿಗಳು ಮೈದುಂಬಿವೆ. ಗಾಜನೂರು ಬಳಿಯ ತುಂಗಾ ಜಲಾಶಯ ಭರ್ತಿ ಆಗಿರುವುದರಿಂದ 21 ಕ್ರಸ್ಟ್‌ಗೇಟ್‌ಗಳನ್ನೂ ತೆರೆಯಲಾಗಿದೆ. ಜಲಾಶಯಕ್ಕೆ 33,000 ಕ್ಯುಸೆಕ್ ಒಳಹರಿವು ಇದ್ದು, ಅಷ್ಟೇ ಪ್ರಮಾಣದ ನೀರನ್ನು ನದಿಗೆ ಹರಿಸಲಾಗುತ್ತಿದೆ.

ಭದ್ರಾ ಜಲಾಶಯಕ್ಕೆ 16,041 ಕ್ಯುಸೆಕ್ ಒಳಹರಿವು ಇದೆ. 186 ಅಡಿ ಸಾಮರ್ಥ್ಯದ ಜಲಾಶಯದಲ್ಲಿ ಸದ್ಯ 141.3 ಅಡಿ ನೀರಿದೆ. ಕಳೆದ ವರ್ಷವೂ ಇದೇ ಅವಧಿಯಲ್ಲಿ 141.3 ಅಡಿ ನೀರಿತ್ತು.

ವರದಾ ನದಿ ಅಪಾಯ ಮಟ್ಟದಲ್ಲಿ ಹರಿಯುತ್ತಿದೆ. ಸಾಗರ ತಾಲ್ಲೂಕಿನಲ್ಲಿ ನೂರಾರು ಎಕರೆ ಗದ್ದೆಗಳು ಜಲಾವೃತವಾಗಿವೆ. ಕುಮುದ್ವತಿಯಲ್ಲೂ ನೀರಿನ ಹರಿವು ಹೆಚ್ಚಿದೆ.

ಲಿಂಗನಮಕ್ಕಿ ಒಳಹರಿವು ಭಾರಿ ಏರಿಕೆ: ಲಿಂಗನಮಕ್ಕಿ ಜಲಾಶಯಕ್ಕೆ 45,115 ಕ್ಯುಸೆಕ್ ಒಳಹರಿವು ದಾಖಲಾಗಿದೆ. ಜಲಾಶಯದಲ್ಲಿ ಸದ್ಯ 1,778.2 ಅಡಿ ನೀರಿನ ಸಂಗ್ರಹ ಇದೆ. ಕಳೆದ ವರ್ಷ ಇದೇ ಅವಧಿಯಲ್ಲಿ 1,755.3 ಅಡಿ ನೀರಿತ್ತು. ಕಾರ್ಗಲ್ ಸುತ್ತಲೂ ಮಳೆ ಆಗುತ್ತಿರುವುದರಿಂದ ಜೋಗ ಜಲಪಾತದ ಚೆಲುವು ಇಮ್ಮಡಿಗೊಂಡಿದೆ.

ಹಲವೆಡೆ ಗುಡ್ಡ ಕುಸಿತ (ಕಾರವಾರ ವರದಿ): ಉತ್ತರ ಕನ್ನಡ ಜಿಲ್ಲೆಯ ಹಲವೆಡೆ ಗುಡ್ಡ ಕುಸಿದಿದೆ, ಮನೆಗಳಿಗೆ ನೀರು ನುಗ್ಗಿದೆ. ಕಾಳಿನದಿಯಲ್ಲಿ ನೀರಿನ ಹರಿವು ಹೆಚ್ಚಿದ್ದು ಸೂಪಾ ಜಲಾಶಯಕ್ಕೆ ಒಳಹರಿವಿನ ಪ್ರಮಾಣ 41 ಸಾವಿರ ಕ್ಯುಸೆಕ್‌ಗೆ ಏರಿಕೆಯಾಗಿದೆ. ಕೊಡಸಳ್ಳಿ ಮತ್ತು ಕದ್ರಾ ಜಲಾಶಯದಿಂದ ತಲಾ 10 ಸಾವಿರ ಕ್ಯುಸೆಕ್ ನೀರು ಹೊರ ಬಿಡಲಾಗಿದೆ.

ಹೊನ್ನಾವರ ತಾಲ್ಲೂಕಿನ ಖರ್ವಾ ಸಮೀಪ ಹೊನ್ನಾವರ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ–69ರಲ್ಲಿ ಭೂಕುಸಿತವಾಗಿದೆ. ಜೊಯಿಡಾ ತಾಲ್ಲೂಕಿನ ನುಜ್ಜಿ ಬಳಿ ಬೃಹದಾಕಾರ ಮರವೊಂದು ರಾಜ್ಯ ಹೆದ್ದಾರಿ–34ರಲ್ಲಿ ರಸ್ತೆಗೆ ಉರುಳಿತ್ತು. ಕಾರವಾರ–ಕೈಗಾ ರಸ್ತೆಯ ಮಂದ್ರಾಳಿಯಲ್ಲಿ ಭೂಕುಸಿತದಿಂದ ಕೆಲ ಗಂಟೆ ವಾಹನಗಳ ಸಂಚಾರಕ್ಕೆ ತೊಂದರೆಯಾಯಿತು.

ಮಡಿಕೇರಿ ವರದಿ: ನಗರದಲ್ಲಿ ಭಾನುವಾರ ತಡರಾತ್ರಿ ಬಿರುಗಾಳಿಯು ಜನರ ನಿದ್ದೆ ಕಸಿಯಿತು. ರಾತ್ರಿಯಿಡೀ ಮಳೆ ಸುರಿಯಿತು. ಬೆಳಿಗ್ಗೆ ಹೊತ್ತಿಗೆ ಹಾರಂಗಿ ಜಲಾಶಯಕ್ಕೆ ಅಧಿಕ ನೀರು ಹರಿದು ಬಂದು, ನದಿಗೆ 20 ಸಾವಿರ ಕ್ಯುಸೆಕ್ ನೀರು ಹರಿಸಲಾಯಿತು.

ಕುಶಾಲನಗರ ತಾಲ್ಲೂಕಿನ ಕಣಿವೆ ರಾಮಲಿಂಗೇಶ್ವರ ದೇಗುಲದ ಸಮೀಪ ಹಾರಂಗಿ ಹಾಗೂ ಕಾವೇರಿ ನದಿ ಸಂಗಮಗೊಂಡು ಹರಿಯುತ್ತಿದ್ದು, ನೀರಿನ ಮಟ್ಟ ಹೆಚ್ಚಿದೆ. ಕಣಿವೆಯ ತೂಗು ಸೇತುವೆಯ ಬಳಿ ಕಾವೇರಿ ನದಿ ನೀರಿನ ಹರಿವು ಏರಿಕೆಯಾಗುತ್ತಿದೆ. ಪಟ್ಟಣದ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಬಳಿ ಕಾವೇರಿ ನದಿ ಮೈದುಂಬಿ ಹರಿಯುತ್ತಿದ್ದು, ಇಲ್ಲಿನ ಸೋಪಾನಕಟ್ಟೆ ಮುಳುಗಡೆಯಾಗಿದೆ.

ಹಾರಂಗಿಯ ಕೆಳಸೇತುವೆ ಮೇಲೆ ನೀರುಹರಿಯುತ್ತಿರುವುದರಿಂದ ವಾಹನ ಸಂಚಾರ ಬಂದ್ ಆಗಿದೆ. ಕೆಲ ಗ್ರಾಮಗಳಿಗೆ ಸಂಪರ್ಕ ಕಡಿತಗೊಂಡಿದೆ.

ಹೇಮಾವತಿ ಜಲಾಶಯ ಭರ್ತಿಗೆ 18 ಅಡಿ ಬಾಕಿ ಇದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	106.20	19,202	2,284
ಹಾರಂಗಿ	2,859	2,854.87	17,180	20,000
ಕಬಿನಿ	2,284.00	2,282.36	20,217	25,000
ಹೇಮಾವತಿ	2,922	2,904.40	13,338	250
ಲಿಂಗನಮಕ್ಕಿ	1,819	1,778.15	45,115	0
ಸೂಪಾ (ಮೀ)	564	536.25	40,616	73.56
ಮಾಣಿ	595	577.82	3,279	0
ತುಂಗಭದ್ರಾ	1,633	1,607.59	16,142	211
ಮಲಪ್ರಭಾ	2,079.5	2,055.20	3,759	194
ಘಟಪ್ರಭಾ	2175	2,139.10	13,037	350
ಭದ್ರಾ	186	141.3	16,041	350
ಆಲಮಟ್ಟಿ (ಮೀ)	519.6	517.56	25,123	9,730
ನಾರಾಯಣಪುರ (ಮೀ)	492.25	489.65	10,404.2	92.01

* ನೆಲಮಟ್ಟದಿಂದ



ಚಿಕ್ಕೋಡಿ ತಾಲ್ಲೂಕಿನ ಮಾಂಜರಿ ಗ್ರಾಮದ ಬಳಿ ಸಣ್ಣ ನೀರಾವರಿ ಇಲಾಖೆ ನಿರ್ಮಿಸಿದ ಬಾಂದಾರ ಕೃಷ್ಣಾ ನದಿಯಲ್ಲಿ ಕೊಚ್ಚಿಹೋಗಿದೆ

ಸೇತುವೆ ಜಲಾವೃತ

ಚಿಕ್ಕೋಡಿ: ಮಹಾರಾಷ್ಟ್ರದ ಕೊಂಕಣ ಪ್ರದೇಶ ಹಾಗೂ ಚಿಕ್ಕೋಡಿ ಉಪ ವಿಭಾಗದಲ್ಲಿ ಸುರಿದ ಮಳೆಯಿಂದ 5 ದಿನಗಳಿಂದ ಇಳಿಮುಖವಾಗಿದ್ದ ಕೃಷ್ಣಾ ಹಾಗೂ ಉಪನದಿಗಳಲ್ಲಿ ನೀರು ಹರಿಯುವ ಪ್ರಮಾಣ ಮತ್ತೆ ಹೆಚ್ಚಳವಾಗಿದೆ.

ಮಹಾರಾಷ್ಟ್ರದ ಕೃಷ್ಣಾ ಹಾಗೂ ಉಪನದಿಗಳ ಜಲಾನಯನ ಪ್ರದೇಶದ ಕೊಯ್ನಾದಲ್ಲಿ 18.7 ಸೆಂ.ಮೀ, ವಾರಣಾದಲ್ಲಿ 13.2 ಸೆಂ.ಮೀ, ಕಾಳಮ್ಮವಾಡಿಯಲ್ಲಿ 3.9 ಸೆಂ.ಮೀ, ಮಹಾಬಳೇಶ್ವರದಲ್ಲಿ 9.9 ಸೆಂ.ಮೀ, ನವಜಾದಲ್ಲಿ 27.4 ಸೆಂ.ಮೀ, ರಾಧಾನಗರಿಯಲ್ಲಿ 7.8 ಸೆಂ.ಮೀ. ಸಾಂಗಲಿಯಲ್ಲಿ 0.7 ಸೆಂ.ಮೀ, ಕೊಲ್ಹಾಪುರದಲ್ಲಿ 2.4 ಸೆಂ.ಮೀ ಮಳೆ ಆಗಿದೆ. ಚಿಕ್ಕೋಡಿ ಉಪ ವಿಭಾಗದಲ್ಲೂ ಮಳೆಯಾಗಿದ್ದು ಕೃಷ್ಣಾ, ದೂಧಗಂಗಾ, ವೇದಗಂಗಾ ನದಿಗಳಲ್ಲಿ ನೀರು ಹೆಚ್ಚಿದೆ.

ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯಲ್ಲಿ ಕೃಷ್ಣಾ ನದಿಗೆ ಅಡ್ಡಲಾಗಿರುವ ರಾಜಾಪೂರೆ ಬ್ಯಾರೇಜ್ ನಲ್ಲಿ 37,250 ಕ್ಯುಸೆಕ್ ಹೊರ ಹರಿವು ಇದ್ದು, ಕಲ್ಲೋಳ ಬಳಿಯಲ್ಲಿ ದೂಧಗಂಗಾ ನದಿಗೆ 10,560 ಕ್ಯುಸೆಕ್ ನೀರು ಹರಿದು ಬರುತ್ತಿದೆ. ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ-ಯಡೂರು ಬ್ಯಾರೇಜ್ ಬಳಿಯಲ್ಲಿ ಕೃಷ್ಣಾ ನದಿಗೆ 47,810 ಕ್ಯುಸೆಕ್ ನೀರು ಹರಿದು ಬರುತ್ತಿದೆ.

ದೂಧಗಂಗಾ ನದಿಗೆ ಅಡ್ಡಲಾಗಿರುವ ತಾಲ್ಲೂಕಿನ ಮಲಿಕವಾಡ-ದತ್ತವಾಡ ಸೇತುವೆ ಮತ್ತೇ ಸೋಮವಾರ ಜಲಾವೃತಗೊಂಡು, ಕರ್ನಾಟಕ-ಮಹಾರಾಷ್ಟ್ರ ಸಂಪರ್ಕ ಕಡಿತಗೊಂಡಿದೆ.



ಪಶ್ಚಿಮ ಘಟ್ಟ ಪ್ರದೇಶದಲ್ಲಿ ಸುರಿದ ಭಾರಿ ಮಳೆಯಿಂದಾಗಿ ಕುಮಾರಧಾರಾ ನದಿ ಉಕ್ಕಿ ಹರಿದಿದ್ದು, ಕುಕ್ಕೆ ಸುಬ್ರಹ್ಮಣ್ಯದಲ್ಲಿ ಸ್ನಾನ ಘಟ್ಟ ಸೋಮವಾರ ಮುಳುಗಡೆಯಾಯಿತು




ಕಪಿಲಾ ನದಿ ಪ್ರವಾಹದಿಂದಾಗಿ ಮೈಸೂರು ಜಿಲ್ಲೆಯ ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದ ಸ್ನಾನಘಟ್ಟದ ಹದಿನಾರುಕಾಲು ಮಂಟಪ ಭಾಗಶಃ ಮುಳುಗಡೆಯಾಗಿದೆ

ಸಾಹಿತಿ ನಾ. ಮೊಗಸಾಲೆಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಧಾರವಾಡ: ಕರ್ನಾಟಕ ವಿದ್ಯಾವರ್ಧಕ ಸಂಘದ ‘ಸಿರಿಗನ್ನಡಂ ಗೆಲ್ಗೆ ರಾ.ಹ. ದೇಶಪಾಂಡೆ’ ಪ್ರಶಸ್ತಿಗೆ ಸಾಹಿತಿ ನಾ. ಮೊಗಸಾಲೆ ಅವರನ್ನು ಹಾಗೂ ‘ಕನ್ನಡ ಪ್ರಪಂಚ ಡಾ.ಪಾಟೀಲ ಪುಟ್ಟಪ್ಪ’ ಪ್ರಶಸ್ತಿಗೆ ಬೆಳಗಾವಿಯ ‘ಕನ್ನಡಮ್ಮ’ ಪತ್ರಿಕೆಯನ್ನು ಆಯ್ಕೆ ಮಾಡಲಾಗಿದೆ.



ನಾ.ಮೊಗಸಾಲೆ

ಪುರಸ್ಕಾರಗಳು ತಲಾ ₹50 ಸಾವಿರ ನಗದು, ಫಲಕ ಒಳಗೊಂಡಿವೆ. ಸಂಘದ 135ನೇ ಸಂಸ್ಥಾಪನಾ ದಿನಾಚರಣೆ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಹೆದ್ದಾರಿಯ ಹಲವೆಡೆ ಭೂ ಕುಸಿತ

ಪ್ರಜಾವಾಣಿ ವಾರ್ತೆ

ಸಕಲೇಶಪುರ: ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿಯ ಸಕಲೇಶಪುರ–ಮಾರನಹಳ್ಳಿ ನಡುವೆ ಹಲವೆಡೆ ಭೂ ಕುಸಿತವಾಗಿದ್ದು, ಮಳೆ ಹೀಗೇ ಮುಂದುವರಿದರೆ ಸಂಚಾರಕ್ಕೆ ಅಡ್ಡಿಯಾಗುವ ಸಾಧ್ಯತೆ ದಟ್ಟವಾಗಿದೆ.

ಕಾಂಕ್ರೀಟ್ ರಸ್ತೆ ನಿರ್ಮಿಸಿರುವ ದೊಡ್ಡತಪ್ಪಲೆ ಬಳಿ ಸುಮಾರು 150 ಅಡಿ ಉದ್ದಕ್ಕೂ ಭಾರಿ ಪ್ರಮಾಣದಲ್ಲಿ ಮರ ಗಿಡಗಳ ಸಮೇತ ಮಣ್ಣು ಕುಸಿದು ಬಿದ್ದಿದೆ. ಮಳೆ ಬಂದಂತೆಲ್ಲಾ ಕುಸಿತ ಮುಂದುವರಿದಿದ್ದು, ವಾಹನಗಳು ಹಳೆ-ಹೆದ್ದಾರಿಯಲ್ಲೇ ಸಂಚರಿಸುವಂತಾಗಿದೆ.

‘ರಸ್ತೆ ನಿರ್ಮಾಣಕ್ಕೆ ಇಳಿಜಾರಿನಲ್ಲಿ ಭೂಮಿ ಕತ್ತರಿಸದೇ, ಲಂಬವಾಗಿ ಕತ್ತರಿಸಿರುವುದರಿಂದ ಮಣ್ಣು ಕುಸಿಯುತ್ತಿದೆ’ ಎಂದು ಕಾಫಿ ಬೆಳೆಗಾರ ಟಿ.ಡಿ. ಬಸಪ್ಪ ಆತಂಕ ವ್ಯಕ್ತಪಡಿಸಿದರು.

ಘಟಪ್ರಭಾ: 3 ಪಂಚಾಯಿತಿಗಳಲ್ಲಿ ಕಾಮಗಾರಿ

ಪ್ರಜಾವಾಣಿ ವಾರ್ತೆ

ವರದಿ ಫಲಶ್ರುತಿ

ಬೆಳಗಾವಿ: ಹಿಡಕಲ್ ಜಲಾಶಯದ ಘಟಪ್ರಭಾ ಬಲದಂಡೆ ಕಾಲುವೆಯ ದುರಸ್ತಿ ಹಾಗೂ ಹೂಳು ತೆಗೆಯುವ ಕಾಮಗಾರಿಯನ್ನು ಉದ್ಯೋಗ ಖಾತ್ರಿ ಯೋಜನೆಯಡಿ ಆರಂಭಿಸಲಾಗಿದೆ.

ಜುಲೈ 11ರ ‘ಪ್ರಜಾವಾಣಿ’ಯಲ್ಲಿ ‘ಅಧಿಕಾರಿಗಳ ನಿರ್ಲಕ್ಷ್ಯ: ರೈತರಿಂದ ಹೂಳು ತೆರವು’ ವಿಶೇಷ ವರದಿ ಪ್ರಕಟವಾಗಿತ್ತು. ಇದಕ್ಕೆ ಪೂರಕವಾಗಿ ಮೂರು ಗ್ರಾಮ ಪಂಚಾಯಿತಿಗಳಲ್ಲಿ ಅಭಿವೃದ್ಧಿ ಅಧಿಕಾರಿಗಳು (ಪಿಡಿಒ) ಕೆಲಸ ಆರಂಭಿಸಿದ್ದಾರೆ.

‘ನಿಪನಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಕಾಲುವೆಯಲ್ಲಿ ಹೂಳು ತುಂಬಿಕೊಂಡ ಕಾರಣ ಕೊನೆಯ ಗ್ರಾಮಗಳಿಗೆ ನೀರು ತಲುಪುತ್ತಿಲ್ಲ. 40 ಕಾರ್ಮಿಕರ ತಂಡ ರಚಿಸಿ ಕೆಲಸ ಶುರು ಮಾಡಲಾಗಿದೆ. ₹3 ಲಕ್ಷ ಅನುದಾನ ಮಂಜೂರಾಗಿದೆ. 15 ದಿನಗಳಲ್ಲಿ ನೀರು ಕೊನೆಯ ಹಂತ ತಲುಪಲಿದೆ’ ಎಂದು ನಿಪನಾಳ ಪಿಡಿಒ ಮಲ್ಲಪ್ಪ ಗುಳಿದಾರ ತಿಳಿಸಿದರು.

ಕಬ್ಬೂರ ಅಂಚು ಕಾಲುವೆಯ ನೀರು ಜೋಡಟ್ಟಿ– ಜಾಗನೂರ–ಮಮದಾಪುರ– ದಂಡಾಪುರ–ನಿಪನಾಳ– ಮಂಟೂರ– ಖಟಕಬಾವಿ ಮಾರ್ಗದಲ್ಲಿ ಹರಿಯಲಿದೆ. ದಂಡಾಪುರ, ಮಮದಾಪುರದಲ್ಲೂ ಸೋಮವಾರ ಕಾಮಗಾರಿಗೆ ಚಾಲನೆ ನೀಡಲಾಗಿದೆ.

ಮಂಟೂರಿನ ಮತ್ತಷ್ಟು ರೈತರು ಊಟ ಕಟ್ಟಿಕೊಂಡು ಬಂದು, ಸಂಬಳವಿಲ್ಲದೇ ಕೆಲಸಕ್ಕೆ ಕೈ ಜೋಡಿಸಿದ್ದಾರೆ. ಜೋಡಟ್ಟಿ ಗ್ರಾಮದ ಹದ್ದಿಯಲ್ಲಿ ಹೂಳು ತೆಗೆಯುವ ಕಾಯಕ ನಡೆಸಿದ್ದಾರೆ.

‘70ಕ್ಕೂ ಹೆಚ್ಚು ರೈತರು ಹಣ ಸೇರಿಸಿ ಕಾಲುವೆ ಹೂಳು ತೆಗೆಯುತ್ತಿದ್ದೇವೆ. ನೀರಾವರಿ ಇಲಾಖೆ ಅಧಿಕಾರಿಗಳು ನೆರವಿಗೆ ಬರಬೇಕು. ಒಂದು ಜೆಸಿಬಿ ಒದಗಿಸಿದರೆ ಕೆಲಸ ವೇಗವಾಗಿ ಸಾಗಲಿದೆ’ ಎಂದು ಮಂಟೂರು ಗ್ರಾಮ ಪಂಚಾಯಿತಿ ಸದಸ್ಯೆ ಮಲ್ಲವ್ವ ಭೀಮಪ್ಪ ಮೇಟಿ ಆಗ್ರಹಿಸಿದ್ದಾರೆ.



ರಾಯಬಾಗ ತಾಲ್ಲೂಕಿನ ನಿಪನಾಳ ಗ್ರಾಮದ ಘಟಪ್ರಭಾ ಬಲದಂಡೆ ಕಾಲುವೆಯಲ್ಲಿ ಹೂಳು ತೆಗೆಯುವ ಕಾಮಗಾರಿ ಸೋಮವಾರವೂ ಮುಂದುವರಿಯಿತು




ಯಲಹಂಕದಲ್ಲಿ ಇಂಟಿಗ್ರೇಟೆಡ್ ಎಲಿವೇಟೆಡ್ ಕಾರಿಡಾರ್ ಕಾಮಗಾರಿ ಎನ್‌ಇಎಸ್ ವೃತ್ತದ ಸಮೀಪ ಸ್ಥಗಿತಗೊಂಡಿದೆ (ಎಡಚಿತ್ರ) ಸಂದೀಪ್ ಉನ್ನಿಕೃಷ್ಣನ್ ರಸ್ತೆಯಲ್ಲಿ ಇಂಟಿಗ್ರೇಟೆಡ್ ಎಲಿವೇಟೆಡ್ ಕಾರಿಡಾರ್‌ನ ಕಾಮಗಾರಿ ಇನ್ನೂ ಪಿಲ್ಲರ್ ಹಂತದಲ್ಲಿದೆ
– ಪ್ರಜಾವಾಣಿ ಚಿತ್ರಗಳು: ಸುರೇಶ್

ಯಲಹಂಕದಲ್ಲಿ ಇಂಟಿಗ್ರೇಟೆಡ್ ಎಲಿವೇಟೆಡ್ ಕಾರಿಡಾರ್; ಇನ್ನೊಂದು ವರ್ಷ ಗಡುವು ವಿಸ್ತರಣೆ

ಬಿಲ್ ಪಾವತಿ ವಿಳಂಬ: ಕಾಮಗಾರಿ ನಿಧಾನ

● ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ಸಕಾಲದಲ್ಲಿ ಮುಂಗಡ ಅನುದಾನ ಬಿಡುಗಡೆ ಮಾಡದಿರುವುದು ಮತ್ತು ಬಿಲ್ ಪಾವತಿಯಲ್ಲಿನ ಅತಿಯಾದ ವಿಳಂಬದಿಂದ ಯಲಹಂಕ ಇಂಟಿಗ್ರೇಟೆಡ್ ಎಲಿವೇಟೆಡ್ ಕಾರಿಡಾರ್ ಕಾಮಗಾರಿಯ ಪ್ರಗತಿ ಕುಂಠಿತವಾಗಿದೆ. ಗುತ್ತಿಗೆದಾರರೂ ಬಿಬಿಎಂಪಿಯತ್ತಲೇ ಬೆರಳು ತೋರುತ್ತಿದ್ದಾರೆ.

'ಕಾಮಗಾರಿ ಪ್ರಗತಿಯಾಗದಿರಲು ಪ್ರಮುಖ ಕಾರಣ ಬಿಲ್ ಪಾವತಿಯಲ್ಲಿ ವಿಳಂಬ. 60 ದಿನಗಳಲ್ಲಿ ಬಿಲ್ ಪಾವತಿ ಮಾಡಬೇಕೆಂಬ ನಿಯಮವನ್ನೂ ಪಾಲಿಸಿಲ್ಲ. ಈ ಬಗ್ಗೆ ಹಲವು ಪತ್ರಗಳನ್ನು ಬರೆದು ಬಿಲ್ ಪಾವತಿಗೆ ಮನವಿ ಮಾಡಿದ್ದರೂ ಪ್ರಯೋಜನವಾಗಿಲ್ಲ...' ಎಂದು ಈ ಕಾಮಗಾರಿಯ ಗುತ್ತಿಗೆ ಪಡೆದಿರುವ ಎನ್‌ಸಿಸಿ, ಬಿಬಿಎಂಪಿಗೆ ಬರೆದಿರುವ ಪತ್ರದಲ್ಲಿ ಸ್ಪಷ್ಟವಾಗಿ ನಮೂದಿಸಿದೆ. ಇದರ ಜೊತೆಗೆ 'ಯುಟಿಲಿಟಿ ಶಿಫ್ಟಿಂಗ್'ನಲ್ಲಿ ನಿರೀಕ್ಷಿತ ನೆರವು ಸಿಗದ್ದರಿಂದ 2025ರ ಫೆಬ್ರುವರಿ 24ರವರೆಗೆ ಕಾಮಗಾರಿ ಮುಗಿಸಲು ಸಮಯ ನೀಡಬೇಕು ಎಂದೂ ಮನವಿ ಮಾಡಿದೆ.

ಬಿಬಿಎಂಪಿ ಕಾಮಗಾರಿ ಮುಗಿಸೋದು ಯಾವಾಗ ರೀ?

₹175 ಕೋಟಿ	ಯಲಹಂಕ ಇಂಟಿಗ್ರೇಟೆಡ್ ಎಲಿವೇಟೆಡ್ ಕಾರಿಡಾರ್‌ನ ವೆಚ್ಚ
24 ತಿಂಗಳು	ಕಾಮಗಾರಿ ಮುಗಿಸಲು ನೀಡಲಾಗಿರುವ ಗಡುವು
₹60.4 ಕೋಟಿ	ಗುತ್ತಿಗೆದಾರರಿಗೆ ಹಣ ಬಿಡುಗಡೆ
15 ಡಿಸೆಂಬರ್ 2021	ಅರ್ಧಕ್ಕೆ ನಿಂತ ಕಾಮಗಾರಿ ಮರು ಆರಂಭಕ್ಕೆ ಕಾರ್ಯಾದೇಶ
ಗುತ್ತಿಗೆದಾರರು	ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂಪನಿ (ಎನ್‌ಸಿಸಿ) ಲಿಮಿಟೆಡ್, ಕುಮಾರಕೃಪಾ ರಸ್ತೆ

'2022ರಲ್ಲಿ ಕಾಮಗಾರಿಗಳಿಗೆ ಅಗತ್ಯವಿರುವ ಸಾಮಗ್ರಿಗಳ ದಾಸ್ತಾನಿಗೆ ಮುಂಗಡ ನೀಡಲು 60 ದಿನ ವಿಳಂಬವಾಗಿದೆ, 2022ರ ಮೇ ಬಿಲ್ ಪಾವತಿಯಲ್ಲಿ 129 ದಿನ, ಆಗಸ್ಟ್ ಬಿಲ್ ಪಾವತಿಯಲ್ಲಿ 52 ದಿನ, ಸೆಪ್ಟೆಂಬರ್ ಬಿಲ್ ಪಾವತಿಯಲ್ಲಿ ನಾಲ್ಕು ದಿನ, 2023ರ ಡಿಸೆಂಬರ್ ಬಿಲ್‌ನಲ್ಲಿ 225 ದಿನ, ಫೆಬ್ರುವರಿ ಬಿಲ್‌ನಲ್ಲಿ 163 ದಿನ ವಿಳಂಬವಾಗಿದೆ. ಕೊನೆಯ ಎರಡು ಬಿಲ್‌ಗಳ ಮೊತ್ತದಲ್ಲಿ ಶೇ 75ರಷ್ಟನ್ನು ಮಾತ್ರ ಪಾವತಿಸಲಾಗಿದೆ. ಇದು ಗುತ್ತಿಗೆ ಒಪ್ಪಂದದಲ್ಲಿನ ನಿಯಮಗಳ ಉಲ್ಲಂಘನೆಯಾಗಿದೆ' ಎಂದು ಎನ್‌ಸಿಸಿಯ ಉಪ ಪ್ರಧಾನ ವ್ಯವಸ್ಥಾಪಕರು ರಸ್ತೆ ಮೂಲಸೌಕರ್ಯ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಅವರಿಗೆ 2023ರ ನವೆಂಬರ್ 15ರಂದು ಪತ್ರ ಬರೆದಿದ್ದಾರೆ.

ಯಲಹಂಕದ ಪೊಲೀಸ್ ಠಾಣೆ ಜಂಕ್ಷನ್‌ನಿಂದ ಯಲಹಂಕ ಉಪನಗರದ ಬಿಡಬ್ಲ್ಯುಎಸ್‌ಎಸ್‌ಬಿ ಜಂಕ್ಷನ್‌ವರೆಗೆ ಮೇಲ್ಸೇತುವೆ ಕಾಮಗಾರಿ 2021ರಲ್ಲಿ ಆರಂಭವಾಗಿದ್ದು, 2024ರ ಜನವರಿ ವೇಳೆಗೆ ಮುಗಿಯಬೇಕಿತ್ತು. ಆದರೆ, ಬಿಬಿಎಂಪಿಯಿಂದ ಬಿಲ್ ಪಾವತಿ ವಿಳಂಬದಿಂದ ಕಾಮಗಾರಿ ಪ್ರಗತಿ ಸುಮಾರು ಒಂದು ವರ್ಷದಷ್ಟು ಹಿಂದಿದೆ. ಇದನ್ನು ಗುತ್ತಿಗೆದಾರರೇ ಸ್ಪಷ್ಟಪಡಿಸಿದ್ದು, ಬಿಬಿಎಂಪಿಯು ಗಡುವನ್ನೂ ವಿಸ್ತರಿಸಿದೆ.

'ಟರ್ನ್ ಕೀ' ಯೋಜನೆ ಇದಾಗಿರುವುದರಿಂದ ಬಿಬಿಎಂಪಿಗೆ ಆರ್ಥಿಕ ಹೊರೆಯಾಗುತ್ತಿಲ್ಲ. ಆದರೆ, ಜನಸಾಮಾನ್ಯರಿಗೆ ನಿತ್ಯವೂ ಇಲ್ಲಿ ಸಂಚರಿಸುವುದೇ ಕಷ್ಟಸಾಧ್ಯವಾಗಿದೆ. ಅನ್ಯ ಮಾರ್ಗವಿಲ್ಲದೆ, ಸಮಯ ವ್ಯಯದ ಜೊತೆಗೆ ಕಿರಿಕಿರಿಯೊಂದಿಗೆ ಇಲ್ಲಿಯೇ ಸಂಚರಿಸಬೇಕಾಗಿದೆ.

'ಯಾವಾಗ ಕೇಳಿದರೂ ಹಣ ಬಂದಿಲ್ಲ, ಹೇಗೆ ಕೆಲಸ ಮಾಡೋದು ಎಂದು ಗುತ್ತಿಗೆದಾರರು ಹೇಳುತ್ತಾರೆ. ಬಿಬಿಎಂಪಿಯವರಿಗೆ ನಮ್ಮ ಕಷ್ಟ ಅರ್ಥವಾಗೋದು ಹೇಗೆ? ಕೆಲಸ ಆರಂಭಿಸಿದ ಮೇಲೆ ಬೇಗ ಮುಗಿಸಿದರೆ ಒಳ್ಳೆಯದು. ಹಣವಿಲ್ಲ ಎಂದರೆ ಇಂತಹ ಯೋಜನೆ ಕೈಗೆತ್ತಿಕೊಳ್ಳಬೇಡಿ' ಎಂದು ಯಲಹಂಕದ ವಿಶ್ವನಾಥ್ ಹೇಳಿದರು.

'ಬೆಸ್ಕಾಂ, ಜಲಮಂಡಳಿಯಿಂದ ಮಾರ್ಗಗಳ ಬದಲಾವಣೆಯಿಂದ ಕಾಮಗಾರಿ ಸಾಕಷ್ಟು ವಿಳಂಬವಾಗುತ್ತಿದೆ ಎಂದು ಕೆಲವರು ಹೇಳುತ್ತಾರೆ. ಮುಖ್ಯಮಂತ್ರಿ, ಪ್ರಧಾನಿ ಬಂದಾಗ ರಾತ್ರೋರಾತ್ರಿ ಕೆಲಸ ಮಾಡುವ ಈ ಎಂಜಿನಿಯರ್‌ಗಳು ಜನಸಾಮಾನ್ಯರ ಕೆಲಸಕ್ಕೂ ಅಷ್ಟೇ ಪ್ರಾಮುಖ್ಯ ನೀಡಬೇಕಲ್ಲವೇ' ಎಂದು ಯಲಹಂಕ ಉಪನಗರದ ಸುರೇಶ್ ಪ್ರಶ್ನಿಸಿದರು.

'ಸುಮ್ಮನೆ ಕೆಲಸ ಮಾಡಬೇಕು'



'ಬಿಬಿಎಂಪಿಯಲ್ಲಿ ಬಿಲ್ ಪಾವತಿ ಮುಂದೂಡಿಕೆ, ವಿಳಂಬ ಇದ್ದೇ ಇರುತ್ತದೆ. ಇದು ಇಂದು, ನಿನ್ನೆಯದ್ದಲ್ಲ. ಬಹಳ ಹಿಂದಿನಿಂದಲೂ ಹೀಗೇ ಇದೆ. ಕೆಲಸ ಮಾಡಲು ಬರುವವರಿಗೆ ಇದರ ಅರಿವು ಇದ್ದೇ ಇದೆ. ಬಿಲ್ ಪಾವತಿ ವಿಳಂಬವಾದರೆ ತಡೆದುಕೊಳ್ಳಬೇಕು. ಬಿಲ್ ಪಾವತಿಯಲ್ಲಿ ಮೂರು ತಿಂಗಳು, ಆರು ತಿಂಗಳು ವಿಳಂಬವಾಗುತ್ತದೆ. ಬಿಬಿಎಂಪಿಗೆ ಕೆಲಸಕ್ಕೆ ಬಂದ ಮೇಲೆ ಸುಮ್ಮನೆ ಕೆಲಸ ಮಾಡಬೇಕು. ಕಾಮಗಾರಿ ನಿಧಾನವಾಗಲು ಬಿಲ್ ಪಾವತಿಯಲ್ಲಿನ ವಿಳಂಬ ಎಂದು ಸಬೂಬು ಹೇಳಬಾರದು' ಎಂದು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಗುತ್ತಿಗೆದಾರರ ಆರೋಪಕ್ಕೆ ಪ್ರತಿಕ್ರಿಯಿಸಿದರು.

ವೈದ್ಯಕೀಯ ಸೀಟಿಗೆ ದಲ್ಲಾಳಿ ಕಾಟ: ಕಳವಳ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿಗಳು

ಬೆಂಗಳೂರು: 'ವೈದ್ಯಕೀಯ ಪದವಿಯ ಸೀಟು ಕೊಡಿಸುವುದಾಗಿ ಅಮಾಯಕರನ್ನು ನಂಬಿಸುವ ದಲ್ಲಾಳಿಗಳು ಕೋಟ್ಯಂತರ ಮೊತ್ತದ ಹಣ ಪಡೆದು ವಂಚನೆ ಮಾಡುತ್ತಿರುವುದು ಅತ್ಯಂತ ಕಳವಳಕಾರಿ ವಿಚಾರವಾಗಿದ್ದು ಇಂತಹ ಅಪರಾಧಗಳನ್ನು ತಡೆಯಬೇಕಿದೆ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ನನ್ನ ವಿರುದ್ಧ ವಿ.ವಿ.ಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ನಗರದ ಪಿಳ್ಳಣ್ಣ ಗಾರ್ಡನ್‌ನ ಎಂ.ಸಿ. ವಿರೂಪಾಕ್ಷಪ್ಪ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ, 'ದಲ್ಲಾಳಿಗಳ ಮೂಲಕ ವೈದ್ಯಕೀಯ ಸೀಟು ಕೊಡಿಸುವ ವ್ಯವಹಾರ ಇಂದು ಸಮಾಜದಲ್ಲಿ ವ್ಯಾಪಕವಾಗಿ ಹರಡಿದೆ' ಎಂದು ದಿಗ್ಭ್ರಮೆ ವ್ಯಕ್ತಪಡಿಸಿತು. 'ಅರ್ಜಿದಾರರ ವಿರುದ್ಧದ ಎಫ್‌ಐಆರ್ ರದ್ದುಪಡಿಸಲು ಸಾಧ್ಯವೇ ಇಲ್ಲ' ಎಂದು ಖಡಕ್ ಎಚ್ಚರಿಕೆ ನೀಡಿತು.

ಆಡಳಿತ ಮಂಡಳಿ ಕೋಟಾದಡಿ ವೈದ್ಯಕೀಯ ಪದವಿ ಸೀಟು ಕೊಡಿಸುವುದಾಗಿ ₹ 2.12 ಕೋಟಿ ಪಡೆದು ವಂಚಿಸಿದ ಆರೋಪದಡಿ ವಿರೂಪಾಕ್ಷಪ್ಪ ವಿರುದ್ಧ ದೂರು ದಾಖಲಾಗಿದೆ.

ಸಿಇಟಿ: ಸಮಿತಿ ರಚನೆ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ವಜಾ

ಬೆಂಗಳೂರು: 'ಕರ್ನಾಟಕ ಸಿಇಟಿ ಪರೀಕ್ಷೆಗಳಲ್ಲಿ ಪಠ್ಯೇತರ ಪ್ರಶ್ನೆಗಳನ್ನು ಕೇಳಲಾಗಿದೆ' ಎಂಬ ಆರೋಪಗಳನ್ನು ಪರಿಶೀಲಿಸಲು ಸಮಿತಿ ರಚಿಸುವ ನಿರ್ಧಾರದ ಸಿಂಧುತ್ವ ಪರಿಶೀಲನೆ ಕೋರಿಕೆಯನ್ನು ಹೈಕೋರ್ಟ್ ತಳ್ಳಿ ಹಾಕಿದೆ.

ಈ ಸಂಬಂಧ ದಾಸರಹಳ್ಳಿಯ ಯು.ತನ್ಮಯ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಪ್ರಸಕ್ತ ಸಾಲಿಗೆ ಸಂಬಂಧಿಸಿದಂತೆ ಯಾವುದೇ ನಿರ್ದೇಶನ ನೀಡುವುದು ಪ್ರಾಯೋಗಿಕ ಎನಿಸುವುದಿಲ್ಲ' ಎಂದು ಅಭಿಪ್ರಾಯದೊಂದಿಗೆ ಅರ್ಜಿದಾರರ ಮನವಿ ಮಾನ್ಯ ಮಾಡಲು ನಿರಾಕರಿಸಿದೆ.

'ಸರ್ಕಾರದ ನಿರ್ಧಾರ ತಜ್ಞರ ಅಭಿಪ್ರಾಯದಿಂದ ರೂಪುಗೊಂಡಿದೆ. ಹೀಗಾಗಿ, ಕೋರ್ಟ್ ಇದರಲ್ಲಿ ಮಧ್ಯ ಪ್ರವೇಶಿಸಲು ಸಾಧ್ಯವಿಲ್ಲ. ಭವಿಷ್ಯದಲ್ಲಿ ಇಂತಹ ತಪ್ಪುಗಳು ಮರುಕಳಿಸದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ಸೂಚಿಸಿದೆ.

'ಕಳೆದ ಏಪ್ರಿಲ್‌ನಲ್ಲಿ ನಡೆಸಲಾಗಿದ್ದ ಸಿಇಟಿ ಪರೀಕ್ಷೆಯಲ್ಲಿ ಸುಮಾರು ಮೂರು ಲಕ್ಷ ವಿದ್ಯಾರ್ಥಿಗಳು ಹಾಜರಾಗಿದ್ದರು. ಈ ಪರೀಕ್ಷೆಯಲ್ಲಿ, ಸಿಇಟಿ ಪಠ್ಯಕ್ರಮದ ಹೊರತಾದ ಪಠ್ಯೇತರ ಪ್ರಶ್ನೆಗಳನ್ನು ಕೇಳಲಾಗಿದೆ' ಎಂಬ ಪೋಷಕರು ಮತ್ತು ಶಿಕ್ಷಕರ ದೂರಿನ ಹಿನ್ನೆಲೆಯಲ್ಲಿ ಸರ್ಕಾರ ಸಮಿತಿ ರಚನೆ ನಿರ್ಧಾರ ಕೈಗೊಂಡಿತ್ತು.

ಸಂಕ್ಷಿಪ್ತ ಸುದ್ದಿ

ಕುಂದಾಪ್ರ ಕನ್ನಡ ದಿನ: ಆ.17, 18ಕ್ಕೆ

ಬೆಂಗಳೂರು: ಐದನೇ 'ವಿಶ್ವ ಕುಂದಾಪ್ರ ಕನ್ನಡ ದಿನ'ವನ್ನು ಆಗಸ್ಟ್ 17 ಮತ್ತು 18ರಂದು ನಗರದ ಅರಮನೆ ಮೈದಾನದಲ್ಲಿ ಹಮ್ಮಿಕೊಂಡಿದೆ.

'ಕುಂದಾಪ್ರ ಕನ್ನಡ ಪ್ರತಿಷ್ಠಾನ, ಬೆಂಗಳೂರು' ಸಂಘಟನೆಯ 'ವಾಲ್ಗ' (ಪೂರ್ವಭಾವಿ) ಕಾರ್ಯಕ್ರಮದಲ್ಲಿ ರೂಪುರೇಷೆ ತಯಾರಿಸಲಾಗಿದೆ. ಎರಡು ದಿನದ ಈ ಕಾರ್ಯಕ್ರಮ 'ದಿಬ್ಬ'ದೊಂದಿಗೆ (ಮೆರವಣಿಗೆ) ಆರಂಭವಾಗಲಿದೆ. ನಗರದ ಕನಿಷ್ಠ 10 ಕಡೆಗಳಿಂದ ಮೆರವಣಿಗೆ ಸಾಗಿ ಬರಲಿದೆ. 'ನಾಕ್ ಘನಾ ಸುರ್ಲ್' ಎಂಬ ಕರಾವಳಿಯ ಗೀತೆಗಳ ಗಾಯನವಿರಲಿದೆ' ಎಂದು ಕುಂದಾಪ್ರ ಕನ್ನಡ ಪ್ರತಿಷ್ಠಾನದ ಅಧ್ಯಕ್ಷ ದೀಪಕ್ ಶೆಟ್ಟಿ ಬಾರ್ಕೂರು ತಿಳಿಸಿದರು.

'ನುಡಿ ಚಾವಡಿ' ಕಾರ್ಯಕ್ರಮದ ಮೂಲಕ ಉದ್ಘಾಟನಾ ಸಮಾರಂಭ ನಡೆಯಲಿದೆ. ಆ.17ರ ರಾತ್ರಿ ಬೆಂಗಳೂರಿನಲ್ಲಿ ಪ್ರಥಮ ಬಾರಿಗೆ 'ಜೋಡಾಟ' ನಡೆಯಲಿದೆ. ಯಕ್ಷರಂಗದ ಮೇರು ಕಲಾವಿದರು ಭಾಗವಹಿಸಲಿದ್ದಾರೆ. ಕನ್ನಡ ಚಿತ್ರರಂಗದ ನಿರ್ದೇಶಕರು, ತಾರೆಯರು ಮೆರುಗು ಹೆಚ್ಚಿಸಲಿದ್ದಾರೆ' ಎಂದು ವಿವರಿಸಿದರು.

ಜೋಗ–ಸೋಮನಾಥಪುರ ಪ್ಯಾಕೇಜ್ ಟೂರ್

ಬೆಂಗಳೂರು: ಸೋಮನಾಥಪುರ ಟೂರ್ ಪ್ಯಾಕೇಜ್ ಮತ್ತು ಜೋಗ ಟೂರ್ ಪ್ಯಾಕೇಜ್ ಅನ್ನು ಕೆಎಸ್‌ಆರ್‌ಟಿಸಿ ರೂಪಿಸಿದೆ.

ಬೆಂಗಳೂರು-ಜೋಗ ಜಲಪಾತ ಮಾರ್ಗದ ಪ್ಯಾಕೇಜ್‌ನಡಿ ಶಿವಮೊಗ್ಗ, ಸಾಗರ ಮಾರ್ಗವಾಗಿ ನಾನ್ ಎಸಿ ಸ್ಲೀಪರ್ ಬಸ್ ಸಂಚರಿಸಲಿದೆ. ಸಾಗರ, ವರದಹಳ್ಳಿ, ವರದಾಮೂಲ, ಇಕ್ಕೇರಿ, ಕೆಳದಿ, ಜೋಗಕ್ಕೆ ಭೇಟಿ ನೀಡಲಿದೆ. ಪ್ರತಿ ಶುಕ್ರವಾರ– ಶನಿವಾರ ಈ ಪ್ರವಾಸ ಇರಲಿದ್ದು, ಜುಲೈ 19ರಂದು ಆರಂಭಗೊಳ್ಳಲಿದೆ. ವಯಸ್ಕರಿಗೆ ₹3,000 ಹಾಗೂ 12 ವರ್ಷದೊಳಗಿನ ಮಕ್ಕಳಿಗೆ ₹2,800 ದರ ನಿಗದಿ ಮಾಡಲಾಗಿದೆ.

'ಬೆಂಗಳೂರು-ಸೋಮನಾಥಪುರ -ತಲಕಾಡು-ಮಧ್ಯರಂಗ-ಭರಚುಕ್ಕಿ-ಗಗನಚುಕ್ಕಿ ಮಾರ್ಗದ ಪ್ಯಾಕೇಜ್ ಪ್ರವಾಸವು ಪ್ರತಿ ಶನಿವಾರ–ಭಾನುವಾರ ಇರಲಿದ್ದು, ಜುಲೈ 20ರಂದು ಆರಂಭಗೊಳ್ಳಲಿದೆ. ವಯಸ್ಕರಿಗೆ ₹500 ಹಾಗೂ 12 ವರ್ಷದೊಳಗಿನ ಮಕ್ಕಳಿಗೆ ₹350 ದರ ನಿಗದಿ ಮಾಡಲಾಗಿದೆ' ಎಂದು ಕೆಎಸ್‌ಆರ್‌ಟಿಸಿ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಚಾತುರ್ಮಾಸ ವ್ರತ

ಬೆಂಗಳೂರು: ಗೌಡಪಾದಾಚಾರ್ಯ ಕೈವಲ್ಯ ಮಠಾಧೀಶ ಶಿವಾನಂದ ಸರಸ್ವತಿ ಸ್ವಾಮಿ ಮಹಾರಾಜರು ಹುಳಿಮಾವು ಸರಸ್ವತಿ ಪುರದ ತ್ರಿಗುಣಾತ್ಮಕ ಮಹಾ ಲಕ್ಷ್ಮಿ ದೇವಸ್ಥಾನದಲ್ಲಿ ಜುಲೈ 21ರಿಂದ ಚಾತುರ್ಮಾಸ ವ್ರತ ಕೈಗೊಳ್ಳಲಿದ್ದಾರೆ.

ವಿವಿಧ ಧಾರ್ಮಿಕ ಕಾರ್ಯಕ್ರಮ, ಉತ್ಸವ, ಸಾಂಸ್ಕೃತಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳೊಂದಿಗೆ ಸೆ.22ರವರೆಗೆ ಚಾತುರ್ಮಾಸ ವ್ರತ ನಡೆಯಲಿದೆ ಎಂದು ಚಾತುರ್ಮಾಸ ಸಮಿತಿ ತಿಳಿಸಿದೆ.

ಸೂರಜ್ ರೇವಣ್ಣ ಜಾಮೀನು: 18ಕ್ಕೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವಕನ ಮೇಲಿನ ಲೈಂಗಿಕ ದೌರ್ಜನ್ಯ ನಡೆಸಿದ ಮತ್ತು ಜೀವ ಬೆದರಿಕೆಯೊಡ್ಡಿದ ಪ್ರಕರಣದಲ್ಲಿ ಆರೋಪಿಯಾಗಿರುವ ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಸೂರಜ್ ರೇವಣ್ಣ ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿ ವಿಚಾರಣೆ ಪೂರ್ಣಗೊಳಿಸಿರುವ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಇದೇ 18ಕ್ಕೆ ಆದೇಶ ಪ್ರಕಟಿಸುವುದಾಗಿ ತಿಳಿಸಿದೆ.

ಎಂ.ಎಲ್. ಶಿವಕುಮಾರ್ ದಾಖಲಿಸಿರುವ ಈ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಸೂರಜ್ ರೇವಣ್ಣ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರು ಸೋಮವಾರ ಪೂರ್ಣಗೊಳಿಸಿದರು.

ಪ್ರಜ್ವಲ್ ಅರ್ಜಿ ಮುಂದೂಡಿಕೆ: 'ಶಾಲಾ ಶುಲ್ಕ ತುಂಬಲು ಸಹಾಯ ಮಾಡುವ ಭರವಸೆ ನೀಡಿ ಮಹಿಳೆಯ ಮೊಬೈಲ್ ನಂಬರ್ ಸಂಗ್ರಹಿಸಿ ನಂತರ ಆಕೆಯ ಬೆತ್ತಲೆ ವಿಡಿಯೊ ಮಾಡಿಕೊಂಡು ಬ್ಲ್ಯಾಕ್‌ಮೇಲ್ ಮಾಡಿದ್ದಾರೆ' ಎಂಬ ಆರೋಪ ಎದುರಿಸುತ್ತಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ನಿರೀಕ್ಷಣಾ ಜಾಮೀನು ಅರ್ಜಿಯ ವಿಚಾರಣೆಯನ್ನು ನ್ಯಾಯಾಲಯ ಇದೇ 18ಕ್ಕೆ ಮುಂದೂಡಿದೆ.

'ನೀಟ್ ಹಗರಣ: ತನಿಖೆ ನಡೆಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀಟ್ ಮತ್ತು ನೆಟ್ ಪರೀಕ್ಷೆಗಳಲ್ಲಿ ನಡೆದಿರುವ ಹಗರಣದ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು ಎಂದು ಎಐಡಿಎಸ್‌ಒ ಆಗ್ರಹಿಸಿದೆ.

ನಗರದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ವಿದ್ಯಾರ್ಥಿಗಳ ಸಮಾವೇಶದಲ್ಲಿ ಎಐಡಿಎಸ್‌ಒ ಖಜಾಂಚಿ ಸುಭಾಷ್ ಮಾತನಾಡಿ, 'ನೀಟ್, ಯು.ಜಿ ಪರೀಕ್ಷೆಗೂ ಮುನ್ನವೇ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ' ಎಂದು ದೂರಿದರು.

'ಈ ಮುಂಚೆ ರಾಜ್ಯಮಟ್ಟದಲ್ಲಿ ಜಂಟಿ ಪ್ರವೇಶ ಪರೀಕ್ಷೆಗಳು ಜಾರಿಯಲ್ಲಿದ್ದಾಗ, ಭ್ರಷ್ಟಾಚಾರದ ಕಾರಣ ಒಡ್ಡಿ ಅಖಿಲ ಭಾರತ ಮಟ್ಟದ ನೀಟ್ ಪರೀಕ್ಷೆಯನ್ನು ಪ್ರಾರಂಭಿಸಲಾಗಿತ್ತು. ಭ್ರಷ್ಟಾಚಾರದ ಕುರಿತು ತನಿಖೆ ನಡೆಸಿ ಸಂಬಂಧಪಟ್ಟವರಿಗೆ ಸೂಕ್ತ ಶಿಕ್ಷೆ ವಿಧಿಸುವುದರ ಬದಲಿಗೆ ಪರೀಕ್ಷಾ ಪದ್ಧತಿಯನ್ನು ಬದಲಾಯಿಸುವುದು ಪರಿಹಾರವಲ್ಲ ಎಂದು ಎಐಡಿಎಸ್‌ಒ ಆ ಸಂದರ್ಭದಲ್ಲೇ ಎಚ್ಚರಿಕೆ ನೀಡಿತ್ತು. ಅದು ಇಂದು ನಿಜವಾಗಿದೆ. ಸರ್ಕಾರದ ನಿಷ್ಕಾಳಜಿ ಮತ್ತು ಪರೀಕ್ಷಾ ವ್ಯವಸ್ಥೆಯ ವ್ಯಾಪಾರೀಕರಣದಿಂದಾಗಿ ಅಮಾಯಕ ವಿದ್ಯಾರ್ಥಿಗಳು ಬಲಿಪಶುಗಳಾಗುತ್ತಿದ್ದಾರೆ' ಎಂದು ಆರೋಪಿಸಿದರು.



ಬೆಂಗಳೂರಿನ ಯುವಿಸಿಇ ಅಲುಮ್ನಿ ಅಸೋಸಿಯೇಶನ್ ಸಭಾಂಗಣದಲ್ಲಿ ಸೋಮವಾರ ಎಐಡಿಎಸ್‌ಒ ವತಿಯಿಂದ ವಿದ್ಯಾರ್ಥಿಗಳ ಸಮಾವೇಶ ನಡೆಯಿತು
– ಪ್ರಜಾವಾಣಿ ಚಿತ್ರ

ಎಐಡಿಎಸ್‌ಒ ರಾಜ್ಯ ಉಪಾಧ್ಯಕ್ಷ ಅಭಯಾ ದಿವಾಕರ್ ಮಾತನಾಡಿ, 'ನೀಟ್ ಹಾಗೂ ನೆಟ್ ಪರೀಕ್ಷೆಗಳಲ್ಲಿ ನಡೆದಿರುವ ಹಗರಣವು ಶೈಕ್ಷಣಿಕ ಕ್ಷೇತ್ರದ ಅತಿ ದೊಡ್ಡ ಹಗರಣವಾಗಿದೆ. ಭ್ರಷ್ಟಾಚಾರದ ಬಗ್ಗೆ ತನಿಖೆ ನಡೆಸಲು ಹಗರಣದಲ್ಲೇ ಮುಳುಗಿದ ಸಂಸ್ಥೆಯ ಮುಖ್ಯಸ್ಥರನ್ನೇ ನೇಮಿಸಿರುವುದು ವಿಪರ್ಯಾಸ' ಎಂದರು.

'ರಾಜ್ಯಮಟ್ಟದಲ್ಲಿಯೇ ವೈದ್ಯಕೀಯ ಪ್ರವೇಶ ಪರೀಕ್ಷೆಗಳನ್ನು ನಡೆಸಬೇಕು. ಎನ್‌ಟಿಎ ರದ್ದುಪಡಿಸಬೇಕು. ನೀಟ್–ಯುಜಿ, ಯುಜಿಸಿ–ನೆಟ್ ಮತ್ತು ನೀಟ್–ಪಿಜಿಗೆ ಸಂಬಂಧಿಸಿದ ಹಗರಣಗಳ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು. ತಪ್ಪಿತಸ್ಥರಿಗೆ ಶಿಕ್ಷೆ ನೀಡಬೇಕು' ಎಂದು ಸಮಾವೇಶದಲ್ಲಿ ಆಗ್ರಹಿಸಲಾಯಿತು.

ಎಐಡಿಎಸ್‌ಒ ರಾಜ್ಯ ಅಧ್ಯಕ್ಷೆ ಅಶ್ವಿನಿ ಕೆ.ಎಸ್, ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್, ಉಪಾಧ್ಯಕ್ಷರಾದ ಅಪೂರ್ವ, ಚಂದ್ರಕಲಾ, ರಾಜ್ಯ ಕಚೇರಿ ಕಾರ್ಯದರ್ಶಿ ಮಹಾಂತೇಶ್ ಬಿಳೂರ್ ಹಾಗೂ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ನಗರದಲ್ಲಿ ಇಂದು

ವಿದ್ಯಾರ್ಥಿವೇತನ ವಿತರಣೆ: ಅಧ್ಯಕ್ಷತೆ: ಎನ್.ಆರ್. ಪಂಡಿತ ಆರಾಧ್ಯ, ಅತಿಥಿಗಳು: ಸ್ವಾಮಿ ಬುದ್ಧಸ್ವರೂಪಾನಂದಜಿ ಮಹಾರಾಜ್, ವೂಡೇ ಪಿ. ಕೃಷ್ಣ, ಆಯೋಜನೆ: ಶೇಷಾದ್ರಿಪುರಂ ಇಂಡಿಪೆಂಡೆಂಟ್ ಪಿ.ಯು. ಕಾಲೇಜು, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಬೆಳಿಗ್ಗೆ 11.30

ರಂಗ ಸಂಭ್ರಮ: ಉದ್ಘಾಟನೆ: ಕೆ.ವಿ. ನಾಗರಾಜಮೂರ್ತಿ, ಅಧ್ಯಕ್ಷತೆ: ರಾಮಚಂದ್ರ, ಅತಿಥಿಗಳು: ಎಚ್.ಎ. ಪಾರ್ಶ್ವನಾಥ್, ಅನ್ನಪೂರ್ಣ ಬಿ.ಎಲ್., ಆರ್.ಜಿ.ಹಳ್ಳಿ ನಾಗರಾಜ್, ಎಚ್. ಲವಕುಮಾರ್, ರಂಗಶ್ರೀ ರಂಗಸ್ವಾಮಿ, 'ಕರ್ನಾಟಕ ಕಲಾಪೋಷಕ ರತ್ನ ಪ್ರಶಸ್ತಿ' ಪುರಸ್ಕೃತರು: ವಿ.ಎನ್. ಅಶ್ವತ್ಥ, ಕೃಷ್ಣಮೂರ್ತಿ, ಟಿ.ಎಸ್. ಪ್ರಭಾಕರ್, ಬೆಳ್ಳೂರು ಶಶಿಧರ್, 'ಕರ್ನಾಟಕ ಕಲಾರತ್ನ ಪ್ರಶಸ್ತಿ' ಪುರಸ್ಕೃತರು: ಪಾಲಾಕ್ಷ, ನೀಲಕಂಠ ಶಿವಶರಣಪ್ಪ ಹಳಿಮನಿ, 'ದಿ ರೈಸಿಂಗ್ ಆಫ್ ಡೆತ್' ನಾಟಕ ಪ್ರದರ್ಶನ: ನಿರ್ದೇಶನ: ರಂಗನಾಥ್ ಮಾವಿನಕೆರೆ, ಆಯೋಜನೆ: ಆದಿಶಕ್ತಿ ರಂಗ ಕಲಾಸಂಸ್ಥೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ಮಾಸದ ಮಾತು–6 'ಎಲ್.ಎಸ್.ಎಸ್ ಅವರು ರಚಿಸಿದ ವ್ಯಕ್ತಿಚಿತ್ರ–ಜೀವನ ಚರಿತ್ರೆಗಳು' ಕುರಿತು ಉಪನ್ಯಾಸ: ಆರ್. ಲಕ್ಷ್ಮೀನಾರಾಯಣ, ಅಧ್ಯಕ್ಷತೆ: ಮನು ಬಳಿಗಾರ್, ಪ್ರಾಸ್ತಾವಿಕ ನುಡಿ: ರಾ.ನಂ. ಚಂದ್ರಶೇಖರ, ಉಪಸ್ಥಿತಿ: ಭಾರತಿ ಶೇಷಗಿರಿರಾವ್, ಆರ್. ಶೇಷಶಾಸ್ತ್ರಿ, ವ.ಚ. ಚನ್ನೇಗೌಡ, ಆಯೋಜನೆ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಕನ್ನಡ ಕ್ರಿಯಾ ಸಮಿತಿ, ಕನ್ನಡ ಗೆಳೆಯರ ಬಳಗ, ಸ್ಥಳ: ರವೀಂದ್ರ ಕಲಾಕ್ಷೇತ್ರದ ಮಹಿಳಾ ವಿಶ್ರಾಂತಿ ಕೊಠಡಿ, ಜೆ.ಸಿ. ರಸ್ತೆ, ಸಂಜೆ 5.30

41ನೇ ಅಂತರ ವಿಭಾಗ ನಾಟಕ ಸ್ಪರ್ಧೆ–2024: 'ಮಾನೋನ್ಮನೀ' ನಾಟಕ ಪ್ರದರ್ಶನ: ರಂಗರೂಪ: ನಾ.ರಾ. ಜ್ಯೋತಿ, ಮೂಲಕಥೆ: ಶ್ರೀನಿಧಿ ಕೆ. ಬಳ್ಳಾರಿ, ನಿರ್ದೇಶನ: ಹೇಮಂತ ಕುಮಾರ್ ಎ., ಆಯೋಜನೆ: ಕನ್ನಡ ಸಾಹಿತ್ಯ ಕೂಟ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 6

'ಗೋರ್‌ಮಾಟಿ' ನಾಟಕ ಪ್ರದರ್ಶನ: ರಂಗರೂಪ: ಶಿರಗಾನಹಳ್ಳಿ ಶಾಂತನಾಯಕ್, ರಂಗವಿನ್ಯಾಸ: ಶಶಿಧರ್ ಅಡಪ, ವಸ್ತ್ರ ವಿನ್ಯಾಸ: ಪ್ರಮೋದ್ ಶಿಗ್ಗಾಂವ್, ಶಶಿಕಲಾ ಬಿ.ಎನ್., ಬೆಳಕಿನ ವಿನ್ಯಾಸ: ಕೃಷ್ಣಕುಮಾರ್ ನಾರ್ಣಕಜೆ, ನಿರ್ದೇಶನ: ಸಿ. ಬಸವಲಿಂಗಯ್ಯ, ಪ್ರಸ್ತುತಿ: ರಂಗಾಯಣ ರೆಪರ್ಟರಿ, ಆಯೋಜನೆ: ರಂಗಾಯಣ ಮೈಸೂರು, ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30



ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್‌ಸಿ) ಘಟಿಕೋತ್ಸವದಲ್ಲಿ ಐಐಎಸ್‌ಸಿ ವಿಜ್ಞಾನ ವಿಭಾಗದ ಡೀನ್ ಎಸ್.ಅಶೋಕನ್, ಕುಲಸಚಿವ ಕ್ಯಾಪ್ಟನ್ ಶ್ರೀಧರ್ ವಾರಿಯರ್, ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್, ಐಐಎಸ್‌ಸಿ ನಿರ್ದೇಶಕ ಗೋವಿಂದನ್ ರಂಗರಾಜನ್, ಚೆಸ್ ಗ್ರ್ಯಾಂಡ್ ಮಾಸ್ಟರ್ ವಿಶ್ವನಾಥನ್ ಆನಂದ್, ಫ್ಯಾಕಲ್ಟಿ ಆಫ್ ಎಂಜಿನಿಯರಿಂಗ್ ಡೀನ್ ಆಶಿತಾವ ಘೋಸಲ್, ಡೀನ್ ಪ್ರಬಲ್ ಕುಮಾರ್ ಮೈತಿ ಭಾಗವಹಿಸಿದ್ದರು
– ಪ್ರಜಾವಾಣಿ ಚಿತ್ರ

ಐಐಎಸ್‌ಸಿ ಘಟಿಕೋತ್ಸವ: ಚೆಸ್ ಗ್ರ್ಯಾಂಡ್ ಮಾಸ್ಟರ್ ವಿಶ್ವನಾಥನ್ ಆನಂದ್

'ವಾಟ್ಸ್‌ಆ್ಯಪ್ ಯುನಿವರ್ಸಿಟಿಯಲ್ಲಿ ಜನರಿಗೆ ನಿಜ ತಿಳಿಸುವುದು ಕಷ್ಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈಗಿನ ಕಾಲದಲ್ಲಿ ಎಲ್ಲರೂ ವಾಟ್ಸ್‌ಆ್ಯಪ್ ಯುನಿವರ್ಸಿಟಿಯ ಪದವೀಧರರಾಗಿದ್ದಾರೆ. ಇಂಥ ಕಾಲದಲ್ಲಿ ವೈಜ್ಞಾನಿಕ ಸತ್ಯವನ್ನು ತಿಳಿಸುವುದು ಕಷ್ಟ. ಆದರೆ, ನಿಜವನ್ನು ಜನರಿಗೆ ಮುಟ್ಟಿಸುವ ಕೆಲಸವನ್ನು ಮಾಡಲೇಬೇಕು' ಎಂದು ಫಿಡೆ ಉಪಾಧ್ಯಕ್ಷ, ಚೆಸ್ ಗ್ರ್ಯಾಂಡ್ ಮಾಸ್ಟರ್ ವಿಶ್ವನಾಥನ್ ಆನಂದ್ ತಿಳಿಸಿದರು.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್‌ಸಿ) ಘಟಿಕೋತ್ಸವದಲ್ಲಿ ಸೋಮವಾರ ಅವರು ಮಾತನಾಡಿದರು.

'ಆಧುನಿಕ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆಗಳನ್ನು ಸುಳ್ಳು ಹರಡಲು ಬಳಸುತ್ತಿದ್ದಾರೆ. ಸತ್ಯ ಶೋಧಿಸಿ ಅದೇ ತಂತ್ರಜ್ಞಾನ, ಎಐಗಳ ಮೂಲಕ ನಿಜ ಹೇಳಿದರೆ ಸಾಲದು. ಅದನ್ನು ಜನರಿಗೆ ಮನವರಿಕೆ ಮಾಡಬೇಕು. ಅದಕ್ಕೆ ಸಂವಹನ ಕೌಶಲ ಬೆಳೆಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

'ನಾನು 6 ವರ್ಷದ ಬಾಲಕನಾಗಿದ್ದಾಗಲೇ ತಾಯಿ ಚೆಸ್ ಕಲಿಸಿಕೊಟ್ಟರು. ಮುಂದೆ ಚೆಸ್ ಬಗ್ಗೆ ಆಸಕ್ತಿ ವಹಿಸಿದೆ. ನಾನು ಆಡಿದ ಆಟದ ಬಗ್ಗೆ ನೋಟ್ ಪುಸ್ತಕದಲ್ಲಿ ಬರೆದುಕೊಳ್ಳುತ್ತಿದ್ದೆ. ಅದೇ ನನಗೆ ಅಧ್ಯಯನ ವಸ್ತುವಾಗುತ್ತಿತ್ತು. ಹಿಂದೆ ಚೆಸ್‌ಗೆ ಸರಳವಾದ ನಿಯಮಗಳಿದ್ದವು. ಆಧುನಿಕ ಸಿದ್ಧಾಂತವು ಬೇರೆ ಬೇರೆ ವಿಧಾನಗಳನ್ನು ಒಳಗೊಂಡಿದೆ' ಎಂದು ತಿಳಿಸಿದರು.

ಐಐಎಸ್‌ಸಿ ಕೌನ್ಸಿಲ್ ಅಧ್ಯಕ್ಷ ಸೇನಾಪತಿ ಕ್ರಿಸ್ ಗೋಪಾಲನ್ ಅವರು ವರ್ಚುವಲ್ ಮೂಲಕ ಮಾತನಾಡಿ, 'ನಾವು ಅತ್ಯುತ್ತಮ ತಂತ್ರಜ್ಞಾನ ಹೊಂದಿದ್ದೇವೆ. ಇದು ಹೊಸ ನಾಯಕತ್ವ, ಸಂಶೋಧನೆ, ಉತ್ಪನ್ನ ಮತ್ತು ಮತ್ತಷ್ಟು ತಂತ್ರಜ್ಞಾನ ಸೃಷ್ಟಿಸಲು ಅವಕಾಶ ಒದಗಿಸುತ್ತದೆ' ಎಂದು ತಿಳಿಸಿದರು.

ವಿವಿಧ ವಿಭಾಗಗಳಲ್ಲಿ ಚಿನ್ನದ ಪದಕ ಪಡೆದ 57 ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಪಿಎಚ್.ಡಿ ಮತ್ತು ಸ್ನಾತಕೋತ್ತರ ಪದವಿ ಪಡೆದ 1036 ವಿದ್ಯಾರ್ಥಿಗಳಿಗೆ, ಪದವೀಧರ 100 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

'ಚೆಸ್–ವಿಜ್ಞಾನದಲ್ಲಿ ಸಾಮ್ಯತೆ ಇದೆ'

'ಕಂಪ್ಯೂಟರ್ ಯುಗ ಆರಂಭವಾದಾಗ ಚೆಸ್‌ಗೆ ಹೆಚ್ಚು ಉಪಯೋಗವಾಯಿತು. ಚೆಸ್‌ಗೆ ಸಂಬಂಧಿಸಿದಂತೆ ಕಂಪ್ಯೂಟರ್‌ನಲ್ಲಿ ಕೋಟಿ ದತ್ತಾಂಶಗಳಿವೆ. ಚೆಸ್ ಎನ್ನುವುದು ಲೆಕ್ಕಾಚಾರ. ಯಾವ ನಡೆಯ ಪರಿಣಾಮ ಏನು ಎಂಬುದನ್ನು ಅರ್ಥ ಮಾಡಿಕೊಂಡು ಆಡಬೇಕಾಗುತ್ತದೆ' ಎಂದು ಮಾಸ್ಟರ್ ವಿಶ್ವನಾಥನ್ ಆನಂದ್ ವಿವರಿಸಿದರು.

'ಚೆಸ್ ಮತ್ತು ವಿಜ್ಞಾನದ ನಡುವೆ ಹಲವು ಸಾಮ್ಯತೆಗಳಿವೆ. ಎರಡೂ ಕಾಲ ಕಾಲಕ್ಕೆ ಬದಲಾಗುತ್ತಿರುತ್ತವೆ. ಅದಕ್ಕೆ ಸರಿಯಾಗಿ ನಾವೂ ಒಗ್ಗಿಕೊಳ್ಳಬೇಕು. ಚೆಸ್‌ನಲ್ಲಿ ಹೊಸ ಪ್ರಯೋಗಗಳನ್ನು ನಡೆಸುತ್ತಾ ಹೊಸ ತಂತ್ರಗಾರಿಕೆಯಿಂದಾಗುವ ಪರಿಣಾಮಗಳನ್ನು ಗಮನಿಸುತ್ತಾ ಸಾಗಬೇಕು. ಅದೇ ರೀತಿ ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲಿಯೂ ಹೊಸ ಆವಿಷ್ಕಾರಗಳನ್ನು ನಡೆಸುತ್ತಲೇ ಅದರ ಪರಿಣಾಮ ಏನು ಎಂಬುದನ್ನು ತಿಳಿದುಕೊಂಡು ಸಾಗಬೇಕು. ಚೆಸ್ ಮತ್ತು ವಿಜ್ಞಾನ ತನ್ನದೇ ಆದ ಭಾಷೆಯನ್ನೂ ಹೊಂದಿದೆ' ಎಂದು ಹೇಳಿದರು.

ಎಸ್. ಸೋಮನಾಥ್ ಸೇರಿದಂತೆ ಮೂವರಿಗೆ ಗೌರವ ಡಾಕ್ಟರೇಟ್

18ರಂದು ವಿಟಿಯು ಘಟಿಕೋತ್ಸವ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ (ವಿಟಿಯು) 24ನೇ ವಾರ್ಷಿಕ ಘಟಿಕೋತ್ಸವ ಜುಲೈ 18ರಂದು ಬೆಳಿಗ್ಗೆ 11.30ಕ್ಕೆ ನಡೆಯಲಿದ್ದು, ಮೂವರಿಗೆ ಗೌರವ ಡಾಕ್ಟರೇಟ್ ನೀಡಲಾಗುವುದು' ಎಂದು ವಿಟಿಯು ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ತಿಳಿಸಿದರು.



ವಿದ್ಯಾಶಂಕರ್

'ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ನಿರ್ದೇಶಕ ಪ್ರೊ.ಗೋವಿಂದನ್ ರಂಗರಾಜನ್ ಘಟಿಕೋತ್ಸವ ಭಾಷಣ ಮಾಡುವರು. ರಾಜ್ಯಪಾಲ ಥಾವರಚಂದ್ ಗೆಹ್ಲೋತ್ ಅಧ್ಯಕ್ಷತೆ ವಹಿಸುವರು. ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಪಾಲ್ಗೊಳ್ಳುವರು' ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಚಿಕ್ಕಬಳ್ಳಾಪುರದ ಮಧುಸೂದನ್ ಸಾಯಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಸದ್ಗುರು ಮಧುಸೂದನ್ ಸಾಯಿ, ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್, ಬಿಇಎಲ್ ವ್ಯವಸ್ಥಾಪಕ ನಿರ್ದೇಶಕ ಹರಿ ಕೆ.ಮರಾರ್ ಅವರಿಗೆ 'ಡಾಕ್ಟರ್ ಆಫ್ ಸೈನ್ಸ್' ಪ್ರದಾನ ಮಾಡಲಾಗುವುದು' ಎಂದರು.

'ಒಟ್ಟು 52,615 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದು. ಈ ಪೈಕಿ 51,084 ವಿದ್ಯಾರ್ಥಿಗಳಿಗೆ (ಸ್ವಾಯತ್ತ ಮಹಾವಿದ್ಯಾಲಯದ 15,387 ವಿದ್ಯಾರ್ಥಿಗಳು) ಬಿ.ಇ, 45 ವಿದ್ಯಾರ್ಥಿಗಳಿಗೆ ಬಿ.ಟೆಕ್, 8 ವಿದ್ಯಾರ್ಥಿಗಳಿಗೆ ಬಿ.ಪ್ಲ್ಯಾನ್, 1,138 ವಿದ್ಯಾರ್ಥಿಗಳಿಗೆ (ಸ್ವಾಯತ್ತ ಮಹಾವಿದ್ಯಾಲಯದ 169 ವಿದ್ಯಾರ್ಥಿಗಳು) ಬಿ.ಆರ್ಕ್ ಮತ್ತು 40 ವಿದ್ಯಾರ್ಥಿಗಳಿಗೆ ಸಂಶೋಧನಾ ಪದವಿ ಪ್ರದಾನ ಮಾಡಲಾಗುವುದು' ಎಂದು ವಿವರಿಸಿದರು.

'ಬಿ.ಇ ಪರೀಕ್ಷೆ ಎದುರಿಸಿದವರಲ್ಲಿ ಶೇ 79.40 ಯುವಕರು, ಶೇ 95.62 ಯುವತಿಯರು ಪಾಸಾಗಿದ್ದಾರೆ. ಕಳೆದ ಸಲ ಉತ್ತೀರ್ಣ ಪ್ರಮಾಣ ಶೇ 82.97ರಷ್ಟಿತ್ತು. ಈ ಬಾರಿ ಶೇ 85.83ಕ್ಕೆ ಏರಿದೆ. ಕಳೆದ ಬಾರಿ ಎಸ್‌ಸಿ/ಎಸ್‌ಟಿಯ ಶೇ 53.59 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರು. ಈ ಬಾರಿ ಆ ಪ್ರಮಾಣವೂ ಶೇ 74.55ಕ್ಕೆ ಏರಿದೆ' ಎಂದರು.

ಸಾಹಿಲ್‌ಗೆ 12 ಚಿನ್ನದ ಪದಕ

ಬೆಳಗಾವಿಯ ಕೆಎಲ್‌ಇ ಸಂಸ್ಥೆಯ ಎಂ.ಎಸ್.ಶೇಷಗಿರಿ ಎಂಜಿನಿಯರಿಂಗ್ ಕಾಲೇಜಿನ ಸಿವಿಲ್ ವಿಭಾಗದ ಸಾಹಿಲ್ ಸೋಮನಾಚೆ 12 ಚಿನ್ನದ ಪದಕ ಗಳಿಸಿದ್ದಾರೆ.



ಸಾಹಿಲ್

ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಕಂಪ್ಯೂಟರ್ ಸೈನ್ಸ್ ವಿಭಾಗದ ಜಿ.ವಿಷ್ಣುಪ್ರಿಯಾ 10, ಬೆಂಗಳೂರಿನ ಎಸ್‌ಜೆಬಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ಸ್ ವಿಭಾಗದ ಜಿ.ರೇಷ್ಮಾ, ಇದೇ ಕಾಲೇಜಿನ ಮೆಕ್ಯಾನಿಕಲ್ ವಿಭಾಗದ ಎಲ್.ಮೋಹನಕುಮಾರ್, ಬಳ್ಳಾರಿಯ ಬಳ್ಳಾರಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಮ್ಯಾನೇಜ್‌ಮೆಂಟ್‌ನ ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ವಿಭಾಗದ ಜಿ.ಹೃತಿಕಾ ಅವರು ತಲಾ 7 ಚಿನ್ನದ ಪದಕ ಗಳಿಸಿದ್ದಾರೆ.

ಬೆಂಗಳೂರಿನ ಏಟ್ರಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಕೃತಿಕಾ ಸೆಂಥಿಲ್, ಆರ್‌ಎನ್‌ಎಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪಿ.ಅನುಶ್ರೀ ತಲಾ 4, ಕೆಜಿಎಫ್‌ನ ಡಾ.ಟಿ.ತಿಮ್ಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಎನ್.ಮಾಲತೇಶ, ದಾವಣಗೆರೆಯ ಜಿ.ಎಂ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಡಿ.ಜನನಿ ಮತ್ತು ಮಂಗಳೂರಿನ ಶ್ರೀದೇವಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸೌರವ್ ಇಂಗಳೆ ತಲಾ 2 ಚಿನ್ನದ ಪದಕ ಪಡೆದಿದ್ದಾರೆ.

ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮತ್ತು ಮಂಗಳೂರಿನ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್ ಸ್ನಾತಕ ವಿಭಾಗದಲ್ಲಿ ತಲಾ 19 ರ್‍ಯಾಂಕ್ ಗಳಿಸಿದೆ.

ಬೆಂಗಳೂರು–ಕಲಬುರಗಿ ನಡುವೆ ವಿಶೇಷ ರೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಮತ್ತು ಕಲಬುರಗಿ ನಿಲ್ದಾಣಗಳ ನಡುವೆ ವಿಶೇಷ ರೈಲು ಸಂಚರಿಸಲಿದೆ.

ವಿಶ್ವೇಶ್ವರಯ್ಯ ಟರ್ಮಿನಲ್‌ನಿಂದ ರೈಲು ಜುಲೈ 19ರಂದು ರಾತ್ರಿ 8ಕ್ಕೆ ಹೊರಟು, ಮರುದಿನ ಬೆಳಿಗ್ಗೆ 7.45ಕ್ಕೆ ಕಲಬುರಗಿ ನಿಲ್ದಾಣ ತಲುಪಲಿದೆ.

ಜುಲೈ 20ರಂದು ಬೆಳಿಗ್ಗೆ 9.30ಕ್ಕೆ ಕಲಬುರಗಿಯಿಂದ ಹೊರಟು, ಅದೇ ದಿನ ರಾತ್ರಿ 8.30ಕ್ಕೆ ಬೆಂಗಳೂರಿಗೆ ತಲುಪಲಿದೆ.

ಯಲಹಂಕ, ಧರ್ಮಾವರಂ, ಅನಂತಪುರ, ಗುಂತಕಲ್, ಆದೋನಿ, ಮಂತ್ರಾಲಯ ರೋಡ್, ರಾಯಚೂರು, ಯಾದಗಿರಿ ಮತ್ತು ಶಹಾಬಾದ್ ನಿಲ್ದಾಣಗಳಲ್ಲಿ ನಿಲುಗಡೆ ಹೊಂದಿದೆ. ಎಸಿ ಟು ಟೈಯರ್-1, ಎಸಿ ತ್ರೀ ಟೈಯರ್-1, ಸ್ಲೀಪರ್ ಕ್ಲಾಸ್-10, ಜನರಲ್ ಸೆಕೆಂಡ್ ಕ್ಲಾಸ್-4 ಮತ್ತು ಸೆಕೆಂಡ್ ಕ್ಲಾಸ್ ಲಗೇಜ್ ಕಮ್ ಬ್ರೇಕ್ ವ್ಯಾನ್/ದಿವ್ಯಾಂಗ್ ಸ್ನೇಹಿ ಬೋಗಿ-2 ಸೇರಿದಂತೆ ಒಟ್ಟು 18 ಬೋಗಿಗಳು ಒಳಗೊಂಡಿದೆ ಎಂದು ನೈರುತ್ಯ ರೈಲ್ವೆ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಗುಂಡಿಮುಕ್ತ ರಸ್ತೆಗಾಗಿ ಕಾಮಗಾರಿ; 157 ಕಿ.ಮೀ ರಸ್ತೆ, ಪಾದಚಾರಿ ಮಾರ್ಗ ಅಭಿವೃದ್ಧಿ: ಡಿ.ಕೆ. ಶಿವಕುಮಾರ್

₹1,800 ಕೋಟಿ ವೆಚ್ಚದಲ್ಲಿ ವೈಟ್ ಟಾಪಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ರಸ್ತೆಗಳು ಪದೇಪದೇ ಕಿತ್ತು ಬರುತ್ತಿರುವುದರಿಂದ ಗುಂಡಿಮುಕ್ತ ಶಾಶ್ವತ ರಸ್ತೆಗಳನ್ನು ನಿರ್ಮಿಸಲು ಒಟ್ಟು ₹1,800 ಕೋಟಿ ವೆಚ್ಚದಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಆರಂಭಿಸಲಾಗುತ್ತಿದೆ' ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ಹೇಳಿದರು.

'ಬ್ರ್ಯಾಂಡ್ ಬೆಂಗಳೂರು, ಸುಗಮ ಸಂಚಾರ ಬೆಂಗಳೂರು' ಪರಿಕಲ್ಪನೆಯಡಿ ಚಾಮರಾಜಪೇಟೆ, ಗಾಂಧಿನಗರ, ಮಲ್ಲೇಶ್ವರ, ಮಹಾಲಕ್ಷ್ಮೀಪುರ ವಿಧಾನ ಸಭೆ ಕ್ಷೇತ್ರಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿಗೆ ಸೋಮವಾರ ಚಾಲನೆ ನೀಡಿ ಅವರು ಮಾತನಾಡಿದರು.

'ರಸ್ತೆಗಳಲ್ಲಿ ಗುಂಡಿಗಳು ಬೀಳಬಾರದು ಎಂಬ ಉದ್ದೇಶದಿಂದ ವೈಟ್ ಟಾಪಿಂಗ್ ರಸ್ತೆ ನಿರ್ಮಿಸಲಾಗುತ್ತಿದೆ. ಇವು ಸುಮಾರು 25 ವರ್ಷ ಬಾಳಿಕೆ ಬರುತ್ತವೆ. ನಿತ್ಯ ಮೂರ್ನಾಲ್ಕು ವಾರ್ಡ್‌ಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿಗೆ ಚಾಲನೆ ನೀಡಲಾಗುತ್ತದೆ. ಕಾಲಮಿತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗುವುದು' ಎಂದು ತಿಳಿಸಿದರು.

'ಸಂಚಾರ ದಟ್ಟಣೆ ಸಮಸ್ಯೆ ಬಗೆ ಹರಿಸಲು 200 ಕಿ.ಮೀ ಉದ್ದದ ಹೊಸ ರಸ್ತೆ ನಿರ್ಮಾಣ ಮಾಡಲು ತೀರ್ಮಾನ ಮಾಡಲಾಗಿದೆ. ಉನ್ನತ ಗುಣಮಟ್ಟಕ್ಕಾಗಿ ಆ ರಸ್ತೆಗಳನ್ನೂ ವೈಟ್ ಟಾಪಿಂಗ್ ಮಾಡಲು ಸೂಚಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಸಚಿವರಾದ ಬಿ.ಝಡ್ ಜಮೀರ್ ಅಹ್ಮದ್ ಖಾನ್, ದಿನೇಶ್ ಗುಂಡೂರಾವ್, ಶಾಸಕರಾದ ಡಾ. ಸಿ.ಎನ್ ಅಶ್ವತ್ಥ ನಾರಾಯಣ್, ಕೆ. ಗೋಪಾಲಯ್ಯ, ಬಿಬಿಎಂಪಿ ಆಡಳಿತಾಧಿಕಾರಿ ಎಸ್.ಆರ್. ಉಮಾಶಂಕರ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ವಲಯ ಜಂಟಿ ಆಯುಕ್ತೆ ಪಲ್ಲವಿ ಉಪಸ್ಥಿತರಿದ್ದರು.



ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ಅವರು ಚಾಮರಾಜಪೇಟೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿಗೆ ಸೋಮವಾರ ಚಾಲನೆ ನೀಡಿದರು. ಸಚಿವ ಜಮೀರ್ ಅಹಮದ್ ಖಾನ್ ಉಪಸ್ಥಿತರಿದ್ದರು

ಏನೆಲ್ಲ ಸೌಲಭ್ಯ?

- ಎರಡೂ ಬದಿ ಪಾದಚಾರಿ ಮಾರ್ಗ, ಕೇಬಲ್‌ಗಳಿಗಾಗಿ ಡಕ್ಟ್ ನಿರ್ಮಾಣ
- ನೂತನ ವಿನ್ಯಾಸದ ವಿದ್ಯುತ್ ದೀಪ ಅಳವಡಿಕೆ
- ರಸ್ತೆಗಳ ಎರಡೂ ಬದಿ ಮಳೆ ನೀರಿನ ಚರಂಡಿಗಾಗಿ ಕೊಳವೆ ಮಾರ್ಗ ಅಳವಡಿಕೆ
- ರಸ್ತೆಗಳ ಎರಡೂ ಬದಿ ಕುಡಿಯುವ ನೀರು ಮತ್ತು ಒಳಚರಂಡಿ ಮಾರ್ಗ

ಎಲ್ಲೆಲ್ಲಿ ವೈಟ್ ಟಾಪಿಂಗ್ ಆರಂಭ?

ಮಹಾಲಕ್ಷ್ಮಿಪುರ ವಿಧಾನಸಭಾ ಕ್ಷೇತ್ರ

2.14 ಕಿ.ಮೀ ಉದ್ದದ ಮೂರು ಮುಖ್ಯ ಹಾಗೂ ಉಪ ಮುಖ್ಯರಸ್ತೆಗಳು ವೈಟ್ ಟಾಪಿಂಗ್– ಟೆಂಡರ್‌ಶ್ಯೂರ್ ಮಾದರಿ ಅಭಿವೃದ್ಧಿ

ರಸ್ತೆಗಳು: ಮಹಾಲಕ್ಷ್ಮಿಪುರ ಮುಖ್ಯರಸ್ತೆ, ರಾಜಾಜಿನಗರ 10ನೇ ಮುಖ್ಯರಸ್ತೆ, ಡಾ. ರಾಜ್‌ಕುಮಾರ್ ಮುಖ್ಯರಸ್ತೆ.

ಒಟ್ಟು ವೆಚ್ಚ ₹25 ಕೋಟಿ

ಮಲ್ಲೇಶ್ವರ ವಿಧಾನಸಭಾ ಕ್ಷೇತ್ರ

3 ಕಿ.ಮೀ ಉದ್ದ ಮೂರು ಮುಖ್ಯ ಹಾಗೂ ಉಪ ಮುಖ್ಯರಸ್ತೆಗಳ ವೈಟ್ ಟಾಪಿಂಗ್ - **ರಸ್ತೆಗಳು:** ಮಲ್ಲೇಶ್ವರ 8ನೇ ಮುಖ್ಯರಸ್ತೆಯಲ್ಲಿ ಚಿತ್ರಾಪುರ ವೃತ್ತದಿಂದ 11ನೇ ಮುಖ್ಯರಸ್ತೆ ಹಾಗೂ 18ನೇ ಅಡ್ಡರಸ್ತೆಯಿಂದ ಚಿತ್ರಾಪುರ ವೃತ್ತ. ಸದಾಶಿವನಗರ 10ನೇ ಮುಖ್ಯರಸ್ತೆಯಿಂದ ಭಾಷ್ಯಂ ವೃತ್ತ (ಜೀವರಾಜ್ ಆಳ್ವ ರಸ್ತೆ).

ಒಟ್ಟು ವೆಚ್ಚ ₹30 ಕೋಟಿ

ಗಾಂಧಿನಗರ ವಿಧಾನಸಭಾ ಕ್ಷೇತ್ರ

3.84 ಕಿ.ಮೀ ಉದ್ದ ನಾಲ್ಕು ಮುಖ್ಯ ಹಾಗೂ ಉಪ ಮುಖ್ಯರಸ್ತೆಗಳ ವೈಟ್ ಟಾಪಿಂಗ್ - **ರಸ್ತೆಗಳು:** ಆನಂದರಾವ್ ವೃತ್ತದಿಂದ ಕಾಂಗ್ರೆಸ್ ಕಚೇರಿವರೆಗೆ; ಸಂಪಿಗೆ ರಸ್ತೆಯ ಬಿಗ್‌ಬಜಾರ್ ಜಂಕ್ಷನ್‌ನಿಂದ ಶೇಷಾದ್ರಿಪುರ ಮುಖ್ಯರಸ್ತೆ; ವಾಟಾಳ್ ನಾಗರಾಜ್ ರಸ್ತೆ ಟಿ ಜಂಕ್ಷನ್‌ನಿಂದ ರಾಜೀವ್‌ಗಾಂಧಿ ವೃತ್ತ; ಆನಂದರಾವ್ ವೃತ್ತದಿಂದ ಶೇಷಾದ್ರಿಪುರ ವೃತ್ತ

ಒಟ್ಟು ವೆಚ್ಚ ₹50 ಕೋಟಿ

ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರ

7.64 ಕಿ.ಮೀ ಉದ್ದ 9 ಮುಖ್ಯ ಹಾಗೂ ಉಪ ಮುಖ್ಯರಸ್ತೆಗಳು ವೈಟ್ ಟಾಪಿಂಗ್– ಟೆಂಡರ್‌ಶ್ಯೂರ್ ಮಾದರಿ ಅಭಿವೃದ್ಧಿ

ರಸ್ತೆಗಳು: ಸುಲ್ತಾನ್ ರಸ್ತೆ; ಚಾಮರಾಜಪೇಟೆ 2, 3, 4, 5, 7ನೇ ಮುಖ್ಯರಸ್ತೆ; ಮೈಸೂರು ರಸ್ತೆಯಿಂದ ಚಾಮರಾಜಪೇಟೆ 4ನೇ ಅಡ್ಡರಸ್ತೆ; ಮಿಂಟೊ ಆಸ್ಪತ್ರೆ ಜಂಕ್ಷನ್‌ನಿಂದ ಚಾಮರಾಜಪೇಟೆ 5ನೇ ಮುಖ್ಯರಸ್ತೆ; ರಾಯನ್ ವೃತ್ತದಿಂದ ಚಾಮರಾಜಪೇಟೆ 5ನೇ ಮುಖ್ಯರಸ್ತೆ.

ಒಟ್ಟು ವೆಚ್ಚ ₹30 ಕೋಟಿ

ಸುದ್ದಿ 2 ನಿಮಿಷ

ಗೋಡಂಬಿ ತಿನ್ನಲು ಕಾವೇರಿ ಸಭೆಗೆ ಹೋಗಬೇಕಿತ್ತಾ: ಎಚ್‌ಡಿಕೆ ಪ್ರಶ್ನೆ

ನವದೆಹಲಿ: 'ಸರ್ವಪಕ್ಷ ಸಭೆಗೂ ಮುನ್ನ ಕರ್ನಾಟಕದ ಕಾಂಗ್ರೆಸ್ ಸರ್ಕಾರವು ತಮಿಳುನಾಡಿಗೆ ನೀರು ಹರಿಸಿದೆ. ಗೋಡಂಬಿ ಹಾಗೂ ಬಾದಾಮಿ ತಿನ್ನಲು ಸರ್ವಪಕ್ಷದ ಸಭೆಗೆ ಹೋಗಬೇಕಿತ್ತಾ ಅಥವಾ ರಾಜ್ಯ ಸರ್ಕಾರಕ್ಕೆ ಶಹಬ್ಬಾಸ್‌ಗಿರಿ ನೀಡಲು ಹೋಗಬೇಕಿತ್ತಾ' ಎಂದು ಕೇಂದ್ರ ಭಾರಿ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಖಾರವಾಗಿ ಪ್ರಶ್ನಿಸಿದರು.

ಸೋಮವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ರೈತರ ಹೆಸರಿನಲ್ಲಿ ಕಬಿನಿಯಿಂದ ತಮಿಳುನಾಡಿಗೆ ನೀರು ಬಿಡಲಾಗಿದೆ. ನೀರು ಬಿಟ್ಟು ಕಾಟಾಚಾರಕ್ಕೆ ಸಭೆ ಕರೆದಿದ್ದಾರೆ' ಎಂದು ದೂರಿದರು.

'ಮಂಡ್ಯದಲ್ಲಿ ಜನತಾ ದರ್ಶನ ಮಾಡಿದಾಗ ಅಧಿಕಾರಿಗಳು ಹಾಜರಾಗದಂತೆ ರಾಜ್ಯ ಸರ್ಕಾರ ಆದೇಶ ಹೊರಡಿಸಿತ್ತು. ಪಾಂಡವಪುರದಲ್ಲಿ ಮತ ಕೊಟ್ಟ ಜನರಿಗೆ ಧನ್ಯವಾದ ಹೇಳಲು ನಾನು ಹೋಗಿದ್ದೆ. ಇದಕ್ಕೂ ರಾಜ್ಯ ಸರ್ಕಾರದ ಅನುಮತಿ ಪಡೆಯಬೇಕಾ? ಯಾವ ಸಂದರ್ಭದಲ್ಲಿ ಯಾವ ಕಾರ್ಯಕ್ರಮಕ್ಕೆ ಹೋಗಬೇಕು ಎಂದು ನನಗೆ ಗೊತ್ತಿದೆ' ಎಂದರು.

'ಆಂಧ್ರಪ್ರದೇಶದ ವಿಶಾಖ ಪಟ್ಟಣಕ್ಕೆ ಹೋದಾಗ ಅಲ್ಲಿನ ಮುಖ್ಯಮಂತ್ರಿ ಕರೆ ಮಾಡಿ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಆದರೆ, ಕರ್ನಾಟಕದ ಮುಖ್ಯಮಂತ್ರಿಯವರು ಕೇಂದ್ರದ ಯೋಜನೆಗಳಿಗೆ ಅಡ್ಡಗಾಲು ಹಾಕುತ್ತಿದ್ದಾರೆ. ದೇವದಾರು ಯೋಜನೆಯನ್ನು ದುರುದ್ದೇಶದಿಂದ ನಿಲ್ಲಿಸಿದ್ದಾರೆ. ಇವರ ರೀತಿಯಲ್ಲಿ ನಾನು ಕಾನೂನುಬಾಹಿರ ಕೆಲಸ ಮಾಡಿಲ್ಲ' ಎಂದು ಕಿಡಿಕಾರಿದರು.



ಕಾವೇರಿಗಿಂತ, ಬಾಡೂಟ ಮುಖ್ಯವೇ?

ಮಾಗಡಿ: ಕಾವೇರಿ ನದಿ ನೀರಿನ ವಿಚಾರ ಚರ್ಚಿಸಲು ರಾಜ್ಯ ಸರ್ಕಾರ ಸೋಮವಾರ ಕರೆದಿದ್ದ ಸರ್ವಪಕ್ಷ ಸಭೆಗೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಗೈರಾಗಿದ್ದಾರೆ. ಕಾವೇರಿ ಸಭೆಗೆ ಹಾಜರಾಗದೆ ಪಾಂಡವಪುರದಲ್ಲಿ ಆಯೋಜಿಸಿದ್ದ ಬಾಡೂಟಕ್ಕೆ ಹಾಜರಾಗಿದ್ದಾರೆ ಎಂದು ಶಾಸಕ ಬಾಲಕೃಷ್ಣ ಎಚ್.ಸಿ. ಬಾಲಕೃಷ್ಣ ವ್ಯಂಗ್ಯವಾಡಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, 'ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಕರೆದಿದ್ದ ಸರ್ವಪಕ್ಷ ಸಭೆಗೆ ಜೀವನದಿ ಕಾವೇರಿ ಹರಿಯುವ ಮಂಡ್ಯ ಪ್ರತಿನಿಧಿಸುವ ಸಂಸದ ಎಚ್.ಡಿ. ಕುಮಾರಸ್ವಾಮಿ ಅವರು ಗೈರಾಗಿದ್ದಾರೆ. ಅವರ ಈ ಬೇಜವಾಬ್ದಾರಿತನವು ಮಂಡ್ಯ ಜಿಲ್ಲೆಯ ರೈತರ ಮೇಲೆ ಅವರಿಗಿರುವ ಕಾಳಜಿ ಎಂತಹದ್ದು ಎಂಬುದಕ್ಕೆ ಕನ್ನಡಿ ಹಿಡಿದಿದೆ' ಎಂದು ಟೀಕಿಸಿದ್ದಾರೆ.

'ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸಂಪರ್ಕ ಸೇತುವಾಗಿ ಸಮನ್ವಯ ಸಾಧಿಸಲು ಕುಮಾರಸ್ವಾಮಿ ಅವರು ಸಭೆಯಲ್ಲಿ ಪಾಲ್ಗೊಳ್ಳಬೇಕಿತ್ತು. ರೈತರ ಹಿತ ಕಾಯಲು ತಮ್ಮ ಸಲಹೆ, ಸೂಚನೆ ನೀಡಬೇಕಿತ್ತು. ಆದರೆ, ಅವರಿಗೆ ಸರ್ವಪಕ್ಷ ಸಭೆಗಿಂತಲೂ ಪಾಂಡವಪುರದಲ್ಲಿ ಆಯೋಜನೆ ಮಾಡಿದ್ದ ಬಾಡೂಟದ ಕಾರ್ಯಕ್ರಮವೇ ಮುಖ್ಯವಾಯಿತೇ?' ಎಂದು ಪ್ರಶ್ನಿಸಿದ್ದಾರೆ.





ಸಂಜಯನಗರದಲ್ಲಿ ಮರ ಮುರಿದು ರಸ್ತೆ ಮೇಲೆ ಬಿದ್ದಿತ್ತು (ಎಡಚಿತ್ರ) ಬೆಂಗಳೂರಿನ ಕೃಷ್ಣರಾಜ ಮಾರುಕಟ್ಟೆ ಪ್ರದೇಶದ ಸಿಲ್ವರ್ ಜುಬಿಲಿ ಪಾರ್ಕ್ ರಸ್ತೆಯಲ್ಲಿ ಸೋಮವಾರ ಮಳೆ ಸುರಿದ ಪರಿಣಾಮ ರಸ್ತೆಯಲ್ಲಿ ನೀರು ನಿಂತಿದ್ದು, ವಾಹನಗಳು ಮಳೆಯ ನೀರಿನಲ್ಲೇ ಸಾಗಿದವು ಪ್ರಜಾವಾಣಿ ಚಿತ್ರಗಳು/ ಪ್ರಶಾಂತ್ ಎಚ್.ಜಿ.

ಉತ್ತಮ ಮಳೆ: ಎರಡು ಕಡೆ ಬಿದ್ದ ಮರ

ಹಂಪಿನಗರದಲ್ಲಿ 1.7 ಸೆಂ.ಮೀ. ಮಳೆ • ದಿನವಿಡೀ ಮೋಡ ಕವಿದ ವಾತಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸೋಮವಾರ ಬೆಳಿಗ್ಗೆಯಿಂದ ಸಂಜೆವರೆಗೆ ಅಲ್ಪ ಬಿಡುವು ನೀಡುತ್ತಾ ಉತ್ತಮ ಮಳೆಯಾಗಿದೆ. ಹಲವು ಕಡೆಗಳಲ್ಲಿ ಗುಂಡಿ ಬಿದ್ದಿರುವ ರಸ್ತೆಗಳಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ತೊಡಕುಂಟಾಯಿತು.

ಮುಂಜಾನೆಯಿಂದಲೇ ಮೋಡ ಕವಿದ ವಾತಾವರಣವಿದ್ದು, 7 ಗಂಟೆಯಿಂದ ತುಂತುರು ಮಳೆಯಾಯಿತು. ಆಗಾಗ ಬಿರುಸಿನ ಮಳೆಯೂ ಆಯಿತು. ಮಧ್ಯಾಹ್ನ ಸ್ವಲ್ಪ ಬಿಡುವು ನೀಡಿದ್ದ ಮಳೆ, ಸಂಜೆಯೂ ಸುರಿಯಿತು. ತಡರಾತ್ರಿವರೆಗೆ ಅಲ್ಲಲ್ಲಿ ತುಂತುರು ಮಳೆಯಾಯಿತು.

ವೀರಣ್ಣಪಾಳ್ಯದಲ್ಲಿ ರಸ್ತೆಯಲ್ಲಿ ವಾಹನ ಸಂಚರಿಸಲು ಕಷ್ಟಪಡುವಷ್ಟು ರಸ್ತೆ ಕೆಟ್ಟು ಹೋಗಿದ್ದು, ಮಳೆ ಬಂದಾಗ ಇನ್ನಷ್ಟು ರಾಡಿ ಉಂಟಾಗಿದೆ. ಹೆಬ್ಬಾಳ ವೃತ್ತದ ಸರ್ವಿಸ್ ರಸ್ತೆ ಕಡೆಗೆ ಸಾಗುವ ವಾಹನಗಳು ಪರದಾಡುವಂತಾಯಿತು.

ಮಾರತಹಳ್ಳಿ ಬಳಿ ರಸ್ತೆಯಲ್ಲಿಯೇ ನೀರು ನಿಂತಿದ್ದರಿಂದ ಕಾಡು ಬೀಸನಹಳ್ಳಿ ರಸ್ತೆ ಕಡೆಗೆ ಸಾಗುವ ವಾಹನಗಳಿಗೆ ತೊಂದರೆಯಾಯಿತು.

ಸಂಜಯನಗರ ವೈಭವ ಥಿಯೇಟರ್ ಬಳಿ ಮರ ಮುರಿದು ಬಿದ್ದಿದ್ದರಿಂದ ಸ್ವಲ್ಪ ಸಮಯ ವಾಹನ ಸಂಚಾರ ಸ್ಥಗಿತಗೊಂಡಿತು. ಬನಶಂಕರಿ 3ನೇ ಹಂತದ 9ನೇ ಮುಖ್ಯರಸ್ತೆಯ ಸಿಗ್ನಲ್ ಬಳಿ ಮರ ಮುರಿದು ಬಿದ್ದಿದ್ದರಿಂದ ಬನಶಂಕರಿ ಬಸ್ ನಿಲ್ದಾಣ ಕಡೆಗೆ ಬದಲಿ ಮಾರ್ಗದಲ್ಲಿ ವಾಹನಗಳು ಸಂಚರಿಸುವಂತಾಯಿತು.

ಪ್ಯಾಲೇಸ್ ಕ್ರಾಸ್ ಬಳಿ ರಸ್ತೆಯಲ್ಲಿ ನೀರು ನಿಂತಿದ್ದರಿಂದ ಚಕ್ರವರ್ತಿಲೇಔಟ್ ಕಡೆಗೆ ವಾಹನಗಳು ನಿಧಾನಗತಿಯಲ್ಲಿ ಸಾಗಿದವು.

ರಾಜಾಜಿನಗರ, ಎಂ.ಜಿ. ರಸ್ತೆ, ಶಿವಾಜಿನಗರ, ಯಶವಂತಪುರ, ಹಂಪಿನಗರ, ಕೋರಮಂಗಲ, ಜ್ಞಾನಭಾರತಿ, ವಿವಿ ಪುರ ಸಹಿತ ನಗರದ ವಿವಿಧೆಡೆ ಉತ್ತಮ ಮಳೆಯಾಗಿದೆ.

ಹೆಚ್ಚು ಮಳೆ ಎಲ್ಲೆಲ್ಲಿ?: ಹಂಪಿನಗರದಲ್ಲಿ 1.7 ಸೆಂ.ಮೀ., ಮಾರುತಿ ಮಂದಿರ ಬಳಿ 1.4 ಸೆಂ.ಮೀ., ಕೋರಮಂಗಲದಲ್ಲಿ 1.2 ಸೆಂ.ಮೀ., ಜ್ಞಾನಭಾರತಿಯಲ್ಲಿ 1.1 ಸೆಂ.ಮೀ., ವಿಶ್ವೇಶ್ವರಪುರದಲ್ಲಿ 1.1 ಸೆಂ.ಮೀ. ಮಳೆ ದಾಖಲಾಗಿದೆ.

ಆಂಬುಲೆನ್ಸ್‌ಗೆ ದಾರಿ ಬಿಡಲು ಸಿಗ್ನಲ್ ಜಂಪ್: ದಂಡ ವಿನಾಯಿತಿ



ಬೆಂಗಳೂರು: ನಗರದ ಪ್ರಮುಖ ರಸ್ತೆಗಳು ಹಾಗೂ ಜಂಕ್ಷನ್‌ಗಳಲ್ಲಿ ಆಂಬುಲೆನ್ಸ್‌ಗೆ ದಾರಿ ಮಾಡಿಕೊಡಲು ಸಿಗ್ನಲ್ ಜಂಪ್ ಮಾಡಿದ ವಾಹನ ಸವಾರರಿಗೆ ದಂಡದಿಂದ ವಿನಾಯಿತಿ ನೀಡಲಾಗುವುದು ಎಂದು ಜಂಟಿ ಪೊಲೀಸ್ ಆಯುಕ್ತ ಎಂ.ಎನ್. ಅನುಚೇತ್ ತಿಳಿಸಿದ್ದಾರೆ.

ಆಂಬುಲೆನ್ಸ್‌ಗೆ ದಾರಿ ಮಾಡಿಕೊಡಲು ವಾಹನ ಚಾಲಕರು ಸಿಗ್ನಲ್ ಜಂಪ್ ಮಾಡಿದ್ದಲ್ಲಿ ಅಥವಾ ಜೀಬ್ರಾ ಕ್ರಾಸಿಂಗ್‌ನಲ್ಲಿ ನಿಂತಿದ್ದಲ್ಲಿ ದಂಡ ರದ್ದುಗೊಳಿಸಲಾಗುತ್ತದೆ. ಇದಕ್ಕೆ ದಂಡ ವಿಧಿಸಿದಲ್ಲಿ ವಾಹನ ಸವಾರರು ಇನ್‌ಫೆಂಟ್ರಿ ರಸ್ತೆಯ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸೆಂಟರ್‌ಗೆ ತೆರಳಿ ಅಲ್ಲಿಯ ಸಿಬ್ಬಂದಿ ಗಮನಕ್ಕೆ ತರಬಹುದು ಅಥವಾ ಕರ್ನಾಟಕ ಸ್ಟೇಟ್ ಪೊಲೀಸ್ ಆ್ಯಪ್ ಮೂಲಕ ದೂರು ದಾಖಲಿಸಬಹುದು ಎಂದರು.

ನಗರದಲ್ಲಿರುವ ಪ್ರಮುಖ 10 ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಜಿಯೋ ಫೆನ್ಸಿಂಗ್ ವ್ಯವಸ್ಥೆ ಅಳವಡಿಸಲಾಗಿದೆ. ಜಿಪಿಎಸ್ ಅಳವಡಿಸಿರುವ ಆಂಬುಲೆನ್ಸ್ ಬಂದಲ್ಲಿ ಸ್ವಯಂಚಾಲಿವಾಗಿ ಸಿಗ್ನಲ್ ಹಸಿರು ಬಣ್ಣಕ್ಕೆ ತಿರುಗುತ್ತದೆ. ಇದರಿಂದ ಸಿಗ್ನಲ್‌ಗಳಲ್ಲಿ ವಾಹನ ಸವಾರರು ಸುಲಭವಾಗಿ ಆಂಬುಲೆನ್ಸ್‌ಗೆ ದಾರಿ ಮಾಡಿಕೊಡಬಹುದಾಗಿದೆ ಎಂದರು.

ಗ್ರಾ.ಪಂ. ಸದಸ್ಯ ಸೇರಿ ಮೂವರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈಸ್ ರಸ್ತೆಯ ಚನ್ನಸಂದ್ರ ಸೇತುವೆ ಬಳಿ ಸೋಮವಾರ ಎರಡು ಕಾರುಗಳ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ಗ್ರಾಮ ಪಂಚಾಯಿತಿ ಸದಸ್ಯ ಸೇರಿ ಮೂವರು ಸ್ಥಳದಲ್ಲೇ ಮೃತಪಟ್ಟು, ಇಬ್ಬರು ಗಾಯಗೊಂಡಿದ್ದಾರೆ.

ಖಾಸಗಿ ಸಾರಿಗೆ ಉದ್ಯಮ ನಡೆಸುತ್ತಿದ್ದ ನಂಜೇಗೌಡ (45), ಕನಕಪುರದ ಗ್ರಾಮ ಪಂಚಾಯಿತಿ ಸದಸ್ಯ ವಿನೋದ್ (36) ಮತ್ತು ಡೇರಿ ಸಹಕಾರಿ ಸಂಘದ ಸದಸ್ಯ ಎಚ್.ವಿ. ಕುಮಾರ್ (41) ಮೃತರು. ಇವರೆಲ್ಲರೂ ಕನಕಪುರದ ಶಿವನಹಳ್ಳಿ ಮತ್ತು ಹನುಮನಹಳ್ಳಿ ನಿವಾಸಿಗಳು. ಈ ಮೂವರು ಸ್ಕಾರ್ಪಿಯೋ ಕಾರಿನಲ್ಲಿ ಗೋವಾಗೆ ಪ್ರಯಾಣಿಸುತ್ತಿದ್ದರು ಎನ್ನಲಾಗಿದೆ.

ಎಕ್ಸ್‌ಯುವಿ ಕಾರಿನಲ್ಲಿ ಶಿವರಾಮಕೃಷ್ಣ ಮತ್ತು ಪ್ರಸನ್ನ ಅವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಮೃತದೇಹಗಳನ್ನು ರಾಜರಾಜೇಶ್ವರಿ ನಗರದ ಸರ್ಕಾರಿ ಆಸ್ಪತ್ರೆಗೆ ಸಾಗಿಸಲಾಗಿದೆ.

ಹೊಸೂರು ಕಡೆಯಿಂದ ತೆರಳುತ್ತಿದ್ದ ಸ್ಕಾರ್ಪಿಯೋ ಕಾರನ್ನು ವಿನೋದ್ ಚಾಲನೆ ಮಾಡುತ್ತಿದ್ದರು. ಘಟನೆ ವೇಳೆ ಜೋರು ಮಳೆ ಸುರಿಯುತ್ತಿತ್ತು. ಕಾರಿನ ಟೈರ್ ಸ್ಫೋಟಗೊಂಡು, ಚಾಲಕನ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ. ಬಳಿಕ ಪಲ್ಟಿಯಾಗಿ ಎದುರಿನಿಂದ ಬರುತ್ತಿದ್ದ ಎಕ್ಸ್‌ಯುವಿ 700 ಕಾರಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಸ್ಕಾರ್ಪಿಯೋನಲ್ಲಿದ್ದ ಮೂವರು ಮೃತಪಟ್ಟರು.

ಘಟನಾ ಸ್ಥಳಕ್ಕೆ ಭೇಟಿ ನೀಡಿದ ಜಂಟಿ ಪೊಲೀಸ್ ಆಯುಕ್ತ (ಸಂಚಾರ) ಎಂ.ಎನ್.ಅನುಚೇತ್, 'ಸ್ಕಾರ್ಪಿಯೋ ಕಾರು ಅತಿ ವೇಗದಿಂದ ಚಲಿಸುತ್ತಿತ್ತು ಎಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ. ಸ್ಕಾರ್ಪಿಯೋದಲ್ಲಿನ ಸ್ಪೀಡೋ ಮೀಟರ್ 164 ಕಿ.ಮೀ ವೇಗದಲ್ಲಿ ನಿಂತಿದೆ. ಏರ್‌ಬ್ಯಾಗ್ ಸಹ ತೆರೆದುಕೊಂಡಿಲ್ಲ. ಎಕ್ಸ್ ಯುವಿ 700ರಲ್ಲಿ ಏರ್‌ಬ್ಯಾಗ್ ತೆರೆದುಕೊಂಡ ಕಾರಣ ಅವರು ಬದುಕುಳಿದರು' ಎಂದು ಹೇಳಿದರು.

ನೈಸ್ ರಸ್ತೆ: ಸರಣಿ ಅಪಘಾತ

ಬೆಂಗಳೂರು: ನೈಸ್ ರಸ್ತೆಯ ಟೋಲ್ ಗೇಟ್ ಬಳಿ ಸೋಮವಾರ ಬೆಳಿಗ್ಗೆ ಮಿನಿ ಬಸ್, ಲಾರಿ ಮತ್ತು ಎರಡು ಕಾರುಗಳ ನಡುವೆ ಸರಣಿ ಅಪಘಾತ ಸಂಭವಿಸಿದ್ದು, ಒಬ್ಬ ಮೃತಪಟ್ಟು, ನಾಲ್ವರು ತೀವ್ರವಾಗಿ ಗಾಯಗೊಂಡಿದ್ದಾರೆ.



ಬಸಾಪುರ ಸೇತುವೆ ಬಳಿ ಸಂಭವಿಸಿದ ಅಪಘಾತದಲ್ಲಿ ಬಸ್, ಕಾರು ಜಖಂಗೊಂಡಿವೆ

ಸ್ವಿಚ್ ಬೋರ್ಡ್ ಕಂಪನಿ ಉದ್ಯೋಗಿ ಕುಣಿಗಲ್‌ನ ದೇವರಾಜು (42) ಮೃತಪಟ್ಟಿದ್ದಾರೆ. ಬಸ್‌ನಲ್ಲಿದ್ದ ನಾಲ್ವರಿಗೆ ತೀವ್ರ ಗಾಯಗಳಾಗಿದ್ದು, ಅವರನ್ನು ಹೊಸೂರು ರಸ್ತೆಯಲ್ಲಿರುವ ಕಾವೇರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಎರಡು ಕಾರುಗಳಲ್ಲಿದ್ದ ಪ್ರಯಾಣಿಕರು ಯಾವುದೇ ಅಪಾಯವಿಲ್ಲದೆ ಪಾರಾಗಿದ್ದಾರೆ ಎಂದು ಎಲೆಕ್ಟ್ರಾನಿಕ್ಸ್ ಸಿಟಿ ಸಂಚಾರ ಪೊಲೀಸರು ತಿಳಿಸಿದ್ದಾರೆ.

ಬಸಾಪುರ ಸೇತುವೆ ಬಳಿ ಬೆಳಿಗ್ಗೆ 9 ಗಂಟೆ ಸುಮಾರಿಗೆ ಅಪಘಾತ ಸಂಭವಿಸಿದ್ದು, ಬೊಮ್ಮಸಂದ್ರದ ಸ್ವಿಚ್ ಬೋರ್ಡ್ ಕಂಪನಿಯ ಉದ್ಯೋಗಿಗಳನ್ನು ಕರೆದೊಯ್ಯುತ್ತಿದ್ದ ಮಿನಿ ಬಸ್, ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಲಾರಿಗೆ ಡಿಕ್ಕಿ ಹೊಡೆದಿದೆ. ಕೆಲವೇ ಸೆಕೆಂಡುಗಳಲ್ಲಿ ಮಿನಿ ಬಸ್‌ಗೆ ಎರಡು ಕಾರುಗಳು ಹಿಂದಿನಿಂದ ಬಂದು ಡಿಕ್ಕಿ ಹೊಡೆದಿವೆ. ಅಪಘಾತದಿಂದಾಗಿ ಕೆಲಹೊತ್ತು ಸಂಚಾರ ಅಸ್ತವ್ಯಸ್ತಗೊಂಡಿತು. ವಾಹನ ಸವಾರರು ಪರದಾಡಿದರು. ಬಳಿಕ ಪೊಲೀಸರು ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

'ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳದೆ ಲಾರಿಯನ್ನು ಜನನಿಬಿಡ ರಸ್ತೆಯಲ್ಲಿ ನಿಲ್ಲಿಸಿ ಹೋಗಿರುವುದು ಚಾಲಕನ ನಿರ್ಲಕ್ಷ್ಯವಾಗಿದೆ. ಅತಿವೇಗ ಮತ್ತು ನಿರ್ಲಕ್ಷ್ಯದ ಚಾಲನೆಗಾಗಿ ಮಿನಿ ಬಸ್ ಚಾಲಕನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಸಂಚಾರ ಪೊಲೀಸರೊಬ್ಬರು ತಿಳಿಸಿದ್ದಾರೆ.

ಲೈಂಗಿಕ ದೌರ್ಜನ್ಯ ಅಪರಾಧಿಗೆ 20 ವರ್ಷ ಕಠಿಣ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದುವೆಯಾಗುವುದಾಗಿ ನಂಬಿಸಿ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ ಅಪರಾಧಿಗೆ ಒಂದನೇ ಎಫ್‌ಟಿಎಸ್‌ಸಿ ನ್ಯಾಯಾಲಯ 20 ವರ್ಷ ಕಠಿಣ ಜೈಲು ಶಿಕ್ಷೆ ಹಾಗೂ ₹ 5 ಸಾವಿರ ದಂಡ ವಿಧಿಸಿದೆ.

ತಲಘಟ್ಟಪುರ ಪೊಲೀಸ್ ಠಾಣೆ ವ್ಯಾಪ್ತಿಯ ನಿವಾಸಿ ರಾಘವೇಂದ್ರ ಎಂಬಾತ ಬಾಲಕಿಯನ್ನು ಪ್ರೀತಿಸುವಂತೆ ಒತ್ತಾಯಿಸುತ್ತಿದ್ದ. ಮನೆಗೆ ಕರೆದುಕೊಂಡು ಹೋಗಿ ಮದುವೆಯಾಗುವುದಾಗಿ ಲೈಂಗಿಕ ಕ್ರಿಯೆ ಸಹ ನಡೆಸಿದ್ದ. ಈ ವಿಷಯವನ್ನು ಯಾರಿಗಾದರೂ ತಿಳಿಸಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದ.

ಸಂತ್ರಸ್ತೆಯ ತಂದೆ ಪೊಲೀಸರಿಗೆ ಈ ವಿಷಯ ತಿಳಿಸಿದರು. ಆರೋಪಿ ವಿರುದ್ಧ ಪೊಲೀಸರು ಪೋಕ್ಸೊ ಪ್ರಕರಣ ದಾಖಲಿಸಿದರು. ತನಿಖಾಧಿಕಾರಿ ಸಿದ್ದರಾಜು ದೋಷಾರೋಪ ಪಟ್ಟಿ ಸಲ್ಲಿಸಿದರು. ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ನ್ಯಾಯಾಧೀಶರು 20 ವರ್ಷ ಶಿಕ್ಷೆ ವಿಧಿಸಿದ್ದಾರೆ. ಅಲ್ಲದೇ ಐಪಿಸಿ ಕಲಂ 363 ಅಡಿ 1 ವರ್ಷ ಸಾಧಾರಣ ಕಾರಾಗೃಹ ಶಿಕ್ಷೆ ಮತ್ತು ₹5 ಸಾವಿರ ದಂಡ ವಿಧಿಸಿದ್ದಾರೆ. ಬಾಲಕಿಗೆ ಡಿಎಲ್‌ಎಸ್‌ಯಿಂದ ₹5 ಲಕ್ಷ ಪರಿಹಾರ ನೀಡುವಂತೆಯೂ ಆದೇಶಿಸಿದ್ದಾರೆ. ಅಭಿಯೋಜಕಿ ಎ.ಚಂದ್ರಕಲಾ ವಾದ ಮಂಡಿಸಿದರು.

'ತ್ಯಾಜ್ಯ ನಿರ್ವಹಣೆಗೆ 4 ಕಡೆ ಜಮೀನು'

ಪ್ರಜಾವಾಣಿ ವಾರ್ತೆ



ಬೆಂಗಳೂರು: ಸಮಗ್ರ ತ್ಯಾಜ್ಯ ನಿರ್ವಹಣೆಗೆ ಬಿಬಿಎಂಪಿಯ ನಾಲ್ಕು ದಿಕ್ಕುಗಳಲ್ಲಿ 50ರಿಂದ 100 ಎಕರೆ ಸರ್ಕಾರಿ ಜಮೀನು ಗುರುತಿಸಲಾಗಿದೆ. ಜಮೀನು ಹಸ್ತಾಂತರ ಪ್ರಕ್ರಿಯೆಯೂ ಆರಂಭವಾಗಿದೆ' ಎಂದು ಬಿಬಿಎಂಪಿ ಆಡಳಿತಾಧಿಕಾರಿ ಎಸ್.ಆರ್. ಉಮಾಶಂಕರ್ ಹೇಳಿದರು.

ಬಿಬಿಎಂಪಿಯು 'ಸಿ40 ನಗರಗಳ' ಸಹಯೋಗದಲ್ಲಿ 'ಹವಾಮಾನ ಕ್ರಿಯೆ' (ಕ್ಲೈಮೇಟ್ ಆಕ್ಷನ್) ಕುರಿತಂತೆ ವಿಕಾಸ ಸೌಧದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ನಗರದಲ್ಲಿ ಘನತ್ಯಾಜ್ಯ ವಿಲೇವಾರಿ ಸಮಸ್ಯೆಯನ್ನು ನಿವಾರಣೆ ಮಾಡುವ ದೃಷ್ಟಿಯಿಂದ ಸಾಕಷ್ಟು ಉಪಕ್ರಮ ಅಳವಡಿಸಿಕೊಳ್ಳಲಾಗುತ್ತಿದೆ. ಹಸಿ ಹಾಗೂ ಒಣ ತ್ಯಾಜ್ಯವನ್ನು ಕಡ್ಡಾಯವಾಗಿ ವಿಂಗಡಣೆ ಮಾಡುವ ಕೆಲಸವಾಗಬೇಕು. ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನೂ ನಗರದಲ್ಲಿ ಸ್ಥಾಪಿಸಲಾಗುತ್ತಿದ್ದು, ಅದಕ್ಕೆ ಶೀಘ್ರ ಚಾಲನೆ ನೀಡಲಾಗುವುದು ಎಂದು ತಿಳಿಸಿದರು. ಪರಿಸರ ಮಾಲಿನ್ಯ ತಡೆಯಲು ಸಾಕಷ್ಟು ಯೋಜನೆ ರೂಪಿಸಿ ಕಾರ್ಯರೂಪಕ್ಕೆ ತರುವ ಕೆಲಸ ಮಾಡಬೇಕು. ಮನೆ ಹಾಗೂ ಕಟ್ಟಡಗಳಲ್ಲಿ ಹಸಿರೀಕರಣಕ್ಕೆ ಪ್ರಾಮುಖ್ಯ ನೀಡಿ ಸಸಿಗಳ ನೆಟ್ಟು ಬೆಳೆಸಬೇಕು ಎಂದು ಕರೆ ನೀಡಿದರು.

ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮಾತನಾಡಿ, 'ನಗರದಲ್ಲಿ ಕಟ್ಟಡ ಭಗ್ನಾವಶೇಷಗಳನ್ನು ವಿಲೇವಾರಿ ಮಾಡುವ ಕ್ರಮವನ್ನು ನಾವು ಸರಿಪಡಿ ಸಬೇಕಿದೆ. ಎಲ್ಲೆಂದರಲ್ಲಿ ಕಟ್ಟಡಗಳ ಭಗ್ನಾವಶೇಷಗಳನ್ನು ಹಾಕುವುದರಿಂದ ವಾಯು ಮಾಲಿನ್ಯ ಉಂಟಾಗುತ್ತದೆ' ಎಂದರು.

ಬಿಬಿಎಂಪಿ ಅರಣ್ಯ, ಪರಿಸರ ಮತ್ತು ಹವಾಮಾನ ವೈಪರೀತ್ಯ ನಿರ್ವಹಣೆಯ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್, ಬಿಎಸ್‌ಡಬ್ಲ್ಯುಎಂಎಲ್‌ನ ಮುಖ್ಯ ಕಾರ್ಯಾಚರಣೆ ಅಧಿಕಾರಿ ರಮಾಮಣಿ, ಮುಖ್ಯ ಎಂಜಿನಿಯರ್ ಬಸವರಾಜ್ ಕಬಾಡೆ, ಸಿ40 ಸಿಟೀಸ್ ಇಂಕ್ಲೂಸಿವ್ ಕ್ಲೈಮೇಟ್ ಆಕ್ಷನ್‌ನ ನಿರ್ದೇಶಕ ಜಾಸ್ಮಿನ್ ಬರ್ಗೆಸ್ ಉಪಸ್ಥಿತರಿದ್ದರು.

ಭೂಮಿ ಲಭ್ಯ ಎಲ್ಲಿ?

179 ಎಕರೆ
ಗೊಲ್ಲಹಳ್ಳಿ ಸಮೀಪ ಕ್ವಾರಿ ಮತ್ತು ಬರಡು ಭೂಮಿ

135 ಎಕರೆ, ಮಂಡೂರು

100 ಎಕರೆ
ಬಿಡದಿ ಸಮೀಪ (ಕೆಪಿಸಿಎಲ್‌ಗೆ ಹಸ್ತಾಂತರ)

90 ಎಕರೆ
ದೊಡ್ಡಬೆಳವಂಗಲ ಬಳಿ ಖಾಸಗಿ ಭೂಮಿ

ಪ್ರಯಾಣಿಕರಿಂದ ₹6.6 ಕೋಟಿ ಬೆಲೆಯ ಚಿನ್ನ ವಶ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಜುಲೈ 9ರಿಂದ ಜುಲೈ13ರವರೆಗೆ ಕಸ್ಟಮ್ಸ್ ಅಧಿಕಾರಿಗಳು ಚಿನ್ನ ಕಳ್ಳಸಾಗಣೆ 11 ಪ್ರಕರಣ ಪತ್ತೆ ಹಚ್ಚಿ ಆರೋಪಿಗಳಿಂದ ಒಟ್ಟು ₹6.6 ಕೋಟಿ ಮೌಲ್ಯದ 9,375 ಗ್ರಾಂ ಚಿನ್ನ ವಶಕ್ಕೆ ಪಡೆದಿದ್ದಾರೆ.

ದುಬೈ, ಶ್ರೀಲಂಕಾ, ಬಹರೇನ್, ಕೊಲೊಂಬೊ ದಿಂದ ಆಗಮಿಸಿದ ಎಂಟು ಪ್ರಯಾಣಿಕರನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಶಾರ್ಜಾದಿಂದ ಆಗಮಿಸಿದ ಅಪರಾಧ ಹಿನ್ನೆಲೆಯ ಪ್ರಯಾಣಿಕನನ್ನು ತಪಾಸಣೆ ನಡೆಸಿದ ಕಸ್ಟಮ್ಸ್ ಅಧಿಕಾರಿಗಳು ₹1.59 ಕೋಟಿ ಮೌಲ್ಯದ ವಿದೇಶಿ ಕರೆನ್ಸಿ ಜಪ್ತಿ ಮಾಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಹೊಸಪೇಟೆ- ಮೀರಜ್ ಮಾರ್ಗ: 3 ವರ್ಷಗಳಲ್ಲಿ 21 ಕಾಡೆಮ್ಮೆ ಸಾವು

ವನ್ಯಜೀವಿಗಳಿಗೆ ಕಂಟಕವಾದ ರೈಲು ಮಾರ್ಗ

• ಪವನ್‌ಕುಮಾರ ಎಚ್





ಹುಬ್ಬಳ್ಳಿ: ನೈರುತ್ಯ ರೈಲ್ವೆ ವಲಯ ವ್ಯಾಪ್ತಿಯ 'ಹೊಸಪೇಟೆ-ವಾಸ್ಕೊ ಹಾಗೂ ಖಾನಾಪುರ-ಮೀರಜ್' ರೈಲ್ವೆ ಮಾರ್ಗದಲ್ಲಿ ಮೂರು ವರ್ಷಗಳಲ್ಲಿ 21 ಕಾಡೆಮ್ಮೆಗಳು ಜೀವ ಕಳೆದುಕೊಂಡಿವೆ. ಪ್ರಸಕ್ತ ವರ್ಷ ಜನವರಿಯಿಂದ ಜುಲೈವರೆಗೂ 13 ಕಾಡುಕೋಣಗಳು ಸಾವನ್ನಪ್ಪಿದ್ದು ಪರಿಸರ ಪ್ರಿಯರಲ್ಲಿ ಆತಂಕ ಹೆಚ್ಚಿದೆ.

ಅಳ್ನಾವರ (ಧಾರವಾಡ ಜಿಲ್ಲೆ), ಲೋಂಡಾ-ಖಾನಾಪುರ (ಬೆಳಗಾವಿ ಜಿಲ್ಲೆ) ಹಾಗೂ ತಿನಾಯ್‌ಘಾಟ್–ಕ್ಯಾಸಲ್‌ರಾಕ್ (ಉತ್ತರ ಕನ್ನಡ ಜಿಲ್ಲೆ) ದಟ್ಟ ಅರಣ್ಯವಿರುವ 85 ಕಿ.ಮೀ. ರೈಲ್ವೆ ಮಾರ್ಗದಲ್ಲಿ 2014 ರಿಂದ 2021 ರವರೆಗೂ ಒಟ್ಟು 60 ವನ್ಯಜೀವಿಗಳು ಮೃತಪಪಟ್ಟಿವೆ. ಅವುಗಳಲ್ಲಿ 49 ಕಾಡುಕೋಣಗಳು ಸತ್ತಿವೆ.

ರೈಲ್ವೆ ಮಾರ್ಗದಲ್ಲಿ ಸಿಲುಕಿ ವನ್ಯಪ್ರಾಣಿಗಳು ಜೀವ ಕಳೆದುಕೊಳ್ಳುವ ಘಟನೆಗಳು ಹೆಚ್ಚುತ್ತಿದ್ದು, ಇದಕ್ಕೆ ಕಾರಣವೇನು ಎಂಬುದರ ಬಗ್ಗೆ ಅರಣ್ಯಾಧಿಕಾರಿಗಳು ವೈಜ್ಞಾನಿಕ ಅಧ್ಯಯನ ನಡೆಸಿಲ್ಲ. ರೈಲ್ವೆ ಮಾರ್ಗವು ದ್ವಿಪಥ (ಡಬ್ಲಿಂಗ್) ಆಗಿದ್ದರಿಂದ ವನ್ಯಜೀವಿಗಳು ಅದನ್ನು ಸಮರ್ಪಕವಾಗಿ ದಾಟುವುದು ಸಾಧ್ಯ ಆಗದಿರುವುದು ಇದಕ್ಕೆ ಕಾರಣವಾಗಿರಬಹುದು ಎಂದು ಅಂದಾಜಿಸಲಾಗಿದೆ. ಅರಣ್ಯದಲ್ಲಿ ಬೇಸಿಗೆ ಕಾಲದ ನೀರಿನ ಕೊರತೆ ಮತ್ತು ರೈಲ್ವೆ ಮಾರ್ಗದಲ್ಲಿ ಪ್ರಯಾಣಿಕರು ಎಸೆಯುವ ಆಹಾರ ಪದಾರ್ಥಗಳನ್ನು ತಿನ್ನಲು ಬರುವ ವನ್ಯಜೀವಿಗಳ ಪ್ರಾಣಕ್ಕೆ ಎರವಾಗುತ್ತಿರಬಹುದು.

'ಅರಣ್ಯ ಮಾರ್ಗದಲ್ಲಿ ರೈಲುಗಳು ಅತಿ ವೇಗವಾಗಿ ಸಂಚರಿಸುತ್ತಿರುವುದು ವನ್ಯಜೀವಿಗಳು ಪ್ರಾಣ ಕಳೆದುಕೊಳ್ಳುವುದಕ್ಕೆ ಮುಖ್ಯವಾದ ಕಾರಣ' ಎಂದು ಅರಣ್ಯ ಅಧಿಕಾರಿಗಳು ಮತ್ತು ಪರಿಸರ ಪ್ರಿಯರು ಹೇಳುತ್ತಾರೆ.

'ಅರಣ್ಯದಲ್ಲಿ ಹಾಗೂ ಗುಡ್ಡಗಳಿರುವ ಕಡೆ ರೈಲಿನ ವೇಗ ನಿಯಂತ್ರಣ ನಿಯಮಗಳನ್ನು ಪಾಲನೆ ಮಾಡುವಂತೆ ರೈಲ್ವೆ ಎಂಜಿನ್ ಚಾಲಕರಿಗೆ ಸೂಚಿಸುವಂತೆ ರೈಲ್ವೆ ಅಧಿಕಾರಿಗಳಿಗೆ ನಿಯೋಗದ ಮೂಲಕ ಅನೇಕ ಬಾರಿ ಮನವಿ ಸಲ್ಲಿಸಲಾಗಿದೆ. ಈ ರೈಲ್ವೆ ಮಾರ್ಗದಲ್ಲಿ ಪ್ರಾಣಿಗಳು ಸುಲಭವಾಗಿ ದಾಟುವುದಕ್ಕೆ ಕೆಳಸೇತುವೆ ಗಳು ಅಥವಾ ಸುರಕ್ಷಾ ಬೇಲಿಗಳನ್ನು ಮಾಡದ ಕಾರಣ ಅವಘಡಗಳು ಘಟಿಸುತ್ತಿವೆ' ಎಂದು ಹಿರಿಯ ಅರಣ್ಯಾಧಿಕಾರಿಯೊಬ್ಬರು ತಿಳಿಸಿದರು.

'ಲೋಂಡಾ–ಕ್ಯಾಸಲ್‌ರಾಕ್‌ನಿಂದ ವಾಸ್ಕೊವರೆಗೂ ರೈಲ್ವೆ ಮಾರ್ಗ ದ್ವಿಪಥ ಕಾಮಗಾರಿ ಈ ವರ್ಷ ಪೂರ್ಣವಾದರೆ ರೈಲುಗಳ ಸಂಖ್ಯೆಯೂ ಹೆಚ್ಚಳವಾಗಿ ಇನ್ನೂ ಅಧಿಕ ಪ್ರಮಾಣದಲ್ಲಿ ವನ್ಯಜೀವಿಗಳು ಆಪತ್ತಿಗೆ ಸಿಲುಕಲಿವೆ' ಎಂದು ವನ್ಯಜೀವಿ ಕಾರ್ಯಕರ್ತರು ಮತ್ತು ಅರಣ್ಯ ಇಲಾಖೆ ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಸದ್ಯ ಲೋಂಡಾ ಮಾರ್ಗದಲ್ಲಿ ಪ್ರತಿದಿನ 12 ಪ್ರಯಾಣಿಕರ ರೈಲುಗಳು ಸಂಚರಿಸುತ್ತಿವೆ. ಆದರೆ ಸರಕು ಸಾಗಿಸುವ ರೈಲುಗಳು ಹಾಗೂ ವಿಶೇಷ ರೈಲುಗಳು ಹೆಚ್ಚಿನ ಸಂಖ್ಯೆಯಲ್ಲಿ ಸಂಚರಿಸುತ್ತಿವೆ.

ವನ್ಯಜೀವಿ ಕಾರ್ಯಕರ್ತ ಗಿರಿಧರ್ ಕುಲಕರ್ಣಿ ಅವರು ಹೈಕೋರ್ಟ್‌ಗೆ ರಿಟ್ ಅರ್ಜಿಯೊಂದನ್ನು ಸಲ್ಲಿಸಿದ್ದಾರೆ. 'ಲೋಂಡಾ -ತಿನಾಯ್‌ಘಾಟ್–ಕ್ಯಾಸಲ್‌ರಾಕ್–ವಾಸ್ಕೊ ರೈಲು ಮಾರ್ಗವು ದಟ್ಟ ಅರಣ್ಯದೊಳಗಿದೆ. ಮಹಾರಾಷ್ಟ್ರ, ಕರ್ನಾಟಕ ಮತ್ತು ಗೋವಾ ರಾಜ್ಯಗಳನ್ನು ಸಂಪರ್ಕಿಸುವ ಈ ಮಾರ್ಗವು 'ಹುಲಿ ವಲಯ' (ಟೈಗರ್ ಕಾರಿಡಾರ್)ವಾಗಿ ಪ್ರಮುಖ್ಯತೆ ಪಡೆದಿದೆ. ಸೂಕ್ಷ್ಮ ಪರಿಸರದಲ್ಲಿ ವನ್ಯಜೀವಿಗಳು ಸುರಕ್ಷಿತವಾಗಿ ಸಂಚರಿಸುವುದು ಮುಖ್ಯವಾಗಿದೆ. ಈ ಮಾರ್ಗದ ವನ್ಯಜೀವಿಗಳಿಗೆ ಉಂಟಾಗುವ ಒತ್ತಡ ನಿವಾರಣೆಗೆ ಪರ್ಯಾಯ ಮಾರ್ಗವೊಂದನ್ನು ಅಭಿವೃದ್ಧಿ ಮಾಡುವುದು ಅಗತ್ಯವಿದೆ' ಎಂದು ಅರ್ಜಿಯಲ್ಲಿ ತಿಳಿಸಿದ್ದಾರೆ.

'ಅರಣ್ಯ ಪ್ರದೇಶದಲ್ಲಿ ವೇಗ ನಿಯಂತ್ರಣ ನಿಯಮಗಳು ಅನುಷ್ಠಾನದಲ್ಲಿವೆ. ಧಾರವಾಡ ಮತ್ತು ಕ್ಯಾಸಲ್‌ರಾಕ್ ಮಧ್ಯೆ ರೈಲ್ವೆ ದ್ವಿಪಥ ಕಾಮಗಾರಿ ಮುಗಿದಿದ್ದು, ಕುಲೇಂ ಮಾರ್ಗದಲ್ಲಿ ಪ್ರಗತಿಯಲ್ಲಿದೆ. ಅರಣ್ಯ ಮಾರ್ಗದಲ್ಲಿ ಅವಘಡ ತಪ್ಪಿಸಲು ರೈಲ್ವೆ ಇಲಾಖೆಯು ತಾತ್ಕಾಲಿಕ ಮತ್ತು ಶಾಶ್ವತ ವೇಗ ನಿಯಂತ್ರಣ ನಿಯಮಗಳನ್ನು ಪಾಲನೆ ಮಾಡುತ್ತಿದೆ' ಎಂದು ನೈರುತ್ಯ ರೈಲ್ವೆ ವಲಯದ ಮುಖ್ಯ ಸಾರ್ವಜನಿಕ ಅಧಿಕಾರಿ ಮಂಜುನಾಥ ಕನಮಡಿ 'ಪ್ರಜಾವಾಣಿ'ಗೆ ತಿಳಿಸಿದರು.



ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ನಡೆದ 'ಲಕ್ಷ್ಯ 2ಕೆ24' ಕಾರ್ಯಕ್ರಮದಲ್ಲಿ ರಕ್ಷಣಾ ಅಧಿಕಾರಿಗಳು, ರಕ್ಷಣಾ ಉದ್ಯಮದ ಪ್ರತಿನಿಧಿಗಳು ಭಾಗವಹಿಸಿದ್ದರು

ರಕ್ಷಣಾ ಉದ್ಯಮಿಗಳ ವಿಚಾರ ವಿನಿಮಯ

ಪ್ರಜಾವಾಣಿ ವಾರ್ತೆ

ಲಕ್ಷ್ಯ 2ಕೆ24

ಬೆಂಗಳೂರು: ರಕ್ಷಣಾ ಸಂಸ್ಥೆಗಳು ಮತ್ತು ರಕ್ಷಣಾ ಉದ್ಯಮ ಪ್ರತಿನಿಧಿಗಳ ವಿಚಾರ ವಿನಿಮಯಕ್ಕಾಗಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ 'ಲಕ್ಷ್ಯ 2ಕೆ24' ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ವ್ಯಾಪಾರ, ನಾವೀನ್ಯತೆ ಮತ್ತು ಭವಿಷ್ಯದ ಬಗ್ಗೆ ಚರ್ಚೆಗಳು ನಡೆದವು.

ಜಾಗತಿಕ ಸಾಮರ್ಥ್ಯ ಕೇಂದ್ರಗಳ (ಜಿಸಿಸಿ) ವಿವಿಧ ನಾಯಕರು ಭಾಗವಹಿಸಿದ್ದರು. ರಕ್ಷಣಾ ವಲಯ ಮತ್ತು ಕಾರ್ಪೊರೇಟ್ ವಲಯ ಕೈಜೋಡಿಸಬೇಕಾದ ಅಗತ್ಯದ ಬಗ್ಗೆಯೂ ಚರ್ಚೆಗಳಾದವು. ಜಾಗತಿಕ ಸಾಮರ್ಥ್ಯ ಕೇಂದ್ರಗಳಲ್ಲಿ ಇತ್ತೀಚಿನ ಕಾರ್ಯಚಟುವಟಿಕೆ, ಹೊಸ ಅನ್ವೇಷಣೆಯ ಅಗತ್ಯ, ಅನುಭವಿಗಳ ಪಾತ್ರದ ಬಗ್ಗೆ ವಿಚಾರ ಮಂಡನೆ ಮಾಡಲಾಯಿತು. ವೈವಿಧ್ಯವನ್ನು ಕಾಪಾಡಿಕೊಳ್ಳುವುದು, ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು, ಕಲಿಕೆ ಮತ್ತು ಅಭಿವೃದ್ಧಿ ಒಟ್ಟೊಟ್ಟಿಗೆ ಸಾಗುವುದು, ಸ್ಟಾರ್ಟ್‌ಅಪ್‌ಗೆ ಕೊಡುಗೆಗಳನ್ನು ನೀಡುವುದು ಪರಿವರ್ತಕ ತಂತ್ರಜ್ಞಾನ, ವಿನ್ಯಾಸದ ಚಿಂತನೆ, ಡೇಟಾ ವಿಶ್ಲೇಷಣೆ, ಕೃತಕ ಬುದ್ಧಿಮತ್ತೆಗಳನ್ನು ರಕ್ಷಣಾ ವಲಯದಲ್ಲಿ ಬಳಸಿಕೊಳ್ಳುವುದರ ಬಗ್ಗೆ ವಿಚಾರ ವಿನಿಮಯಗಳಾದವು.

ಕರ್ನಾಟಕವು ಕೃತಕ ಬುದ್ಧಿಮತ್ತೆಯ ಜಾಗತಿಕ ಹಬ್: ಸಚಿವ ಪ್ರಿಯಾಂಕ್ ಖರ್ಗೆ

‘ಸಿಲಿಕಾನ್ ವ್ಯಾಲಿ’ಯ ವ್ಯಾಪ್ತಿ ವಿಸ್ತಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಹಿತಿ ತಂತ್ರಜ್ಞಾನ, ಸೇವಾ ಉದ್ಯಮ ಮತ್ತು ಜಾಗತಿಕ ಸಾಮರ್ಥ್ಯ ಕೇಂದ್ರಗಳನ್ನು (ಜಿಸಿಸಿ) ಬೆಂಗಳೂರಿನ ಆಚೆಗೂ ಸ್ಥಾಪಿಸುವ ಮೂಲಕ ‘ಸಿಲಿಕಾನ್ ವ್ಯಾಲಿ’ಯ ವ್ಯಾಪ್ತಿ ವಿಸ್ತರಿಸಲು ರಾಜ್ಯ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ ಎಂದು ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಜಿಸಿಸಿ ಉತ್ತೇಜನಕ್ಕಾಗಿ ಸಿದ್ಧಪಡಿಸಿದ ‘ಪಕ್ಷಿನೋಟ’ದ ವರದಿಯನ್ನು ಸೋಮವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

ದೇಶದ 3.25 ಲಕ್ಷ ವೃತ್ತಿಪರ ಡಿಜಿಟಲ್ ಪ್ರತಿಭೆಗಳಲ್ಲಿ ಶೇ 25ಕ್ಕಿಂತ ಹೆಚ್ಚಿನವರಿಗೆ ಬೆಂಗಳೂರೇ ನೆಲೆ ಆಗಿದೆ. ಭಾರತದ ಡಿಜಿಟಲ್ ಕ್ರಾಂತಿಯಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ. ಆಧುನಿಕ ಕಾಲಘಟ್ಟದಲ್ಲಿ ಸಾಕಷ್ಟು ಸದ್ದು ಮಾಡುತ್ತಿರುವ ಕೃತಕ ಬುದ್ಧಿಮತ್ತೆಯ (ಎಐ) ಸಂಶೋಧನೆಗಳಿಗೆ ರಾಜ್ಯ ಸರ್ಕಾರ ಒತ್ತು ನೀಡಿದೆ. ಎಐ ನಿರ್ವಹಣೆಯ ಪ್ರತಿಭಾವಂತರ ನಿಧಿಯೇ ಕರ್ನಾಟಕದಲ್ಲಿದೆ. ಹಾಗಾಗಿಯೇ, ಬೆಂಗಳೂರು ಎಐನ ಜಾಗತಿಕ ಹಬ್ ಆಗಿ ರೂಪುಗೊಳ್ಳುತ್ತಿದೆ. ಇಂತಹ ಅವಕಾಶಗಳನ್ನು ಮೈಸೂರು, ಮಂಗಳೂರು, ಹುಬ್ಬಳ್ಳಿ, ಬೆಳಗಾವಿ, ಧಾರವಾಡ, ಕಲಬುರಗಿಯಲ್ಲೂ ವಿಸ್ತರಿಸಲು ಅಗತ್ಯವಾದ ಹಲವು ಅಂಶಗಳನ್ನು ಜಿಸಿಸಿ ವರದಿಯಲ್ಲಿ ಉಲ್ಲೇಖಿಸಲಾಗಿದೆ ಎಂದರು.

ಜಿಸಿಸಿಗಳು ರಾಜ್ಯದ ಅಭಿವೃದ್ಧಿಯ ಹಾದಿಯಲ್ಲಿ ಪ್ರಮುಖ ಚಾಲಕಶಕ್ತಿಯಾಗಿ ಕಾರ್ಯನಿರ್ವಹಿಸುತ್ತಿವೆ. ವಿಶ್ವದ ಅಗ್ರಮಾನ್ಯ ಕಂಪನಿಗಳಿಗೆ ಜಾಗತಿಕ ತಂಡಗಳನ್ನು ನಿರ್ಮಿಸಲು, ನಿರ್ವಹಿಸಲು, ಬೆಳವಣಿಗೆಯ ಪಥ, ಪರಿಣಾಮ ಮತ್ತು ಭವಿಷ್ಯದ ಸಾಮರ್ಥ್ಯವನ್ನು ವಿಶ್ಲೇಷಿಸಲು ‘ಆ್ಯಕ್ಸೆಲ್ ವೆಂಚರ್ಸ್’ ಬೆಂಬಲಿತ ಎಎನ್ಎಸ್ಆರ್ ನೆರವಾಗುತ್ತಿದೆ. ಕೃತಕ ಬುದ್ಧಿಮತ್ತೆ ಚಾಲಿತ ಉತ್ಪನ್ನಗಳು ಮತ್ತು ಸೇವೆಗಳು ಹಾಗೂ 125ಕ್ಕೂ ಹೆಚ್ಚು ಸಾಮರ್ಥ್ಯ ಕೇಂದ್ರಗಳನ್ನು ಸ್ಥಾಪಿಸಲು ಹಾಗೂ ₹16,714 ಕೋಟಿ ಹೂಡಿಕೆಯೊಂದಿಗೆ 1.25 ಲಕ್ಷ ಉದ್ಯಮ ಪ್ರತಿಭೆಗಳನ್ನು ಒಗ್ಗೂಡಿಸಲು ಸಹಾಯ ಮಾಡಿದೆ ಎಂದರು.

ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಒಳನೋಟಗಳು, ಇದುವರೆಗಿನ ಸಾಧನೆಗಳ ಸ್ಪಷ್ಟ ಮತ್ತು ಪ್ರಬುದ್ಧ ಮಾಹಿತಿಯನ್ನು ಜಿಸಿಸಿ ಪಕ್ಷಿನೋಟದ ವರದಿ ಒಳಗೊಂಡಿದೆ. ಭವಿಷ್ಯದಲ್ಲಿ ಉದ್ಯಮಕ್ಕೆ ಪ್ರಯೋಜನಕಾರಿಯಾಗುವಂತೆ ಯೋಜನೆಗಳನ್ನು ರೂಪಿಸಲು ವರದಿಯ ಅಂಶಗಳು ಸಹಕಾರಿಯಾಗಿವೆ. ರಾಜ್ಯ ಸರ್ಕಾರ ಈಗಾಗಲೇ ಹೊಸ ಪ್ರೋತ್ಸಾಹಕಗಳು, ನಿಯಮ ಮತ್ತು ನೀತಿಗಳನ್ನು ಜಾರಿಗೆ ತಂದಿದೆ. ಬೆಂಗಳೂರಿನಿಂದ ಹೊರಗೆ ಈಗಾಗಲೇ 15 ಜಿಸಿಸಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಜಿಸಿಸಿ ಕೇಂದ್ರಗಳು ರಾಜ್ಯದ ಡಿಜಿಟಲ್ ಸಾಮರ್ಥ್ಯಗಳನ್ನು ಹೆಚ್ಚಿಸಲು ಬಯಸುವ ಹೊಸ ಉದ್ಯಮಗಳನ್ನು ಆಕರ್ಷಿಸಲು ಸಹಾಯ ಮಾಡುತ್ತಿವೆ ಎಂದರು.

ವರದಿಯ ಪ್ರಮುಖ ಅಂಶಗಳು

- ಫೋರ್ಬ್ಸ್ ಗ್ಲೋಬಲ್‌ನ 2 ಸಾವಿರ ಕಂಪನಿಗಳಲ್ಲಿ ಶೇ 60ರಷ್ಟು ಭಾರತದಲ್ಲೇ ಜಾಗತಿಕ ಸಾಮರ್ಥ್ಯ ಕೇಂದ್ರಗಳನ್ನು ಹೊಂದಿವೆ
- 2030ರ ವೇಳೆಗೆ ಕರ್ನಾಟಕ 330 ಫೋರ್ಬ್ಸ್‌ನ 2 ಸಾವಿರ ಉದ್ಯಮಗಳಿಗೆ ಆತಿಥ್ಯ ವಹಿಸಲಿದೆ
- ಭಾರತದ ಜಿಸಿಸಿ ಪ್ರತಿಭೆಗಳೇ ಜಾಗತಿಕ ಮಾರುಕಟ್ಟೆಯನ್ನು ಮುನ್ನಡೆಸುತ್ತಿವೆ. ಡಿಜಿಟಲ್ ಉದ್ಯಮಕ್ಕೆ ಕರ್ನಾಟಕ ಪ್ರಮುಖ ಆಕರ್ಷಣೆಯಾಗಿದೆ
- ಕರ್ನಾಟಕ 26 ಸಾವಿರಕ್ಕೂ ಹೆಚ್ಚು ಸಕ್ರಿಯ ಸ್ಟಾರ್ಟ್‌ಅಪ್‌ಗಳ ನೆಲೆಯಾಗಿದೆ, ಅವುಗಳಲ್ಲಿ ಶೇ 50ರಷ್ಟು ಮಾಹಿತಿ ತಂತ್ರಜ್ಞಾನ ಆಧಾರಿತವಾಗಿವೆ
- ಕೃತಕ ಬುದ್ಧಿಮತ್ತೆ ಪ್ರತಿಭೆಗಳಿಗೆ ವಿಶ್ವದ 2ನೇ ಅತಿದೊಡ್ಡ ಕೇಂದ್ರ ಕರ್ನಾಟಕ

ರಾಜ್ಯದ ಸಾಮರ್ಥ್ಯ ಕೇಂದ್ರಗಳು ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಸಕ್ರಿಯಗೊಳಿಸಲು ಹೊಸ ಸ್ಟಾರ್ಟ್ ಅಪ್‌ಗಳೊಂದಿಗೆ ಸಹಕರಿಸಲಿವೆ. ತ್ವರಿತ ಬೆಳವಣಿಗೆಯ ಅಭಿವೃದ್ಧಿಗೆ ನೆರವಾಗಲಿವೆ

ಪ್ರಶಾಂತ್ ಪ್ರಕಾಶ್, ಅಧ್ಯಕ್ಷ, ಕರ್ನಾಟಕ ಸ್ಟಾರ್ಟ್‌ಅಪ್ ಮಿಷನ್ ಗ್ರೂಪ್

ಬೆಂಗಳೂರು ಜಿಸಿಸಿಗಳಿಗೆ ಪ್ರಮುಖ ಕೇಂದ್ರ. ಇಂತಹ ಕೇಂದ್ರಗಳು ರಾಜಧಾನಿಯ ಹೊರಗಿನ ಪ್ರದೇಶಗಳಿಗೂ ವಿಸ್ತರಿಸುತ್ತಿರುವುದು ಭವಿಷ್ಯದಲ್ಲಿ ಅಪಾರ ಅವಕಾಶಗಳನ್ನು ಪಡೆಯಲು ನಾಂದಿಯಾಗಿದೆ

ಬಿ.ವಿ. ನಾಯ್ದು, ಅಧ್ಯಕ್ಷ, ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್



ಎಂಜಿನಿಯರಿಂಗ್ ಕಾಲೇಜುಗಳೂ ಸೇರಿದಂತೆ ಉನ್ನತ ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಕಲಿಕೆ ಉತ್ತೇಜಿಸಲು, ಬೋಧಕರಿಗೆ ತರಬೇತಿ ನೀಡಲು ಪರಿಣತರ ಸಮಿತಿ ರಚಿಸಲಾಗಿದೆ

ಪ್ರಿಯಾಂಕ್ ಖರ್ಗೆ, ಐಟಿ–ಬಿಟಿ ಸಚಿವ

ಸುಧಾ ಓದಿರಿ...

ಭೂಮಾಪಕರ ನೇಮಕಾತಿ ಕೃಷ್ಣಬೈರೇಗೌಡ

ಬೆಂಗಳೂರು: ಭೂಮಾಪನ ಇಲಾಖೆಯಲ್ಲಿ ಖಾಲಿ ಇರುವ 750 ಭೂಮಾಪಕ ಹುದ್ದೆಗಳ ನೇಮಕ ಪ್ರಕ್ರಿಯೆಗೆ ಆದಷ್ಟು ಬೇಗನೆ ಚಾಲನೆ ನೀಡುವಂತೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಮನವಿ ಮಾಡುವುದಾಗಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ವಿಧಾನಸಭೆಯಲ್ಲಿ ಸೋಮವಾರ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಐಹೊಳೆ ದುರ್ಯೋಧನ ಮಹಾಲಿಂಗಪ್ಪ ಅವರ ಪ್ರಶ್ನೆಗೆ ಉತ್ತರಿಸಿ ಈ ವಿಷಯ ತಿಳಿಸಿದರು.

ಈ ಹುದ್ದೆಗಳ ಭರ್ತಿಗೆ ಈಗಾಗಲೇ ಕೆಪಿಎಸ್‌ಸಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. 4 ರಿಂದ 6 ತಿಂಗಳ ಒಳಗೆ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲು ಕೋರಿಕೆ ಸಲ್ಲಿಸುತ್ತೇವೆ. 750 ಹುದ್ದೆಗಳಿಗೆ 77,241 ಅರ್ಜಿಗಳು ಬಂದಿವೆ. ಸಂದರ್ಶನ ಇಲ್ಲದೇ ನೇಮಕ ಮಾಡಿಕೊಳ್ಳಲಾಗುವುದು. ಅಲ್ಲದೇ, ಹೊಸ ಹುದ್ದೆಗಳನ್ನು ಸೃಜಿಸುವ ಸಂಬಂಧ ಚರ್ಚೆ ನಡೆದಿದೆ ಎಂದರು.

ಸರ್ವೆಯನ್ನು ಚುರುಕುಗೊಳಿಸಲು ಜಿಪಿಎಸ್ ಆಧಾರಿತ ರೋವರ್ ಬಳಸಲಾಗುವುದು. ಪ್ರತಿ ತಾಲ್ಲೂಕಿಗೂ ತಲಾ ಒಂದು ರೋವರ್ ಒದಗಿಸಲಾಗುವುದು. ಇದಕ್ಕಾಗಿ ಟೆಂಡರ್ ಕರೆಯಲಾಗಿದೆ ಎಂದು ಹೇಳಿದರು.

435 ಡೆಂಗಿ ಪ್ರಕರಣ ದೃಢ: 1 ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸೋಮವಾರ 435 ಡೆಂಗಿ ಪ್ರಕರಣಗಳು ದೃಢಪಟ್ಟಿದ್ದು, ಒಬ್ಬರು ಮೃತಪಟ್ಟಿದ್ದಾರೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಒಬ್ಬರು ಮೃತಪಟ್ಟಿದ್ದು, ರಾಜ್ಯದಲ್ಲಿ ಈವರೆಗೆ ಡೆಂಗಿ ಪೀಡಿತರಲ್ಲಿ ಮೃತಪಟ್ಟವರ ಸಂಖ್ಯೆ ಎಂಟಕ್ಕೇರಿದೆ.

ಡೆಂಗಿ ಪತ್ತೆ ಸಂಬಂಧ 24 ಗಂಟೆಗಳಲ್ಲಿ 4,989 ಪರೀಕ್ಷೆಗಳನ್ನು ನಡೆಸಲಾಗಿತ್ತು. ಹೊಸದಾಗಿ ಡೆಂಗಿ ಪೀಡಿತರಾದವರಲ್ಲಿ ಒಂದು ವರ್ಷದೊಳಗಿನ ಐವರು ಮಕ್ಕಳು, 18 ವರ್ಷದೊಳಗಿನ 98 ಮಂದಿ ಹಾಗೂ 18 ವರ್ಷ ದಾಟಿದ 332 ಮಂದಿ ಸೇರಿದ್ದಾರೆ.

ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ 334 ಡೆಂಗಿ ರೋಗಿಗಳು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಈ ವರ್ಷ ವರದಿಯಾದ ಒಟ್ಟು ಡೆಂಗಿ ಪ್ರಕರಣಗಳ ಸಂಖ್ಯೆ 9,962ಕ್ಕೆ ಏರಿಕೆಯಾಗಿದೆ.

ರಾಜ್ಯದ 435 ಪ್ರಕರಣಗಳಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿಯೇ 363 ಪ್ರಕರಣಗಳು ದೃಢಪಟ್ಟಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು ಪ್ರಕರಣಗಳ ಸಂಖ್ಯೆ 3,487ಕ್ಕೆ ತಲುಪಿದೆ. ಡೆಂಗಿ ಪೀಡಿತರಲ್ಲಿ ಸದ್ಯ 130 ಮಂದಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.



ಆನೇಕಲ್ ತಾಲ್ಲೂಕಿನ ಅಲಯನ್ಸ್ ಯೂನಿವರ್ಸಿಟಿಯಲ್ಲಿ ನಡೆದ ‘ಅಂತರರಾಷ್ಟ್ರೀಯ ಶಾಲಾ ನಾಯಕರ ಶೃಂಗಸಭೆ’ಯನ್ನು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಐಶ್ವರ್ಯ ಡಿ.ಕೆ. ಹೆಗ್ಡೆ ಉದ್ಘಾಟಿಸಿದರು. ವಿಶ್ವವಿದ್ಯಾಲಯದ ಸಹಕುಲಪತಿ ರೇ ಟೆಟಸ್, ರಿಜಿಸ್ಟ್ರಾರ್ ಜನರಲ್ ಸುರೇಖಾ ಶೆಟ್ಟಿ, ಸಹಕುಲಪತಿ ಅಭಯ್ ಚೆಬ್ಬಿ, ರಿಜಿಸ್ಟ್ರಾರ್ ವಿಶ್ವನಾಥ್ ಮಠ ಎಂ. ಭಾಗವಹಿಸಿದ್ದರು

ನಾಗೇಂದ್ರ ಆಕ್ಷೇಪಣಾ ಅರ್ಜಿ: ವಿಚಾರಣೆ ಇಂದು

ಪ್ರಜಾವಾಣಿ ವಾರ್ತೆ



ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಬಹುಕೋಟಿ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಮಾಜಿ ಸಚಿವ ಬಿ.ನಾಗೇಂದ್ರ ಅವರು ಜಾರಿ ನಿರ್ದೇಶನಾಲಯದ (ಇ.ಡಿ) ನಡೆಯನ್ನು ಪ್ರಶ್ನಿಸಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಆಕ್ಷೇಪಣಾ ಅರ್ಜಿ ಸಲ್ಲಿಸಿದ್ದಾರೆ.

‘ನಮ್ಮ ವಕೀಲರ ಜೊತೆ ಖಾಸಗಿಯಾಗಿ ಮಾತನಾಡಲು ಇ.ಡಿ ಅಧಿಕಾರಿಗಳು ಅವಕಾಶ ನೀಡುತ್ತಿಲ್ಲ. ಆದ್ದರಿಂದ, ವಕೀಲರ ಭೇಟಿ ವೇಳೆ ಖಾಸಗಿಯಾಗಿ ಮಾತನಾಡಲು ಅನುವು ಮಾಡಿಕೊಡುವಂತೆ ನಿರ್ದೇಶಿಸಬೇಕು’ ಎಂದು ನಾಗೇಂದ್ರ ಅರ್ಜಿಯಲ್ಲಿ ಕೋರಿದ್ದಾರೆ.

ನಾಗೇಂದ್ರ ಪರ ವಕೀಲ ಶಾಮ್ ಸುಂದರ್ ಅವರು ಸೋಮವಾರ ಈ ಅರ್ಜಿ ಸಲ್ಲಿಸಿದ್ದು, ‘ಇ.ಡಿ ಅಧಿಕಾರಿಗಳು ತಮಗೆ ಬೇಕಾದಂತೆ ಹೇಳಿಕೆ ನೀಡುವಂತೆ ಹಾಗೂ ಬೇರೆ ಬೇರೆ ಹೆಸರುಗಳನ್ನು ಹೇಳುವಂತೆ ಒತ್ತಡ ಹೇರುತ್ತಿದ್ದಾರೆ. ಹೀಗಾಗಿ, ಇ.ಡಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕು’ ಎಂದು ನ್ಯಾಯಾಲಯಕ್ಕೆ ಮನವಿ ಮಾಡಿದರು.

‘ನಾಗೇಂದ್ರ ಅವರಿಗೆ ಹೃದಯ ಸಂಬಂಧಿ ಸಮಸ್ಯೆ ಇದೆ. ಆದರೆ, ಚರ್ಮತಜ್ಞರಿಂದ ಚಿಕಿತ್ಸೆ ಕೊಡಲಾಗುತ್ತಿದ್ದು, ಅವರಿಗೆ ವೈದ್ಯಕೀಯ ನೆರವಿನ ಅಗತ್ಯವಿದೆ’ ಎಂದು ವಿವರಿಸಿದರು.

ವಾದ ಆಲಿಸಿದ ನ್ಯಾಯಾಲಯ ವಿಚಾರಣೆಯನ್ನು ಮಂಗಳವಾರಕ್ಕೆ (ಜುಲೈ 16) ಮುಂದೂಡಿದೆ.

ಸರ್ಕಾರಿ ಪಿಯು ಕಾಲೇಜುಗಳ ವಿದ್ಯಾರ್ಥಿಗಳಿಗೆ ನೀಟ್ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಲಿಯುತ್ತಿರುವ ಅಂದಾಜು 25 ಸಾವಿರ ವಿದ್ಯಾರ್ಥಿಗಳಿಗೆ ಉಚಿತವಾಗಿ ನೀಟ್, ಜೆಇಇ, ಸಿಇಟಿ ತರಬೇತಿ ಯೋಜನೆಯನ್ನು ₹12.50 ಕೋಟಿಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ರಾಜ್ಯ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಸಚಿವ ಸಂಪುಟ ಸಭೆ ಸೋಮವಾರ ನಡೆಯಿತು. ಸಭೆಯಲ್ಲಿ ಅನುಮೋದನೆಗೊಂಡ ಇತರ ವಿಷಯಗಳು

- ಹತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಡಿಜಿಟಲ್ ಮಮೊಗ್ರಫಿ, ನಾಲ್ಕು ಆಸ್ಪತ್ರೆಗಳಲ್ಲಿ ಕೊಲ್ಪೋಸ್ಕೋಪಿ ಉಪಕರಣಗಳನ್ನು ₹10 ಕೋಟಿಗಳ ಅಂದಾಜು ಮೊತ್ತದಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ
- ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ನಂದಗುಡಿ ಹೋಬಳಿ, ಗುಡ್ಡದ ಚನ್ನೇನಹಳ್ಳಿ ಗ್ರಾಮಗಳ ಹಾಗೂ ಕೋಲಾರ ಜಿಲ್ಲೆಯ ಕೋಲಾರ ತಾಲ್ಲೂಕು, ನರಸಪುರ ಹೋಬಳಿ, ಚಕ್ರಸಹಳ್ಳಿ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿ ಒಟ್ಟು 111 ಎಕರೆ 17 ಗುಂಟೆ ಜಮೀನಿನಲ್ಲಿ ಅನುಪಾತದ ಪಾಲುದಾರಿಕೆಯಡಿಯಲ್ಲಿ ಕರ್ನಾಟಕ ಗೃಹ ಮಂಡಳಿಯು ವಸತಿ ಯೋಜನೆಯನ್ನು (ಬಿಎಂಆರ್‌ಡಿಎ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ಶೇ 50:50 ಹಾಗೂ ಉಳಿದ ಪ್ರದೇಶಗಳಲ್ಲಿ ಶೇ 60:40) ₹282.16 ಕೋಟಿ ಅಂದಾಜು ಮೊತ್ತದಲ್ಲಿ ಅನುಷ್ಠಾನಗೊಳಿಸಲು ಒಪ್ಪಿಗೆ.
- ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ತೈಲಗೆರೆ ಗ್ರಾಮದ ಸರ್ವೆ ನಂಬರ್‌ಗಳಲ್ಲಿ ಒಟ್ಟು 27 ಎಕರೆ 2 ಗುಂಟೆ ಜಮೀನುಗಳಲ್ಲಿ ಶೇ 50:50 ಅನುಪಾತದ ಪಾಲುದಾರಿಕೆಯಡಿ ಕರ್ನಾಟಕ ಗೃಹ ಮಂಡಳಿಯು ₹ 56.80 ಅಂದಾಜು ಮೊತ್ತದಲ್ಲಿ ವಸತಿ ಯೋಜನೆ ಅನುಷ್ಠಾನಗೊಳಿಸಲು ಒಪ್ಪಿಗೆ

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ಉಭಯ ಸದನಗಳಲ್ಲಿ ಪ್ರಸ್ತಾಪ: ಆವೇಶದಿಂದ ಚರ್ಚೆ ಆರಂಭಿಸಿದ ಅಶೋಕ

'ಸಿ.ಎಂ ಮೂಗಿನಡಿ ದಲಿತರ ಹಣ ಲೂಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಾಲ್ಮೀಕಿ ಅಭಿವೃದ್ಧಿ ನಿಗಮದ ₹187 ಕೋಟಿ ಲೂಟಿ ಪೂರ್ವಯೋಜಿತ ಸಂಚು. ದಲಿತರ ಹಣವನ್ನು ಚುನಾವಣೆಗಾಗಿ ಗೋಲ್‌ಮಾಲ್ ಮಾಡಿ ಲಪಟಾಯಿಸಲಾಗಿದೆ. ದಲಿತರ ಶಾಪ ನಿಮಗೆ ತಟ್ಟದೇ ಬಿಡದು' ಎಂದು ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ವಿಧಾನಮಂಡಲದ ಉಭಯ ಸದನಗಳಲ್ಲಿ ಸೋಮವಾರ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಅಕ್ರಮ ವರ್ಗಾವಣೆ ಹಗರಣ ಪ್ರಸ್ತಾಪಗೊಂಡಿತು. ವಿಧಾನಸಭೆಯಲ್ಲಿ ನಿಲುವಳಿ ಸೂಚನೆಯನ್ನು ಪ್ರಸ್ತಾಪಕ್ಕೆ ಅವಕಾಶ ನೀಡದೇ ನಿಯಮ 69ರ ಅಡಿ ಚರ್ಚೆಗೆ ಸಭಾಧ್ಯಕ್ಷ ಯು.ಟಿ.ಖಾದರ್ ಅನುಮತಿ ನೀಡಿದರು.

ಆವೇಶ ಭರಿತರಾಗಿಯೇ ಚರ್ಚೆ ಆರಂಭಿಸಿದ ಅಶೋಕ, 'ಈ ರಾಜ್ಯದಲ್ಲಿ ಅತಿ ಹೆಚ್ಚು ಬಜೆಟ್ ಮಂಡಿಸಿದ ಸಿದ್ದರಾಮಯ್ಯ ಅವರ ಮೂಗಿನ ಅಡಿಯೇ, ಅವರ ಇಲಾಖೆ ವ್ಯಾಪ್ತಿಯಲ್ಲೇ ಹಗರಣ ನಡೆದರೂ ಅವರ ಗಮನಕ್ಕೆ ಬಂದಿಲ್ಲ ಎಂದು ಕೈಚೆಲ್ಲಿ ಕುಳಿತಿದ್ದಾರೆ. ಹಗರಣದ ಮೊತ್ತ ಸಣ್ಣದಲ್ಲ. ದಲಿತರ ಚಾಂಪಿಯನ್ ಎಂದು ಹೇಳಿಕೊಳ್ಳುವ ಇವರು ದಲಿತರ ಹಣದ ಲೂಟಿಯ ಕೆಲಸಕ್ಕೆ ಅವಕಾಶ ಕೊಟ್ಟಿದ್ದು ಹೇಗೆ' ಎಂದು ಪ್ರಶ್ನಿಸಿದರು.

ಶಾಂಗ್ರಿ–ಲಾದಲ್ಲೇ ಸಂಚು: 'ಹಗರಣ ನಡೆಸಿ ಅದನ್ನು ಮುಚ್ಚಿ ಹಾಕಲು ಮೊದಲೇ ತಯಾರಿ ಮಾಡಿಕೊಂಡಿದ್ದರು. ಇದಕ್ಕಾಗಿ ನಕಲಿ ಫಲಾನುಭವಿಗಳ ಪಟ್ಟಿಯನ್ನು ತಯಾರಿಸಿಕೊಂಡಿದ್ದರು. ಫಲಾನುಭವಿಗಳಿಗೆ ಯಾವುದಕ್ಕೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ಎಂಬ ಮೊತ್ತವನ್ನೂ ನಮೂದಿಸಿಕೊಂಡಿದ್ದರು. ಹಗರಣ ಬಯಲಿಗೆ ಬರದಿದ್ದರೆ, ಆ ಪಟ್ಟಿಯನ್ನು ಬಿಡುಗಡೆ ಮಾಡಿ ನೆಮ್ಮದಿಯಿಂದ ಇರುತ್ತಿದ್ದರು. ಶಾಂಗ್ರಿ–ಲಾ ಹೋಟೆಲ್‌ನಲ್ಲಿ ಈ ಹಗರಣದ ಸಂಚು ರೂಪಿಸಲಾಗಿತ್ತು. ಕಾಂಗ್ರೆಸ್‌ನ ಬಿ.ಕೆ.ಹರಿಪ್ರಸಾದ್ ಕೂಡ ಈ ಹಗರಣದ ಬಗ್ಗೆ ಮಾತನಾಡಿದ್ದು, ಬಿಜೆಪಿಯವರು ಸುಮ್ಮನಿದ್ದರೂ ನಾನು ಸುಮ್ಮನಿರುವುದಿಲ್ಲ ಎಂದಿದ್ದಾರೆ' ಎಂದು ಹೇಳಿದರು.

ಹಗರಣದಿಂದ ಬಚಾವಾಗುವ ಕುರಿತು ನಿಗಮದ ಅಧಿಕಾರಿಗಳಾದ ಪರಶುರಾಮ್ ಮತ್ತು ಪದ್ಮನಾಭ್ ನಡೆಸಿರುವ ದೂರವಾಣಿ ಸಂಭಾಷಣೆಯ ವಿವರವನ್ನು ಅಶೋಕ ಸದನದಲ್ಲಿ ಓದಿದರು.

ಆರಂಭದಲ್ಲಿ ಪ್ರಶ್ನೋತ್ತರ ಬದಿಗೊತ್ತಿ ನಿಲುವಳಿ ಸೂಚನೆ ಮೇಲೆ ಚರ್ಚೆಗೆ ಅವಕಾಶ ನೀಡಬೇಕು ಎಂದು ಬಿಜೆಪಿ ಸದಸ್ಯರು ಆಗ್ರಹಿಸಿದರು. ಈ ಹಂತದಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳ ಮಧ್ಯೆ ಮಾತಿನ ಸಮರ ನಡೆಯಿತು. ಬಿಜೆಪಿ ಸದಸ್ಯರು ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು.



ವಿಧಾನಸಭೆಯಲ್ಲಿ ಆರ್.ಅಶೋಕ ಮಾತನಾಡಿದರು

'ಈಗ ಬಂದಿಯಾ ಸುಮ್ಮನಿರು'

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ಮೇಲಿನ ಚರ್ಚೆಗೆ ಪಟ್ಟು ಹಿಡಿದ ಸಿ.ಟಿ. ರವಿ ವರ್ತನೆಗೆ ಸಿಟ್ಟಾದ ಸಭಾಪತಿ ಬಸವರಾಜ ಹೊರಟ್ಟಿ, 'ವಿಧಾನ ಪರಿಷತ್‌ಗೆ ನೀನು ಈಗ ಬಂದಿಯಾ ಸುಮ್ಮನಿರು' ಎಂದರು.

ಹೊರಟ್ಟಿ ಮಾತಿಗೆ ಪ್ರತಿಕ್ರಿಯಿಸಿದ ಸಿ.ಟಿ. ರವಿ, '20 ವರ್ಷಗಳಿಂದ ವಿಧಾನ ಸಭೆಯಲ್ಲಿ ಇದ್ದೇನೆ. ವಿಧಾನ ಪರಿಷತ್ತು ಹೊಸದು ಅಷ್ಟೇ' ಎಂದು ಹೇಳಿದರು.

ನಡುವೆ ಬಾಯಿ ಹಾಕಿದ ಜೆಡಿಎಸ್‌ನ ಎಸ್.ಎಲ್. ಭೋಜೇಗೌಡರನ್ನೂ ಗದರಿದ ಹೊರಟ್ಟಿ, 'ಬೇರೆಯವರಿಗೆ ಟೋಪಿ ಹಾಕಿದಂಗೆ ನನಗೆ ಹಾಕಲು ಬರಬೇಡ' ಎಂದರು.

'ಹಣ ಹೋಗಿದ್ದು ಹೇಗೆ?'

'ಸಣ್ಣಪುಟ್ಟ ಆರ್ಥಿಕ ಚಟುವಟಿಕೆಗಳಿಗಾಗಿ ನೀಡಬೇಕಾಗಿದ್ದ ಹಣವನ್ನು ವಂಚಿಸಿ ಬೇನಾಮಿ ಖಾತೆಗಳಿಗೆ ರವಾನಿಸಿ ದುರ್ಬಳಕೆ ಮಾಡಲಾಗಿದೆ. ವೈನ್ ಶಾಪ್‌ಗಳು, ಚಿನ್ನಾಭರಣ ಅಂಗಡಿಗಳ ಮೂಲಕ ಆ ಹಣ ನಗದೀಕರಿಸಿ ಚುನಾವಣೆಗೆ ಬಳಸಲಾಗಿದೆ. ರಾಜ್ಯದಲ್ಲಿ 2017ರಲ್ಲೇ ಎನ್‌ಟಿಟಿ (ನಾನ್ ಟ್ರಝುರಿ ಟ್ರಾನ್ಸಾಕ್ಷನ್) ವ್ಯವಸ್ಥೆ ಜಾರಿಯಲ್ಲಿದೆ. ಯಾವುದೇ ಇಲಾಖೆ, ನಿಗಮ–ಮಂಡಳಿಗಳಿಂದ ಒಂದು ಪೈಸೆ ವರ್ಗಾವಣೆ ಆದರೂ ಎನ್‌ಟಿಟಿ ಮೂಲಕ ಅದು ಹಣಕಾಸು ಇಲಾಖೆಯ ಗಮನಕ್ಕೆ ಬಂದೇ ಬರುತ್ತದೆ. ಆದರೆ, ಹಣಕಾಸು ಇಲಾಖೆಯ ಜವಾಬ್ದಾರಿ ಹೊತ್ತಿರುವ ಮುಖ್ಯಮಂತ್ರಿ ಮತ್ತು ಆ ಇಲಾಖೆಯ ಅಧಿಕಾರಿಗಳಿಗೆ ಹಣ ವರ್ಗಾವಣೆ ಆಗಿದ್ದು ಗೊತ್ತೇ ಇಲ್ಲ ಎಂದರೆ ನಂಬಲು ಸಾಧ್ಯವೇ' ಎಂದು ಅಶೋಕ ಪ್ರಶ್ನಿಸಿದರು.

ಹಗರಣದ ಸತ್ಯ– ಸುಳ್ಳು ಸದನದಲ್ಲೇ ಬಯಲು ಮಾಡುತ್ತೇನೆ: ಸಿದ್ದರಾಮಯ್ಯ

'ವಿರೋಧ ಪಕ್ಷಗಳ ಆರೋಪಗಳು ಎಷ್ಟು ಸತ್ಯ? ಎಷ್ಟು ಸುಳ್ಳು ಎಂಬುದನ್ನು ಈ ಸದನದಲ್ಲೇ ನಾವು ಬಯಲು ಮಾಡುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಅಶೋಕ ಅವರು ಮಾತನಾಡುವಾಗ ಮಧ್ಯಪ್ರವೇಶಿಸಿದ ಮುಖ್ಯಮಂತ್ರಿ, 'ರಾಜಕೀಯ ದುರುದ್ದೇಶದ ಟೀಕೆಗಳಿಗೆ ಹೆದರಿ ಕೂರುವ ಜಾಯಮಾನ ನನ್ನದಲ್ಲ' ಎಂದು ತಿರುಗೇಟು ನೀಡಿದರು.

'ಬಿಜೆಪಿ ಮತ್ತು ಜೆಡಿಎಸ್ ನಾಯಕರೇ, ನಿಮ್ಮ ಪ್ರತಿ ಮಾತಿಗೂ ನನ್ನ ಬಳಿ ಉತ್ತರವಿದೆ. ಇಷ್ಟು ದಿನ ಮಾಧ್ಯಮಗಳ ಎದುರು ಸುಳ್ಳು ಹೇಳುತ್ತಾ, ದೂರದಲ್ಲೆಲ್ಲೋ ನಿಂತು ಗಾಳಿಯಲ್ಲಿ ಗುಂಡು ಹೊಡೆದಂತಲ್ಲ. ಇದು ಸದನ, ಇಲ್ಲಿ ನಿಮ್ಮ ಹಿಟ್ ಆ್ಯಂಡ್ ರನ್ ಗೆ ಅವಕಾಶವಿಲ್ಲ' ಎಂದರು.

ಪರಿಷತ್ತಿನಲ್ಲಿ ವಾಗ್ವಾದ

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ಮೇಲಿನ ಚರ್ಚೆ ವಿಧಾನ ಪರಿಷತ್‌ನಲ್ಲೂ ಸೋಮವಾರ ಆಡಳಿತ–ವಿರೋಧ ಪಕ್ಷದ ಮಧ್ಯೆ ವಾಗ್ವಾದಕ್ಕೆ ನಾಂದಿ ಹಾಡಿತು.

ಶೂನ್ಯವೇಳೆಯ ನಂತರ ಈ ಕುರಿತು ನಿಲುವಳಿ ಸೂಚನೆ ಮಂಡಿಸಲು ಅವಕಾಶ ನೀಡಬೇಕು ಎಂದು ಬಿಜೆಪಿಯ ಸಿ.ಟಿ. ರವಿ ಪಟ್ಟು ಹಿಡಿದರು. ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಗೃಹ ಸಚಿವ ಜಿ. ಪರಮೇಶ್ವರ, ಪ್ರಕರಣದ ವಿಚಾರಣೆಗಾಗಿ ರಾಜ್ಯ ಸರ್ಕಾರ ಈಗಾಗಲೇ ವಿಶೇಷ ತನಿಖಾ ತಂಡ ರಚಿಸಿದೆ. ರಾಜ್ಯ ಸರ್ಕಾರದ ಗಮನಕ್ಕೂ ತಾರದೆ ಜಾರಿ ನಿರ್ದೇಶನಾಲಯ ದಾಳಿ ನಡೆಸಿದೆ. ಸಿಬಿಐ ಮಧ್ಯ ಪ್ರವೇಶಿಸಿದೆ. ಇಂತಹ ಸಮಯದಲ್ಲಿ ಚರ್ಚೆಗೆ ಅವಕಾಶ ನೀಡುವುದು ತನಿಖೆಯ ಮೇಲೆ ಪರಿಣಾಮ ಬೀರುತ್ತದೆ ಎಂದರು.

ವಿರೋಧ ಪಕ್ಷಗಳಾದ ಬಿಜೆಪಿ–ಜೆಡಿಎಸ್ ಸದಸ್ಯರು ಸಭಾಪತಿ ಪೀಠದ ಮುಂದೆ ಬಂದು ಪ್ರತಿಭಟನೆ ನಡೆಸಿದರು. ಸಭಾಪತಿ ಬಸವರಾಜ ಹೊರಟ್ಟಿ ಎರಡು ಬಾರಿ ಸದನವನ್ನು ಮುಂದೂಡಿದ ನಂತರ ಅಡ್ವೋಕೇಟ್ ಜನರಲ್ ಸಲಹೆ ಪಡೆದರು. ಮತ್ತೆ ಸದನ ಆರಂಭವಾದಾಗ ಚರ್ಚೆಗೆ ಅವಕಾಶ ಮಾಡಿಕೊಟ್ಟರು.

ಹಗರಣದ ಸಂಚು ರೂಪುಗೊಂಡ ಬಗೆಯನ್ನು ಸಿ.ಟಿ. ರವಿ ವಿವರಿಸುವಾಗ 'ಲೂಟಿ', 'ಅಹಿಂದ' ಪದ ಬಳಸಿದ್ದಕ್ಕೆ ಯತೀಂದ್ರ ಸಿದ್ದರಾಮಯ್ಯ ಸೇರಿದಂತೆ ಹಲವರು ಆಕ್ಷೇಪ ವ್ಯಕ್ತಪಡಿಸಿದರು. ಇದು ಮಾತಿನ ಚಕಮಕಿಗೆ ದಾರಿ ಮಾಡಿಕೊಟ್ಟಿತು. ಸಚಿವರು, ಕಾಂಗ್ರೆಸ್ ಸದಸ್ಯರು ಎದ್ದು ನಿಂತು ಆಕ್ಷೇಪ ವ್ಯಕ್ತಪಡಿಸಿದರು. ಕೆಲ ಆಕ್ಷೇಪಾರ್ಹ ಮಾತುಗಳನ್ನು ಕಡತದಿಂದ ತೆಗೆಸಿ ಹಾಕಿದ ಸಭಾಪತಿ ಪೀಠದಲ್ಲಿದ್ದ ಉಪ ಸಭಾಪತಿ ಎಂ.ಕೆ. ಪ್ರಾಣೇಶ್, ಕಲಾಪವನ್ನು ಮಂಗಳವಾರಕ್ಕೆ ಮುಂದೂಡಿದರು.

ಅಶೋಕ ಅವರೇ ನಿಮ್ಮನ್ನು ಲೀಡರ್‌ಶಿಪ್‌ನಿಂದ ತೆಗೆಯುತ್ತಾರೆ ಅಂತ ಸುದ್ದಿ ಇತ್ತು. ಇವತ್ತು ಚೆನ್ನಾಗಿ ಮಾತನಾಡಿದ್ದೀರಿ, ನಿಮ್ಮನ್ನು ಮುಂದುವರಿಸುತ್ತಾರೆ ಬಿಡಿ
ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಈ ಬಗ್ಗೆ ಸಿ.ಎಂ, ಡಿಸಿಎಂ ಭಿನ್ನವಾಗಿ ಮಾತನಾಡುತ್ತಿದ್ದಾರೆ. ಸಿಎಂ ಹಗರಣ ನಡೆದಿದೆ ಎಂದರೆ, ಡಿಸಿಎಂ ಏನೂ ಆಗಿಲ್ಲ ಎನ್ನುತ್ತಾರೆ
ಆರ್.ಅಶೋಕ, ವಿರೋಧಪಕ್ಷದ ನಾಯಕ

ಮುಡಾದಲ್ಲಿ ಫಿಫ್ಟಿ ಫಿಫ್ಟಿ ಹಂಚಿಕೆ ಆದ ಮಾದರಿಯಲ್ಲಿ ₹187 ಕೋಟಿಯಲ್ಲಿ ಯಾರ್‍ಯಾರಿಗೆ ಎಷ್ಟು ಹಂಚಿಕೆ ಆಗಿದೆ ಎಂದು ಹೇಳಿ?
ವಿ.ಸುನೀಲ್ ಕುಮಾರ್
ಬಿಜೆಪಿ ಶಾಸಕ

ಹೊಂದಾಣಿಕೆ ಬೇಡ, ಎರಡೂ ಪಕ್ಷಗಳು ಸ್ವಚ್ಛವಾಗಬೇಕು. ಹಗರಣಗಳನ್ನು ಸಿಬಿಐ ತನಿಖೆಗೆ ಕೊಡಿ, ಎಲ್ಲವೂ ಸರಿ ಹೋಗುತ್ತದೆ
ಬಸನಗೌಡ ಪಾಟೀಲ ಯತ್ನಾಳ
ಬಿಜೆಪಿ ಶಾಸಕ

ಸುದ್ದಿ 2 ನಿಮಿಷ


ಆರೋಪಿಗಳ ವಿರುದ್ಧ 'ಪಿಸಿ ಆ್ಯಂಡ್ ಪಿಎನ್‌ಡಿಟಿ' ಪ್ರಕರಣ

ಬೆಂಗಳೂರು: 'ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿದ್ದು, ಪಿಸಿ ಆ್ಯಂಡ್ ಪಿಎನ್‌ಡಿಟಿ ಅಡಿ ಪ್ರಕರಣ ದಾಖಲಿಸಲಾಗುತ್ತಿದೆ. ಉತ್ತಮ ವಕೀಲರನ್ನು ನಿಯೋಜಿಸುವ ಮೂಲಕ ಆರೋಪಿಗಳಿಗೆ ಜಾಮೀನು ಸಿಗದಂತೆ ಮಾಡಲು ಸೂಚಿಸಲಾಗಿದೆ' ಎಂದು ದಿನೇಶ್ ಗುಂಡೂರಾವ್ ತಿಳಿಸಿದರು.

ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಮತ್ತು, ಬಿಜೆಪಿಯ ಸಿ.ಟಿ. ರವಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಹೆಣ್ಣು ಭ್ರೂಣ ಹತ್ಯೆ ನಿಯಂತ್ರಣಕ್ಕೆ ಎಲ್ಲ ಕ್ರಮಗಳನ್ನು ವಹಿಸಿದ್ದೇವೆ. ಸಮಗ್ರ ಮಾಹಿತಿಗಳನ್ನು ಸಂಗ್ರಹಿಸಿ ಆರೋಪಿಗಳನ್ನು ಬಂಧಿಸಬೇಕಿದ್ದು, ಆ ಕೆಲಸವನ್ನೂ ಮಾಡುತ್ತಿದ್ದೇವೆ' ಎಂದರು.

'ಇಲಾಖೆಯ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇಂಥ ಪ್ರಕರಣಗಳಲ್ಲಿ ಶಿಕ್ಷೆ ಪ್ರಮಾಣ ಹೆಚ್ಚಿಸಿ, ಭಯ ಹುಟ್ಟಿಸಿ ಮಟ್ಟ ಹಾಕಬೇಕು' ಎಂದು ವೆಂಕಟೇಶ್ ಸಲಹೆ ನೀಡಿದರು.

'ಜಿಲ್ಲಾ ವೈದ್ಯಾಧಿಕಾರಿಗಳ ಮೂಲಕ ಎಫ್‌ಐಆರ್ ದಾಖಲಿಸಲಾಗುತ್ತಿದೆ. ಈಗಾಗಲೇ 23 ಆಸ್ಪತ್ರೆಗಳ ಮೇಲೆ ಪ್ರಕರಣ ದಾಖಲಿಸಿದ್ದೇವೆ. ಮೈಸೂರಿನ ಮಾತಾ ಆಸ್ಪತ್ರೆ ಪರವಾನಗಿ ರದ್ದು ಮಾಡಿದ್ದೇವೆ' ಎಂದು ದಿನೇಶ್ ಹೇಳಿದರು.



ಅಧಿವೇಶನಕ್ಕೆ ಹಾಜರಾದ ದದ್ದಲ್

ಬೆಂಗಳೂರು: ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧನ ಭೀತಿಯಲ್ಲಿ ಎರಡು ದಿನ ತಲೆಮರೆಸಿಕೊಂಡಿದ್ದ ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ, ರಾಯಚೂರು ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಸನಗೌಡ ದದ್ದಲ್ ಸೋಮವಾರ ವಿಧಾನಸಭೆ ಅಧಿವೇಶನದಲ್ಲಿ ಭಾಗಿಯಾದರು.

ವಾಲ್ಮೀಕಿ ನಿಗಮದ ಬ್ಯಾಂಕ್ ಖಾತೆಯಿಂದ ₹94 ಕೋಟಿಯನ್ನು ಅಕ್ರಮವಾಗಿ ವರ್ಗಾವಣೆ ಮಾಡಿರುವ ಹಗರಣಕ್ಕೆ ಸಂಬಂಧಿಸಿದಂತೆ ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ತನಿಖೆ ನಡೆಸುತ್ತಿದೆ. ಬಸನಗೌಡ ಮನೆಯ ಮೇಲೆ ಬುಧವಾರ ದಾಳಿಮಾಡಿದ್ದ ಇ.ಡಿ ಅಧಿಕಾರಿಗಳು, ಎರಡು ದಿನ ಶೋಧ ನಡೆಸಿದ್ದರು. ಎರಡೂ ದಿನ ಶಾಸಕರ ವಿಚಾರಣೆಯನ್ನೂ ನಡೆಸಲಾಗಿತ್ತು.

ಶುಕ್ರವಾರ ಎಸ್‌ಐಟಿ ಅಧಿಕಾರಿಗಳ ಎದುರು ವಿಚಾರಣೆಗೆ ಹಾಜರಾಗಿದ್ದ ಬಸನಗೌಡ, ಆ ದಿನ ಸಂಜೆಯಿಂದ ನಾಪತ್ತೆಯಾಗಿದ್ದರು.

ಮೊಗಸಾಲೆಯಲ್ಲೂ ನವೀಕರಣ ಕಾಮಗಾರಿ: ಸದನದೊಳಗೆ ಆಕರ್ಷಕ ಗಡಿಯಾರ

ವಿಧಾನಸಭೆ ಪಶ್ಚಿಮ ದ್ವಾರಕ್ಕೆ ಹೊಸ ಬಾಗಿಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕರು, ಸಚಿವರು ವಿಧಾನಸಭೆ ಪ್ರವೇಶಿಸಲು ಹೆಚ್ಚಿನ ಪ್ರಮಾಣದಲ್ಲಿ ಬಳಸುವ ಪಶ್ಚಿಮ ದ್ವಾರಕ್ಕೆ ಕುಸುರಿ ಕೆತ್ತನೆಯುಳ್ಳ ಅತ್ಯಾಕರ್ಷಕ ಬೀಟೆ ಬಾಗಿಲು ಅಳವಡಿಸಲಾಗಿದೆ. ಇದರೊಂದಿಗೆ ವಿಧಾನಸಭೆಯ ಪಶ್ಚಿಮ ದ್ವಾರದ ಸೌಂದರ್ಯ ಇಮ್ಮಡಿಯಾಗಿದೆ.

ಈ ಮೊದಲು ಪಶ್ಚಿಮ ದ್ವಾರದಲ್ಲಿ ಕಬ್ಬಿಣದ ಗೇಟ್ ಮಾದರಿಯ ಬಾಗಿಲು ಇತ್ತು. ಅದನ್ನು ತೆರವುಗೊಳಿಸಿ ಬೀಟೆ ಮರದಿಂದ ರೂಪಿಸಿದ ಬಾಗಿಲು ಅಳವಡಿಸಲಾಗಿದೆ. ವಿಧಾನಸಭೆ ಅಧ್ಯಕ್ಷ ಯು.ಟಿ. ಖಾದರ್ ಮತ್ತು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಉಪಸ್ಥಿತಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೂತನ ಪ್ರವೇಶ ದ್ವಾರವನ್ನು ಸೋಮವಾರ ಉದ್ಘಾಟಿಸಿದರು.

₹20 ಲಕ್ಷ ವೆಚ್ಚ: ಬೀಟೆ ಮರದಿಂದ ತಯಾರಿಸಿರುವ ಬಾಗಿಲನ್ನು ಲೋಕೋಪಯೋಗಿ ಇಲಾಖೆಯು ಅರಣ್ಯ ಇಲಾಖೆಯಿಂದ ಖರೀದಿಸಿದೆ. ಮರ ಪೂರೈಕೆ, ಕೆತ್ತನೆ ಕೆಲಸ ಎಲ್ಲವನ್ನೂ ಅರಣ್ಯ ಇಲಾಖೆಯ ವತಿಯಿಂದಲೇ ನಿರ್ವಹಿಸಲಾಗಿದೆ.

'₹20 ಲಕ್ಷ ಪಾವತಿಸಿ ಅರಣ್ಯ ಇಲಾಖೆಯಿಂದ ಬಾಗಿಲನ್ನು ಖರೀದಿಸಲಾಗಿದೆ. ಕೆತ್ತನೆ ಕೆಲಸಗಾರರನ್ನು ಆಯ್ಕೆಮಾಡಿ, ಬಾಗಿಲು ನಿರ್ಮಿಸುವ ಕೆಲಸವನ್ನು ಅರಣ್ಯ ಇಲಾಖೆಯೇ ಮಾಡಿದೆ' ಎಂದು ಲೋಕೋಪಯೋಗಿ ಇಲಾಖೆ ಮೂಲಗಳು ತಿಳಿಸಿವೆ.

ಪಶ್ಚಿಮ ದ್ವಾರದಿಂದ ಆಡಳಿತ ಪಕ್ಷದ ಮೊಗಸಾಲೆ ಮತ್ತು ವಿರೋಧ ಪಕ್ಷದ ಮೊಗಸಾಲೆ ಸಂಪರ್ಕಿಸುವ ಮಾರ್ಗದಲ್ಲಿ ಹೊಸ ನೆಲಹಾಸು ಅಳವಡಿಸಲಾಗಿದೆ. ಅಲ್ಲಿ ತೆರೆದ ಒಳಾಂಗಣ ಇತ್ತು. ₹12.5 ಲಕ್ಷ ವೆಚ್ಚದಲ್ಲಿ ಅದಕ್ಕೆ ಗಾಜಿನ ಹೊದಿಕೆಯನ್ನು ಅಳವಡಿಸಿ ಮುಚ್ಚಲಾಗಿದೆ.

ಗಂಡ ಭೇರುಂಡದಲ್ಲಿ ಗಡಿಯಾರ: ವಿಧಾನಸಭೆಯೊಳಗೆ ಹೊಸ ಗಡಿಯಾರಗಳನ್ನು ಅಳವಡಿಸಲಾಗಿದೆ. ಬೀಟೆ ಮರದಲ್ಲಿ ಗಂಡಭೇರುಂಡ ಲಾಂಛನವನ್ನು ಕೆತ್ತಿ, ಅದರೊಳಗೆ ಗಡಿಯಾರ ಇರಿಸಲಾಗಿದೆ.

ವಿಧಾನಸಭೆಯ ಮೊಗಸಾಲೆ ಮತ್ತು ಒಳಾಂಗಣದಲ್ಲಿ ಬೀಡಿಂಗ್‌ಗಳಿಗೆ ಚಿನ್ನದ ಬಣ್ಣ ಲೇಪನ ಮಾಡಲಾಗಿದೆ. ಶಾಸಕರ ಆಸನಗಳ ಬೀಡಿಂಗ್‌ಗಳಿಗೂ ಚಿನ್ನದ ಬಣ್ಣ ಲೇಪಿಸಲಾಗಿದೆ.

ನವೀಕರಣ ಕಾಮಗಾರಿ ಕೈಗೊಂಡಿರುವ ಸಭಾಧ್ಯಕ್ಷರ ಕ್ರಮವನ್ನು ಶ್ಲಾಘಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ನವೀಕರಣ ಕಾಮಗಾರಿಯ ಮೂಲಕ ವಿಧಾನಸೌಧದ ಸೌಂದರ್ಯ ಹೆಚ್ಚುವಂತೆ ಮಾಡಿದ್ದೀರಿ. ನಿಮಗೆ ಅಭಿನಂದನೆಗಳು' ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿರೋಧ ಪಕ್ಷದ ನಾಯಕ ಆರ್. ಅಶೋಕ ಸೇರಿದಂತೆ ಹಲವರು ಮುಖ್ಯಮಂತ್ರಿಯವರ ಮಾತಿಗೆ ದನಿಗೂಡಿಸಿದರು.



ವಿಧಾನಸೌಧದ ಪಶ್ಚಿಮ ದ್ವಾರದ ನವೀಕೃತ ಬಾಗಿಲನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ವಿಧಾನಸಭೆಯ ಅಧ್ಯಕ್ಷ ಯು. ಟಿ.ಖಾದರ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಇತರರು ಹಾಜರಿದ್ದರು –ಪ್ರಜಾವಾಣಿ ಚಿತ್ರ

ಸಂವಿಧಾನದ ಪೀಠಿಕೆ ಪ್ರದರ್ಶನ

ವಿಧಾನಸಭೆಯ ಪಶ್ಚಿಮ ದ್ವಾರದ ಪಕ್ಕದಲ್ಲೇ ಸಂವಿಧಾನದ ಪೀಠಿಕೆಯ ಪ್ರತಿಯನ್ನು ಪ್ರದರ್ಶಿಸಲಾಗಿದೆ. ಈ ನಿರ್ಧಾರ ಕೈಗೊಂಡಿರುವ ಸಭಾಧ್ಯಕ್ಷರನ್ನು ಮುಖ್ಯಮಂತ್ರಿ ಅಭಿನಂದಿಸಿದರು.

ಹಾಜರಾತಿಗೆ ಎಐ

ವಿಧಾನಸಭೆಯಲ್ಲಿ ಶಾಸಕರ ಹಾಜರಾತಿ ದಾಖಲಿಸಲು ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನವುಳ್ಳ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಮುಂಗಾರು ಅಧಿವೇಶನದ ಮೊದಲ ದಿನವಾದ ಸೋಮವಾರದಿಂದಲೇ ಈ ವ್ಯವಸ್ಥೆ ಜಾರಿಗೆ ಬಂದಿದೆ.

ಪರಿಷ್ಕೃತ ವೇತನ ಆ. 1ಕ್ಕೆ ಜಾರಿ

ಒಂದನೇ ಪುಟದಿಂದ...

ಅಷ್ಟರಲ್ಲೇ ಲೋಕಸಭೆ ಚುನಾವಣೆ ಬಂದಿದ್ದರಿಂದಾಗಿ, ಈ ಕುರಿತು ನಿರ್ಣಯ ಕೈಗೊಂಡಿರಲಿಲ್ಲ.

ಆರಂಭಿಕ ವೃಂದದ ನೌಕರರ ಕನಿಷ್ಠ ಮೂಲ ವೇತನ ತಿಂಗಳಿಗೆ ₹17 ಸಾವಿರ ಇದ್ದು, ಅದನ್ನು ಗರಿಷ್ಠ ₹27 ಸಾವಿರಕ್ಕೆ ಹಾಗೂ ಹಿರಿಯ ಶ್ರೇಣಿ ನೌಕರರ ಆರಂಭಿಕ ಕನಿಷ್ಠ ವೇತನ ಈಗ ₹1,04,600 ಇದ್ದು, ಅದನ್ನು ₹1,67,200ಕ್ಕೆ ಪರಿಷ್ಕರಿಸುವಂತೆ ಆಯೋಗ ಶಿಫಾರಸು ಮಾಡಿತ್ತು. ಪ್ರಸ್ತುತ 1:8.86 ಕನಿಷ್ಠ ಮತ್ತು ಗರಿಷ್ಠ ವೇತನಗಳ ಅನುಪಾತವನ್ನು 1:8.93ಕ್ಕೆ ಹೆಚ್ಚಿಸಲಾಗಿದೆ. ಅನುದಾನಿತ ಶಿಕ್ಷಣ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು, ವಿಶ್ವವಿದ್ಯಾಲಯಗಳ ಬೋಧಕೇತರ ನೌಕರರಿಗೂ ಈ ಶಿಫಾರಸು ಅನ್ವಯವಾಗಲಿದೆ.

ತಿಂಗಳ ಪಿಂಚಣಿಯನ್ನು ಮೂಲ ವೇತನದ ಶೇ 50ರಷ್ಟು, ಕುಟುಂಬ ಪಿಂಚಣಿಯನ್ನು ಶೇ 30ರಷ್ಟು ಮುಂದುವರಿಸಿದೆ. ಪಿಂಚಣಿಯು ಕನಿಷ್ಠ ₹13,500ರಿಂದ ₹1,20,600 ವರೆಗೆ ನಿಗದಿ ಮಾಡಿದೆ. 70–80 ವರ್ಷ ವಯಸ್ಸಿನ ಪಿಂಚಣಿದಾರರಿಗೆ ಮೂಲ ಪಿಂಚಣಿಯು ಹೆಚ್ಚುವರಿ ಶೇ 10ರಷ್ಟು ಹೆಚ್ಚಳ ಆಗಬೇಕು ಎಂದು ಶಿಫಾರಸು ಮಾಡಲಾಗಿದೆ.

ವಿಪಕ್ಷ ನಾಯಕನಿಲ್ಲದೆ ಪರಿಷತ್ ಕಲಾಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ವಿಧಾನ ಮಂಡಲ ಅಧಿವೇಶನ ಸೋಮವಾರ ಆರಂಭಗೊಂಡಿದ್ದು, ವಿರೋಧ ಪಕ್ಷದ ನಾಯಕನಿಲ್ಲದೆ ವಿಧಾನ ಪರಿಷತ್ ಕಲಾಪದಲ್ಲಿ ಬಿಜೆಪಿ ಸದಸ್ಯರು ಭಾಗವಹಿಸಿದರು.

ಭಾನುವಾರ ರಾತ್ರಿ ವೇಳೆಗೆ ಹೈಕಮಾಂಡ್‌ನಿಂದ ವಿರೋಧ ಪಕ್ಷದ ನಾಯಕರ ಹೆಸರು ಪ್ರಕಟ ಆಗಬಹುದೆಂಬ ನಿರೀಕ್ಷೆ ಬಿಜೆಪಿ ನಾಯಕರಲ್ಲಿ ಇತ್ತು. ಆದರೆ, ಬೆಳಿಗ್ಗೆ ಕಲಾಪ ಆರಂಭವಾದರೂ ಯಾವುದೇ ಸಂದೇಶ ಬರಲಿಲ್ಲ. ಹೀಗಾಗಿ, ಯಾರ ನಾಯಕತ್ವದಲ್ಲಿ ಸದನದಲ್ಲಿ ಮುನ್ನಡೆಯಬೇಕು ಎಂಬ ಗೊಂದಲದಲ್ಲೇ ಸದಸ್ಯರು ಕಲಾಪದಲ್ಲಿ ಭಾಗವಹಿಸಿದರು.

ವಿರೋಧ ಪಕ್ಷದ ಪಕ್ಷದ ನಾಯಕರಾಗಿದ್ದ ಕೋಟ ಶ್ರೀನಿವಾಸ ಪೂಜಾರಿ ಅವರು ಲೋಕಸಭೆ ಸದಸ್ಯರಾಗಿ ಆಯ್ಕೆಯಾಗಿ, ಪರಿಷತ್ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರಿಂದ ವಿರೋಧ ಪಕ್ಷದ ನಾಯಕ ಸ್ಥಾನ ತೆರವಾಗಿದೆ.

ಸೋಮವಾರ ಬೆಳಿಗ್ಗೆ ಕಲಾಪ ಆರಂಭವಾಗುತ್ತಿದ್ದಂತೆಯೇ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಹಣ ಅಕ್ರಮ ವರ್ಗಾವಣೆ ಕುರಿತು ಚರ್ಚೆಗೆ ನಿಲುವಳಿ ಸೂಚನೆ ಮಂಡನೆ ವಿಚಾರವನ್ನು ಸಿ.ಟಿ. ರವಿ ಪ್ರಸ್ತಾಪಿಸಿದರು. ಅದೇ ವೇಳೆ ಸಿ.ಟಿ. ರವಿ ಅವರ ಹಿಂಭಾಗದ ಆಸನದಲ್ಲಿದ್ದ ಎನ್. ರವಿಕುಮಾರ್ ಕೂಡಾ ಅದಕ್ಕೆ ದನಿಗೂಡಿಸಿದರು. ನಿಯಮಾವಳಿ ಪ್ರಕಾರ ಪ್ರಶ್ನೋತ್ತರ ಕಲಾಪದ ನಂತರವೇ ವಿಷಯ ಪ್ರಸ್ತಾಪಕ್ಕೆ ಅವಕಾಶ ನೀಡುವುದಾಗಿ ತಿಳಿಸಿ ಸಭಾಪತಿ ಬಸವರಾಜ ಹೊರಟ್ಟಿ ಇಬ್ಬರನ್ನೂ ಕುಳ್ಳಿರಿಸಿದರು.

ಕಲಾಪದ ಮಧ್ಯೆ ವಿರೋಧ ಪಕ್ಷದ ನಾಯಕರು ಯಾವಾಗ ಎದ್ದು ನಿಂತರೂ, ಅವರಿಗೆ ಮಾತನಾಡಲು ಅವಕಾಶ ನೀಡಲಾಗುತ್ತದೆ. ಆದರೆ, ಆ ಸ್ಥಾನ ಖಾಲಿ ಇರುವ ಕಾರಣ ಬಿಜೆಪಿ ಈ ಅವಕಾಶವನ್ನು ತಪ್ಪಿಸಿಕೊಂಡಿದೆ. ವರ್ಷದ ಹಿಂದೆಯೂ ಎರಡು ಅಧಿವೇಶನದಲ್ಲಿ ವಿರೋಧ ಪಕ್ಷದ ನಾಯಕನಿಲ್ಲದೆ ಬಿಜೆಪಿ ಸದಸ್ಯರು ಪರಿಷತ್ ಕಲಾಪದಲ್ಲಿ ಭಾಗವಹಿಸಿದ್ದರು.

ಇಬ್ಬರ ಮಧ್ಯೆ ಪೈಪೋಟಿ: ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ಎನ್. ರವಿಕುಮಾರ್ ಮತ್ತು ಸಿ.ಟಿ. ರವಿ ಹೆಸರು ಮುಂಚೂಣಿಯಲ್ಲಿದೆ. ಹೈಕಮಾಂಡ್ ನಾಯಕರ ಒಲವು ಯಾರ ಕಡೆ ಇದೆ ಎಂಬ ಬಗ್ಗೆ ಸ್ಥಳೀಯ ನಾಯಕರಿಗೆ ಮಾಹಿತಿ ಇಲ್ಲ.

ಜೆಡಿಎಸ್ ಎಲ್‌ಪಿ ನಾಯಕರಾಗಿ ಸುರೇಶ್ ಬಾಬು

ಬೆಂಗಳೂರು: ಚಿಕ್ಕನಾಯಕನಹಳ್ಳಿ ಶಾಸಕ ಸಿ.ಬಿ. ಸುರೇಶ್ ಬಾಬು ಅವರನ್ನು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ.


ಎಚ್.ಡಿ. ಕುಮಾರಸ್ವಾಮಿ ಸಂಸದರಾಗಿ ಆಯ್ಕೆಯಾದ ಬಳಿಕ ಚನ್ನಪಟ್ಟಣ ಕ್ಷೇತ್ರದ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಇದರಿಂದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕನ ಹುದ್ದೆಯೂ ಖಾಲಿಯಾಗಿತ್ತು. ಸುರೇಶ್ ಬಾಬು ಅವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಿರುವುದಾಗಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರೂ ಆಗಿರುವ ಕುಮಾರಸ್ವಾಮಿ ಅವರು ಸಭಾಧ್ಯಕ್ಷ ಯು.ಟಿ. ಖಾದರ್ ಅವರಿಗೆ ಪತ್ರ ಬರೆದಿದ್ದರು.

ಕುಮಾರಸ್ವಾಮಿ ಪತ್ರದ ಕುರಿತು ಪ್ರಕಟಿಸಿದ ಸಭಾಧ್ಯಕ್ಷರು, 'ಸುರೇಶ್ ಬಾಬು ಅವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಿರುವುದನ್ನು ಮಾನ್ಯ ಮಾಡಲಾಗಿದೆ' ಎಂದರು.

ಪರಿಷತ್‌ನಲ್ಲಿ ಭೋಜೇಗೌಡ ನಾಯಕ: ವಿಧಾನ ಪರಿಷತ್‌ನಲ್ಲಿ ಜೆಡಿಎಸ್ ನಾಯಕರನ್ನಾಗಿ ಭೋಜೇಗೌಡ ಅವರನ್ನು ನೇಮಕ ಮಾಡಲಾಗಿದೆ.

'1.73 ಲಕ್ಷ ಬಿಪಿಎಲ್ ಕಾರ್ಡ್ ಶೀಘ್ರ ವಿತರಣೆ'

ಪ್ರಜಾವಾಣಿ ವಾರ್ತೆ



ಕೆ.ಎಚ್. ಮುನಿಯಪ್ಪ

ಬೆಂಗಳೂರು: '1.73 ಲಕ್ಷ ಬಿಪಿಎಲ್ ಕಾರ್ಡ್‌ಗಳನ್ನು ಆದಷ್ಟು ಶೀಘ್ರ ವಿತರಿಸಿ, ಪಡಿತರ ವಿತರಣೆಗೆ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.

ಬಿಜೆಪಿಯ ಪ್ರತಾಪ್‌ಸಿಂಹ ನಾಯಕ್ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಹಿಂದಿನ ಸರ್ಕಾರದ ಅವಧಿ ಪೂರ್ಣಗೊಳ್ಳುವ ಹೊತ್ತಿಗೆ ಬಿಪಿಎಲ್ ಕಾರ್ಡ್‌ಗಳಿಗೆ ಸಲ್ಲಿಕೆಯಾಗಿದ್ದ 2.95 ಲಕ್ಷ ಅರ್ಜಿಗಳು ವಿಲೇವಾರಿಗೆ ಬಾಕಿ ಇದ್ದವು. ಅದರಲ್ಲಿ 2,36,162 ಅರ್ಹರಿದ್ದು, 56,930 ಅರ್ಜಿಗಳು ಬಿಪಿಎಲ್ ವ್ಯಾಪ್ತಿಯಲ್ಲಿ ಇಲ್ಲ. ಅರ್ಹರ ಪೈಕಿ, 62 ಸಾವಿರ ಕಾರ್ಡ್‌ಗಳಿಗೆ ಆಹಾರಧಾನ್ಯ ಹಂಚಿಕೆ ಮಾಡಲಾಗುತ್ತಿದೆ' ಎಂದರು.

'ಆರೋಗ್ಯಕ್ಕೆ ಸಂಬಂಧಿಸಿದಂತೆ ಯಾರೇ ಅರ್ಜಿ ಸಲ್ಲಿಸಿದರೂ ತಕ್ಷಣ ಕಾರ್ಡ್ ಕೊಡಲು ಕ್ರಮ ವಹಿಸಲಾಗುತ್ತದೆ' ಎಂದರು.

'ಅಕ್ಕಿ ಖರೀದಿ ದರದಲ್ಲಿ ವ್ಯತ್ಯಾಸವೇಕೆ?': 'ಅಕ್ಷರ ದಾಸೋಹಕ್ಕೆ ಟೆಂಡರ್ ಮೂಲಕ, 'ಅನ್ನಭಾಗ್ಯ'ಕ್ಕೆ ಕೇಂದ್ರೀಯ ಭಂಡಾರದಿಂದ ಅಕ್ಕಿ ಖರೀದಿಸುತ್ತಿರುವುದರಿಂದ ಅಕ್ಕಿ ಖರೀದಿ ದರದಲ್ಲಿ ವ್ಯತ್ಯಾಸವಿದೆ' ಎಂದು ಸಚಿವ ಕೆ.ಎಚ್. ಮುನಿಯಪ್ಪ ಸ್ಪಷ್ಟಪಡಿಸಿದರು.

ಬಿಜೆಪಿಯ ಎನ್. ರವಿಕುಮಾರ್, 'ಅಕ್ಷರ ದಾಸೋಹಕ್ಕೆ ಕಿಲೋಗೆ ₹29.30ರಂತೆ ಶಿಕ್ಷಣ ಇಲಾಖೆ ಅಕ್ಕಿ ಖರೀದಿಸುತ್ತಿದೆ. ಆದರೆ, ಅನ್ನ ಭಾಗ್ಯದಡಿ ವಿತರಿಸಲು ಆಹಾರ ಇಲಾಖೆ ಕಿಲೋಗೆ ₹34.60ರಂತೆ ಖರೀದಿಸುತ್ತಿದೆ. ದರದಲ್ಲಿ ಈ ವ್ಯತ್ಯಾಸ ಯಾಕೆ? ಹೆಚ್ಚುವರಿ ಹಣ ಎಲ್ಲಿ ಹೋಗುತ್ತಿದೆ' ಎಂದು ಪ್ರಶ್ನಿಸಿದರು.

ಅದಕ್ಕೆ ಮುನಿಯಪ್ಪ, 'ಅನ್ನಭಾಗ್ಯಕ್ಕೆ ಹೆಚ್ಚುವರಿ ಅಕ್ಕಿಯನ್ನು ಕೇಂದ್ರ ಕೊಡಲಿಲ್ಲ. ನಾವು ಕೇಂದ್ರ ಸ್ವಾಮ್ಯದ ಸಂಸ್ಥೆಗಳ ಮೂಲಕ ಟೆಂಡರ್ ಆಹ್ವಾನಿಸದೆ 'ಎ' ಗ್ರೇಡ್ ಅಕ್ಕಿ ಖರೀದಿಸುತ್ತಿದ್ದೇವೆ' ಎಂದರು.

ಉತ್ತರಕ್ಕೆ ತೃಪ್ತರಾಗದ ರವಿ ಕುಮಾರ್, 'ಅನ್ನಭಾಗ್ಯಕ್ಕೆ ಹೆಚ್ಚಿನ ದರ ನೀಡಿ 'ಎ' ಗ್ರೇಡ್ ಖರೀದಿಸಿದರೆ, ಮಕ್ಕಳಿಗೆ ಯಾವ ಗುಣಮಟ್ಟದ ಅಕ್ಕಿ ಖರೀದಿಸಲಾಗುತ್ತಿದೆ' ಎಂದು ಮರು ಪ್ರಶ್ನೆ ಹಾಕಿದರು. ಅದಕ್ಕೆ ಸಚಿವ ಮಧುಬಂಗಾರಪ್ಪ, 'ಮಕ್ಕಳಿಗೆ ಗುಣಮಟ್ಟದ ಅಕ್ಕಿ ಕೊಡಲಾಗುತ್ತಿದೆ' ಎಂದರು.

ಸ್ಪಷ್ಟ ಉತ್ತರಕ್ಕೆ ಬಿಜೆಪಿ ಸದಸ್ಯರು ಪಟ್ಟು ಹಿಡಿದರು. ಸಭಾಪತಿ ಹೊರಟ್ಟಿ, ಈ ವಿಷಯದ ಕುರಿತು ಅರ್ಧ ಗಂಟೆ ಚರ್ಚೆಗೆ ಅವಕಾಶ ನೀಡಲಾಗುವುದು ಎಂದು ವಾಗ್ವಾದಕ್ಕೆ ತೆರೆ ಎಳೆದರು.

ಕೇಂದ್ರದ ಕಡೆ ಬೆರಳು: ಬಿಜೆಪಿ ಸದಸ್ಯರು ಕಿಡಿ

ನೀಟ್ ಪರೀಕ್ಷಾ ಅಕ್ರಮದ ವಿಚಾರ ವಿಧಾನ ಪರಿಷತ್‌ನಲ್ಲಿ ಸೋಮವಾರ ಪ್ರತಿಧ್ವನಿಸಿತು. ಕೇಂದ್ರದ ಕಡೆ ಬೆರಳು ಮಾಡಿದ ರಾಜ್ಯ ಸರ್ಕಾರದ ನಡೆಗೆ ಆಕ್ಷೇಪಿಸಿದ ಬಿಜೆಪಿ ಸದಸ್ಯರು, ಆಡಳಿತ ಪಕ್ಷದ ವಿರುದ್ಧ ಮುಗಿಬಿದ್ದರು.

ಕಾಂಗ್ರೆಸ್‌ನ ಐವನ್ ಡಿಸೋಜ ನೀಟ್ ಪರೀಕ್ಷೆ ಕುರಿತಂತೆ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರಿಸಿದ ಶರಣಪ್ರಕಾಶ್ ಪಾಟೀಲ್, 'ನೀಟ್ ಪರೀಕ್ಷೆಯಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ. ಕೇಂದ್ರದ ತಪ್ಪಿನಿಂದಾಗಿ ಈ ಬಾರಿ ಲಕ್ಷಾಂತರ ವಿದ್ಯಾರ್ಥಿಗಳು ತೊಂದರೆಗೆ ಸಿಲುಕಿದ್ದಾರೆ' ಎಂದು ಆರೋಪಿಸಿದರು.

'ನೀಟ್ ಕುರಿತಂತೆ ರಾಜ್ಯ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ' ಎಂದು ಬಿಜೆಪಿ ಸದಸ್ಯರು ಪ್ರಶ್ನಿಸಿದರು. ಅದಕ್ಕೆ ಸಚಿವರು, 'ಕೇಂದ್ರ ಸರ್ಕಾರ ನೀಟ್ ಜಾರಿ ಮಾಡಿದೆ. ಸಂಸತ್‌ನ ಉಭಯ ಸದನಗಳಲ್ಲೂ ಈ ಕಾಯ್ದೆಯನ್ನು ಬಹುಮತದಿಂದ ಅಂಗೀಕರಿಸಿತ್ತು. ಇದನ್ನು ಸುಪ್ರೀಂ ಕೋರ್ಟ್ ಕೂಡ ಎತ್ತಿ ಹಿಡಿದಿದೆ. ಬದಲಾವಣೆ ಆಗಬೇಕೆಂದರೆ ಸಂಸತ್‌ನ ಉಭಯ ಸದನಗಳಲ್ಲೇ ಕಾಯ್ದೆಗೆ ತಿದ್ದುಪಡಿ ಆಗಬೇಕು' ಎಂದು ಪಾಟೀಲ ಸ್ಪಷ್ಟಪಡಿಸಿದರು.

'ಪಿಪಿಪಿ ಮಾದರಿಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು': 'ಸದ್ಯ 22 ಜಿಲ್ಲೆಗಳಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ ಆಗಿದೆ. ಎಲ್ಲ ಜಿಲ್ಲೆಗಳಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸಬೇಕು ಎನ್ನುವುದು ಸರ್ಕಾರದ ನೀತಿಯಾದರೂ ಆರ್ಥಿಕ ಇಲಾಖೆಯಿಂದ ಅನುಮತಿ ಸಿಕ್ಕಿದರೆ ಹಂತ ಹಂತವಾಗಿ ಹೊಸ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲಾಗುವುದು' ಎಂದು ಶರಣ ಪ್ರಕಾಶ್ ಪಾಟೀಲ್ ಹೇಳಿದರು. ಕಾಂಗ್ರೆಸ್‌ನ ಮಂಜುನಾಥ ಭಂಡಾರಿ ಕೇಳಿದ ಪ್ರಶ್ನೆಗೆ ಸಚಿವರು ಈ ಉತ್ತರ ನೀಡಿದರು.

ನಿವೃತ್ತ ನ್ಯಾಯಮೂರ್ತಿ ಪಿ.ಎಸ್. ದೇಸಾಯಿ ಆಯೋಗಕ್ಕೆ ಹಲವು ಸವಾಲು

ದಾಖಲೆಗಳೇ ಇಲ್ಲವಾಗುವ 'ಮಾಯಾಜಾಲ'

• ಆರ್. ಜಿತೇಂದ್ರ

ಮೈಸೂರು: ಹಲವು ಪ್ರಕರಣಗಳಿಗೆ ಸಂಬಂಧಿಸಿದ ಪ್ರಮುಖ ಕಡತಗಳೇ ನಾಪತ್ತೆಯಾಗಿರುವ ಸಂಗತಿ ಮುಡಾ ಅಕ್ರಮಗಳ ತನಿಖಾ ಸಮಿತಿ ಮುಂದೆ ಬಯಲಾಗಿದ್ದು, ಅದರ ಹಿಂದಿರುವ 'ಮಾಯಾ ಜಾಲ'ವನ್ನು ಭೇದಿಸುವ ಸವಾಲು, ನಿವೃತ್ತ ನ್ಯಾಯಮೂರ್ತಿ ಪಿ.ಎಸ್. ದೇಸಾಯಿ ಅವರ ಏಕಸದಸ್ಯ ವಿಚಾರಣಾ ಆಯೋಗದ ಮುಂದಿದೆ.

ಮುಡಾದ ದಾಖಲೆಗಳ ವಿಭಾಗದಿಂದ ಕಡತಗಳು ನಾಪತ್ತೆಯಾಗಿರುವುದನ್ನು ವೆಂಕಟಾಚಲಪತಿ ನೇತೃತ್ವದ ಆಯೋಗ ಪತ್ತೆಹಚ್ಚಿದೆ. ಮುಡಾದಲ್ಲಿ ಕಡತಗಳ ನಿರ್ವಹಣೆಗೆಂದೇ ಪ್ರತ್ಯೇಕ ವಿಭಾಗವಿದ್ದು, ಕೆಲವರಿಗಷ್ಟೇ ಪ್ರವೇಶ. ಕಡತ ಹೊರಗೆ ಹೋಗಬೇಕಿದ್ದರೆ, ವಿಭಾಗದ ರಿಜಿಸ್ಟರ್‌ನಲ್ಲಿ ಕಡ್ಡಾಯವಾಗಿ ನಮೂದಿಸಬೇಕು. ಯಾವ ಸಮಯದಲ್ಲಿ, ಯಾರು, ಯಾವ ಕಡತವನ್ನು ತೆಗೆದುಕೊಂಡರೆಂಬ ವಿವರಗಳನ್ನು ದಾಖಲಿಸಬೇಕು. ಆದರೆ, ವ್ಯವಸ್ಥಿತವಾಗಿ ದಾಖಲಿಸಿಲ್ಲ. ಅನೇಕ ಕಡತಗಳು ಆಯುಕ್ತರು ಹಾಗೂ ಸರ್ಕಾರದ ಮಟ್ಟದಲ್ಲೇ ಉಳಿದಿವೆ ಎಂದು ಷರಾ ಬರೆಯಲಾಗಿದೆ ಎಂಬುದನ್ನು ಸಮಿತಿ ಗುರುತಿಸಿದೆ.

ಅನೇಕ ಕಡತಗಳ ಹಾಳೆಗಳನ್ನು ಹರಿಯಲಾಗಿದೆ. ಆದೇಶಗಳಿರುವ ಪುಟಗಳನ್ನೇ ಕಿತ್ತೊಗೆದು, ಬೇಕಾದಂತೆ ದಾಖಲೆಗಳನ್ನು ತಿದ್ದಿರುವ ಆರೋಪಗಳಿವೆ. ಆರೋಪ ಕೇಳಿ ಬಂದಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಹಳೆಯ ದಾಖಲೆಗಳೇ ನಾಪತ್ತೆಯಾಗಿವೆ. ಏಕಸದಸ್ಯ ವಿಚಾರಣಾ ಆಯೋಗವು ಈ ಸಂಗತಿಗಳನ್ನು ಬಯಲಿಗೆ ಎಳೆಯಬೇಕಿದೆ.

ಅಧಿಕಾರಿಗಳು ಬೆಂಗಳೂರಿಗೆ: ಹೊಸ ಆದೇಶದ ಹಿನ್ನೆಲೆಯಲ್ಲಿ, ಸರ್ಕಾರ ಎರಡು ವಾರದ ಹಿಂದಷ್ಟೇ ನೇಮಿಸಿದ್ದ, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯದ ಆಯುಕ್ತ ಆರ್. ವೆಂಕಟಾಚಲಪತಿ ನೇತೃತ್ವದ ತನಿಖಾ ಸಮಿತಿಯು ಬೆಂಗಳೂರಿಗೆ ವಾಪಸ್ ಆಗಿದೆ.

ಅಕ್ರಮಗಳ ಕುರಿತು ತನಿಖೆಗಾಗಿ ಸರ್ಕಾರ ಜುಲೈ 1ರಂದು ನಾಲ್ವರು ಸದಸ್ಯರ ತನಿಖಾ ಆಯೋಗವನ್ನು ನೇಮಿಸಿದ್ದು, ವರದಿಗೆ 15 ದಿನಗಳ ಗಡುವು ನೀಡಿತ್ತು. ಜುಲೈ 3ರಿಂದ 13ರವರೆಗೂ ತಂಡವು ತನಿಖೆ ಕೈಗೊಂಡು ದಾಖಲೆಗಳನ್ನು ಜಾಲಾಡಿತ್ತು. ಆದರೆ, ವರದಿ ಸಲ್ಲಿಸುವ ಮುನ್ನವೇ ಮತ್ತೊಂದು ವಿಚಾರಣಾ ಆಯೋಗದ ನೇಮಕವಾಗಿದೆ. ಹೀಗಾಗಿ, ವೆಂಕಟಾಚಲಪತಿ ಆಯೋಗದ ಸ್ಥಿತಿ–ಗತಿ ಏನು? ಸರ್ಕಾರಕ್ಕೆ ಆಯೋಗವು ವರದಿ ಸಲ್ಲಿಸಲಿದೆಯೇ ಎಂಬುದು ಸ್ಪಷ್ಟವಾಗಿಲ್ಲ.

ಹಿಂದಿನ ವರದಿಯೂ ಬಾಕಿ: ಮುಡಾ ಹಗರಣಗಳ ತನಿಖೆಗಾಗಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ರಚನೆಯಾಗಿದ್ದ ತಾಂತ್ರಿಕ ಸಮಿತಿಯು ನೀಡಿರುವ ಶಿಫಾರಸುಗಳ ವರದಿಯನ್ನೂ ಸರ್ಕಾರ ಒಪ್ಪಿಲ್ಲ. 2022ರ ಜುಲೈ 2 ರಂದು ನಗರಾಭಿವೃದ್ಧಿ ಇಲಾಖೆಯ ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕ ಟಿ.ವಿ. ಮುರಳಿ ಅಧ್ಯಕ್ಷತೆಯಲ್ಲಿ ನಾಲ್ವರು ಸದಸ್ಯರ ತಾಂತ್ರಿಕ ಸಮಿತಿಯನ್ನು ರಚಿಸಲಾಗಿತ್ತು. ಸಮಿತಿಯು 2023ರ ನವೆಂಬರ್ 3ರಂದು ಪ್ರಧಾನ ಕಾರ್ಯದರ್ಶಿಗೆ ಮೂರು ಸಂಪುಟಗಳಲ್ಲಿ ದೂರು ಹಾಗೂ ದಾಖಲೆಗಳನ್ನು ತೆರೆದಿಟ್ಟಿತ್ತು. ವರದಿ ಸರ್ಕಾರದ ಕಡತ ಸೇರಿದ್ದು ಬಿಟ್ಟರೆ, ಅಕ್ರಮ ಎಸಗಿದವರ ವಿರುದ್ಧ ಕ್ರಮವಾಗಿಲ್ಲ.

'ಮೈಸೂರಿನ ಭೂ ಅಕ್ರಮಗಳ ಕುರಿತು ವಿಜಯಭಾಸ್ಕರ್ ನೇತೃತ್ವದ ಸಮಿತಿಯು ದಶಕಗಳ ಹಿಂದೆಯೇ ತನಿಖೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಸಾರ್ವಜನಿಕವಾಗಿ ಲಭ್ಯವಿಲ್ಲ. ಅದನ್ನೂ ಸರ್ಕಾರವು ಜನರ ಮುಂದಿಡಬೇಕು' ಎಂಬ ಒತ್ತಾಯ ಕೇಳಿಬಂದಿದ್ದು, ಮೈಸೂರು ಗ್ರಾಹಕರ ಪರಿಷತ್ತು ಹೋರಾಟವನ್ನು ರೂಪಿಸುತ್ತಿದೆ.

6 ತಿಂಗಳ ಕಾಲಾವಕಾಶ; ಆಕ್ಷೇಪ

ಏಕಸದಸ್ಯ ವಿಚಾರಣಾ ಆಯೋಗದ ರಚನೆಯನ್ನು ಮೈಸೂರಿನ ಕೆಲವು ಪ್ರಗತಿಪರ ಸಂಘಟನೆಗಳು ಸ್ವಾಗತಿಸಿವೆ. ಆದರೆ, 'ವಿಚಾರಣೆಗೆ 6 ತಿಂಗಳ ಕಾಲಾವಕಾಶ ನೀಡಿರುವುದು ಕಣ್ಣೊರೆಸುವ ತಂತ್ರ. ಹಾಲಿ ನ್ಯಾಯಾಧೀಶರಿಂದಲೇ ತನಿಖೆ ನಡೆಸಬೇಕು' ಎಂಬ ಒತ್ತಾಯ ಕೇಳಿಬಂದಿದೆ.

'ಈ ಹಿಂದೆ ನೇಮಿಸಲಾದ ತನಿಖಾ ಸಮಿತಿಗಳಲ್ಲೂ ನಾಲ್ಕೈದು ಸದಸ್ಯರಿರುತ್ತಿದ್ದರು. ಈ ಬಾರಿ ಏಕಸದಸ್ಯ ಆಯೋಗ ನೇಮಿಸಿದ್ದು, 6 ತಿಂಗಳ ಕಾಲ ತನಿಖೆ ನಡೆಯಲಿದೆ. ಆಯೋಗವು ವರದಿ ಸಲ್ಲಿಸಿ ಸರ್ಕಾರ ಕ್ರಮ ಕೈಗೊಳ್ಳುವ ಹೊತ್ತಿಗೆ ವರ್ಷವೇ ಆಗಬಹುದು. ಅದರ ಬದಲು ನ್ಯಾಯಮೂರ್ತಿಗಳಿಗೆ ಪೂರಕವಾಗಿ ತನಿಖಾಧಿಕಾರಿಗಳನ್ನು ನಿಯೋಜಿಸಿ, ತ್ವರಿತವಾಗಿ ತನಿಖೆ ಪೂರ್ಣಗೊಳ್ಳುವಂತೆ ನೋಡಿಕೊಳ್ಳಬೇಕು' ಎಂಬುದು ಸಾರ್ವಜನಿಕರ ಆಗ್ರಹ.

ಹೊಸ ವಿಚಾರಣಾ ಆಯೋಗಕ್ಕೆ 6 ತಿಂಗಳ ಕಾಲಾವಕಾಶ ನೀಡಿರುವುದು ಕೇವಲ ಕಣ್ಣೊರೆಸುವ ತಂತ್ರ, ಹಳೆ ವರದಿಯ ಆಧಾರದಲ್ಲೇ ಕ್ರಮ ಕೈಗೊಳ್ಳಬೇಕು
ಭಾಮಿ ವಿ. ಶೆಣೈ ಸಂಸ್ಥಾಪಕ ಸಂಚಾಲಕ, ಮೈಸೂರು ಗ್ರಾಹಕರ ಪರಿಷತ್ತು

ಪ್ರಭಾವಿಗಳು, ಜನಪ್ರತಿನಿಧಿಗಳು ಪಾಲುದಾರರಾಗಿರುವ ಆರೋಪವಿದೆ. ಹಾಲಿ ನ್ಯಾಯಾಧೀಶರಿಂದಲೇ ತನಿಖೆ ನಡೆಸಬೇಕು
ಕುರುಬೂರು ಶಾಂತಕುಮಾರ್ ಅಧ್ಯಕ್ಷ, ರಾಜ್ಯ ರೈತ ಸಂಘಟನೆಗಳ ಒಕ್ಕೂಟ

ವರದಿಗೆ ಅಧಿಕಾರಿಗಳ ಸ್ಪಂದನೆ • ವಿದ್ಯಾರ್ಥಿಗಳ ಸಂಕಷ್ಟ ನಿವಾರಣೆ

ಹೂಡದಳ್ಳಿಗೆ ಮತ್ತೊಂದು ಬಸ್

ಪ್ರಜಾವಾಣಿ ವಾರ್ತೆ



ಕಲಬುರಗಿ ಜಿಲ್ಲೆಯ ಚಿಂಚೋಳಿಯಿಂದ ಹೂಡದಳ್ಳಿಗೆ ಸೋಮವಾರ ಬಂದ ಬಸ್ ಅನ್ನು ಗ್ರಾಮಸ್ಥರು ಸ್ವಾಗತಿಸಿದರು

ಚಿಂಚೋಳಿ (ಕಲಬುರಗಿ ಜಿಲ್ಲೆ): ಮಾಜಿ ಮುಖ್ಯಮಂತ್ರಿ ದಿವಂಗತ ವೀರೇಂದ್ರ ಪಾಟೀಲರ ಸ್ವಗ್ರಾಮ ಹೂಡದಳ್ಳಿಗೆ ಮತ್ತೊಂದು ಬಸ್ಸಿನ ಸೌಕರ್ಯ ಕಲ್ಪಿಸಲಾಗಿದ್ದು, ಶಾಲೆಗೆ ನಿತ್ಯವೂ ಕಾಲ್ನಡಿಗೆಯಲ್ಲೇ ತೆರಳಬೇಕಾಗಿದ್ದ ವಿದ್ಯಾರ್ಥಿಗಳ ಸಂಕಷ್ಟ ಕೊನೆಗೂ ನಿವಾರಣೆಯಾಗಿದೆ.

'ಪ್ರಜಾವಾಣಿ'ಯ ಭಾನುವಾರದ ಸಂಚಿಕೆಯಲ್ಲಿ 'ವಿದ್ಯಾರ್ಥಿಗಳಿಗೆ ನಿತ್ಯ 7 ಕಿ.ಮೀ ನಡಿಗೆ ಶಿಕ್ಷೆ' ಶೀರ್ಷಿಕೆ ಅಡಿಯಲ್ಲಿ ಪ್ರಕಟವಾದ ವಿಶೇಷ ವರದಿಗೆ ಸ್ಪಂದಿಸಿದ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್, ಗ್ರಾಮಕ್ಕೆ ಬಸ್ ಸೌಲಭ್ಯ ಕಲ್ಪಿಸುವಂತೆ ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆ ಅಧಿಕಾರಿಗಳಿಗೆ ಸೂಚಿಸಿದ್ದರು. ಅದರಂತೆ ಸೋಮವಾರ ಸಾರಿಗೆ ಸಂಸ್ಥೆಯ ಚಿಂಚೋಳಿ ಘಟಕ ವ್ಯವಸ್ಥಾಪಕ ಅಶೋಕ ಪಾಟೀಲ ಹೂಡದಳ್ಳಿಗೆ ಬಸ್ಸಿನಲ್ಲಿ ತೆರಳಿ ಸಾರಿಗೆ ಸಮಸ್ಯೆ ಕುರಿತು ಜನರ ಬೇಡಿಕೆ ಆಲಿಸಿದರು.

ಈ ಹಳ್ಳಿಗೆ ಮುಂಜಾನೆ 8ಕ್ಕೆ ಒಂದು ಬಸ್ ಬರುತ್ತಿತ್ತು. ಆದರೆ ವಿದ್ಯಾರ್ಥಿಗಳು ಮುಂಜಾನೆ 9 ಗಂಟೆಗೆ ಮತ್ತೊಂದು ಬಸ್ ಸೌಲಭ್ಯ ಕಲ್ಪಿಸುವಂತೆ ಕೋರಿದ್ದರು.

ವರದಿ ಪರಿಣಾಮ

'ಮಕ್ಕಳ ಬೇಡಿಕೆಯಂತೆ ಹೂಡದಳ್ಳಿಯಿಂದ ಕನಕಪುರ ಶಾಲೆಗೆ ತೆರಳುವ ಮಕ್ಕಳ ಅನುಕೂಲಕ್ಕಾಗಿ ಇದೇ ಮಾರ್ಗದಿಂದ ಸಂಚರಿಸುವ ಚಿಂಚೋಳಿ ಚಿಟಗುಪ್ಪ ಬಸ್ ಹೂಡದಳ್ಳಿಗೆ ತೆರಳಿ ಅಲ್ಲಿನ ಮಕ್ಕಳನ್ನು ಕರೆದುಕೊಂಡು ಕನಕಪುರಕ್ಕೆ ತಲುಪಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಮಂಗಳವಾರ ಬೆಳಿಗ್ಗೆಯಿಂದ ಬಸ್ ಸೇವೆ ಪ್ರಾರಂಭವಾಗಲಿದೆ' ಎಂದರು.

'ಮಕ್ಕಳ ಬೇಡಿಕೆಯಂತೆ ಸಂಜೆ 4.30ಕ್ಕೆ ಚಿಂಚೋಳಿಯಿಂದ ಹೂಡದಳ್ಳಿಗೆ ಬಸ್ಸಿನ ಸೌಕರ್ಯ ಕಲ್ಪಿಸಲಾಗಿದೆ. ಸೋಮವಾರ ಬಸ್ ಗ್ರಾಮಕ್ಕೆ ತೆರಳಿದೆ. ಇದಕ್ಕೂ ಮೊದಲು ಸಂಜೆ ಸಮಯದಲ್ಲಿ ಹೂಡದಳ್ಳಿಗೆ ತೆರಳಲು ಬಸ್ಸಿನ ಸೌಕರ್ಯವಿರಲಿಲ್ಲ' ಎಂದು ಘಟಕ ವ್ಯವಸ್ಥಾಪಕ ಅಶೋಕ ಪಾಟೀಲ ತಿಳಿಸಿದರು.

ಮುರುಘಾಶ್ರೀ ಬೆಳ್ಳಿ ಪುತ್ಥಳಿ ಪತ್ತೆ

ಚಿತ್ರದುರ್ಗ: ನಗರದ ಮುರುಘಾ ಮಠದ ದರ್ಬಾರ್ ಹಾಲ್‌ನಿಂದ ಕಳವಾಗಿದ್ದ 22 ಕೆ.ಜಿ. ತೂಕದ ಶಿವಮೂರ್ತಿ ಮುರುಘಾ ಸ್ವಾಮೀಜಿಯವರ ಬೆಳ್ಳಿ ಪುತ್ಥಳಿ ಸೋಮವಾರ ಬೆಳಿಗ್ಗೆ ಮಠದ ಆವರಣದ ಕಾಲುವೆ ಬಳಿ ಗೋಣಿ ಚೀಲದಲ್ಲಿ ಪತ್ತೆಯಾಗಿದೆ.

ಪುತ್ಥಳಿ ಕಳವಾಗಿರುವ ಬಗ್ಗೆ ಮಠದ ಆಡಳಿತ ಮಂಡಳಿ ಸದಸ್ಯ ಬಸವ ಕುಮಾರ ಸ್ವಾಮೀಜಿ ಜುಲೈ 11ರಂದು ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪೊಲೀಸರು ಹಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು. ವಿಚಾರಣೆ ತೀವ್ರಗೊಂಡ ಹಿನ್ನೆಲೆಯಲ್ಲಿ ಕಳವು ಮಾಡಿದ್ದವರು ಭಯದಿಂದ ಪುತ್ಥಳಿ ಇಟ್ಟು ಹೋಗಿರಬಹುದು ಎಂದು ಶಂಕಿಸಲಾಗಿದೆ. ಸ್ಥಳಕ್ಕೆ ಬಂದ ಪೊಲೀಸರು ಪುತ್ಥಳಿ ಪರಿಶೀಲಿಸಿದರು. ಬೆರಳಚ್ಚು, ಶ್ವಾನ ದಳ ತಜ್ಞರು ಮಾಹಿತಿ ಪಡೆದರು. 21 ಇಂಚು ಎತ್ತರದ ಪುತ್ಥಳಿ ₹16ಲಕ್ಷಮೌಲ್ಯಹೊಂದಿದೆ. ಶಿವಮೂರ್ತಿ ಮುರುಘಾ ಸ್ವಾಮೀಜಿ ಪೀಠಾರೋಹಣದ ರಜ ತೋತ್ಸವ ಆಚರಣೆ ವೇಳೆ ಪುತ್ಥಳಿ ನೀಡಲಾಗಿತ್ತು.

'ಪುತ್ಥಳಿ ಕದ್ದವರು, ಮರಳಿ ತಂದು ಹಾಕಿದವರು ಯಾರು ಎಂಬುದು ಗೊತ್ತಾಗಬೇಕು. ಪೊಲೀಸರ ತನಿಖೆಯಿಂದ ಸತ್ಯ ಹೊರಬರಬೇಕು' ಎಂದು ಮಠದ ಆಡಳಿತ ಮಂಡಳಿ ಸದಸ್ಯ ಬಸವಕುಮಾರ ಸ್ವಾಮೀಜಿ ಒತ್ತಾಯಿಸಿದರು.

ಮದ್ಯ ಕುಡಿದ ಶಿಕ್ಷಕ ಅಮಾನತು

ವಿಜಯಪುರ: ಶಾಲೆಗೆ ಕುಡಿದು ಬರುತ್ತಿದ್ದ ಬಬಲೇಶ್ವರ ತಾಲ್ಲೂಕಿನ ಕಂಬಾಗಿ ತೋಟದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಎ.ಸಿ.ನಾರಾಯಣಪುರ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ. 'ಮದ್ಯ ಕುಡಿದು ಶಾಲೆಗೆ ಬರುವ ಎ.ಸಿ. ನಾರಾಯಣಪುರ ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಿಲ್ಲ' ಎಂದು ಶಾಲಾಭಿವೃದ್ಧಿ ಸಮಿತಿ ಸದಸ್ಯರು ಮತ್ತು ಗ್ರಾಮಸ್ಥರು ಕ್ಷೇತ್ರ ಶಿಕ್ಷಣಾಧಿಕಾರಿಗೆ ದೂರು ನೀಡಿದ್ದರು.

ಕೃಷಿ, ಹೈನು ಅಭಿವೃದ್ಧಿಗೆ ₹20 ಕೋಟಿ

ಪ್ರಜಾವಾಣಿ ವಾರ್ತೆ



ಮಂಗಳೂರು: ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಪ್ರಸಕ್ತ ಸಾಲಿನಲ್ಲಿ ಅನ್ನದಾತರ ಜ್ಞಾನವರ್ಧನೆ ಮತ್ತು ಆರ್ಥಿಕ ಬಲವರ್ಧನೆಗಾಗಿ ಕೃಷಿ ಮತ್ತು ಹೈನುಗಾರಿಕೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ ₹20 ಕೋಟಿ ಅನುದಾನ ನಿಗದಿಗೊಳಿಸಲಾಗಿದೆ ಎಂದು ಸಂಸ್ಥೆಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಅನಿಲ್ ಕುಮಾರ್ ಎಸ್.ಎಸ್. ತಿಳಿಸಿದ್ದಾರೆ.

ರಾಜ್ಯದ 96 ತಾಲ್ಲೂಕುಗಳ 38,050 ಎಕರೆಯಲ್ಲಿ ಯಾಂತ್ರೀಕೃತ ಭತ್ತ ಬೇಸಾಯ, 91 ತಾಲ್ಲೂಕುಗಳ 5 ಸಾವಿರ ಎಕರೆಯಲ್ಲಿ ಸಿರಿಧಾನ್ಯ ಬೇಸಾಯ, 33 ತಾಲ್ಲೂಕುಗಳ 1,650 ಎಕರೆಯಲ್ಲಿ ಕಬ್ಬಿನ ಸುಸ್ಥಿರ ಬೇಸಾಯ ಮತ್ತು ಕಲ್ಯಾಣ ಕರ್ನಾಟಕ ವ್ಯಾಪ್ತಿಯ 24 ತಾಲ್ಲೂಕುಗಳ 2,400 ಹೈನುಗಾರರಲ್ಲಿ ಲಾಭದಾಯಕ ಹೈನುಗಾರಿಕಾಭಿವೃದ್ಧಿ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುವುದು. ಇದರ ಪರಿಣಾಮಕಾರಿ ಅನುಷ್ಠಾನಕ್ಕಾಗಿ 4 ಸಾವಿರ ಕೃಷಿ ತಾಂತ್ರಿಕ ತರಬೇತಿಗಳು ಮತ್ತು 1,700 ಅಧ್ಯಯನ ಪ್ರವಾಸಗಳನ್ನು ಹಮ್ಮಿಕೊಂಡಿದ್ದು ಒಟ್ಟು 10 ಲಕ್ಷಕ್ಕೂ ಅಧಿಕ ರೈತರು ಇದರ ಪ್ರಯೋಜನ ಪಡೆಯಲಿದ್ದಾರೆ ಎಂದರು.

ಇದುವರೆಗೆ ರಾಜ್ಯದಲ್ಲಿ ಒಟ್ಟು 30 ಸಾವಿರ ಹೆಕ್ಟೇರ್‌ನಲ್ಲಿ ಯಾಂತ್ರೀಕೃತ ಭತ್ತ ಬೇಸಾಯ, 4ಸಾವಿರ ಹೆಕ್ಟೇರ್‌ನಲ್ಲಿ ಕಬ್ಬಿನ ಸುಸ್ಥಿರ ಬೇಸಾಯ ಮತ್ತು 3ಸಾವಿರ ಹೆಕ್ಟೇರ್‌ನಲ್ಲಿ ಸಿರಿಧಾನ್ಯ ಬೇಸಾಯವನ್ನು ಅನುಷ್ಠಾನಿಸಲಾಗಿದೆ. ಕಲ್ಯಾಣ ಕರ್ನಾಟಕ ವ್ಯಾಪ್ತಿಯಲ್ಲಿ 4,963 ಹೈನುಗಾರರಿಗೆ ಪ್ರೇರಣೆ ನೀಡಿ ಹೈನುಗಾರಿಕೆಗೆ ಉತ್ತೇಜನ ನೀಡಲಾಗಿದೆ. ಈ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಒಟ್ಟು 5,264 ಕೃಷಿ ತಾಂತ್ರಿಕ ತರಬೇತಿ ಮತ್ತು ಅಧ್ಯಯನ ಪ್ರವಾಸ ಹಮ್ಮಿಕೊಳ್ಳಲಾಗಿತ್ತು. ಒಟ್ಟು ₹75 ಕೋಟಿ ಅನುದಾನ ವಿನಿಯೋಗಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಕರ್ನಾಟಕಸರ್ಕಾರ

ಉಪನಿರ್ದೇಶಕರು(ಆಡಳಿತ)ರವರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಚಿಕ್ಕಮಗಳೂರು.

ಸಂಖ್ಯೆ:ಪಿ2/ಸಾ.ಶಿ.ಇ/ಆರ್.ಬಿ.ಎಸ್.ಕೆ/43/2022-23 ದಿನಾಂಕ:08-07-2024

ಅಲ್ಪಾವಧಿ ಮರು-ಟೆಂಡರ್ ಪ್ರಕಟಣೆ

2022-23ನೇ ಸಾಲಿಗೆ ಚಿಕ್ಕಮಗಳೂರು ಜಿಲ್ಲೆಗೆ Supply & Installation RBSK kits/Equipments ಮಾಡಲು ಇಚ್ಛೆಯುಳ್ಳ ಸಂಸ್ಥೆಯವರಿಂದ ದ್ವಿ-ಲಕೋಟೆಯಲ್ಲಿ ಅಲ್ಪಾವಧಿ ಮರು-ಟೆಂಡರ್ ಅಹ್ವಾನಿಸಲಾಗಿದ್ದು, ಆನ್‌ಲೈನ್ https://kppp.karnataka.gov.in ಮೂಲಕ **ದಿನಾಂಕ 18-07-2024ರ ಮಧ್ಯಾಹ್ನ 1:00ರೊಳಗೆ** ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ಮೊ.ಸಂ:9448999334 ಅಥವಾ ಇ-ಮೇಲ್ ddpickm2017@gmail.com ಮೂಲಕ ಸಂಪರ್ಕಿಸಬಹುದಾಗಿದೆ.

ಸಹಿ/-
ಉಪನಿರ್ದೇಶಕರು(ಆಡಳಿತ)
ಶಾಲಾ ಶಿಕ್ಷಣ ಇಲಾಖೆ, ಚಿಕ್ಕಮಗಳೂರು

ಪಿಎಂಶ್ರೀ ಕೇಂದ್ರೀಯ ವಿದ್ಯಾಲಯ
ಎಂ.ಜಿ ರೈಲ್ವೇ ಕಾಲೋನಿ, ಬೆಂಗಳೂರು
Email:kvmgrly@gmail.com, Ph.No: 08023157282

ಸಂದರ್ಶನ

ಶೈಕ್ಷಣಿಕ ವರ್ಷ2024-25ರ ಅರೆಕಾಲಿಕ/ಒಪ್ಪಂದದ ಶಿಕ್ಷಕರ ಸಮಿತಿಯನ್ನು ಸಿದ್ಧಪಡಿಸಲು ಮುಂದಿನ ಹುದ್ದೆಗೆ ಸಂದರ್ಶನವನ್ನು 20-07-2024ರಂದು ನಡೆಸಲಾಗುವುದು.

Sl. No.	POST	SUBJECTS	DATE OF INTERVIEW
1	Post Graduate Teacher (PGT)	Economics	20/07/2024 (9 am Onwards)
2	Trained Graduate Teacher (TGT)	Social Science	
3	Primary Teacher (PRT)		
4	Counselor		
5	Special Educator		
6	Computer Instructor		

1. ಅರ್ಹ ಅಭ್ಯರ್ಥಿಯು ಸಂಪೂರ್ಣ ಬಯೋಡೇಟಾ, ಮೂಲ ದಾಖಲೆಗಳು ಮತ್ತು ಒಂದು ಸೆಟ್ ದೃಢೀಕರಿಸಿದ ಅರ್ಹತಾ ಪ್ರಮಾಣಪತ್ರದೊಂದಿಗೆ ಸಂದರ್ಶನಕ್ಕೆ ಭಾಗವಹಿಸಬಹುದು.
2. ಸಂದರ್ಶನಕ್ಕೆ ಯಾವುದೇ TA/DA ಯನ್ನು ಅನುಮತಿಸಲಾಗುವುದಿಲ್ಲ.
3. ವಿವರವಾದ ಮಾಹಿತಿ ಮತ್ತು ಅರ್ಜಿ ನಮೂನೆಯು ಶಾಲೆಯ ವೆಬ್‌ಸೈಟ್‌ನಲ್ಲಿ ಲಭ್ಯವಿದೆ: https://mgrly.kvs.ac.in

Sd/- PRINCIPAL

ಕನನೀಸ ಮತ್ತು ಒಚ ಮಂಡಳಿ
ಮುಖ್ಯ ಅಭಿಯಂತರರ ಕಛೇರಿ
ಜಲಭವನ, ಪಿ-4, 10ನೇ ಮುಖ್ಯ ರಸ್ತೆ, 3ನೇ ಅಡ್ಡ ರಸ್ತೆ, 3ನೇ ಮಹಡಿ
ಸರಸ್ವತಿಪುರಂ, ಮೈಸೂರು-09. ದೂ: 0821-2545894, ಇಮೇಲ್: kwbcemys2014@gmail.com

IFT ಸಂಖ್ಯೆ: 444/2024-25 ದಿನಾಂಕ: 12.07.2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಮಾತ್ರ)

ಕಾಮಗಾರಿಯ ವಿವರ: ಮೈಸೂರು ನಗರಕ್ಕೆ ಹಳೇ ಉಂಡವಾಡಿ ಗ್ರಾಮದ ಬಳಿ ಕಾವೇರಿ ನದಿ ಮೂಲದಿಂದ ಮೈಸೂರು ನಗರ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಮೈಸೂರು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಮತ್ತು ವ್ಯಾಪ್ತಿಯ ಹೊರಗೆ ಬರುವ 92 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆಯಡಿ ನಿರ್ಮಿಸಿರುವ ಮೂಲ ಸ್ಥಾವರದಲ್ಲಿ ಕಾಫರ್ ಅಣೆಕಟ್ಟು ಮತ್ತು ಡ್ರೌಟ್ ಕಾಲುವೆ ನಿರ್ಮಾಣ, ಮತ್ತು ಸಂಬಂಧಿತ ಇತರೆ ಸಿವಿಲ್ ಕಾಮಗಾರಿಗಳ **ರೂ. 2535.25 ಲಕ್ಷಗಳಿಗೆ** ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಇಂಡೆಂಟ್ ಸಂಖ್ಯೆ: KUWSDB/2024-25/WS/WORK_INDENT227 ರಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ಸಂಪರ್ಕಿಸುವುದು.

ಸಹಿ/- ಮುಖ್ಯ ಅಭಿಯಂತರರು
ಕನನೀಸ ಮತ್ತು ಒಚ ಮಂಡಳಿ, ಮೈಸೂರು

DIPR/MYS/KAVITA/268/24-25

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ.
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.

ನಂ: ಇಇ/ಎಂಐಡಿ/ಬೀದರ/ತಾ.ಶಾ-1,2&3/ಟೆಂಡರ್/2024-25/847 ದಿನಾಂಕ: 15.07.2024

ಕೆಪಿಪಿ-ಪ್ರೋಕ್ಯೂರಮೆಂಟ ಟೆಂಡರ್ ಪ್ರಕಟಣೆ 2ನೇ-ಕರೆ

1) ಕಾಮಗಾರಿಗಳ ವಿವರ. : KPP -Portalನಲ್ಲಿ ನಮೂದಿಸಿದಂತೆ. 2) ಕಾಮಗಾರಿಗಳ ಅಂದಾಜು ಮೊತ್ತ : KPP -Portalನಲ್ಲಿ ನಮೂದಿಸಿದಂತೆ. 3) ಗುತ್ತಿಗೆದಾರರ ಅರ್ಹತೆ ವಿವರ. : KPP -Portalನಲ್ಲಿ ನಮೂದಿಸಿದಂತೆ, 4) ಕಾಮಗಾರಿಗಳ ಟೆಂಡರ ಮೊತ್ತದ ವಿವರ. : KPP -Portalನಲ್ಲಿ ನಮೂದಿಸಿದಂತೆ, 5) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ. : KPP -Portalನಲ್ಲಿ ನಮೂದಿಸಿದಂತೆ. 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: ಕೆ.ಡಬ್ಲೂ -3 ಮಾತ್ರ : 22-07-2024 ರಂದು 17.00 ಗಂಟೆವರೆಗೆ 7) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ ಕೆ.ಡಬ್ಲೂ -3 & ಮಾತ್ರ : 24-07-2024 ರಂದು 16.00 ಗಂಟೆ ವರೆಗೆ, 8) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲೂ -3 ಮಾತ್ರ : 26-07-2024 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ, 9) ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲೂ -3 ಮಾತ್ರ: 29-07-2024 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ, 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ ವಿಳಾಸ, ದೂರವಾಣಿ ಸಂಖ್ಯೆ. : ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ.ವಿಭಾಗ, ಬೀದರ. ದೂರವಾಣಿ ಸಂ: 08482 232080, 11) ಅಂತರ್ಜಾಲ ತಾಣದ ವಿಳಾಸ. : KPP portal https://kppp.kamataka.gov.in

ಸಹಿ/- ಕಾರ್ಯ ನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.

ವಾ.ಸಾ.ಸಂ.ಇ/ಬೀದರ/68/ಕೆ.ಎಸ್.ಎಂ.ಸಿ.&ಎ/2024-25

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಹಾವೇರಿ
ದೂರವಾಣಿ ಸಂಖ್ಯೆ: 08375-249294 ಇ-ಮೇಲ್: dlohaveri1@gmail.com

ಸಂಖ್ಯೆ: ಜಿ.ಆ.ಕು.ಕ.ಹಾ/ಇ-ಟೆಂಡರ್/ /2024-25 ದಿನಾಂಕ: 08-07-2024

ಆಯುಷ್ಮಾನ್ ಭಾರತ ಪ್ರಧಾನ ಮಂತ್ರಿ ಜನ್ ಆರೋಗ್ಯ ಯೋಜನೆ-ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಯ ಅನುಷ್ಠಾನಕ್ಕಾಗಿ ಜಿಲ್ಲಾ ಆಸ್ಪತ್ರೆ, ಹಾವೇರಿ ಹಾಗೂ ವಿವಿಧ ತಾಲ್ಲೂಕು ಆಸ್ಪತ್ರೆಗಳಿಗೆ ಕಾರ್ಯನಿರ್ವಾಹಕರುಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಏಜೆನ್ಸಿ ಮೂಲಕ ಪಡೆಯುವ ಬಗ್ಗೆ ಇ-ಟೆಂಡರ್ ಪ್ರಕಟಣೆ.

1	ಟೆಂಡರ್‌ನ ಅಂದಾಜು ಮೊತ್ತ	ರೂ. 22.08 ಲಕ್ಷ
2	ಇ.ಎಂ.ಡಿ ಮೊತ್ತ	ರೂ. 55,200/-
3	ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇ-ಟೆಂಡರ್‌ನ್ನು ಡೌನ್‌ಲೋಡ್ ಮತ್ತು ಅಪ್ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ಸಮಯ	ದಿ: 11-07-2024 ರಿಂದ 31-07-2024 ರವರೆಗೆ ಸಂಜೆ 04:00 ಗಂಟೆಯವರೆಗೆ.
4	ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ ಮತ್ತು ಸಮಯ	ದಿ: 01-08-2024 ಸಂಜೆ 04:30 ಗಂಟೆಯವರೆಗೆ.
5	ಆರ್ಥಿಕ ಲಕೋಟೆ ತೆರೆಯುವ ದಿನಾಂಕ	ತಿಳಿಸಲಾಗುವುದು.

ಒಂದು ವೇಳೆ ತಾಂತ್ರಿಕ ಹಾಗೂ ಹಣಕಾಸು ಬಿಡ್‌ನ ತೆರೆಯುವ ದಿನಾಂಕ ದಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ, ಆಡಳಿತಾತ್ಮಕ ಹಾಗೂ ತಾಂತ್ರಿಕ ತೊಂದರೆಯಾದಲ್ಲಿ ಮುಂದಿನ ಕರ್ತವ್ಯದ ದಿನದಂದು ಇ-ಟೆಂಡರ್ ತೆರೆಯಲಾಗುವುದು.

ಸಹಿ/-
ಜಿಲ್ಲಾ ಎ.ಬಿ.ಎ.ಆರ್.ಕೆ. ನೋಡಲ್ ಅಧಿಕಾರಿಗಳು, ಹಾವೇರಿ

ಸಹಿ/-
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಹಾವೇರಿ

ವಾ.ಸಾ.ಇ/ಹಾವೇರಿ/113/ದೇಶಪಾಂಡೆಪಬ್ಲಿಸಿಟಿ/2024-25

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು - 560 064
ವೆಬ್‌ಸೈಟ್: www.rwf.indianrailways.gov.in.

ಇ-ಟೆಂಡರ್‌ಗಳು: ಭಾರತದ ರಾಷ್ಟ್ರಪತಿಯವರ ಪರವಾಗಿ ಪ್ರಧಾನ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರ್‌ರವರು ಕೆಳಕಂಡ ಕೆಲಸಗಳಿಗೆ ವೆಬ್‌ಸೈಟ್ https://www.ireps.gov.in (Works) ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಪ್ರಕಟಣೆ ಸಂಖ್ಯೆ : ಆರ್‌ಡಬ್ಲ್ಯೂಎಫ್/ಎಂ/ಓಟಿ/ಎಂಡಬ್ಲ್ಯೂಎಫ್‌ಪಿಎಸ್/2024-25/16 ದಿನಾಂಕ 15/07/2024

ಟೆಂಡರ್ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಂ/ಓಟಿ/ಎಂಡಬ್ಲ್ಯೂಎಫ್‌ಪಿಎಸ್/2024-25/28 ದಿನಾಂಕ 15/07/2024. **ಕೆಲಸದ ಹೆಸರು:** ಎಲ್‌ಎಸ್‌ಇ-1 ರಲ್ಲಿ ಕ್ಲೀನಿಂಗ್ ಮೆಷೀನ್‌ನ ಸ್ಟ್ರಕ್ಚರ್‌ಗಳನ್ನು ಬದಲಾಯಿಸುವುದು. **ಅಂದಾಜು ಮೌಲ್ಯ:** ರೂ. 2949686.14. **ಮುಂಗಡ ಠೇವಣಿ ಹಣ:** ರೂ. 59,000/-. **ಟೆಂಡರ್‌ಗಳ ಕೊನೆಯ ದಿನಾಂಕ ಹಾಗೂ ಸಮಯ:** 06/08/2024 ರಂದು 10.30 ಗಂಟೆಗೆ. **ಪೂರ್ಣಗೊಳಿಸಲು ಕಾಲಾವಧಿ:** 12 ತಿಂಗಳು.

ಉಪ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರ್/ಡಬ್ಲ್ಯೂ-II

ಇ-ಟೆಂಡರ್ ಪ್ರಕಟಣೆ ಸಂಖ್ಯೆ : ಆರ್‌ಡಬ್ಲ್ಯೂಎಫ್/ಎಂ/ಓಟಿ/ಎಎಸ್‌ಎಸ್‌ವೈ/2024-25/17 ದಿನಾಂಕ 13/07/2024

ಟೆಂಡರ್ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಂ/ ಓಟಿ/ಎಎಸ್‌ಎಸ್‌ವೈ/2024-25/24 ದಿನಾಂಕ 13/07/2024. **ಕೆಲಸದ ಹೆಸರು:** ಕೆಲಸದ ಹೆಸರು: ಅಸೆಂಬ್ಲಿ ಶಾಪ್‌ನ ಎಸ್‌ಎಂಟಿಸಿ ಅಸೆಂಬ್ಲಿ ಲೈನ್‌ನ ಕಾರ್ಯಾಚರಣೆ ಮತ್ತು ಸಂಬಂಧಿತ ಕಾರ್ಯಚಟುವಟಿಕೆಗಳ ಹೊರಗುತ್ತಿಗೆ. **ಅಂದಾಜು ಮೌಲ್ಯ:** ರೂ. 84,50,400/-. **ಮುಂಗಡ ಠೇವಣಿ ಹಣ:** ರೂ. 1,69,000/-. **ಟೆಂಡರ್‌ಗಳ ಕೊನೆಯ ದಿನಾಂಕ ಹಾಗೂ ಸಮಯ:** 05/08/2024 ರಂದು 10.30 ಗಂಟೆಗೆ. **ಪೂರ್ಣಗೊಳಿಸಲು ಕಾಲಾವಧಿ:** 10 ತಿಂಗಳು.

ಈ ಟೆಂಡರ್ ಪ್ರಕಟಣೆಯನ್ನು ನಮ್ಮ ವೆಬ್‌ಸೈಟ್: "www.rwf.indianrailways.gov.in" ನಲ್ಲಿ ನೋಡಬಹುದು.

ಉಪ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರ್/ಎಪಿ

"ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ವಿಜಯನಗರ ಜಿಲ್ಲೆ ಹೊಸಪೇಟೆ-583201"

ಸಂ:ಜಿನಕೋವಿ:ಅನ(ಮು)-4/ಟೆಂಡರ್‌ಪ್ರಕಟಣೆ/2024-25 ದಿನಾಂಕ :12.07.2024

ಮರು ಟೆಂಡರ್ ಪ್ರಕಟಣೆ

ವಿಜಯನಗರ ಜಿಲ್ಲೆ ವ್ಯಾಪ್ತಿಯ ನಗರಸಭೆ ಹೊಸಪೇಟೆ, ಪುರಸಭೆ ಹರಪನಹಳ್ಳಿ, ಹಗರಿಬೊಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಕೂಡ್ಲಿಗಿ, ಕೊಟ್ಟೂರು ಮತ್ತು ಮರಿಯಮ್ಮನಹಳ್ಳಿ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನಗರೋತ್ಥಾನ (ಮುನ್ಸಿಪಾಲಿಟಿ) 04 ನೇ ಹಂತದ ಯೋಜನೆಯಡಿ ಅನುಮೋದನೆಯಾದ ಕಾಮಗಾರಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆವಾರು ಪ್ಯಾಕೇಜ್ ಟೆಂಡರ್‌ಗಳನ್ನು ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ದಸ್ತಾವೇಜು ಗಳನ್ವಯ ಈ ಕೆಳಕಾಣಿಸಿದಂತೆ **Public Procurement Portal** ಮೂಲಕ ಮರು ಟೆಂಡರ್ ಅಹ್ವಾನಿಸಲಾಗಿರುತ್ತದೆ.

ಕಾಮಗಾರಿ ವಿವರ: 01.Improvements works and Infrastructure development Work for Government Schools in Hosapete CMC Limits Under AMNP 4 SCP & 7.25 Grant (DMA/2023-24/BD/WORK_INDENT17385/Call-2). **ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):** 192.76. **ಇ.ಎಂ.ಡಿ.(ರೂ.ಗಳಲ್ಲಿ):** 341190
02.Construction of Road and Drain at ward no.01,03,11,14,13,22,16,2,7,21 and 18 in Hagribommanahalli town limits (DMA/2023-24/OW/WORK_INDENT16608/Call-2). **ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):** 114.62. **ಇ.ಎಂ.ಡಿ.(ರೂ.ಗಳಲ್ಲಿ):** 202890
03.Construction of special Residential school for mentally retarded childrens in Hosapete City Limits Under AMNP-4 GrantsDMA/2023-24/BD/WORK_INDENT16928/Call-2). **ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):** 63.00. **ಇ.ಎಂ.ಡಿ.(ರೂ.ಗಳಲ್ಲಿ):** 126000
04.Construction of Library building in hagaribommanahalli and construction of PH Friendly toilet for PH Persons at Hagaribommanahalli town limits (DMA/2023-24/BD/WORK_INDENT16616/Call-2). **ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):** 62.26. **ಇ.ಎಂ.ಡಿ.(ರೂ.ಗಳಲ್ಲಿ):** 124520
05.Construction of CC Drain From Doddagaradikeri OHT to Railway Bridge Road Via Durgamma Temple at ward no.26 and 27th in Harapanhalli town limits Under AMNP-4 Grant. (DMA/2023-24/OW/WORK_INDENT16645/Call-2). **ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):** 28.31. **ಇ.ಎಂ.ಡಿ.(ರೂ.ಗಳಲ್ಲಿ):** 56720
06.Construction of library Building in CA Site Under AMNP-4 Grants at Harapanhalli town limits (DMA/2023-24/BD/WORK_INDENT17223/Call-2). **ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):** 44.03. **ಇ.ಎಂ.ಡಿ.(ರೂ.ಗಳಲ್ಲಿ):** 103900
07.Construction of cubble stone pavement from gacchinamata school to BDCC Bank and Pinakapani shop to ujjani road and Construction of deck slab near khasim sab house and Hiremata in ward no-03 Road, 2. Consrtucion of BT road and CC Road at ward No-08, 3. Construction of CC Drain and improvements of road from mallikarjun teacher house to veerabhadrappa house st ward no-18 drains in Kottur town Limits (DMA/2023-24/RD/WORK_INDENT16710/Call-2) (Reserved for SC Category Civil Contractors.). **ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):** 60.97. **ಇ.ಎಂ.ಡಿ.(ರೂ.ಗಳಲ್ಲಿ):** 61000
08.Construction of Providing Basic facility to school and Renovation of Library building in Ambedkar colony at ward no.20, Development of Park in maiduru shanthamma residential layout at basaveshwara badavane, Construction of physical handicap friendly toilet building at taluk office and new TP office, Construction of Anganavadi building at ward no.19 bellary camp and construction of public toilet at bandur camp in Kottur town limits Unde AMNP-4 Grant (DMA/2023-24/BD/WORK_INDENT16699/Call-2). **ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):** 66.95. **ಇ.ಎಂ.ಡಿ.(ರೂ.ಗಳಲ್ಲಿ):** 157980
09.Supplying and Fixing of Furnitures and Installation of CC camera in TP office building And Supplying and fixing of PH Friendly gym and playing equipments at KHB Colony Park of Ward no.4 for PH Childerns in Kudaligi town limits (DMA/2023-24/OW/WORK_INDENT16605/Call-2). **ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):** 30.15. **ಇ.ಎಂ.ಡಿ.(ರೂ.ಗಳಲ್ಲಿ):** 71140
10.Construction of Drain in ward 16,17 and 18 of town panchayath mariyamanahalli limits Under AMNP-4 Grant (DMA/2023-24/OW/WORK_INDENT16477/Call-2) (Reserved for SC Category Civil Contractors.). **ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):** 34.97. **ಇ.ಎಂ.ಡಿ.(ರೂ.ಗಳಲ್ಲಿ):** 34973
1.Last date & time for tender queries / clarifications **22.07.2024 at 17.30 Hrs.** 2.Last date and time for receipt of tenders **29.07.2024 at 16.30 Hrs.** 3.Date & time for opening of Technical bids **30.07.2024 at 17.00 Hrs.** 4.Auto extension of tender schedule **03 days**

ಮೇಲ್ಕಂಡ ದಿನಾಂಕಗಳಲ್ಲಿ ಆಕಸ್ಮಿಕ ರಜೆಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು, ಟೆಂಡರ್ ದಾಖಲಾತಿ ಮತ್ತು ಷರತ್ತುಗಳಿಗಾಗಿ **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಪರಿಶೀಲಿಸಿ, ಟೆಂಡರ್ ಭರ್ತಿ ಮಾಡುವುದು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕಗಳಲ್ಲಿ ಬದಲಾವಣೆ ಅಥವಾ ಷರತ್ತುಗಳಲ್ಲಿ ಏನಾದರೂ ಮಾರ್ಪಾಡುಗಳಿದ್ದಲ್ಲಿ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಚುರಪಡಿಸಲಾಗುವುದು. ಈ ಬಗ್ಗೆ ಪ್ರತ್ಯೇಕವಾಗಿ ಯಾವುದೇ ಪತ್ರಿಕಾ ಪ್ರಕಟಣೆ ನೀಡುವುದಿಲ್ಲ. ಹೆಚ್ಚಿನ ವಿವರಗಳಿಗೆ ಶ್ರೀ ಬಿ.ವೀರೇಶ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, (ದೂ ಸಂ : 9731867295) ಇವರನ್ನು ಸಂಪರ್ಕಿಸಿ ಪಡೆಯಬಹುದು.

ಸಹಿ/-ಕಾರ್ಯಪಾಲಕ ಅಭಿಯಂತರರು
ಜಿಲ್ಲಾನಗರಾಭಿವೃದ್ಧಿ ಕೋಶ, ವಿಜಯನಗರ ಜಿಲ್ಲೆ.

ವಾ.ಸಾ.ಸಂ.ಇ/ವಿಜಯನಗರ/2024-25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/111

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಉಗ್ರಾಣ ಮತ್ತು ಖರೀದಿ ಇಲಾಖೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು - 560 027.

ಸಂಖ್ಯೆ. ಬೆಂಮಸಾಸಂಸ್ಥೆ/ಕೇಕ/ಉ&ಖನಿ/03/2024-25 ದಿ.15-07-2024

ಟೆಂಡರ್ ಆಹ್ವಾನ ಪ್ರಕಟಣೆ

ಬೆ.ಮ.ನ.ಸಾ.ಸಂಸ್ಥೆಗೆ ಅವಶ್ಯಕವಿರುವ ಈ ಕೆಳಗೆ ತೋರಿಸಲಾಗಿರುವ ಸೇವೆಗಳನ್ನು ಪಡೆಯಲು KPPP ನ ಮೂಲಕ ಟೆಂಡರ್ ಕರೆಯಲಾಗಿದ್ದು ಟೆಂಡರ್ ಆಸಕ್ತರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ ಮತ್ತು ದಿನಾಂಕ	ವಿವರಣೆ	ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಬಿಡ್‌ನ್ನು ಸಲ್ಲಿಸಲು ಕೊನೆ ದಿನಾಂಕ
		Regular Tender	
1	BMTC/2024-25/IND0064	ವಿವಿಧ ಗಾತ್ರಗಳ GHT ಬೋಲ್ಟ್ ಹಾಗೂ ನಟ್‌ಗಳ ಖರೀದಿ ಬಗ್ಗೆ.	30.07.2024 at 17.00Hrs
2	BMTC/2024-25/IND0066	ಬಾನೆಟ್ ಕ್ಲಾಂಪ್‌ಗಳು, ಸೆಲ್ಫ್ ಥ್ರೆಡ್ ಬೋಲ್ಟ್ ಮುಂತಾದವುಗಳ ಖರೀದಿ ಬಗ್ಗೆ.	30.07.2024 at 17.00Hrs
3	BMTC/2024-25/IND0068	ಸ್ಯಾಂಡಿರಿಂಗ್ ಡಿಸ್ಕ್ ಮಾಸ್ಕಿಂಗ್ ಟೇಪ್ ಪಟ್ಟಿ ಬ್ಲೇಡ್‌ಗಳ ಖರೀದಿ ಬಗ್ಗೆ.	30.07.2024 at 17.00Hrs
4	BMTC/2024-25/IND0069	ಕಂಡಕ್ಟರ್ ಲೇಧರ್ ಕ್ಯಾಶ್ ಬ್ಯಾಗ್ ಖರೀದಿ ಬಗ್ಗೆ.	29.07.2024 at 17.00Hrs
5	BMTC/2024-25/IND0071	ಫ್ಯಾನ್ ಬೆಲ್ಟ್‌ಗಳ ಖರೀದಿ ಬಗ್ಗೆ.	12.08.2024 at 17.00Hrs
6	BMTC/2024-25/IND0072	ವಾಟರ್ ಪಂಪ್ ಮತ್ತು ಬಿಡಿಭಾಗಗಳ ಖರೀದಿ ಬಗ್ಗೆ.	12.08.2024 at 17.00Hrs
7	BMTC/2024-25/IND0073	MS ಆಂಗಲ್‌ಗಳು ಮತ್ತು MS ಫ್ಲಾಟ್‌ಗಳ ಖರೀದಿ ಬಗ್ಗೆ.	30.07.2024 at 17.00Hrs
8	BMTC/2024-25/IND0075	ಪೀಠೋಪಕರಣಗಳ ಖರೀದಿ ಬಗ್ಗೆ.	29.07.2024 at 17.00Hrs
9	BMTC/2024-25/IND0084	ವಿವಿಧ ಗಾತ್ರಗಳ ರಬ್ಬರ್ ಗ್ಲೇಜಿಂಗ್ ಖರೀದಿ ಬಗ್ಗೆ.	30.07.2024 at 17.00Hrs
10	BMTC/2024-25/IND0090	ಕ್ಯೂರಿಂಗ್ ಎನ್ವಲಪ್‌ಗಳು ಮತ್ತು ಕ್ಯೂರಿಂಗ್ ಬ್ಯಾಗ್‌ಗಳ ಖರೀದಿ ಬಗ್ಗೆ.	30.07.2024 at 17.00Hrs
11	BMTC/2024-25/IND0091	ETM ಥರ್ಮಲ್ ಪೇಪರ್ ರೋಲ್ ಖರೀದಿ ಬಗ್ಗೆ.	12.08.2024 at 17.00Hrs
12	BMTC/2024-25/IND0092	ಕ್ಲಚ್ ಮತ್ತು ಕ್ಲಚ್ ಭಾಗಗಳ ಖರೀದಿ ಬಗ್ಗೆ.	12.08.2024 at 17.00Hrs
13	BMTC/2024-25/SEO469	ಇಂಜಿನ್ ಬಿಡಿಭಾಗಗಳ ದುರಸ್ಥಿಯ ಬಗ್ಗೆ.	26.07.2024 at 17.00Hrs
	ತಿದ್ದುಪಡಿ: kpp-ಪೋರ್ಟಲ್‌ನಲ್ಲಿ ಈ ಕೆಳಕಂಡ ಟೆಂಡರ್‌ಗಳಿಗೆ ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯವನ್ನು ಕೆಳಗಿನಂತೆ ವಿಸ್ತರಿಸಲಾಗಿದೆ.		
1	BMTC/2023-24/IND0047	ಆಟೋಮೊಟಿವ್ ಬ್ಯಾಟರಿಗಳ ಖರೀದಿ ಬಗ್ಗೆ.	19.07.2024 at 17.00Hrs
2	BMTC/2024-25/IND0083	ರೇಡಿಯಂ ಸ್ಟಿಕ್ಕರ್ ಮತ್ತು ವಿನೈಲ್ ಸ್ಟಿಕ್ಕರ್ ಶೀಟ್‌ಗಳ ಖರೀದಿ ಬಗ್ಗೆ.	30.07.2024 at 17.00Hrs
3	BMTC/2023-24/IND0059	ಪ್ರೊಪೆಲ್ಲರ್ ಸ್ಯಾಫ್ಟ್ ಮತ್ತು ಅದಕ್ಕೆ ಸಂಬಂಧಿತ ಬಿಡಿಭಾಗಗಳ ಖರೀದಿ ಬಗ್ಗೆ.	12.08.2024 at 17.00Hrs
4	BMTC/2023-24/IND0061	ಬಾಲ್ ಮತ್ತು ರೋಲರ್ ಬೇರಿಂಗ್‌ಗಳ ಖರೀದಿ ಬಗ್ಗೆ.	12.08.2024 at 17.00Hrs
5	BMTC/2023-24/IND0058	ಏರ್‌ಸಸ್ಪೆನ್ಷನ್ ಬಿಡಿಭಾಗಗಳ ಖರೀದಿ ಬಗ್ಗೆ.	12.08.2024 at 17.00Hrs

ಈ ಮೇಲಿನ ಟೆಂಡರ್‌ಗಳಿಗೆ ಸಂಬಂಧಿಸಿದ ವಿವರಗಳನ್ನು **https://kppp.karanataka.gov.in** ನಿಂದ ಪಡೆಯಬಹುದು.

ಸಹಿ/-ಉಗ್ರಾಣ ಮತ್ತು ಖರೀದಿ ನಿಯಂತ್ರಕರು (ಟೆಂಡರ್ ಕರೆಯುವ ಪ್ರಾಧಿಕಾರಿ)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಟೆಂಡರ್ ಆಹ್ವಾನಿಸುವ ನೋಟೀಸ್ ಸಂಖ್ಯೆ: 09 ದಿನಾಂಕ: 17/02/2024

ಈ ಕೆಳಗೆ ತಿಳಿಸಿರುವ ಸಾಮಗ್ರಿಗಳನ್ನು ಸರಬರಾಜು ಮಾಡಲು/ಸೇವೆಗಳನ್ನು ಒದಗಿಸಲು ಅರ್ಹ ಸರಬರಾಜುದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ (ಪೂರ್ವ ಅರ್ಹತೆ ಅಥವಾ ವಾಣಿಜ್ಯ ದರ) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಇ-ಪೋರ್ಟಲ್ ನ ಟೆಂಡರ್ ಸಂಖ್ಯೆ	ಖರೀದಿಸುವ ಸಾಮಗ್ರಿಗಳ/ಸೇವೆಗಳ ವಿವರ	ಟೆಂಡರ್‌ನ ಮೊತ್ತ ಕೋಟಿ ರೂ.ಗಳಲ್ಲಿ (ಅಂದಾಜು)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ವೇಳೆ@17.00 ಗಂಟೆ
KSRTC/2024-25/IND0114	ಹಬ್ಬ್ ಮತ್ತು ಬ್ರೇಕ್ ಡ್ರಮ್ಸ್‌ಗಳ ಖರೀದಿ	4.00	13/08/2024
KSRTC/2024-25/IND0115	ಬಾಲ್ ಮತ್ತು ರೋಲರ್ ಬೇರಿಂಗಳ ಖರೀದಿ	3.60	13/08/2024
KSRTC/2024-25/IND0116	ಫಾಸ್ಟ್‌ನರ್ಸ್‌ಗಳ ಖರೀದಿ	0.14	31/07/2024
KSRTC/2024-25/IND0118	ಪ್ಯಾನ್ ಬೆಲ್ಟ್ಸ್‌ಗಳ ಖರೀದಿ	0.50	13/08/2024
KSRTC/2024-25/IND0119	** ಟರ್ನ್‌ಕೀ ಆಧಾರದ ಮೇಲೆ 24 ವೋಲ್ಟ್ 1.5 ಕೆವಿಎ ಇನ್‌ವರ್ಟರ್ ಪೂರೈಕೆ, ಸ್ಥಾಪನೆ ಮತ್ತು ಕಾರ್ಯಾರಂಭ	0.12	31/07/2024
** GoK order No DPAR/113/EGM/2020 dt:09.10.2023 ರ ಪ್ರಕಾರ ಪೂರ್ವ ಅರ್ಹತೆ ಹೊಂದಿರುವ ಸರಬರಾಜುದಾರರು ಮಾತ್ರ ಭಾಗವಹಿಸಲು ಅರ್ಹರಾಗಿರುತ್ತಾರೆ.			
	ಅಲ್ಪಾವಧಿ ಟೆಂಡರ್		
KSRTC/2024-25/IND0117	ಅಲ್ಯೂಮಿನಿಯಂ ಪಾಪ್‌ರಿವೆಟ್ಸ್‌ಗಳ ಖರೀದಿ	0.45	29/07/2024
KSRTC/2024-25/SE1082	ಗುತ್ತಿಗೆ ಆಧಾರದ ಮೇಲೆ ಮಂಗಳೂರು ವಿಭಾಗಕ್ಕೆ ಚಾಲಕ ಸೇವೆಗಳನ್ನು ಒದಗಿಸುವ ಏಜೆನ್ಸಿಯನ್ನು ತೊಡಗಿಸುವ ಕುರಿತು	7.00	20/07/2024

ಮುಂದುವರೆದು, ಸಾಮಾಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ ಹಾಗೂ ಮೇಲ್ಕಂಡ ದಿನಾಂಕಗಳಲ್ಲಿ ಯಾವುದೇ ಸೇರ್ಪಡೆ / ತಿದ್ದುಪಡಿ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಗೊಳಿಸಲಾಗುವುದು.

ಸೂಚನೆ: ಆಸಕ್ತಿಯುಳ್ಳ ಸರಬರಾಜುದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in. ಅಥವಾ ದೂರವಾಣಿ ಸಂಖ್ಯೆ: 080-22230960/22234115 ಕರೆಮಾಡಿ / support@eprochelpdesk.com, ಇ-ಮೇಲ್ ಮಾಡಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/- ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿಗಳು
(ಟೆಂಡರ್ ಕರೆಯುವ ಪ್ರಾಧಿಕಾರಿ)

ವಾ.ಸಾ.ಸಂ.ಇ/ವಾಪ್ರ/939/ಆಕಾರ್/2024-25

ನಗರಸಭಾ ಕಾರ್ಯಾಲಯ ಹೊಸಕೋಟೆ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ-562114
ದೂ: 080-27931221 ಸಹಾಯವಾಣಿ: 080-27931759
ಇ-ಮೇಲ್: itstaff_ulb_hosakote@yahoo.com ವೆಬ್‌ಸೈಟ್: www.hosakotecity.mrc.gov.in

ನಂ: ನಸಹೊ/ಆ.ಶಾ/ಸಿಆರ್/MRF/ಟೆಂಡರ್/03/2024-25 ದಿನಾಂಕ: 15.07.2024

ಅಲ್ಪಾವಧಿ ರಿ-ಟೆಂಡರ್ ಪ್ರಕಟಣೆ (ಕೆ.ಪಿ.ಪಿ. ಪೋರ್ಟಲ್ ಮೂಲಕ)

ಪೌರಾಯುಕ್ತರು ನಗರಸಭೆ ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ ಸ್ವಚ್ಛ ಭಾರತ್ ಮಿಷನ್ 2.0, NMPC ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಪ್ರಕಾರ ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರು ಹಾಗೂ ಸರಬರಾಜುದಾರರಿಂದ (ಕೆ.ಪಿ.ಪಿ ಪೋರ್ಟಲ್) ಮುಖಾಂತರ ಟೆಂಡರ್‌ನ್ನು ಕರೆಯಲಾಗಿರುತ್ತದೆ.

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. ರೂ. ಗಳಲ್ಲಿ
1.	DMA/2024-25/BD/WORK_INDENT18793-CALL-2	99.90	169300/-
2.	DMA/2024-25/IND1835-Call-2	46.47	93000/-

ಹೆಚ್ಚಿನ ವಿವರಗಳನ್ನು ಕಛೇರಿಯ ಆರೋಗ್ಯ ಶಾಖೆಯಿಂದ ಅಥವಾ ವೆಬ್‌ಸೈಟ್: **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/- ಪೌರಾಯುಕ್ತರು, ಹೊಸಕೋಟೆ
ಸಹಿ/- ಆಡಳಿತಾಧಿಕಾರಿಗಳು, ಹೊಸಕೋಟೆ

ವಾಸಾಸಂಇ/ವಾಪ್ರ/931/ಸ್ಪ್ಯಾನ್/2024-25

ನಗರಸಭಾ ಕಾರ್ಯಾಲಯ, ಹಾಸನ. ಬಿ.ಎಂ.ರಸ್ತೆ, ಸಂತೇಪೇಟೆ ವೃತ್ತ, ಹಾಸನ-573201.
ದೂ.ಸಂ: 08172-268276, 233702 Email: commn_hassan@yahoo.com
ಸಂ:ಪೌಆ/ನ.ಸ.ಹಾ/ ಇಂ.ವಿ(ವಿ)/ಬೀ.ದೀ.ವಾ.ನಿ/01/2024-25 ದಿನಾಂಕ:11/07/2024

ಟೆಂಡರ್ ಪ್ರಕಟಣೆ:

ಹಾಸನ ನಗರಸಭಾ ವ್ಯಾಪ್ತಿಯ ವಿವಿಧ ಮಾದರಿಯ ಬೀದಿ ದೀಪಗಳ ವಾರ್ಷಿಕ ನಿರ್ವಹಣೆ ಕೆಲಸಕ್ಕೆ ಇ-ಪ್ರೊಕ್ಯೂರ್‌ಮೆಂಟ್ ಕೆ.ಪಿ.ಪಿ.ಪಿ ಪೋರ್ಟಲ್ (https://www.kppp.karnataka.gov.in) ಮೂಲಕ, 1)ಹಾಸನ ನಗರಸಭಾ ವ್ಯಾಪ್ತಿಗೆ ಸೇರ್ಪಡೆಗೊಂಡಿರುವ ಸತ್ಯಮಂಗಲ, ಬಿ. ಕಾಟೀಹಳ್ಳಿ, ಬೂವನಹಳ್ಳಿ ಗ್ರಾಮ ಪಂಚಾಯಿತ್ತಿಗಳ ವ್ಯಾಪ್ತಿಯ ವಿವಿಧ ಮಾದರಿಯ ಬೀದಿ ದೀಪಗಳ ವಾರ್ಷಿಕ ನಿರ್ವಹಣೆ ಕೆಲಸ-74.75 ಲಕ್ಷ, 2)ಹಾಸನ ನಗರಸಭಾ ವ್ಯಾಪ್ತಿಗೆ ಸೇರ್ಪಡೆಗೊಂಡಿರುವ ಹರಳಹಳ್ಳಿ, ಕಂದಲಿ, ತೇಜೂರು, ಮಣಚನಹಳ್ಳಿ, ತಟ್ಟೇಕೆರೆ(ಬಿಟ್ಟಗೌಡನಹಳ್ಳಿ) ಮತ್ತು ಹನುಮಂತಪುರ ಗ್ರಾಮ ಪಂಚಾಯಿತ್ತಿಗಳ ವ್ಯಾಪ್ತಿಯ ವಿವಿಧ ಮಾದರಿಯ ಬೀದಿ ದೀಪಗಳ ವಾರ್ಷಿಕ ನಿರ್ವಹಣೆ ಕೆಲಸ-91.55 ಲಕ್ಷ, 3)ಹಾಸನ ನಗರಸಭಾ ವ್ಯಾಪ್ತಿಯ ವಾರ್ಡ ನಂ. 1 ರಿಂದ 17 ರವರಗೆ ವಿವಿಧ ಮಾದರಿಯ ಬೀದಿ ದೀಪಗಳ ವಾರ್ಷಿಕ ನಿರ್ವಹಣೆ ಕೆಲಸ-77.84 ಲಕ್ಷ ಮತ್ತು 4)ಹಾಸನ ನಗರಸಭಾ ವ್ಯಾಪ್ತಿಯ ವಾರ್ಡ ನಂ. 18 ರಿಂದ 35 ರವರಗೆ ವಿವಿಧ ಮಾದರಿಯ ಬೀದಿ ದೀಪಗಳ ವಾರ್ಷಿಕ ನಿರ್ವಹಣೆ ಕೆಲಸ- 80.44 ಲಕ್ಷ ಟೆಂಡರ್ ಕರೆಯಲಾಗಿದ್ದು, ಗುತ್ತಿಗೆದಾರರು ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ:26/07/2024ರ ಸಂಜೆ 5.30 ಗಂಟೆಯೊಳಗೆ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಕ್ಕಾಗಿ ನಗರಸಭೆ ಟೆಂಡರ್ ಶಾಖೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ ಹಾಸನ ಇವರಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದು ದೂರವಾಣಿ: 08172-268276. ಕಾಮಗಾರಿ ವಿವರ ಈ ಕೆಳಕಂಡಂತಿದೆ.

ಸಹಿ/-ಪೌರಾಯುಕ್ತರು,
ನಗರಸಭೆ, ಹಾಸನ.

ವಾಸಾಸಂಇ/ಹಿಸನಿ/ಹಾಸನ/192/ಕೆಎಸ್‌ಎಂಸಿಎ/2024-25

ಕರ್ನಾಟಕ ಸರ್ಕಾರ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ
ಸಂ:ಕಾಇಂ/ಗ್ರಾಕುನೀ&ನೈವಿ/ಟೆಂಡರ್ ಪ್ರಕಟಣೆ ನಂ.02/2024-25/ JE-1/469/ ದಿನಾಂಕ: 12.07.2024

ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಉಡುಪಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಂದ ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕು ನಾಡ ಸೇನಾಪುರ ಬಡಕೆರೆ ಮತ್ತು ಹಡವು ಗ್ರಾಮ ಪಂಚಾಯತ್ 29 ಜನವಸತಿ ಪ್ರದೇಶಗಳಿಗೆ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಗೆ, KPP ಪೋರ್ಟಲ್‌ನಲ್ಲಿ ನೊಂದಾಯಿಸಿದ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ.

1. ಟಂಡರ್‌ಗಳನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕ: 12.07.2024 ರಿಂದ 29.07.2024ರ 4.00 ಗಂಟೆ PM ವರೆಗೆ.
2. ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: 30.07.2024 04.30 PM ನಂತರ.
3. ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: 31.07.2024 11.00 AM ನಂತರ.

ಇನ್ನಿತರೆ ನಿಬಂಧನೆಗಳು, ಇಎಂಡಿ ವಿವರ, ಗುತ್ತಿಗೆದಾರರ ದರ್ಜೆ ಮತ್ತು ಷರತ್ತುಗಳನ್ನು ಹಾಗೂ ಟೆಂಡರ್ ತಿದ್ದುಪಡಿಗಳನ್ನು ಅಥವಾ ಬದಲಾವಣೆಗಳನ್ನು ವೆಬ್‌ಸೈಟ್ https://www.kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಛೇರಿಯವರಿಂದ ಪಡೆಯಬಹುದಾಗಿದೆ.

kpp portal helpdesk:080-22371090/ 22373788, Hphelpdesk.blr@intarvo.com

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಮನೆಯ ಜನ ನಿಮ್ಮ ಕಡೆ ಬೆರಳು ತೋರಿಸುವಂತಾದರೆ, ಹೊರಗಿನ ಜನ ಕಾಲು ತೋರಿಸುವಂತೆ ಆಗುತ್ತದೆ.

-ಚಾಣಕ್ಯ

ಟ್ರಂಪ್ ಹತ್ಯೆ ಯತ್ನ ಖಂಡನೀಯ ಬಂದೂಕು ನೀತಿ ಬದಲಾವಣೆಗೆ ಸಕಾಲ

ಅಮೆರಿಕದ ಅಧ್ಯಕ್ಷ ಸ್ಥಾನದ ಚುನಾವಣೆ ಸನಿಹದಲ್ಲಿರುವ ಸಂದರ್ಭದಲ್ಲಿ ಮಾಜಿ ಅಧ್ಯಕ್ಷ ಮತ್ತು ರಿಪಬ್ಲಿಕನ್ ಪಕ್ಷದ ಸಂಭಾವ್ಯ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಅವರ ಮೇಲೆ ಪೆನ್ಸಿಲ್ವೇನಿಯಾದ ಬಟ್ಲರ್ ಎಂಬಲ್ಲಿ ಗುಂಡಿನ ದಾಳಿ ನಡೆದಿರುವುದು ಆಘಾತಕರ ಮತ್ತು ಖಂಡನೀಯ. ಹತ್ಯೆ ಪ್ರಯತ್ನ ನಡೆಸಿದ ಥಾಮಸ್ ಮ್ಯಾಥ್ಯೂ ಕ್ರೂಕ್ಸ್ ಎಂಬ 20 ವರ್ಷದ ಯುವಕನನ್ನು ಸೀಕ್ರೆಟ್ ಸರ್ವಿಸ್‌ನ ಭದ್ರತಾ ಸಿಬ್ಬಂದಿಯು ಸ್ಥಳದಲ್ಲಿಯೇ ಹತ್ಯೆ ಮಾಡಿದ್ದಾರೆ. ಟ್ರಂಪ್ ಮೇಲೆ ದಾಳಿ ನಡೆಸಲು ಕ್ರೂಕ್ಸ್‌ಗೆ ಇದ್ದ ಕಾರಣ ಏನು ಎಂಬುದು ಇನ್ನೂ ತಿಳಿದುಬಂದಿಲ್ಲ. ಆದರೆ, ಇದು ಸಂಘಟಿತ ಕೃತ್ಯವೇನೂ ಅಲ್ಲ, ಬದಲಿಗೆ ಕ್ರೂಕ್ಸ್ ಏಕಾಂಗಿಯಾಗಿ ಈ ಕೃತ್ಯ ಎಸಗಿದ್ದಾನೆ ಎಂದು ಫೆಡರಲ್ ಬ್ಯೂರೊ ಆಫ್ ಇನ್‌ವೆಸ್ಟಿಗೇಷನ್‌ನ ಅಧಿಕಾರಿಗಳು ಹೇಳಿದ್ದಾರೆ. ಅಮೆರಿಕದ ಅಧ್ಯಕ್ಷರು ಅಥವಾ ಪ್ರಮುಖ ನಾಯಕರ ಹತ್ಯೆ ಮತ್ತು ಹತ್ಯೆ ಯತ್ನ ಈ ಹಿಂದೆಯೂ ನಡೆದಿತ್ತು. ಅಮೆರಿಕದ ಅತ್ಯಂತ ಜನಪ್ರಿಯ ಅಧ್ಯಕ್ಷರಲ್ಲಿ ಒಬ್ಬರಾದ ಅಬ್ರಹಾಂ ಲಿಂಕನ್ ಅವರನ್ನು 1865ರಲ್ಲಿ ಗುಂಡಿಕ್ಕಿ ಹತ್ಯೆ ಮಾಡಲಾಗಿತ್ತು. ಆ ಬಳಿಕವೂ ಅಧ್ಯಕ್ಷರಾಗಿದ್ದ ಜೇಮ್ಸ್ ಗಾರ್‌ಫೀಲ್ಡ್, ವಿಲಿಯಂ ಮೆಕಿನ್ಲೆ ಮತ್ತು ಜಾನ್ ಎಫ್. ಕೆನಡಿ ಅವರನ್ನು ಹತ್ಯೆ ಮಾಡಲಾಗಿದೆ. ಅಧ್ಯಕ್ಷರಾಗಿದ್ದ ಹಲವು ಮಂದಿಯನ್ನು ಹತ್ಯೆ ಮಾಡಲು ಯತ್ನಿಸಲಾಗಿದೆ. ಥಿಯೊಡೋರ್ ರೂಸ್‌ವೆಲ್ಟ್, ರೊನಾಲ್ಡ್ ರೇಗನ್ ಅವರು ಹತ್ಯೆ ಪ್ರಯತ್ನದಲ್ಲಿ ಗಾಯಗೊಂಡಿದ್ದಾರೆ. ಅಧ್ಯಕ್ಷರಾಗಿ ಚುನಾಯಿತರಾಗಿದ್ದ ಫ್ರಾಂಕ್ಲಿನ್ ಡಿ. ರೂಸ್‌ವೆಲ್ಟ್ ಅವರ ಮೇಲೆಯೂ 1933ರಲ್ಲಿ ದಾಳಿ ನಡೆದಿತ್ತು. ಆದರೆ, ಅವರು ಪಾರಾಗಿದ್ದರು. ಯದ್ವಾತದ್ವಾ ಗುಂಡು ಹಾರಿಸಿ ಅಮಾಯಕ ಜನರ ಹತ್ಯೆ ಮಾಡುವ ಪ್ರಕರಣಗಳು ಕೂಡ ಅಮೆರಿಕದಲ್ಲಿ ಕಡಿಮೆ ಏನಲ್ಲ. ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಆ್ಯಂಡ್ ಪ್ರಿವೆನ್ಷನ್‌ನ ಮಾಹಿತಿಯ ಪ್ರಕಾರ, 2021ರಲ್ಲಿ ಬಂದೂಕಿನಿಂದ ಹತ್ಯೆಯಾದವರ ಸಂಖ್ಯೆ 48,830. ಇಂತಹ ದುರಂತಗಳಿಗೆ ಮುಖ್ಯವಾದ ಕಾರಣ ಅಲ್ಲಿನ ಬಂದೂಕು ನೀತಿ. ಅತ್ಯಂತ ಸುಲಭವಾಗಿ ಬಂದೂಕು ಖರೀದಿಸಲು ಅಲ್ಲಿ ಸಾಧ್ಯ. ಟ್ರಂಪ್ ಮೇಲೆ ಗುಂಡು ಹಾರಿಸಲು ಬಳಸಿದ್ದು ಎಆರ್-15 ಮಾದರಿಯ ಅರೆಸ್ವಯಂಚಾಲಿತ ಬಂದೂಕು. ಇದನ್ನು ಕ್ರೂಕ್ಸ್‌ನ ತಂದೆ ಕಾನೂನುಬದ್ಧವಾಗಿಯೇ ಖರೀದಿ ಮಾಡಿದ್ದಾರೆ. ಬಂದೂಕು ನೀತಿಯನ್ನು ಬದಲಾಯಿಸಿ, ಬಂದೂಕು ಖರೀದಿಗೆ ಕಟ್ಟುನಿಟ್ಟಿನ ನಿಯಮಗಳನ್ನು ರೂಪಿಸುವ ಅಗತ್ಯ ಇದೆ ಎಂಬುದನ್ನು ಟ್ರಂಪ್ ಮೇಲಿನ ದಾಳಿಯು ತೋರಿಸುತ್ತದೆ.



ಟ್ರಂಪ್ ಮೇಲಿನ ದಾಳಿಯು ಅಮೆರಿಕದಲ್ಲಿ ರಾಜಕೀಯ ವಾತಾವರಣ ಎಷ್ಟೊಂದು ದ್ವೇಷದಿಂದ ಕೂಡಿದೆ ಎಂಬುದನ್ನು ಸೂಚಿಸುತ್ತದೆ

ಅಮೆರಿಕವನ್ನು ಪ್ರಬುದ್ಧ ಪ್ರಜಾಪ್ರಭುತ್ವ ಎಂದೇ ಪರಿಗಣಿಸಲಾಗುತ್ತಿದೆ. ಆದರೆ, ಇತ್ತೀಚಿನ ಕೆಲವು ವರ್ಷಗಳಲ್ಲಿ ರಾಜಕೀಯವಾಗಿ ಅತ್ಯಂತ ದ್ವೇಷಮಯ ವಾತಾವರಣ ಅಲ್ಲಿ ಇದೆ. ರಿಪಬ್ಲಿಕನ್ನರು ಮತ್ತು ಡೆಮಾಕ್ರಟರ ನಡುವೆ ಅತ್ಯಂತ ಗಾಢವಾದ ಧ್ರುವೀಕರಣ ಉಂಟಾಗಿದೆ. ಟ್ರಂಪ್ ಮೇಲೆ ದಾಳಿ ನಡೆದ ನಂತರ ಈ ಬಿರುಕು ಇನ್ನಷ್ಟು ದಟ್ಟವಾದಂತೆ ಕಾಣಿಸುತ್ತಿದೆ. ಅಧ್ಯಕ್ಷ ಜೋ ಬೈಡನ್ ಅವರೇ ಈ ದಾಳಿಗೆ ಕಾರಣ ಎಂದು ರಿಪಬ್ಲಿಕನ್ನರು ಆರೋಪಿಸಿದ್ದಾರೆ. ಟ್ರಂಪ್ ವಿರುದ್ಧ ಜನರನ್ನು ಎತ್ತಿಕಟ್ಟುವ ರೀತಿಯಲ್ಲಿ ಬೈಡನ್ ಆಡಿರುವ ಮಾತುಗಳು, ಟ್ರಂಪ್ ಗೆದ್ದರೆ ಪ್ರಜಾಪ್ರಭುತ್ವವನ್ನು ಧ್ವಂಸಗೊಳಿಸಲಿದ್ದಾರೆ ಎಂಬ ಆರೋಪ ಈ ದಾಳಿಗೆ ಕಾರಣ ಎಂದು ರಿಪಬ್ಲಿಕನ್ನರು ಹೇಳಿದ್ದಾರೆ. ಟ್ರಂಪ್ ಅವರ ಸಲಹೆಗಾರರೊಬ್ಬರು 'ಟ್ರಂಪ್ ಅವರನ್ನು ಚುನಾವಣೆಯಿಂದ ಹೊರಗಿಡಲು ಅವರು (ಡೆಮಾಕ್ರಟರು) ಬಯಸಿದ್ದಾರೆ, ಅವರನ್ನು ಜೈಲಿಗೆ ತಳ್ಳಲು ಯತ್ನಿಸಲಾಯಿತು, ಈಗ ಹೀಗಾಗಿದೆ ನೋಡಿ' ಎಂದು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಾಕಿದ್ದರು. ಬಳಿಕ ಅದನ್ನು ಅಳಿಸಲಾಯಿತು. ಆದರೆ, ವಾತಾವರಣ ಎಷ್ಟೊಂದು ದ್ವೇಷದಿಂದ ಕೂಡಿದೆ ಎಂಬುದನ್ನು ಇದು ಸೂಚಿಸುತ್ತದೆ. ಟ್ರಂಪ್ ಅವರೇ ತಮ್ಮ ಮೇಲೆ ದಾಳಿ ಮಾಡಿಸಿಕೊಂಡಿದ್ದಾರೆ ಎಂಬ ಸಂಕಥನವನ್ನೂ ಕಟ್ಟಲಾಗಿದೆ. ತಾವು ಸಂತ್ರಸ್ತ ಎಂದು ಬಿಂಬಿಸಿಕೊಳ್ಳಲು ಟ್ರಂಪ್ ಅವರು ಕೆಲವು ತಿಂಗಳುಗಳಿಂದ ಸತತವಾಗಿ ಪ್ರಯತ್ನಿಸುತ್ತಿದ್ದಾರೆ. ಇವೆಲ್ಲವೂ ಜನರ ಸಹಾನುಭೂತಿ ಪಡೆದುಕೊಂಡು ಚುನಾವಣೆ ಗೆಲ್ಲುವ ಕಾರ್ಯತಂತ್ರ ಎಂಬುದು ಮೇಲ್ನೋಟಕ್ಕೇ ಕಾಣಿಸುತ್ತದೆ. ಜನರ ಅಭಿವೃದ್ಧಿ, ಜಾಗತಿಕ ಶಾಂತಿ ಮತ್ತು ಸಮತೋಲನ ಹಾಗೂ ಪ್ರಜಾಪ್ರಭುತ್ವವನ್ನು ಇನ್ನಷ್ಟು ಗಟ್ಟಿಗೊಳಿಸುತ್ತೇವೆ ಎಂದು ಭರವಸೆ ಕೊಟ್ಟು ಚುನಾವಣೆ ಎದುರಿಸಬೇಕು. ಅದರ ಬದಲಿಗೆ ಧ್ರುವೀಕರಣ, ದ್ವೇಷ ಹರಡುವುದರ ಮೂಲಕ ಚುನಾವಣೆ ಎದುರಿಸುತ್ತೇವೆ ಎಂಬ ಮನಃಸ್ಥಿತಿ ಅಮೆರಿಕದಂತಹ ಪ್ರಬುದ್ಧ ಪ್ರಜಾಪ್ರಭುತ್ವ ವ್ಯವಸ್ಥೆಗೆ ತಕ್ಕುದಲ್ಲ. ರಿಪಬ್ಲಿಕನ್ನರು ಮತ್ತು ಡೆಮಾಕ್ರಟರು ಇದನ್ನು ಅರ್ಥ ಮಾಡಿಕೊಳ್ಳಬೇಕು. ಚುನಾವಣೆ ಅರ್ಥಪೂರ್ಣವಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಅಮೆರಿಕದಲ್ಲಿನ ಬೆಳವಣಿಗೆಗಳು ಇಡೀ ಜಗತ್ತಿನ ಶಾಂತಿ ಮತ್ತು ಸಮತೋಲನದ ಮೇಲೆ ಪರಿಣಾಮ ಬೀರುತ್ತವೆ ಎಂಬುದರ ಅರಿವು ಕೂಡ ಅಲ್ಲಿನ ನಾಯಕರಿಗೆ ಇರಬೇಕು.

ದಿನದ ಟ್ವೀಟ್

ಏನೆಂದು ಕರೆಯಬೇಕು?



ಗಮನ ಸೆಳೆದ ಸಂಗತಿ: ಬಿಜೆಪಿಯು ವಿರೋಧ ಪಕ್ಷಗಳನ್ನು ಒಡೆದಾಗ ಅದನ್ನು 'ಆಪರೇಷನ್ ಕಮಲ' ಎಂದು ಕರೆಯುತ್ತೇವೆ. ಅದೇ ರೀತಿ ಕಾಂಗ್ರೆಸ್ ಪಕ್ಷವು ಈಗ ತೆಲಂಗಾಣದಲ್ಲಿ ಬಿಆರ್‌ಎಸ್ ಅನ್ನು ಒಡೆಯುತ್ತಿರುವುದನ್ನು ನಾವು ಏನೆಂದು ಕರೆಯಬೇಕು? 9 ಮಂದಿ ಬಿಆರ್‌ಎಸ್ ಶಾಸಕರು ಇತ್ತೀಚಿನ ವಾರಗಳಲ್ಲಿ ಕಾಂಗ್ರೆಸ್ ಸೇರಿದ್ದಾರೆ ಮತ್ತು ಇನ್ನೂ ಕೆಲವು ಮಂದಿ ಇದೇ ಹಾದಿಯಲ್ಲಿ ಇದ್ದಾರೆ. ಆಪರೇಷನ್ 'ಹಾತ್ ಕಿ ಸಫಾಯಿ'?

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ

ಮಗುವಿನ ಮೇಲೆ ಲೈಂಗಿಕ ದೌರ್ಜನ್ಯ! ಹೈದರಾಬಾದ್‌ನ ಶಾಲೆಯೊಂದರಲ್ಲಿ ನೃತ್ಯ ಶಿಕ್ಷಕನೊಬ್ಬ ಒಂದನೇ ತರಗತಿಯ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಕೇಳಿಬಂದಿದೆ. ಮಾತು ಹೊರಡದಂತೆ ಆಗಿದೆ ಮತ್ತು ವಿಚಲಿತಳಾಗಿದ್ದೇನೆ. ಶಾಲೆಗಳು ಏನು ಮಾಡಬೇಕು? ಪೋಷಕರು ಏನು ಮಾಡಬೇಕು?

ರೇವತಿ, ಪತ್ರಕರ್ತೆ

25 ವರ್ಷಗಳ ಹಿಂದೆ

ಶುಕ್ರವಾರ, 16-7-1999

• ಪಟೇಲ್ ನಿಲುವು ದಿಢೀರ್ ಬದಲು ಬಿಜೆಪಿ ಕೂಟ ಸೇರುವ ಇಂಗಿತ

ಬೆಂಗಳೂರು, ಜುಲೈ 15– ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಕೇವಲ 24 ಗಂಟೆಗಳಲ್ಲಿ ತಮ್ಮ ನಿಲುವನ್ನು ದಿಢೀರ್ ಬದಲಾಯಿಸಿ ಬಿಜೆಪಿ ನೇತೃತ್ವದ 'ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ'ದ ಜತೆಗೆ ಸೇರುವ ಇಂಗಿತವನ್ನು ಇಂದು ಇಲ್ಲಿ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ಮತ್ತು ಬಿಜೆಪಿ ಇವೆರಡರಿಂದ ಸಮಾನಾಂತರ ದೂರದಲ್ಲಿದ್ದು ಜನತಾದಳದ ಬಲ ಹೆಚ್ಚಿಸಬೇಕಾಗಿದೆ ಎಂಬ ಜನತಾದಳ ಕಾರ್ಯಕಾರಿ ಸಮಿತಿಯ ನಿರ್ಣಯಕ್ಕೆ ಬದ್ಧರಾಗಿರುವುದಾಗಿ ನಿನ್ನೆ ಮಧ್ಯಾಹ್ನ ಹೇಳಿದ್ದ ಮುಖ್ಯಮಂತ್ರಿ ಅವರು ಇಂದು 'ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟದ ಜತೆಗೆ ಹೊಂದಾಣಿಕೆ ಮಾಡಿಕೊಳ್ಳಲು ತಾತ್ವಿಕವಾಗಿ ಒಪ್ಪಿದ್ದೇನೆ. ಇದು ಜನತಾದಳದ ರಾಜಕೀಯ ವ್ಯವಹಾರಗಳ ಸಮಿತಿಯ ಒಪ್ಪಿಗೆಯನ್ನು ಪಡೆಯಬೇಕಾಗಿದೆ' ಎಂದು ಲೋಕಶಕ್ತಿ ನಾಯಕ ರಾಮಕೃಷ್ಣ ಹೆಗಡೆ ಮತ್ತು ಸಮತಾ ಪಕ್ಷದ ನಾಯಕ ಜಾರ್ಜ್ ಫರ್ನಾಂಡಿಸ್ ಅವರ ಜತೆ ಮಾತುಕತೆ ನಡೆಸಿದ ನಂತರ ತಿಳಿಸಿದ್ದಾರೆ.

ಆದರೆ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಹಾಗೂ ಉಪಮುಖ್ಯಮಂತ್ರಿ ಸಿದ್ದರಾಮಯ್ಯ, ಕಾಂಗ್ರೆಸ್ ಮತ್ತು ಬಿಜೆಪಿ ಎರಡನ್ನೂ ಸಮಾನದೂರ ಉಳಿಸಿಕೊಂಡು ಚುನಾವಣೆ ಎದುರಿಸಲು ಪಕ್ಷದ ಕಾರ್ಯಕಾರಿ ಸಮಿತಿಯಲ್ಲಿ ಕೈಗೊಂಡ ನಿರ್ಣಯಕ್ಕೆ ಬದ್ಧರಾಗಿರುವುದಾಗಿ ಪುನರುಚ್ಚರಿಸಿದರು.

• ಕಾರ್ಗಿಲ್ ಕಾರ್ಯಾಚರಣೆ ಯುದ್ಧ ತೆರಿಗೆಗೆ ಸಮ್ಮತಿ?

ಮುಂಬೈ, ಜುಲೈ 15 (ಯುಎನ್‌ಐ)– ಕಾರ್ಗಿಲ್ ಕಾರ್ಯಾಚರಣೆಯಿಂದ ಬೊಕ್ಕಸದ ಮೇಲೆ ಉಂಟಾಗಿರುವ ಭಾರಿ ಆರ್ಥಿಕ ಹೊರೆಯ ಹಿನ್ನೆಲೆಯಲ್ಲಿ ಯುದ್ಧ ತೆರಿಗೆಯನ್ನು ವಿಧಿಸಲು ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರು ಮೌಖಿಕ ಸಮ್ಮತಿ ನೀಡಿದ್ದಾರೆಂದು ತಿಳಿದುಬಂದಿದೆ.

50 ವರ್ಷಗಳ ಹಿಂದೆ

ಮಂಗಳವಾರ 16-7-1974

• ಅಗತ್ಯವಿದ್ದರೆ ಮಾತ್ರ ಕಬ್ಬಿಣ, ಸಿಮೆಂಟ್ ಸರಬರಾಜು

ಬೆಂಗಳೂರು, ಜುಲೈ 15– ಇನ್ನು ಮೇಲೆ ಸರ್ಕಾರ ಅಗತ್ಯವೆಂದು ಪರಿಗಣಿಸುವ ನಿರ್ಮಾಣ ಕಾರ್ಯಗಳಿಗೆ ಮಾತ್ರ (ಮನೆಗಳೂ ಸೇರಿ) ಸಿಮೆಂಟ್ ಮತ್ತು ಕಬ್ಬಿಣ ಸರಬರಾಜು.

ಅನಗತ್ಯವಾದ ಕಟ್ಟಡಗಳಿಗೆ ಈ ಎರಡು ವಸ್ತುಗಳನ್ನು ಒದಗಿಸಬಾರದೆಂದು ಸದ್ಯದಲ್ಲೇ ಕೇಂದ್ರ ಸರ್ಕಾರ ಆಜ್ಞೆ ಹೊರಡಿಸಲಿದೆ.

ದುರ್ಬಲ ವರ್ಗದವರಿಗಾಗಿ ನಗರಾಭಿವೃದ್ಧಿ ಮಂಡಳಿ ಫ್ಲ್ಯಾಟ್‌ಗಳನ್ನು ನಿರ್ಮಿಸುವ ಯೋಜನೆಯ ಶಂಕುಸ್ಥಾಪನೆ ನೆರವೇರಿಸಿದ ಮುಖ್ಯಮಂತ್ರಿ ಶ್ರೀ ಅರಸು, ಕೇಂದ್ರ ಈ ರೀತಿಯ ಆಜ್ಞೆ ಹೊರಡಿಸುವ ಬಗ್ಗೆ ಸೂಚನೆ ಇತ್ತರು.

ಸಿಮೆಂಟ್ ಹಾಗೂ ಕಬ್ಬಿಣದ ಅಭಾವ ತಪ್ಪಿಸುವುದು ಹಾಗೂ ಅವುಗಳ ಬೆಲೆ ಮೇಲೆ ಹತೋಟಿ ತರುವುದು ಈ ನಿರ್ಧಾರದ ಉದ್ದೇಶವೆಂದು ಮುಖ್ಯಮಂತ್ರಿ ವಿವರಿಸಿದರು.

'ಒಂದು ಸಂಸಾರಕ್ಕೆ 15– 20 ಚದರದ ಮನೆ ಸಾಕು. ಆದರೆ 70 ಚದರ ಕಟ್ತಾರೆ. ಇದನ್ನು ತಪ್ಪಿಸಬೇಕು' ಎಂದು ಅನಗತ್ಯವಾದ ನಿರ್ಮಾಣ ಕಾರ್ಯದ ಕುರಿತು ನಿರ್ದೇಶನವೊಂದನ್ನು ನೀಡಿದರು.

ಬೇರು ಬಿಟ್ಟಿದ್ದನ್ನು ಮೂಲೋತ್ಪಾಟನೆ ಮಾಡುವುದಾಗಿ ಹೇಳಿ ಒಂದು ವರ್ಷ!

ರಾಜ್ಯಪಾಲರೇ, ಭ್ರಷ್ಟಾಚಾರ ತೊಲಗಿತೇ?



ಗತಿಬಿಂಬ

ವೈ.ಗ.ಜಗದೀಶ್

'ರಾಜ್ಯದಲ್ಲಿ ಭ್ರಷ್ಟಾಚಾರವು ಸಾಂಸ್ಥೀಕರಣಗೊಳ್ಳುವ ಮಟ್ಟಕ್ಕೆ ಬೇರುಬಿಟ್ಟಿದೆ. ಅದನ್ನು ನಿಗ್ರಹಿಸುವ ಸವಾಲನ್ನು ಎದುರಿಸಿ ಭ್ರಷ್ಟಾಚಾರವನ್ನು ಮೂಲೋತ್ಪಾಟನೆ ಮಾಡಲು ನಾನು ನಿಮ್ಮೆಲ್ಲರ ಸಹಕಾರ ಕೋರುತ್ತೇನೆ. ಈ ನಿಟ್ಟಿನಲ್ಲಿ ಅಗತ್ಯವಿರುವ ಆಡಳಿತಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳನ್ನು ನನ್ನ ಸರ್ಕಾರ ಕೈಗೊಳ್ಳಲಿದೆ...'

2023ರ ಜುಲೈ 4ರಂದು ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಮಾಡಿದ ಭಾಷಣದ ಸಾಲುಗಳಿವು.

ಬಿಜೆಪಿ ಆಡಳಿತಾವಧಿಯ ಭ್ರಷ್ಟಾಚಾರ, ಸ್ವಜನ ಪಕ್ಷಪಾತವು ನಾಡಿನ ಅಭಿವೃದ್ಧಿಗೆ 'ಕೇಡು' ಎಂಬುದನ್ನು ಜನರಿಗೆ ಅರ್ಥ ಮಾಡಿಸಿದ್ದ ಕಾಂಗ್ರೆಸ್ ನಾಯಕರು, ಚುನಾವಣೆಯಲ್ಲಿ ಭಾರಿ ಬಹುಮತದಿಂದ ಗೆದ್ದರು. ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಸಿದ್ದರಾಮಯ್ಯ ತಮ್ಮ 'ಸರ್ಕಾರದ ಹಾದಿ'ಯ ಬಗ್ಗೆ 224 ಶಾಸಕರು, ಪರಿಷತ್ತಿನ 75 ಸದಸ್ಯರ ಮುಂದೆ ರಾಜ್ಯಪಾಲರಿಂದ ಹೀಗೆ ಭರವಸೆ ಕೊಡಿಸಿದ್ದರು.

ಬಿಜೆಪಿ ಅವಧಿಯ ಆಡಳಿತದಿಂದ ರೋಸಿಹೋಗಿದ್ದ ಜನ ಕೂಡ ಪ್ರಾಮಾಣಿಕ, ಭ್ರಷ್ಟಾಚಾರರಹಿತ ಆಡಳಿತ ರಾಜ್ಯದಲ್ಲಿ ಟಿಸಿಲೊಡೆಯುತ್ತದೆ ಎಂದು ನಂಬಿದ್ದರು. ರಾಜ್ಯಪಾಲರು ವಾಗ್ದಾನ ಮಾಡಿ ಒಂದು ವರ್ಷ 10 ದಿನ ಕಳೆದಿದೆ. ವಿಧಾನಮಂಡಲದ ಅಧಿವೇಶನವೂ ಈಗ ನಡೆಯುತ್ತಿದೆ. ಎರಡು ತಿಂಗಳಿನಿಂದ ನಡೆಯುತ್ತಿರುವ ವಿದ್ಯಮಾನ ಗಮನಿಸಿದರೆ, ಬೇರು ಬಿಟ್ಟಿದ್ದ ಭ್ರಷ್ಟಾಚಾರದ ಮರವೀಗ ತನ್ನ ರೆಂಬೆ ಕೊಂಬೆಗಳನ್ನು ಚಾಚಿ ಬೆಳೆಯುತ್ತಿದೆ ಎನಿಸುತ್ತದೆ. ರಾಜ್ಯಪಾಲರ ಭಾಷಣವನ್ನು ಮತ್ತೆ ನೆನಪಿಸಬೇಕಾದ ಕಾಲ ಇದಾಗಿದೆ.

ಈ ಸರ್ಕಾರ ಅಧಿಕಾರಕ್ಕೆ ಬಂದ ಹೊಸತರಲ್ಲಿ 'ಗ್ಯಾರಂಟಿ'ಗಳ ಗುನುಗು, ಅವು ಬಹುಜನರಿಗೆ ತಂದಿತ್ತ ಹಿತಾನುಭವದಲ್ಲಿ ಆಡಳಿತಾರೂಢರು 'ನುಡಿದಂತೆ ನಡೆಯುತ್ತಿದ್ದಾರೆಯೇ' ಎಂಬ ಪ್ರಶ್ನೆಯೇ ಕಾಡಲಿಲ್ಲ. ವರ್ಷ ಸಮೀಪಿಸುತ್ತಿದ್ದಂತೆ ಭ್ರಷ್ಟಾಚಾರದ ಕಬಂಧ ಬಾಹುಗಳು ಬಿಜೆಪಿ ನೇತೃತ್ವದ ಸರ್ಕಾರದ ಅವಧಿಗಿಂತ ಬಿಗಿಗೊಂಡು, ವ್ಯವಸ್ಥೆಯನ್ನು ಆಪೋಶನ ತೆಗೆದುಕೊಳ್ಳುವ ಮಟ್ಟಿಗೆ ವಿಸ್ತಾರಗೊಳ್ಳುತ್ತಿರುವುದರ ಕುರುಹು ಕಾಣಿಸತೊಡಗಿತು. ಅದಕ್ಕೆ ಸ್ಫೋಟಕ ತಿರುವು ನೀಡಿದ್ದು ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ. ನಿಗಮದ ಅಧಿಕಾರಿ ಆತ್ಮಹತ್ಯೆ ಮಾಡಿಕೊಳ್ಳದೇ ಇದ್ದರೆ ಎಲ್ಲ ಹಗರಣಗಳಂತೆಯೇ ಇದೂ ಕಡತಗಳಡಿ ಹೂತುಹೋಗುತ್ತಿತ್ತು. ವಾಲ್ಮೀಕಿ ಸಮುದಾಯದ ಅಭಿವೃದ್ಧಿಗೆ ಮೀಸಲಿಟ್ಟ ಹಣದ ಪೈಕಿ ₹ 94 ಕೋಟಿಯನ್ನು ವರ್ಗಾವಣೆ ಮಾಡಿ ಅನ್ಯ ಉದ್ದೇಶಕ್ಕೆ ಬಳಸಿಕೊಳ್ಳಲಾಗಿದೆ ಎಂಬುದು ತನಿಖೆಯಿಂದ ಮೇಲ್ನೋಟಕ್ಕೆ ದೃಢಪಟ್ಟಿದೆ. ಸಚಿವ, ಶಾಸಕರ ಪಾತ್ರ ಇದರಲ್ಲಿ ಇಲ್ಲ ಎಂದು ಅಧಿಕಾರಾರೂಢರು ಪ್ರತಿಪಾದಿಸಿದರು. ಹಗರಣದ ಜಾಲ ಬಿಚ್ಚಿಕೊಳ್ಳುತ್ತಾ ಹೋದಂತೆ, ಇಲಾಖೆಯ ಉಸ್ತುವಾರಿ ಹೊತ್ತು, ಬಳಿಕ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದ ನಾಗೇಂದ್ರ ಬಂಧನವಾಗಿದೆ. 'ದೊಡ್ಡವರು' ಇದರಲ್ಲಿ ಭಾಗಿಯಾಗಿರುವ ಗುಮಾನಿ ತನಿಖಾ ಸಂಸ್ಥೆಗಳಿಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಪಾರ್ವತಿ ಅವರಿಗೆ ಸೇರಿದ್ದ ಜಮೀನಿಗೆ ಪರಿಹಾರ ರೂಪದಲ್ಲಿ 14 ನಿವೇಶನ ಹಂಚಿಕೆ ಮಾಡಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿದೆ ಎಂದು ಪ್ರತಿಪಕ್ಷಗಳು ಬಲವಾದ ಆರೋಪ ಮಾಡಿ, ದಾಖಲೆಗಳನ್ನೂ ಬಿಡುಗಡೆ ಮಾಡಿವೆ. ಎಲ್ಲವೂ ನ್ಯಾಯಯುತವಾಗಿವೆ; ತಮ್ಮದೇನೂ ತಪ್ಪಿಲ್ಲ ಎಂದು ಪ್ರತಿಪಾದಿಸಿರುವ ಸಿದ್ದರಾಮಯ್ಯ, ಈ ಪ್ರಕರಣದ ತನಿಖೆಗೆ ಏಕಸದಸ್ಯ ಆಯೋಗ ರಚಿಸಿದ್ದಾರೆ. ನಿವೇಶನ ಹಂಚಿಕೆಯಲ್ಲಿ ಯಾವುದೇ ಲೋಪವಾಗಿಲ್ಲವೆಂದರೆ ನ್ಯಾಯಮೂರ್ತಿ ಅವರ ನೇತೃತ್ವದಲ್ಲಿ ಆಯೋಗ ರಚಿಸುವ ಅಗತ್ಯವೇ ಇರಲಿಲ್ಲ. ಆದರೆ, ವಿಪಕ್ಷಗಳ ಆರೋಪ–ಮುಖ್ಯಮಂತ್ರಿ ಅವರ ಸಮರ್ಥನೆಗಳ ನಡುವೆ ಜಾರಿದ ಎಳೆಯೊಂದು ಸಂಶಯವನ್ನು ಹುಟ್ಟುಹಾಕಿದೆ. ಆಯೋಗದ ತನಿಖೆಯಷ್ಟೇ ಸತ್ಯಾಂಶವನ್ನು ಹೊರಗೆಳೆಯಬಲ್ಲದು.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧ್ಯಕ್ಷರಾಗಿರುವ ಶಾಸಕ ವಿನಯ ಕುಲಕರ್ಣಿ, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರ ವಿರುದ್ಧ ಹಲವು ಆಪಾದನೆಗಳನ್ನು ಮಾಡಿದ್ದಾರೆ. ಅಲ್ಲಿಯೂ ಅಕ್ರಮ ನಡೆದ ಗುಮಾನಿಗಳು ಇವೆ. ಬೆಂಗಳೂರು ಅಭಿವೃದ್ಧಿ ಸಚಿವ ಡಿ.ಕೆ.ಶಿವಕುಮಾರ್ ವಿರುದ್ಧ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಲವು ಆರೋಪಗಳನ್ನು ಮಾಡಿದ್ದಾರೆ. 'ಬ್ರ್ಯಾಂಡ್ ಬೆಂಗಳೂರು' ಹೆಸರಿನಲ್ಲಿ ತರುತ್ತಿರುವ ಬೃಹತ್ ಯೋಜನೆಗಳು, ನಗರ ಯೋಜನೆಗೆ ಸಂಬಂಧಿಸಿದ ವಿವಿಧ ಅನುಮತಿ, ಕಸದ ಗುತ್ತಿಗೆ ವ್ಯವಸ್ಥೆ ಬದಲಿಸುವಂತಹ ವಿಷಯಗಳಲ್ಲಿ ಆಳುವವರ ನಡೆಯಂತೂ ಪಾರದರ್ಶಕವಾಗಿಲ್ಲ. ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಕಾಮಗಾರಿ ಗುತ್ತಿಗೆಗೆ ಶೇ 40ರಷ್ಟು ಲಂಚ ನೀಡಬೇಕಾಗಿತ್ತು ಎಂದು ಕಾಂಗ್ರೆಸ್ ನಾಯಕರು ದೊಡ್ಡ ಆಂದೋಲನ ನಡೆಸಿದ್ದರು. ಒಂದು ವರ್ಷದ ಬಳಿಕವೂ ಪರಿಸ್ಥಿತಿ ಬದಲಾಗಿಲ್ಲ.

ಸಿದ್ದರಾಮಯ್ಯ ಮೊದಲ ಬಾರಿ ಮುಖ್ಯಮಂತ್ರಿಯಾದ ಅವಧಿಯಲ್ಲೂ ಇಂತಹದೇ ಹಲವು ವಿವಾದಗಳು ಮುನ್ನೆಲೆಗೆ ಬಂದಿದ್ದವು. ಅರ್ಕಾವತಿ ಬಡಾವಣೆಯ 868 ಎಕರೆ ಜಮೀನನ್ನು 'ರೀ–ಡೂ' ಹೆಸರಿನಲ್ಲಿ ಕೈಬಿಟ್ಟಿದ್ದು ಹಗರಣದ ಸ್ವರೂಪ ಪಡೆದುಕೊಂಡಿತ್ತು. 'ನ್ಯಾಯಾಲಯಗಳ ಆದೇಶವನ್ನಷ್ಟೇ ಪಾಲಿಸಿದ್ದೇವೆ' ಎಂದು ಸರ್ಕಾರ ಪ್ರತಿಪಾದನೆ ಮಾಡಿದರೂ ಬಿಳಿ ಅಂಗಿಗೆ ಅಂಟಿದ್ದ ಕಪ್ಪುಕಲೆ ಅಳಿಸಲಾಗಿರಲಿಲ್ಲ. ವಿರೋಧ ಪಕ್ಷಗಳ ಒತ್ತಡ ಹೆಚ್ಚಾದಾಗ, ನಿವೃತ್ತ ನ್ಯಾಯಮೂರ್ತಿ ಕೆಂಪಣ್ಣ ನೇತೃತ್ವದ ಆಯೋಗವನ್ನು ರಚಿಸಿ ವಿವಾದ ತಣ್ಣಗಾಗಿಸಲಾಗಿತ್ತು. ಈ 'ರೀ–ಡೂ' ಫಲಾನುಭವಿಗಳು 2019ರಲ್ಲಿ ಕಾಂಗ್ರೆಸ್ ತೊರೆದು, ಬಿಜೆಪಿ ಸೇರಿ ಯಡಿಯೂರಪ್ಪ ನೇತೃತ್ವದ ಸರ್ಕಾರದಲ್ಲಿ ಸಚಿವರೂ ಆಗಿಬಿಟ್ಟರು. ಹೀಗಾಗಿ, ಬಿಜೆಪಿ ಈ ವಿಷಯದಲ್ಲಿ ಮೌನಕ್ಕೆ ಶರಣಾಯಿತು.



ಸಿದ್ದರಾಮಯ್ಯ ಕಟ್ಟಿದ್ದ ಭಾರಿ ಬೆಲೆಯ ಹ್ಯೂಬ್ಲೊ ಕೈಗಡಿಯಾರ ಹಲವು ದಿನ ಸದ್ದು ಮಾಡಿತ್ತು. ಈ ಬಗ್ಗೆ ಸ್ಪಷ್ಟನೆ ನೀಡಿದ್ದ ಸಿದ್ದರಾಮಯ್ಯ, ಅದನ್ನು ಸರ್ಕಾರದ ಸ್ವತ್ತಾಗಿಸುವಂತೆ ಕೋರಿ ಸಭಾಧ್ಯಕ್ಷರಿಗೆ ಹಸ್ತಾಂತರಿಸಿದ್ದರು. ಹಲವು ಆರೋಪಗಳ ಕುರಿತಾಗಿ ಲೋಕಾಯುಕ್ತಕ್ಕೆ ದೂರುಗಳ ಸರಮಾಲೆಯೇ ಹರಿದುಬಂದಿತ್ತು. ಲೋಕಾಯುಕ್ತ ಶಕ್ತಿ ಕುಗ್ಗಿಸಲು ಮುಂದಾದ ಸರ್ಕಾರ, ಭ್ರಷ್ಟಾಚಾರ ನಿಗ್ರಹ ದಳ ರಚಿಸಿತು. ಆ ಮುಖೇನ, ಭ್ರಷ್ಟಾಚಾರದ ಯಾವುದೇ ದೂರು, ತನಿಖೆಯ ಗೊಡವೆಯೇ ಇಲ್ಲದಂತೆ ನೋಡಿಕೊಂಡಿತ್ತು. ಈಗ ಮತ್ತೆ ಹಗರಣಗಳ ಒಂದೊಂದೇ 'ಹಾವು' ಹೊರಗೆ ಬರಲಾರಂಭಿಸಿದೆ.

ವರ್ಷದ ಹಿಂದೆ ರಾಜ್ಯಪಾಲರಿಂದ ಆಶ್ವಾಸನೆ ಕೊಡಿಸಿದಂತೆ ಸರ್ಕಾರವನ್ನು ಸರಿದಾರಿಗೆ ತರಬೇಕಾದ ಕರ್ತವ್ಯವನ್ನು ಮುಖ್ಯಮಂತ್ರಿ ಪಾಲಿಸಬೇಕಾಗಿದೆ. ಸಿದ್ದರಾಮಯ್ಯ ಈಗಿನ ದೇವರಾಜ ಅರಸು ಎಂದು ಅವರ ಅಭಿಮಾನಿಗಳು ಹೇಳಿಕೊಳ್ಳುವುದುಂಟು. ಪ್ರಬಲ ಜಾತಿಯವರ ಸೊಕ್ಕನ್ನು ಮುರಿದಿದ್ದ ಅರಸು ಅವರು, ಅಲ್ಲಿಯವರೆಗೆ ರಾಜಕೀಯ ಹಾಗೂ ಸರ್ಕಾರಿ ನೌಕರಿಯಲ್ಲಿ ಪ್ರಾತಿನಿಧ್ಯವೇ ಸಿಗದ ಅಲಕ್ಷಿತ ಸಮುದಾಯಗಳಿಗೆ ಭವಿಷ್ಯದ ಬೆಳಕನ್ನು ತೋರಿಸಿಕೊಟ್ಟವರು. ತುರ್ತು ಪರಿಸ್ಥಿತಿಯ ಅಂಕುಶಗಳನ್ನು ಮುಂದಿಟ್ಟುಕೊಂಡು, ಮಲ ಹೊರುವ ಹಾಗೂ ಜೀತ ಪದ್ಧತಿಯ ನಿಷೇಧ ಜಾರಿ ಮಾಡಿದರು. ಉಳುವವನಿಗೆ ಹೊಲ ನೀಡುವ ಕಾಯ್ದೆ ಜಾರಿಗೊಳಿಸಿದರು. ಅಧಿಕಾರ ಪಾರಮ್ಯ ಉಳಿಸಿಕೊಳ್ಳಲು ಅಳಿಯ ಎಂ.ಡಿ.ನಟರಾಜ ಅವರ ಶಕ್ತಿಯನ್ನೂ ಯಥೇಚ್ಛವಾಗಿ ದುಡಿಸಿಕೊಂಡರು ಎಂಬ ಆರೋಪಕ್ಕೂ ಗುರಿಯಾದರು.

ಸಿದ್ದರಾಮಯ್ಯನವರು ಅರಸು ಹಾದಿಯಲ್ಲಿ ಕೆಲವೊಮ್ಮೆ ಸಾಗಿರುವುದು ಉಂಟು. ಹಿಂದುಳಿದವರೊಬ್ಬರು ಉನ್ನತ ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ಅಂದು ಅರಸರಿಗೆ ನಟರಾಜ ಬೇಕಿದ್ದಿರಬಹುದು. ಆದರೆ, ಇಂದಿನ 'ಅರಸ'ರಿಗೆ ಪ್ರಜಾಪ್ರಭುತ್ವದ ದೊಡ್ಡ ರಕ್ಷಣೆಯಿದೆ; ಸುತ್ತಲಿರುವ ಹಲವು ನಟರಾಜರು ಬೇಕಿಲ್ಲ. ಸೀಸರ್‌ನ ಪತ್ನಿ ಸಂಶಯಾತೀತಳಾಗಿರಬೇಕು ಎಂಬ ನಾಣ್ನುಡಿ ಇದೆ. ಹಿಂದೆ, ತಮ್ಮ ವಿರುದ್ಧ ಆರೋಪ ಎದುರಾದಾಗ ಕೈಗಡಿಯಾರವನ್ನು ಸಭಾಧ್ಯಕ್ಷರ ಸುಪರ್ದಿಗೆ ನೀಡಿದ್ದ ಸಿದ್ದರಾಮಯ್ಯ, ತಮ್ಮ ಹೆಸರಿನಲ್ಲೇ 'ರಾಮ' ಇದ್ದಾನೆ ಎಂದು ಹೇಳಿಕೊಳ್ಳುತ್ತಾರೆ. ದಾರಿಹೋಕನೊಬ್ಬ ಟೀಕೆ ಮಾಡಿದ್ದಕ್ಕೆ ಸೀತೆಯನ್ನೇ ಶ್ರೀರಾಮ ವನವಾಸಕ್ಕೆ ದೂಡಿದ್ದ. ಈಗ ಸಿದ್ದರಾಮಯ್ಯ ಕುಟುಂಬದ ವಿರುದ್ಧ ಆರೋಪ ಎದುರಾಗಿದೆ. ಸರ್ಕಾರದ ಮುಖ್ಯಸ್ಥರಾಗಿರುವ ಅವರು, ಪತ್ನಿ ಜಮೀನಿಗೆ ಪರ್ಯಾಯವಾಗಿ ₹ 65 ಕೋಟಿ ಪರಿಹಾರ ಕೇಳುವುದು ಸರಿಯಲ್ಲ; ರಕ್ಷಣೆಗಾಗಿ ಜಾತಿಯ ಅಸ್ತ್ರದ ಗುರಾಣಿಯೂ ಬೇಕಿರಲಿಲ್ಲ. ನಿವೇಶನಗಳನ್ನು ವಾಪಸ್ ನೀಡಿ, ಪ್ರಭಾವಿ ನಾಯಕ ಹೇಗಿರಬೇಕೆಂದು ತೋರಿಸಲಿ.

ಚುರುಮುರಿ



ತೂಕ ಬಾಧೆ

• ಡಿ.ಎಸ್.ಲಿಂಗರಾಜು

'ಅಣೈ, ದಿಂಡು ಕುಳಗಳು ಗುಂಭವಾಗಿರೋದು ಬುಟ್ಟು ಉಚಾಯಿಸಿಕ್ಯಂಡು ಹಗರಣ ಮಾಡಿಕ್ಯಂಡೇ ತಳ್ಳಾಯ್ತರೆ, ಅಕ್ರಮ ಹೆಚ್ಚಿಕ್ಯತವೆ! ಅಕ್ರಮವೂ ಈಗ ಡೆಂಗಿ ಥರ ಜಡ್ಡು ಆಗೋಗ್ಯದೆ' ಅಂದೆ.

'ಅದೀಯೆ, ತಿಟ್ಟಿನ ಮ್ಯಾಲೆ ಬದಲಿ ಸೈಟು ತಕ್ಕಂದೋರ ಕಡತಗಳೇ ಎಪ್ಪೆಸ್ ಆಗ್ಯವಂತೆ! ಸಿಬ್ಬಂದಿಗೆಲ್ಲಾ ಇಬ್ಬಂದಿಯಾಗ್ಯದೆ. ಮಿಸ್ಸಿಂಗ್ ಲಿಂಕ್ ಎಲ್ಲ್ಯದೆ ಅಂತ್ಲೆ ಗೊತ್ತಿಲ್ಲವಂತೆ!' ಚಂದ್ರು ಆಶ್ಚರ್ಯಪಟ್ಟ.

'ಫಡಫಡಾ ನೀನೇನು ಪಲುಕಿದೆ ಮೂಢಾ! ಧಗಧಗನೆದ್ದಿದೆ ದ್ವೇಷದ ಜ್ವಾಲೆ!' ತುರೇಮಣೆ ಕಂದಪದ್ಯ ಬಿಸಾಕಿದರು.

'ಬುಡಿ ಅತ್ತಗೆ, ಜೈಲಲ್ಲಿ ಅಣ್ಣನ ತೂಕ ಒಂದೇ ಸಮನೆ ಇಳೀತಾ ಅದಂತೆ. ತಿಂಗಳೊಪ್ಪತ್ತಲ್ಲಿ ಹತ್ತಿಪ್ಪತ್ತು ಕೇಜಿ ಕಮ್ಮಿ ಆಗ್ಯದಂತೆ!' ಅಂದ ಚಂದ್ರು.

'ಸಾ, ತೂಕ ಅಂದೇಟಿಗೆ ನನಗೆ ಒಂದು ಐಡೀರಿಯಾ ಬತ್ತಾ ಅದೆ' ಅಂತಂದೆ.

'ಅದೇನು ಇಚಾರ ಇಕ್ಕಡಿಕೆ ವತ್ಲಿಸು' ಅಂದ್ರು ತುರೇಮಣೆ.

'ಈಚೀಚೆಗೆ ಬಾಡಿ ತೂಕ ಇಳಿಸೋದೇ ಸಕತ್ ಬಿಜಿನೆಸ್ ಆಗ್ಯದೆ. 'ಒಂದು ಕೇಜಿ ಕೊಬ್ಬು ಇಳಿಸಕ್ಕೆ ಹತ್ತು ಸಾವಿರ ಮಾತ್ರ ಫೀಜು, ಬಲ್ರಿ!' ಅಂತ ಸ್ಲಿಮ್ಮಿಂಗ್ ಕ್ಲಾಸು ನಡೀತಾ ಅವೆ. ಸರ್ಕಾರ ಇದನ್ನ ಬಳಸಿಗ್ಯಂಡು ವಾರದ್ದು, ತಿಂಗಳದ್ದು ವೇಟ್ ರಿಡಕ್ಷನ್ ಆಫರ್ ಕೊಟ್ಟು, ಕಸ್ಟಮರುಗಳನ್ನ ಜೈಲಲ್ಲಿ ಕುಂದುರ್ಸಿ ಮೂರೊತ್ತೂ ಅದೇ ಊಟ ಕೊಟ್ರೆ ಜನಗಳ ತೂಕವೂ ಇಳಿದು ಇದೊಂದು ಹೊಸಾ ಗ್ಯಾರೆಂಟಿ ಸ್ಕೀಮಾಯ್ತದೆ, ಸರ್ಕಾರದ ಆರ್ಥಿಕ ದರ್ದೂ ಕಮ್ಮಿಯಾತದೆ' ಪುಸ್ಕಟ್ಟೆ ಐಡಿಯಾ ಕೊಟ್ಟೆ.

'ಹೂ ಕಯ್ಯ, ಅನುದಾನ ಸಿಕ್ಕತಿದ್ದಂಗೇ ಶಾಸಕರ ಮಕದಲ್ಲೂ ಸಂತೋಷ ಚಿಗುರಾಡ್ತದೆ!' ಅಂತು ಯಂಟಪ್ಪಣ್ಣ.

'ಜನದ ತೂಕ ಮೊದಲೇ ಇಳಿದೋಗ್ಯದೆ ಕಾ ಬುಡಿರ್ಲಾ. ರಾಜಕೀಯದೋರ ಅಕ್ರಮದ ತೂಕ ಇಳಿಸೋದೇ ಈಗಿನ ಜರೂರತ್ತು. ಹಗರಣ ಮಾಡಿಕ್ಯಂದು, ಟ್ರಿಪ್ಪಿಗೆ ಹೋದಂಗೆ ಜೈಲಿಗೆ ಹೋಯ್ತಾವ್ರೆ. ಅಲ್ಲಿ ಯಾರ್ಯಾರ ಓಕಳಿ ಇಟ್ವಾಡ್ತಾ ಅದೋ!' ತುರೇಮಣೆ ಸಮಸ್ಯೆ ಮುಂದಿಟ್ಟರು.

ಸಂಗತ

ಹೆತ್ತವರ ಕಾಳಜಿಗೂ ಒಂದು ಸ್ಕೀಂ!

ಇಳಿವಯಸ್ಸಿನಲ್ಲಿ ಹೆತ್ತವರಿಗೆ ತಮ್ಮ ಸಾಂಗತ್ಯ ಮತ್ತು ಅವಶ್ಯಕತೆ ಹೆಚ್ಚಾಗಿ ಇರುತ್ತದೆ ಎಂಬುದನ್ನು ಮಕ್ಕಳು ಅರಿತು ಅದಕ್ಕೆ ತಕ್ಕಂತೆ ಸ್ಪಂದಿಸಬೇಕಿದೆ

• ಸದಾಶಿವ್ ಸೊರಟೂರು

ಅಸ್ಸಾಂ ರಾಜ್ಯದ ಸರ್ಕಾರಿ ನೌಕರರಿಗೆ ಈ ವರ್ಷದ ನವೆಂಬರ್ 6 ಮತ್ತು 8ರಂದು ಎರಡು ದಿನ ವಿಶೇಷ ರಜೆ ಸಿಗಲಿದೆ. 7ರಂದು ಛತ್ ಪೂಜಾ ಹಬ್ಬ ಹಾಗೂ 9ರಂದು ಎರಡನೇ ಶನಿವಾರದ ಪ್ರಯುಕ್ತ ರಜೆ. 10ನೇ ತಾರೀಖು ಭಾನುವಾರ. ಒಟ್ಟು ಐದು ದಿನಗಳ ರಜೆ. ಈ ವಿಶೇಷ ರಜೆ ವೈಯಕ್ತಿಕ ಸಂತೋಷಕ್ಕಾಗಿ ಅಲ್ಲ. ನೌಕರ ತನ್ನ ಪೋಷಕರು ಅಥವಾ ಅತ್ತೆ-ಮಾವನ ಜೊತೆ ಸಮಯ ಕಳೆಯಲೆಂದು ರಜೆ ನೀಡಲಾಗಿದೆ. ಅಪ್ಪ-ಅಮ್ಮ ಅಥವಾ ಅತ್ತೆ-ಮಾವ ಇಲ್ಲದ ನೌಕರರಿಗೆ ಈ ರಜೆ ಅನ್ವಯವಾಗದು ಎಂದು ಸರ್ಕಾರ ಆದೇಶ ಹೊರಡಿಸಿದೆ.

ಬಹುಶಃ ಈ ಆದೇಶ ಕೆಲವರಿಗೆ ವಿಚಿತ್ರ ಅನ್ನಿಸಬಹುದು. ನಮ್ಮೂರಿನ ಒಂದು ಪ್ರಕರಣ ಹೀಗಿದೆ. ಬೆಂಗಳೂರಿನಲ್ಲಿ ನೌಕರಿಯಲ್ಲಿರುವ ಮಗ ಊರಿನ ಮನೆಗೆ ಬಂದು ಎರಡು ವರ್ಷದ ಮೇಲಾಗಿದೆ. ಒಬ್ಬನೇ ಮಗ. ಅವನು ಇಂದು ಬರಬಹುದು, ನಾಳೆ ಬರಬಹುದು ಎಂದು ಪೋಷಕರು ಕಾದಿದ್ದಾರೆ. ತಿಂಗಳಿಗೆ ಸರಿಯಾಗಿ ಅಪ್ಪ, ಅಮ್ಮನ ಖಾತೆಗೆ ಹಣ ಹಾಕುತ್ತಾನೆ. ಅವನು ರಜೆ ದಿನಗಳಲ್ಲಿ ಎಲ್ಲೆಲ್ಲೋ ಸುತ್ತಾಡಿದ ಫೋಟೊಗಳನ್ನು ಜಾಲತಾಣದಲ್ಲಿ ಹಂಚಿಕೊಳ್ಳುತ್ತಾನೆ. ಆದರೆ ತನ್ನೂರಿಗೆ ಮಾತ್ರ ಬಂದಿಲ್ಲ. ಇತ್ತೀಚೆಗೆ ಆ ಪೋಷಕರು ಅವನ ಹಣವನ್ನೂ ಬಳಸುತ್ತಿಲ್ಲ. ಇದು, ಈ ಒಂದು ಕುಟುಂಬದ ಸಂಕಟ ಮಾತ್ರವಲ್ಲ. ಇಂತಹ ಅನೇಕ ನಿದರ್ಶನಗಳು ನಮಗೆ ಕಾಣಸಿಗುತ್ತವೆ.

ಕೆಲವು ನೌಕರರು ಸದಾ ಕ್ಯಾಲೆಂಡರ್ ಹಿಡಿದು ಕೂತಿರುತ್ತಾರೆ. ಒಂದೆರಡು ದಿನ ರಜೆ ಸಿಕ್ಕಿದ್ದೇ ತಡ, ಫಾಲ್ಸ್, ಕಾಡು, ಹೋಂ ಸ್ಟೇ ಎಂದು ಹುಡುಕಿಕೊಂಡು ಹೊರಟುಬಿಡುತ್ತಾರೆ. ಅಲೆದು, ತಿಂದು, ಕುಣಿದು... ಏನನ್ನೋ ಪಡೆದುಕೊಂಡೆವು ಅಂದುಕೊಂಡು ಹಿಂದಿರುಗುತ್ತಾರೆ (ಮತ್ತೆಲ್ಲೋ ಇನ್ನೇನನ್ನೋ ಕಳೆದುಕೊಂಡಿರುವುದು ಅವರ ಅರಿವಿಗೇ ಬಂದಿರುವುದಿಲ್ಲ). ಊರಿನಲ್ಲಿ ಮಗ ನಾಳೆ ಬರಬಹುದು, ಮುಂದಿನ ವಾರ ಬರಬಹುದು ಎಂದು ದಾರಿ ಕಾಯುತ್ತಾ ಕುಳಿತ ಪೋಷಕರ ಕಣ್ಣುಗಳು ಮಬ್ಬಾಗುತ್ತವೆ. ಆದರೆ ಅವರು ಬರುವುದು ಹಬ್ಬಕ್ಕೆ ಮಾತ್ರ. ತಮ್ಮ ಮನೆಗೆ ತಾವೇ ನೆಂಟರಂತೆ ಬಂದು ಹೋಗುವಂತಹ ದುರ್ದೈವದ ಸಂಗತಿ ಮತ್ತೊಂದಿಲ್ಲ.

ಕೆಲ ದಿನಗಳಾದರೂ ಮಕ್ಕಳು ಹೆತ್ತವರ ಜೊತೆ ಇರಲಿ ಎಂದು ತಾಕೀತು ಮಾಡಿರುವ ಅಸ್ಸಾಂ ಸರ್ಕಾರದ ಈ ನಡೆ ಮೆಚ್ಚುವಂತಹದ್ದು. ಕುಟುಂಬದೊಂದಿಗೆ ಕಾಲ ಕಳೆಯುವುದರಿಂದ ಕುಟುಂಬಕ್ಕೆ ತಾನೇನೋ ಕೊಟ್ಟುಬಿಡುತ್ತೇನೆ ಎಂದು ನಾವು ಭಾವಿಸಬಾರದು. ಅದರಿಂದ ನಾವು ಕುಟುಂಬಕ್ಕೆ ಕೊಡುವುದಕ್ಕಿಂತ ಪಡೆಯುವುದೇ ಹೆಚ್ಚು. ನಿರೂಪಕಿ ಓಪ್ರಾ ವಿನ್‌ಫ್ರೇ 'ನನ್ನ ಸಾಧನೆ ಮತ್ತಷ್ಟು ಚುರುಕಾಗುತ್ತಿರುವುದು ನನ್ನ ಮನೆಯಿಂದ, ನನ್ನ ಅಜ್ಜಿಯಿಂದ. ನಾನು ಬಿಡುವಾದಾಗಲೆಲ್ಲಾ ಅಲ್ಲಿರುತ್ತೇನೆ ಮತ್ತು ಅಲ್ಲಿಂದ ಹೊಸತಾಗಿ ಎದ್ದು ಬರುತ್ತೇನೆ' ಎಂದಿದ್ದಾರೆ.

ಹೋಂ ಸ್ಟೇನಲ್ಲಿ ಉಳಿದು, ತಿಂದು, ಬೆಟ್ಟದಲ್ಲಿ ಸುತ್ತಾಡಿ, ನದಿಯಲ್ಲಿ ಈಜಿ, ಕಡಲಿನಲ್ಲಿ ಮುಳುಗಿ ಬಂದಾಗ ನಮಗೆ ದತ್ತಕವಾಗುವ ಹೊಸತನಕ್ಕಿಂತ ನೂರು ಪಟ್ಟು ಹೆಚ್ಚು ಹೊಸತನ ಹೆತ್ತವರ ಸಖ್ಯದಿಂದ ಸಿಗುತ್ತದೆ. ನಾವು ಅವರನ್ನು ಕಾಳಜಿ ಮಾಡಿ ಹೊರಡುವಾಗ ಅವರ ಕಣ್ಣುಗಳಲ್ಲಿ ಕಾಣುವ ಬೆಳಕು ನಮ್ಮನ್ನು ಮತ್ತೆ ಮತ್ತೆ ಹೊಸತಾಗಿಸುತ್ತದೆ. ಸದಾ ನಮ್ಮನ್ನು ಪೊರೆಯುತ್ತದೆ.

ಎರಡು ಸಾವಿರ ರೂಪಾಯಿ ಗೃಹಲಕ್ಷ್ಮಿ ಹಣ, ವೃದ್ಧಾಪ್ಯ ವೇತನ, ಉಚಿತ ಅಕ್ಕಿ, ಗೋಧಿ ಸಿಗುತ್ತದೆ. ಇಳಿವಯಸ್ಸಿನಲ್ಲಿ ಬದುಕುವುದಕ್ಕೆ ಇಷ್ಟು ಸಾಕು. ಆದರೆ ತನ್ನ ಮಗನನ್ನು ತಾನು ನೋಡಲು ಮತ್ತು ಅವನು ತನ್ನನ್ನು ನೋಡಲು ಸರ್ಕಾರದ ಅಂತಹದ್ದೊಂದು ಸ್ಕೀಮಿಗೆ ಕಾಯಬೇಕೋ ಏನೋ ಎನ್ನುವ ಅರ್ಥ ಬರುವಂತೆ ಮೊನ್ನೆ ಅಜ್ಜಿಯೊಬ್ಬರು ಮಾತನಾಡುತ್ತಿದ್ದರು.

ಇಳಿವಯಸ್ಸಿನಲ್ಲಿ ಹೆತ್ತವರಿಗೆ ಮಕ್ಕಳ ಅವಶ್ಯಕತೆ ಹೆಚ್ಚಾಗಿರುತ್ತದೆ. ಅವರು ಹಣ ಕೊಡಲಿ ಎಂದಲ್ಲ. ಬೇಕಾದದ್ದು ತಂದು ಸುರಿಯಲಿ ಎಂದಲ್ಲ. ತಮ್ಮನ್ನು ಮಹಲಿನಲ್ಲಿ ಇಡಲಿ ಎಂದಲ್ಲ. ಮಕ್ಕಳು ಮಾತಿಗೆ ಬೇಕು, ಮೌನಕ್ಕೂ ಬೇಕು. ಅವರೊಂದಿಗೆ ಕೂತು ನಾಲ್ಕು ತುತ್ತು ಉಣ್ಣಲು ಬೇಕು. 'ಔಷಧಿ ತಗೊಂಡ್ರಾ' ಎಂದು ಕೇಳಲು ಬೇಕು. ಮೊಮ್ಮಕ್ಕಳು ತೊಡೆಯ ಮೇಲೆ ಆಡಲು ಬೇಕು.



ಕುಟುಂಬ, ಹೆತ್ತವರ ಒಡನಾಟ ನಮ್ಮಲ್ಲಿ ಒಂದು ಮದ್ದಿನಂತೆ ಕೆಲಸ ಮಾಡುತ್ತದೆ. ಅದು ಎಲ್ಲಾ ದುಗುಡಗಳನ್ನು ಕಳಚಿ ಎಸೆಯುತ್ತದೆ. ಅದೊಂದು ಭದ್ರತಾ ಭಾವ. ಅಲ್ಲಿ ನಾವು ನಮ್ಮನ್ನು ಕಂಡುಕೊಳ್ಳುತ್ತೇವೆ. ಮನುಷ್ಯ ಮತ್ತೆ ಮತ್ತೆ ಮನುಷ್ಯನಾಗುವ ಪರಿ ಅದು. ಮನುಷ್ಯನ ಇಂದಿನ ಕೆಲವು ಅಪಸವ್ಯ ಮತ್ತು ವಿಚಿತ್ರ ವರ್ತನೆಗಳಿಗೆ ಅವನು ಕುಟುಂಬದೊಂದಿಗೆ ದೂರ ಇರುವುದೇ ಕಾರಣವೇನೊ ಅನಿಸುತ್ತದೆ.

ಮನುಷ್ಯ ದುಡಿಯಬೇಕು ನಿಜ. ಸತತವಾಗಿ ದುಡಿಯಬೇಕು ಎನ್ನುವುದೂ ಸರಿ. ಆದರೆ ನಮ್ಮವರನ್ನೇ ನಾವು ಮರೆಯುವಷ್ಟಲ್ಲ. ಬದುಕು ಎಂಬುದು ಒಂದು ಬಂಧ. ಅದು ಎಲ್ಲರೊಳಗೂ ಹೆಣೆದುಕೊಂಡಿದೆ. ಒಂದು ನೂಲು ಹರಿದರೂ ದೊಗಳೆ ದೊಗಳೆ. ಯಾವ ಹಣದ ತೇಪೆಯೂ ಅದಕ್ಕೆ ಹೊಂದುವುದಿಲ್ಲ.

ಹೆತ್ತವರನ್ನು ನೋಡಿಕೊಳ್ಳದ ಸರ್ಕಾರಿ ನೌಕರನ ವೇತನವನ್ನು ಕಡಿತಗೊಳಿಸಿ, ಆ ಹಣವನ್ನು ಹೆತ್ತವರಿಗೆ ನೀಡಬೇಕಾಗುತ್ತದೆ ಎಂದು ಹಿಂದೊಮ್ಮೆ ನಮ್ಮ ರಾಜ್ಯದಲ್ಲೂ ಆದೇಶವಾಗಿದೆ. ಹೆತ್ತವರನ್ನು ನೋಡಿಕೊಳ್ಳಲು ಸಹ ಸರ್ಕಾರಿ ಆದೇಶಗಳು ಬರುವಂತೆ ಆಗಬೇಕೆ?!

ವಾಚಕರ ವಾಣಿ

ಮನವಿ ನೀಡಿಕೆ: ನಡೆಯಲಿ ಆತ್ಮಾವಲೋಕನ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಚಾಮರಾಜನಗರದಲ್ಲಿ ರೈತರು ಕೊಟ್ಟ ಮನವಿಪತ್ರ ಕಸದಬುಟ್ಟಿಗೆ ಸೇರಿದ್ದು ನೇರವಾಗಿ ಗಮನಕ್ಕೆ ಬಂದದ್ದರಿಂದ ರೈತರು ಅದನ್ನು ಖಂಡಿಸಿ ಪ್ರತಿಭಟನೆ ನಡೆಸುವಂತಾಯಿತು. ಆದರೆ, ವಾಸ್ತವದಲ್ಲಿ ಯಾವುದೇ ಪರಿಣಾಮ ಬೀರದ ಮನವಿಪತ್ರಗಳೆಲ್ಲವೂ ಕಸದಬುಟ್ಟಿ ಸೇರಿದಂತೆಯೇ ತಾನೆ? ಸ್ಪರ್ಧೆಗೆ ಇಳಿದು ಮನವಿಪತ್ರ ಕೊಡುವುದು, ಹೀಗೆ ಕೊಟ್ಟಿದ್ದು ಪತ್ರಿಕೆಗಳಲ್ಲಿ ಸುದ್ದಿಯಾದ ಮಾತ್ರಕ್ಕೇ ತೃಪ್ತರಾಗುವ ಮನೋಭಾವವನ್ನು ಹಲವು ರೈತ ಮುಖಂಡರು ರೂಢಿ ಮಾಡಿಕೊಂಡಿದ್ದಾರೆ. ಹೀಗಾಗಿಯೇ ರೈತ ಸಂಘಟನೆಗಳನ್ನು ಗಂಭೀರವಾಗಿ ಪರಿಗಣಿಸುವುದು ಅಪರೂಪವಾಗುತ್ತಿದೆ. ಮೊದಲು ನಮಗೆ ಗೌರವ ಸಿಕ್ಕಿದರೆ ನಂತರ ಅದು ನಮ್ಮ ಮನವಿಗೂ ಸಲ್ಲುತ್ತದೆ. ನಮ್ಮನ್ನೇ ಹಗುರವಾಗಿ ನೋಡುವಾಗ ಇನ್ನು ನಮ್ಮ ಮನವಿಗೆ ಯಾವ ಮನ್ನಣೆ ಸಿಕ್ಕೀತು? ಈ ಬಗ್ಗೆ ಇನ್ನಾದರೂ ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಅಗತ್ಯವಿದೆ.

ವೈಯಕ್ತಿಕ ಮಾನ್ಯತೆಗೆ ಸಂತಸಪಡುವುದರ ಜೊತೆಗೆ ಒಗ್ಗೂಡಿ ಅರ್ಹ ಬೇಡಿಕೆಗಳನ್ನು ಮಂಡಿಸಿದರೆ ಉತ್ತಮ ಪರಿಣಾಮವನ್ನು ನಿರೀಕ್ಷಿಸಬಹುದೇನೊ.

ತೇಜಸ್ವಿ ವಿ. ಪಟೇಲ್, ಕಾರಿಗನೂರು

ಬಂದೂಕು ನೀತಿ ಬದಲಾಗಲಿ

ಅಮೆರಿಕದಲ್ಲಿ ಬಂದೂಕು ಎಂಬುದು ಆಟಿಕೆಯ ಬಳಕೆಯಂತೆ ಆಗಿರುವುದನ್ನು ತಿಳಿದು (ಪ್ರ.ವಾ., ಜುಲೈ 15) ದಿಗ್ಭ್ರಮೆಯಾಯಿತು. ಬಂದೂಕು ಹೊಂದುವುದು ಆ ದೇಶದಲ್ಲಿ ಪ್ರತಿಷ್ಠೆಯ ಸಂಕೇತವಾಗಿದೆ. ಪ್ರತಿದಿನವೂ ಅಲ್ಲಿ ಬಂದೂಕಿನ ದಾಳಿಯಿಂದ ಸಾವು ಹಾಗೂ ಆತ್ಮಹತ್ಯೆಗಳು ಸಂಭವಿಸುತ್ತಿರುವುದು ನಾಗರಿಕ ಸಮಾಜಕ್ಕೆ ಸವಾಲೇ ಸರಿ. ತಮ್ಮದು ಪ್ರಪಂಚದ ಅತ್ಯುನ್ನತ ಪ್ರಜಾಪ್ರಭುತ್ವ ರಾಷ್ಟ್ರ ಎಂದು ಹೇಳಿಕೊಳ್ಳುವ ಅಮೆರಿಕದ ರಾಜಕೀಯ ಪಕ್ಷಗಳೇ ಬಂದೂಕು ಹೊಂದುವುದನ್ನು ಮೂಲಭೂತ ಹಕ್ಕು ಎನ್ನುವಂತೆ ಪ್ರತಿಪಾದಿಸುತ್ತಿರುವುದು ವಿಪರ್ಯಾಸ.

ಬಂದೂಕಿನ ಬಳಕೆಯನ್ನು ಉತ್ತೇಜಿಸುವ ಸಲುವಾಗಿಯೇ ಅಮೆರಿಕದ ನ್ಯಾಷನಲ್ ರೈಫಲ್ ಅಸೋಸಿಯೇಷನ್ ಎಂಬ ಸಂಸ್ಥೆ ಇರುವುದು ಹಾಗೂ ಅದು 30 ಲಕ್ಷ ಸದಸ್ಯರನ್ನು ಹೊಂದಿರುವುದು, ಚುನಾವಣೆಯಲ್ಲಿ ರಾಜಕೀಯ ಪಕ್ಷಗಳಿಗೆ ಅದು ದೇಣಿಗೆ ನೀಡುತ್ತಿರುವುದು ಅಲ್ಲಿ ಆ ಸಂಸ್ಥೆ ಎಷ್ಟು ಬಲಾಢ್ಯವಾಗಿದೆ ಎನ್ನುವುದರ ದ್ಯೋತಕ. ಬಂದೂಕು ನಿಯಂತ್ರಣ ಕಾನೂನಿನ ವಿರುದ್ಧ ಇರುವ ಡೊನಾಲ್ಡ್ ಟ್ರಂಪ್, ಅದರ ಪರಿಣಾಮವನ್ನು ಈಗ ಸ್ವತಃ ಅನುಭವಿಸಿದ್ದಾರೆ. ಅಮೆರಿಕದಲ್ಲಿ ಯಾರನ್ನು, ಯಾರು, ಎಲ್ಲಿ, ಹೇಗೆ ಬೇಕಾದರೂ ಕೊಲ್ಲುವುದೇ ಸ್ವಾತಂತ್ರ್ಯ ಎಂಬಂತೆ ಆಗಿರುವುದು ಈಗ ಮತ್ತೊಮ್ಮೆ ಸಾಬೀತಾಗಿದೆ. ಇನ್ನಾದರೂ ಬಂದೂಕು ಹೊಂದುವುದಕ್ಕೆ ಅಮೆರಿಕ ಸೇರಿದಂತೆ ಜಗತ್ತಿನಾದ್ಯಂತ ಕಠಿಣ ನಿರ್ಬಂಧ, ಕಡಿವಾಣದ ಅಗತ್ಯ ಇದೆ. ಇಲ್ಲದಿದ್ದರೆ ಪ್ರಜಾಪ್ರಭುತ್ವ, ನಾಗರಿಕ ಸಮಾಜ ಎಂಬ ಪದಗಳಿಗೆ ಅರ್ಥವೇ ಇರುವುದಿಲ್ಲ.

ಮುಳ್ಳೂರು ಪ್ರಕಾಶ್, ಮೈಸೂರು

ಓದುವ ಮನಸ್ಸಿದೆ: ಓದಿಸುವವರಾರು?

'ಜ್ಞಾನವೆಂಬ ದೀಪದ ಕೆಳಗಿನ ಕತ್ತಲೆ' ಎಂಬ ಗೀತಾ ವಸಂತ ಅವರ ಲೇಖನ (ಪ್ರ.ವಾ., ಜುಲೈ 15) ಶೈಕ್ಷಣಿಕ ವ್ಯವಸ್ಥೆಯ ಬಗೆಗೆ ಸಾರ್ವಜನಿಕವಾಗಿ ಇರುವ ಹಲವು ಆತಂಕಗಳನ್ನು ತೆರೆದಿಟ್ಟಿದೆ. ಪ್ರಸ್ತುತ ವಿಶ್ವವಿದ್ಯಾಲಯಗಳು, ಪದವಿ ಕಾಲೇಜುಗಳ ಅಧ್ಯಾಪಕರು ಸ್ವ ಅವಲೋಕನ ಮಾಡಿಕೊಳ್ಳುವಲ್ಲಿ ವಿಫಲರಾಗಿರುವುದು ಕಳವಳಕಾರಿ. ಪಠ್ಯಕೇಂದ್ರಿತ ಓದಿಗಿಂತ ವಿದ್ಯಾರ್ಥಿಕೇಂದ್ರಿತ ಓದು ಮುನ್ನೆಲೆಗೆ ಬರಬೇಕು ಎಂಬ ಆಶಯ ಮರೀಚಿಕೆಯಾಗಿದೆ. ವಿಶ್ವವಿದ್ಯಾಲಯದ ಓದು ಬದುಕಿಗೆ ದಾರಿದೀಪವಾಗಬೇಕೇ ವಿನಾ ದಾರಿಗೆ ಮುಳ್ಳಾಗಬಾರದು. ಹೆಚ್ಚಿನ ತಿಳಿವಳಿಕೆ, ಜ್ಞಾನಕ್ಕಾಗಿ ಹಂಬಲಿಸಿದ ನಾನು ಕೂಡ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದುಕೊಂಡು ಅರಿವನ್ನು ವಿಸ್ತರಿಸಿಕೊಳ್ಳಲು ಮುಂದಾದೆ. ಆದರೆ ಅಲ್ಲಿನ ಜ್ಞಾನದ ಅವಸ್ಥೆ ಕಂಡು ಮರುಗಬೇಕಾಯಿತು, ಮೂಕನಾಗಬೇಕಾಯಿತು. ಅಧ್ಯಾಪಕರು ಕೌಶಲರಹಿತರಾಗಿ ಪಾಠ ಮಾಡುತ್ತಿದ್ದರು. ಹೆಚ್ಚಿನ ವಿಚಾರಗಳ ಬಗ್ಗೆ ಚರ್ಚೆ ಕೂಡ ಆಗುತ್ತಿರಲಿಲ್ಲ. ಒಬ್ಬ ಅಧ್ಯಾಪಕರಂತೂ ತರಗತಿಗೆ ಸರಿಯಾಗಿ ಬರುತ್ತಿರಲೇ ಇಲ್ಲ. ಅವರ ಪಾಠ ಕೇಳಬೇಕೆಂಬ ಆಸೆ ಇತ್ತಾದರೂ ಅವರು ಕೈಗೆಟಕುತ್ತಿರಲಿಲ್ಲ. ಸ್ವ ಕಲಿಕೆಗೂ ಸೂಕ್ತ ಮಾರ್ಗದರ್ಶನ ಲಭ್ಯವಾಗಲಿಲ್ಲ. ಯಾಕಾದರೂ ವಿಶ್ವವಿದ್ಯಾಲಯಕ್ಕೆ ಬಂದೆನೋ ಎಂಬ ಪ್ರಶ್ನೆ ನನ್ನನ್ನು ಕಾಡಿತ್ತು. ಇಂದಿಗೂ ಕಾಡುತ್ತದೆ.

ತಮ್ಮ ಬರವಣಿಗೆ, ಪುಸ್ತಕಗಳನ್ನು ಹೊರತರುವುದರಲ್ಲೇ ಹೆಚ್ಚಿನ ಅಧ್ಯಾಪಕರು ಮುಳುಗಿರುತ್ತಾರೆ. 'ಕಲಿಸಿದಾತಂ ವರ್ಣಮಾತ್ರಂ ಗುರು' ಎಂಬ ಮಾತು ಈಗ ಹುಸಿಯಾಗತೊಡಗಿದೆ. ಜ್ಞಾನಧಾರೆಯ ಸಂಸ್ಕೃತಿ ಮಾಯವಾಗುತ್ತಿದೆ. ಅಹಂನ ಕತ್ತಲೆಯೊಳಗೆ ನಾವೆಲ್ಲರೂ ಮುಳುಗುತ್ತಿದ್ದೇವೆ. ಓದುವ ಮನಸ್ಸುಗಳಿಗೆ ಓದಿಸುವವರು ಯಾರು ಎಂಬ ಸಮಸ್ಯೆ ಸವಾಲಾಗಿ ನಿಂತಿದೆ. ಇದರ ಬಿಡುಗಡೆಯ ದಾರಿಗಳು ಯಾವುವು ಎಂದು ಹುಡುಕಬೇಕಾಗಿದೆ.

ರಾಜೇಂದ್ರಕುಮಾರ್ ಕೆ. ಮುದ್ನಾಳ್, ಯಾದಗಿರಿ

ಸದನ ಇರುವುದು ಗದ್ದಲಕ್ಕಲ್ಲ

ಸೋಮವಾರ ಆರಂಭವಾಗಿರುವ ರಾಜ್ಯ ವಿಧಾನಮಂಡಲ ಅಧಿವೇಶನದಲ್ಲಿ ಹಲವಾರು ವಿಚಾರಗಳು ಚರ್ಚೆಗೆ ಬರುವ ಸಾಧ್ಯತೆ ಇದೆ. ಆದರೆ ಇತ್ತೀಚೆಗೆ ಅಧಿವೇಶನ ಎಂದರೆ ಆಡಳಿತ ಹಾಗೂ ವಿರೋಧ ಪಕ್ಷಗಳ ನಡುವಿನ ಜಟಾಪಟಿ, ಜಂಗಿ ಕುಸ್ತಿಗೆ ವೇದಿಕೆ ಎಂಬಂತಾಗಿದೆ. ಈ ಬಾರಿಯಾದರೂ ಬರೀ ಸದ್ದುಗದ್ದಲ, ಪ್ರತಿಪಕ್ಷಗಳ ಸಭಾತ್ಯಾಗಗಳಿಗಷ್ಟೇ ಸದನದ ಸಮಯ ವ್ಯರ್ಥವಾಗದಿರಲಿ.

ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡ ಹತ್ತಾರು ವಿಷಯಗಳ ವಿಸ್ತೃತವಾದ ಚರ್ಚೆಗೆ ಸದನದಲ್ಲಿ ಸಮಯ ಮೀಸಲಿದ್ದರೆ ಒಳ್ಳೆಯದು. ಆಡಳಿತ ಮತ್ತು ವಿರೋಧಿ ಪಾಳಯ ಎರಡೂ ಕಡೆಯ ಸದಸ್ಯರು ಪರಸ್ಪರ ಆರೋಪ, ಪ್ರತ್ಯಾರೋಪ, ಏರುದನಿ, ನಿಂದನೆಯ ಮಾತುಗಳಿಗೆ ಸೀಮಿತರಾಗದೆ, ದಾಖಲೆಗಳನ್ನು ಆಧರಿಸಿ ತಮ್ಮ ವಾದ ಮಂಡಿಸಲಿ. ಅದಕ್ಕೆ ಉತ್ತರ ನೀಡುವ ನಿರ್ದಿಷ್ಟ ಸಮಯ ಬಂದಾಗ ಸರ್ಕಾರ ಸಹ ದಾಖಲೆ ಸಮೇತ ಉತ್ತರಿಸಿದರೆ ಸದನದ ಸಮಯ ಸದ್ವಿನಿಯೋಗವಾದಂತೆಯೇ ಸರಿ. ಸದಸ್ಯರು ತಮಗೆ ಸಿಕ್ಕಿದ ಸಮಯಾವಕಾಶವನ್ನು ಅರ್ಥಪೂರ್ಣ ವಿಷಯಗಳಿಗೆ ಸದ್ಬಳಕೆ ಮಾಡಿಕೊಳ್ಳುವುದು ಒಳ್ಳೆಯದು.


ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ರಾಜ್ಯಗಳಿಗೆ ವಿಶೇಷ ವರ್ಗ ಸ್ಥಾನಮಾನ ಮುಗಿದ ಅಧ್ಯಾಯ?

ರಾಜ್ಯದ ಅಭಿವೃದ್ಧಿಗಾಗಿ 'ವಿಶೇಷ ವರ್ಗ ಸ್ಥಾನಮಾನ' ನೀಡಬೇಕು ಎಂದು ಬಿಹಾರ ಮತ್ತು ಆಂಧ್ರ ಪ್ರದೇಶಗಳು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಿವೆ. ಕೇಂದ್ರ ಸರ್ಕಾರದ ಹಣಕಾಸು ನೀತಿಗಳಿಂದಾಗಿ 'ವಿಶೇಷ ವರ್ಗ ಸ್ಥಾನಮಾನ' ಎನ್ನುವುದು ಅಪ್ರಸ್ತುತವಾಗಿದೆ. ಈ ರಾಜ್ಯಗಳಿಗೂ, ಇತರ ರಾಜ್ಯಗಳಿಗೂ ವ್ಯತ್ಯಾಸವೇ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ

ವಿಶೇಷ ವರ್ಗ ಸ್ಥಾನಮಾನ ಪಡೆದ ರಾಜ್ಯಗಳು



ಪ್ರಜಾವಾಣಿ ವಾರ್ತೆ

ಕೇಂದ್ರದ ಎನ್‌ಡಿಎ ಸರ್ಕಾರದ ಪ್ರಮುಖ ಪಾಲುದಾರ ಪಕ್ಷ ಜೆಡಿಯು, ಬಿಹಾರಕ್ಕೆ 'ವಿಶೇಷ ವರ್ಗ ಸ್ಥಾನಮಾನ' (special category status) ನೀಡಬೇಕು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಿದೆ. ಇನ್ನೊಂದು ಪ್ರಮುಖ ಪಾಲುದಾರ ತೆಲುಗು ದೇಶಂ ಕೂಡ ಆಂಧ್ರ ಪ್ರದೇಶಕ್ಕೆ ಇದೇ ರೀತಿಯ ಸ್ಥಾನಮಾನ ನೀಡಬೇಕು ಅಥವಾ ರಾಜ್ಯದ ಅಭಿವೃದ್ಧಿಗಾಗಿ ವಿಶೇಷ ಅನುದಾನ ನೀಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಮಾಡಿದೆ.

ಎನ್‌ಡಿಎ ಕೂಟದಲ್ಲಿ ಅತಿ ದೊಡ್ಡ ಪಕ್ಷವಾಗಿರುವ ಬಿಜೆಪಿಗೆ ಈ ಬಾರಿ ಪೂರ್ಣ ಬಹುಮತ ಸಿಕ್ಕಿಲ್ಲ. ಸರ್ಕಾರ ಉಳಿಯಬೇಕಿದ್ದರೆ ಜೆಡಿಯು ಮತ್ತು ಟಿಡಿಪಿ ಬೆಂಬಲ ಅದಕ್ಕೆ ಅನಿವಾರ್ಯ. ಇದೇ ಸಂದರ್ಭವನ್ನು ಬಳಸಿಕೊಂಡು ಎರಡೂ ಪಕ್ಷಗಳು ಮೋದಿಯವರ ಮೇಲೆ ಒತ್ತಡ ಹಾಕುತ್ತಿದ್ದು, ಪ್ರಧಾನಿಯವರು ಇಕ್ಕಟ್ಟಿಗೆ ಸಿಲುಕಿದ್ದಾರೆ.

ಕೇಂದ್ರ ಸರ್ಕಾರ 2015ರಿಂದ ಯಾವ ರಾಜ್ಯವನ್ನೂ ವಿಶೇಷ ವರ್ಗ ಸ್ಥಾನಮಾನದಿಂದ ಗುರುತಿಸಿಲ್ಲ. 14ನೇ ಹಣಕಾಸು ಆಯೋಗದ (2015–20) ಶಿಫಾರಸಿನ ಮೇರೆಗೆ ಈ ಸ್ಥಾನಮಾನದ ಪರಿಕಲ್ಪನೆಯನ್ನು ಅದು ರದ್ದು ಮಾಡಿದೆ. 'ಯಾವುದೇ ಕಾರಣಕ್ಕೂ ರಾಜ್ಯಗಳಿಗೆ ವಿಶೇಷ ವರ್ಗ ಸ್ಥಾನಮಾನ ನೀಡಲು ಸಾಧ್ಯವಿಲ್ಲ' ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಕಳೆದ ವರ್ಷ ಹೇಳಿದ್ದರು.

ಕೇಂದ್ರ ಸರ್ಕಾರಕ್ಕೆ ಬರುವ ತೆರಿಗೆ ವರಮಾನದಲ್ಲಿ ರಾಜ್ಯಗಳಿಗೆ ಹಂಚುವ ಪಾಲನ್ನು ಶೇ 32ರಿಂದ ಶೇ 42ಕ್ಕೆ ಹೆಚ್ಚಿಸಲು 14ನೇ ಹಣಕಾಸು ಆಯೋಗ ಶಿಫಾರಸು ಮಾಡಿತ್ತು. ರಾಜ್ಯಗಳಿಗೆ ಹೆಚ್ಚಿನ ಹಣ ನೀಡುವುದರಿಂದ ವಿಶೇಷ ವರ್ಗ ಸ್ಥಾನಮಾನ ನೀಡುವ ಅಗತ್ಯವಿಲ್ಲ ಎಂಬುದು ಕೇಂದ್ರ ಸರ್ಕಾರದ ನಿಲುವು (15ನೇ ಹಣಕಾಸು ಆಯೋಗವು ಈ ತೆರಿಗೆ ಪಾಲನ್ನು ಶೇ 41ಕ್ಕೆ ಇಳಿಸಿದೆ. 2019ರಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ಇದ್ದ ರಾಜ್ಯ ಸ್ಥಾನಮಾನವನ್ನು ತೆಗೆದು ಕೇಂದ್ರಾಡಳಿತ ಪ್ರದೇಶ ಮಾಡಿದ ಕಾರಣಕ್ಕೆ ರಾಜ್ಯಗಳಿಗೆ ಹಂಚುವ ತೆರಿಗೆ ಹಣದಲ್ಲಿ ಶೇ 1ರಷ್ಟನ್ನು ಕಡಿತ ಮಾಡಿದೆ).

ವಾರದ ಹಿಂದೆ ಇದೇ ವಿಚಾರವಾಗಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ನೀತಿ ಆಯೋಗದ ಸದಸ್ಯ ಅರವಿಂದ ವಿರ್ಮಾನಿ ಅವರು, ವಿಶೇಷ ವರ್ಗ ಸ್ಥಾನಮಾನ ಹೊಂದಿರದ ರಾಜಸ್ಥಾನ, ಒಡಿಶಾದಂತಹ ರಾಜ್ಯಗಳು ಕೂಡ ಅಭಿವೃದ್ಧಿ ಹೊಂದಿವೆ. ಹಾಗಾಗಿ, ರಾಜ್ಯಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ 'ಕಾರ್ಯರೂಪಕ್ಕೆ ತರಬಹುದಾದ ಪರಿಹಾರ'ಗಳನ್ನು ಹುಡುಕಬೇಕಾಗಿದೆ' ಎಂದು ಹೇಳಿದ್ದಾರೆ.

ಬಿಹಾರವು 2005ರಿಂದ ವಿಶೇಷ ವರ್ಗ ಸ್ಥಾನಮಾನವನ್ನು ಕೇಳುತ್ತಿದೆ. 2000ದಲ್ಲಿ ಖನಿಜ ಶ್ರೀಮಂತ ಜಾರ್ಖಂಡ್ ಪ್ರತ್ಯೇಕ ರಾಜ್ಯವಾದ ಮೇಲೆ ಬಿಹಾರದ ವರಮಾನ ಕಡಿಮೆಯಾಗಿದೆ. ನಿತೀಶ್ ಕುಮಾರ್ ಅವರು ಮುಖ್ಯಮಂತ್ರಿಯಾದಾಗಿನಿಂದಲೂ ವಿಶೇಷ ವರ್ಗ ಸ್ಥಾನಮಾನಕ್ಕೆ ಬೇಡಿಕೆ ಇಡುತ್ತಲೇ ಬಂದಿದ್ದಾರೆ.



ಆಂಧ್ರಪ್ರದೇಶಕ್ಕೆ ವಿಶೇಷ ಸ್ಥಾನಮಾನ ನೀಡುವಂತೆ ಒತ್ತಾಯಿಸಿ ತೆಲುಗು ದೇಶಂ ಪಕ್ಷದ ಸಂಸದರು 2018ರ ಡಿಸೆಂಬರ್ 18ರಂದು ಸಂಸತ್ ಭವನದ ಗಾಂಧಿ ಪ್ರತಿಮೆಯ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದ್ದರು –ಪಿಟಿಐ ಸಂಗ್ರಹ ಚಿತ್ರ

2014ರಲ್ಲಿ ಆಂಧ್ರ ಪ್ರದೇಶವನ್ನು ವಿಭಜಿಸಿ ತೆಲಂಗಾಣವನ್ನು ಪ್ರತ್ಯೇಕ ರಾಜ್ಯ ಮಾಡಿದ ನಂತರ ಆಂಧ್ರವೂ ಆರ್ಥಿಕವಾಗಿ ಹಿಂದುಳಿದಿದೆ. ಅಂದಿನಿಂದಲೂ ವಿಶೇಷ ಸ್ಥಾನಮಾನಕ್ಕೆ ಅದು ಆಗ್ರಹಿಸುತ್ತಿದೆ. ಸ್ಥಾನಮಾನ ಕೊಡದಿದ್ದರೆ ವಿಶೇಷ ಅನುದಾನವನ್ನಾದರೂ ಕೊಡಿ ಎಂದು ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಈ ತಿಂಗಳ ಆರಂಭದಲ್ಲಿ ಪ್ರಧಾನಿ ಮೋದಿಯರಿಗೆ ಮನವಿಯನ್ನೂ ಮಾಡಿದ್ದಾರೆ.

ವಿಶೇಷ ವರ್ಗ ಸ್ಥಾನಮಾನಕ್ಕಾಗಿ ಹೊಸ ರಾಜ್ಯಗಳನ್ನು ಕೇಂದ್ರ ಸರ್ಕಾರ ಪರಿಗಣಿಸದಿದ್ದರೂ, ಈ ಹಿಂದೆ ಗುರುತಿಸಲಾಗಿರುವ ಈಶಾನ್ಯ ಭಾಗದ ರಾಜ್ಯಗಳು ಮತ್ತು ಬೆಟ್ಟಗುಡ್ಡಗಳನ್ನೊಳಗೊಂಡ ರಾಜ್ಯಗಳಿಗೆ ಕೇಂದ್ರ ಸರ್ಕಾರ ವಿಶೇಷ ಸೌಲಭ್ಯ ನೀಡುವುದನ್ನು ಮುಂದುವರಿಸಿದೆ.

ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಎನ್‌ಡಿಎ ಸರ್ಕಾರ ತನ್ನ ಪಾಲುದಾರ ಪಕ್ಷಗಳ ಪ್ರಮುಖ ಬೇಡಿಕೆಗೆ ಹೇಗೆ ಸ್ಪಂದಿಸಲಿದೆ ಎಂಬ ಕುತೂಹಲ ರಾಜಕೀಯ ವಲಯದಲ್ಲಿದೆ.



ಬಿಹಾರಕ್ಕೆ ವಿಶೇಷ ವರ್ಗದ ಸ್ಥಾನಮಾನ ನೀಡಬೇಕು ಎಂದು ಒತ್ತಾಯಿಸಿ ಪಟ್ನಾದಲ್ಲಿ ಜೆಡಿಯು ಕಾರ್ಯಕರ್ತರು 2022ರ ಫೆಬ್ರುವರಿಯಲ್ಲಿ ಸೈಕಲ್ ಜಾಥಾ ನಡೆಸಿದ್ದರು ಪಿಟಿಐ ಸಂಗ್ರಹ ಚಿತ್ರ

ಮಾನದಂಡಗಳು

- ಬೆಟ್ಟಗುಡ್ಡಗಳಿಂದ ಕೂಡಿದ ದುರ್ಗಮ ಭೂಪ್ರದೇಶ ಹೊಂದಿರಬೇಕು
- ಅಂತರರಾಷ್ಟ್ರೀಯ ಗಡಿ ಪ್ರದೇಶ ಹೊಂದಿರಬೇಕು
- ಕಡಿಮೆ ಜನಸಾಂದ್ರತೆ ಹೊಂದಿರಬೇಕು ಅಥವಾ ಗಣನೀಯ ಪ್ರಮಾಣದಲ್ಲಿ ಆದಿವಾಸಿಗಳು ಇರಬೇಕು
- ಆರ್ಥಿಕವಾಗಿ ಮತ್ತು ಮೂಲಸೌಕರ್ಯದ ದೃಷ್ಟಿಯಿಂದ ಹಿಂದುಳಿದಿರಬೇಕು
- ರಾಜ್ಯದ ಆರ್ಥಿಕ ಸ್ಥಿತಿ ಬೆಳವಣಿಗೆ ಕಾಣದ ಸ್ಥಿತಿಯಲ್ಲಿರಬೇಕು

11 ರಾಜ್ಯಗಳಿಗೆ ವಿಶೇಷ ಸವಲತ್ತು

ರಾಜ್ಯಗಳಿಗೆ ವಿಶೇಷ ವರ್ಗ ಸ್ಥಾನಮಾನ ನೀಡುವ ಬಗ್ಗೆ ದೇಶದ ಸಂವಿಧಾನದಲ್ಲಿ ಪ್ರಸ್ತಾವ ಇರಲಿಲ್ಲ. ಆದರೆ, ಅತಿ ಹಿಂದುಳಿದಿರುವ ಕೆಲವು ರಾಜ್ಯಗಳ ಪ್ರಗತಿಗೆ ಉತ್ತೇಜನ ನೀಡುವ ಸಲುವಾಗಿ 1969ರಲ್ಲಿ 5ನೇ ಹಣಕಾಸು ಆಯೋಗ ಮಾಡಿದ್ದ ಶಿಫಾರಸಿನ ಆಧಾರದಲ್ಲಿ ವಿಶೇಷ ವರ್ಗ ಸ್ಥಾನಮಾನ ನೀಡಲು ಕೇಂದ್ರ ಸರ್ಕಾರ ಆರಂಭಿಸಿತು. ಇದಕ್ಕಾಗಿ ಸಂವಿಧಾನಕ್ಕೆ ತಿದ್ದುಪಡಿ ತರಲಾಯಿತು.

ಜಮ್ಮು-ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿ ಅನ್ವಯ 'ವಿಶೇಷ ಸ್ಥಾನಮಾನ' (special status) ನೀಡಲಾಯಿತು. ಅದೇ ಸಮಯದಲ್ಲಿಯೇ ನಾಗಾಲ್ಯಾಂಡ್, ಅಸ್ಸಾಂ ರಾಜ್ಯಗಳಿಗೂ ವಿಶೇಷ ವರ್ಗ ಸ್ಥಾನಮಾನವನ್ನೂ ನೀಡಲಾಯಿತು. ನಂತರ ಹಿಮಾಚಲ ಪ್ರದೇಶ (1970–71) ಮಣಿಪುರ, ಮೇಘಾಲಯ, ತ್ರಿಪುರಾ (1971–72), ಸಿಕ್ಕಿಂ (1975–76) ಅರುಣಾಚಲ ಪ್ರದೇಶ ಮತ್ತು ಮಿಜೋರಾಂ (1986-87) ಹಾಗೂ ಉತ್ತರಾಖಂಡ (2001–02) ರಾಜ್ಯಗಳನ್ನೂ ಈ ಪಟ್ಟಿಗೆ ಸೇರಿಸಲಾಯಿತು.

ಸ್ಥಾನಮಾನದ ಪ್ರಯೋಜನಗಳೇನು?

ರಾಜ್ಯಗಳಿಗೆ ಕೇಂದ್ರ ಸರ್ಕಾರವು ನೆರವು (ಎನ್‌ಸಿಎ) ನೀಡುವಾಗ ಸಾಲ ಮತ್ತು ಅನುದಾನದ ಅನುಪಾತ ನಿರ್ಧರಿಸಲು ವಿಶೇಷ ವರ್ಗ ಸ್ಥಾನಮಾನವನ್ನು ಮಾನದಂಡವಾಗಿ ಬಳಸಲಾಗುತ್ತದೆ. ಸ್ಥಾನಮಾನ ಹೊಂದಿದ ರಾಜ್ಯಗಳಿಗೆ ಎನ್‌ಸಿಎ ಮತ್ತು ಬಾಹ್ಯ ಅನುದಾನಿತ ಯೋಜನೆ (ಇಎಪಿ) ಅಡಿಯಲ್ಲಿ ಶೇ 90ರಷ್ಟು ಅನುದಾನ ಮತ್ತು ಶೇ 10ರಷ್ಟು ಸಾಲವನ್ನು ಕೇಂದ್ರ ಸರ್ಕಾರ ನೀಡುತ್ತದೆ.

ಕೇಂದ್ರ ಜಾರಿ ಮಾಡುವ ಯೋಜನೆಗಳಿಗೆ ವಿಶೇಷ ಸ್ಥಾನಮಾನ ಪಡೆದ ರಾಜ್ಯಗಳು ಶೇ 10ರಷ್ಟು ವೆಚ್ಚ ನೀಡಿದರೆ ಸಾಕು, ಉಳಿದ ಶೇ 90ರಷ್ಟು ಕೇಂದ್ರವೇ ಭರಿಸುತ್ತದೆ. ಉಳಿದ ರಾಜ್ಯಗಳಿಗೆ ಕೇಂದ್ರವು ಶೇ 60–70ರಷ್ಟು ಮಾತ್ರ ನೀಡುತ್ತದೆ. ಉಳಿದ ರಾಜ್ಯಗಳಲ್ಲಿ ನಿಗದಿತ ಸಮಯದಲ್ಲಿ ಅನುದಾನವನ್ನು ವಿನಿಯೋಗಿಸದೇ ಇದ್ದರೆ, ಅದು ವಾಪಸ್ ಹೋಗುತ್ತದೆ. ಆದರೆ, ವಿಶೇಷ ಸ್ಥಾನಮಾನ ಪಡೆದ ರಾಜ್ಯಗಳಲ್ಲಿ ಅನುದಾನವನ್ನು ಮುಂದುವರಿಸಲಾಗುತ್ತದೆ.

ಸ್ಥಾನಮಾನ ಹೊಂದಿರುವ ರಾಜ್ಯಗಳಿಗೆ ಕೇಂದ್ರ ಸರ್ಕಾರ ಭಾರಿ ಪ್ರಮಾಣದಲ್ಲಿ ತೆರಿಗೆ ವಿನಾಯಿಸಿ ನೀಡುತ್ತದೆ. ಅಬಕಾರಿ, ಸೇವಾ ಸುಂಕ, ಆದಾಯ ತೆರಿಗೆ, ಮತ್ತು ಕಾರ್ಪೊರೇಟ್ ತೆರಿಗೆಗಳಲ್ಲಿ ವಿನಾಯಿತಿಯ ಸೌಲಭ್ಯಗಳು ಈ ರಾಜ್ಯಗಳಿಗೆ ಸಿಗುತ್ತವೆ. ಅಲ್ಲದೇ, ಈ ರಾಜ್ಯಗಳ ವಿಶೇಷ ಯೋಜನೆಗಳಿಗಾಗಿ ಕೇಂದ್ರ ವಿಶೇಷ ಅನುದಾನವನ್ನೂ ಒದಗಿಸುತ್ತದೆ.

ಎರಡರ ನಡುವೆ ಇದೆ ವ್ಯತ್ಯಾಸ

ರಾಜ್ಯಗಳಿಗೆ ಸ್ಥಾನಮಾನ ನೀಡುವ ವಿಚಾರದಲ್ಲಿ ಎರಡು ಮಾದರಿಗಳಿವೆ. ಒಂದು ವಿಶೇಷ ವರ್ಗ ಸ್ಥಾನಮಾನ (special category status) ಮತ್ತೊಂದು ವಿಶೇಷ ಸ್ಥಾನಮಾನ (special status). ಈ ಎರಡೂ ಮಾದರಿಗಳ ನಡುವೆ ವ್ಯತ್ಯಾಸ ಇದೆ ಎಂದು ಹೇಳುತ್ತಾರೆ ರಾಜಕೀಯ ತಜ್ಞರು. 'ವಿಶೇಷ ಸ್ಥಾನಮಾನ'ದಲ್ಲಿ ಶಾಸಕಾಂಗ ಮತ್ತು ರಾಜಕೀಯ ಹಕ್ಕುಗಳ ವಿಚಾರಗಳು ಬರುತ್ತವೆ. ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಲಾಗಿತ್ತು. ಅಲ್ಲಿ ಶಾಸಕಾಂಗ ಮತ್ತು ಸರ್ಕಾರ ವ್ಯವಸ್ಥೆಗೆ ವಿಶೇಷ ವಿನಾಯಿತಿಗಳು ಇದ್ದವು (ಸಂವಿಧಾನದ 370ನೇ ವಿಧಿ ಅಡಿಯಲ್ಲಿ ಇದ್ದ ವಿಶೇಷ ಸ್ಥಾನಮಾನ ರದ್ದಾದ ಬಳಿಕ ಜಮ್ಮು ಮತ್ತು ಕಾಶ್ಮೀರಕ್ಕೆ ಇದ್ದ ವಿಶೇಷ ವಿನಾಯಿತಿಗಳು ಹೋಗಿವೆ). 'ವಿಶೇಷ ವರ್ಗ ಸ್ಥಾನಮಾನ'ದಲ್ಲಿ ಹಣಕಾಸಿಗೆ ಸಂಬಂಧಿಸಿದ ವಿಚಾರಗಳಿಗೆ ಆದ್ಯತೆ ನೀಡಲಾಗುತ್ತದೆ.

ಎಲ್ಲ ರಾಜ್ಯಗಳು ಅಭಿವೃದ್ಧಿಯಾಗಿಲ್ಲ

ವಿಶೇಷ ವರ್ಗ ಸ್ಥಾನಮಾನ ಪಡೆದ ಎಲ್ಲ ರಾಜ್ಯಗಳು ನಿರೀಕ್ಷಿತ ಅಭಿವೃದ್ಧಿಯನ್ನು ಹೊಂದಿಲ್ಲ. ಮೂರು ದಿನಗಳ ಹಿಂದೆ ನೀತಿ ಆಯೋಗ ಬಿಡುಗಡೆ ಮಾಡಿರುವ 2023–24ನೇ ಸಾಲಿನ 'ಸುಸ್ಥಿರ ಅಭಿವೃದ್ಧಿ ಗುರಿ' ವರದಿಯ ಅಂಕಿ ಅಂಶಗಳು ಇದನ್ನು ಹೇಳುತ್ತವೆ.

ಉದಾಹರಣೆಗೆ ನಾಗಾಲ್ಯಾಂಡ್ ರಾಜ್ಯಕ್ಕೆ 1969ರಲ್ಲಿ ವಿಶೇಷ ವರ್ಗ ಸ್ಥಾನಮಾನ ನೀಡಲಾಗಿತ್ತು. ಅದಿನ್ನೂ ಅಭಿವೃದ್ಧಿ ಕಂಡಿಲ್ಲ. ಸುಸ್ಥಿರ ಅಭಿವೃದ್ಧಿ ಗುರಿ ಸೂಚ್ಯಂಕದಲ್ಲಿ 63 ಅಂಕಗಳನ್ನು ಪಡೆದು ಕೊನೆಯಿಂದ ಮೂರನೇ ಸ್ಥಾನ ಗಳಿಸಿದೆ. ಮೇಘಾಲಯ 1971ರಲ್ಲೇ ವಿಶೇಷ ವರ್ಗ ಸ್ಥಾನಮಾನ ಗಳಿಸಿತ್ತು. ಅದು ಕೂಡ 63 ಅಂಕಗಳನ್ನು ಪಡೆದು ಕೊನೆಯಿಂದ ನಾಲ್ಕನೇ ಸ್ಥಾನದಲ್ಲಿದೆ.

2001ರಲ್ಲಿ ವಿಶೇಷ ವರ್ಗ ಸ್ಥಾನಮಾನ ಪಡೆದಿದ್ದ ಉತ್ತರಾಖಂಡ ಮಾತ್ರ 79 ಅಂಕಗಳನ್ನು ಗಳಿಸಿ ಸೂಚ್ಯಂಕದಲ್ಲಿ ಮೊದಲ ಸ್ಥಾನ ಪಡೆದಿದೆ. ಆದರೆ ಯಾವುದೇ ಸ್ಥಾನ ಇಲ್ಲದ ಕೇರಳ ಇಷ್ಟೇ ಅಂಕಗಳನ್ನು ಗಳಿಸಿ 2ನೇ ಸ್ಥಾನ ಗಳಿಸಿದೆ.

ಆಧಾರ: ಪಿಟಿಐ, ನೀತಿ ಆಯೋಗದ 'ಸುಸ್ಥಿರ ಅಭಿವೃದ್ಧಿ ಗುರಿ' ವರದಿ, ಸಂಸತ್ತಿನಲ್ಲಿ ಸಚಿವರ ಹೇಳಿಕೆ

ಕರಾವಳಿಯಲ್ಲಿ ಪ್ರಜ್ವಲ್ ಭಿನ್ನ ಪಾತ್ರ



ಪ್ರಜ್ವಲ್ ದೇವರಾಜ್

ಫೆಬ್ರುವರಿಯಲ್ಲಿ ಸೆಟ್ಟೇರಿದ್ದ ಪ್ರಜ್ವಲ್ ದೇವರಾಜ್ ನಟನೆಯ 40ನೇ ಸಿನಿಮಾ 'ಕರಾವಳಿ'ಯ ಚಿತ್ರೀಕರಣ ಅಂತಿಮ ಹಂತ ತಲುಪಿದ್ದು, ಚಿತ್ರದಲ್ಲಿ ಪ್ರಜ್ವಲ್ ಭಿನ್ನವಾದ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಇತ್ತೀಚೆಗೆ ಸಿನಿಮಾದಲ್ಲಿನ ಅವರ ಪಾತ್ರದ ಫೋಟೊವೊಂದನ್ನು ಚಿತ್ರತಂಡ ಬಿಡುಗಡೆ ಮಾಡಿದೆ. ಫಸ್ಟ್‌ಲುಕ್‌ನಲ್ಲಿ ಕೋಣದ ಮೇಲೆ ಕುಳಿತಿದ್ದ ಮಹಿಷಾಸುರನಾಗಿ ಕಾಣಿಸಿಕೊಂಡಿದ್ದ ಪ್ರಜ್ವಲ್ ನಂತರ ಯಕ್ಷಗಾನದ ವೇಷ ಧರಿಸಿದ್ದರು. ಇದೀಗ ಕೊಟ್ಟಿಗೆಯಲ್ಲಿ ಕಂಬಳದ ಕೋಣಗಳ ನಡುವೆ ಕುಳಿತು ಪೋಸ್ ನೀಡಿದ್ದಾರೆ. ಈ ಸಿನಿಮಾದಲ್ಲಿ ಪ್ರಜ್ವಲ್ ಯಕ್ಷಗಾನ ಕಲಾವಿದನಾ ಅಥವಾ ಕಂಬಳ ಓಡಿಸುವವನೇ ಹೀಗೆ ಡೈನಾಮಿಕ್ ಪ್ರಿನ್ಸ್ ಪಾತ್ರದ ಬಗ್ಗೆ ಕುತೂಹಲ ಹೆಚ್ಚಾಗಿದೆ. 'ಕರಾವಳಿ'ಯ ಚಿತ್ರೀಕರಣ ಈಗಾಗಲೇ ಶೇ 60ರಷ್ಟು ಪೂರ್ಣಗೊಂಡಿದೆ. ಸಿನಿಮಾದಲ್ಲಿ ಪ್ರಜ್ವಲ್‌ಗೆ ನಾಯಕಿಯಾಗಿ ಸಂಪದಾ ನಟಿಸಿದ್ದಾರೆ. ಸಿನಿಮಾ ಬಹುತೇಕ ಕರಾವಳಿಯ ಸುತ್ತಮುತ್ತ ಚಿತ್ರೀಕರಣಗೊಂಡಿದೆ. ಗುರುದತ್ ಗಾಣಿಗ ನಿರ್ದೇಶನದ ಜೊತೆಗೆ ಅವರದೇ ಗಾಣಿಗ ಫಿಲ್ಮ್ಸ್ ಹಾಗೂ ವಿಕೆ ಫಿಲಂ ಅಸೋಸಿಯೇಷನ್‌ನಲ್ಲಿ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. 'ಕರಾವಳಿ' ಮನುಷ್ಯ ಹಾಗೂ ಪ್ರಾಣಿ ಮಧ್ಯೆ ನಡೆಯುವ ಸಂಘರ್ಷದ ಕಥೆ. ಚಿತ್ರಕ್ಕೆ ಸಚಿನ್ ಬಸ್ರೂರು ಸಂಗೀತ ಸಂಯೋಜನೆ ಮಾಡಿದ್ದಾರೆ.

'ನೈಸ್ ರೋಡ್'ನಲ್ಲಿ ಧರ್ಮ

ಗೋಪಾಲ್ ಹಳೇಪಾಳ್ಯ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ 'ನೈಸ್ ರೋಡ್' ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಯಿತು.

ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಒಳಗೊಂಡ ಈ ಚಿತ್ರದಲ್ಲಿ ನಟ ಧರ್ಮ ಮುಖ್ಯಭೂಮಿಕೆಯಲ್ಲಿದ್ದಾರೆ. 'ಕಳೆದ ಜನ್ಮದಲ್ಲಿ ಮಾಡಿದ ತಪ್ಪಿಗೆ ಈ ಜನ್ಮದಲ್ಲಿ ಶಿಕ್ಷೆ ಕೊಡುವುದು ಯಾವ ನ್ಯಾಯ ಎನ್ನುವ ಅಂಶವನ್ನಿಟ್ಟುಕೊಂಡು ಕರ್ಮ ಮತ್ತು ಧರ್ಮದ ಮೇಲೆ ಚಿತ್ರದ ಕಥೆ ಹೆಣೆಯಲಾಗಿದೆ' ಎಂದಿದೆ ಚಿತ್ರತಂಡ. ನಿರ್ದೇಶನದ ಜೊತೆಗೆ ಪುನರ್ ಗೀತಾ ಸಿನಿಮಾಸ್ ಬ್ಯಾನರ್ ಅಡಿ ಗೋಪಾಲ್ ಹಳೇಪಾಳ್ಯ ಅವರೇ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

'ಈ ಹಿಂದೆ ನಾನು 'ತಾಂಡವ' ಎಂಬ ಸಿನಿಮಾ ನಿರ್ದೇಶನ ಮಾಡಿದ್ದೆ. 'ನೈಸ್ ರೋಡ್' ಪಾಪ, ಪುಣ್ಯ, ಪುನರ್ಜನ್ಮನದ ವಿಷಯವಿಟ್ಟುಕೊಂಡು ಮಾಡಿದ ಚಿತ್ರ. ಈ ಕಥೆ ಬರೆಯುವಾಗಲೇ ಇನ್ವೆಸ್ಟಿಗೇಷನ್ ಆಫೀಸರ್ ಪಾತ್ರಕ್ಕೆ ಧರ್ಮ ಅವರನ್ನು ಆಯ್ಕೆ ಮಾಡಿಕೊಂಡಿದ್ದೆ. ಮತ್ತೊಂದು ಮುಖ್ಯ ಪಾತ್ರದಲ್ಲಿ ಜ್ಯೋತಿ ರೈ ಕಾಣಿಸಿಕೊಂಡಿದ್ದಾರೆ. ಗೋವಿಂದೇಗೌಡ, ಮಂಜುನಾಥ್ ರಂಗಾಯಣ ಸೇರಿದಂತೆ ಸಾಕಷ್ಟು ಕಲಾವಿದರು ಚಿತ್ರದಲ್ಲಿ ನಟಿಸಿದ್ದಾರೆ. ಇದೊಂದು ಕಾಲ್ಪನಿಕ ಕಥೆಯಾಗಿದ್ದು ಜುಲೈ ಕೊನೆಯ ವಾರ ರಿಲೀಸ್ ಮಾಡುವ ಯೋಚನೆ ಇದೆ. ಬೆಂಗಳೂರಿನ ನೈಸ್ ರೋಡ್‌ಗೂ ಚಿತ್ರಕ್ಕೂ ಸಂಬಂಧವಿಲ್ಲ' ಎಂದು ಗೋಪಾಲ್ ಹೇಳಿದರು.



ಧರ್ಮ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ರಾಜ್ಯಕ್ಕೆ ವಿಶೇಷ ವರ್ಗ ಸ್ಥಾನಮಾನ ನೀಡಬೇಕು ಎಂದು ಒತ್ತಾಯಿಸಿ ಪಟ್ನಾದಲ್ಲಿ ಪಾದಯಾತ್ರೆ ನಡೆಸಿದ ವಿಡಿಯೊ ಒಂದು ಎಕ್ಸ್, ಫೇಸ್‌ಬುಕ್ ಮತ್ತಿತರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ವಿಡಿಯೊ ಅನ್ನು ಹಂಚಿಕೊಳ್ಳುತ್ತಿರುವ ಅನೇಕರು, ಎನ್‌ಡಿಎ ಅಂಗಪಕ್ಷಗಳಾದ ಜೆಡಿಯು ಮತ್ತು ಬಿಜೆಪಿ ನಡುವೆ ಮನಸ್ತಾಪ ಹುಟ್ಟಿಕೊಂಡಿದೆ ಎಂದು ಕೂಡ ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ಈ ವಿಡಿಯೊ ಅನ್ನು ಇನ್‌ವಿಡ್ ಟೂಲ್ ಸರ್ಚ್‌ಗೆ ಒಳಪಡಿಸಿ, ಗೂಗಲ್ ಲೆನ್ಸ್ ಮೂಲಕ ಪರಿಶೀಲನೆ ಮಾಡಿದಾಗ, ಒಂದೇ ವಿಡಿಯೊ ಅನ್ನು ಹಲವರು ಹಂಚಿಕೊಂಡಿರುವುದು ಕಂಡುಬಂತು. ವಿಡಿಯೊ ಅನ್ನು ಮತ್ತಷ್ಟು ಪರಿಶೀಲಿಸಿದಾಗ, ಅದು ಮಾರ್ಚ್ 2014ರ ವಿಡಿಯೊ ಎನ್ನುವುದು ತಿಳಿಯಿತು. ಆಗಲೂ ಬಿಹಾರದ ಮುಖ್ಯಮಂತ್ರಿ ಆಗಿದ್ದ ನಿತೀಶ್ ಅವರು ರಾಜ್ಯಕ್ಕೆ ವಿಶೇಷ ಸ್ಥಾನಮಾನ ನೀಡಬೇಕು ಎಂದು ಒತ್ತಾಯಿಸಿ ಪಟ್ನಾದಲ್ಲಿ ನಡೆಸಿದ್ದ ಪಾದಯಾತ್ರೆಗೆ ಸಂಬಂಧಿಸಿದ ವಿಡಿಯೊ ಅದು. ಹಳೆಯ ವಿಡಿಯೊ ಅನ್ನು ಕೆಲವರು ತಪ್ಪು ಅರ್ಥ ಬರುವಂತೆ ಈಗ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ.

ಗುಂಡಣ್ಣ



ನುಡಿ ಬೆಳಗು

ಪರಿವರ್ತನೆಯೇ ಜಗದ ನಿಯಮ



ಪಿ. ಚಂದ್ರಿಕಾ

ಬುದ್ಧ ಗುರುವಿನ ಬಳಿಗೆ ಒಬ್ಬ ಪಂಡಿತ ಸಮಸ್ಯೆಯೊಂದನ್ನು ತೆಗೆದುಕೊಂಡು ಬಂದ. ಅವನಿಗೆ ತನ್ನ ಧರ್ಮದ ಒಳ ಹೊರಗು ಗೊತ್ತಿತ್ತು. ಹಳೆಯ ಸಂಗತಿಗಳೆಲ್ಲವೂ ಒಳ್ಳೆಯದು ಎನ್ನುವುದನ್ನು ಆತ ನಂಬಿಯೂ ಇಲ್ಲ. ಆದರೆ ಬುದ್ಧ ಬೋಧಿಸುತ್ತಿರುವ ಎಲ್ಲ ಸಂಗತಿಗಳು ಹೊಸದೇ ಆಗಿದ್ದರಿಂದ ಅವು ಯಾವ ಧರ್ಮದ ಒಳಗೂ ಕಾಣಸಿಗುತ್ತಿರಲಿಲ್ಲ. ಅವನು ಅದನ್ನು ಬುದ್ಧನಲ್ಲಿ ವಿನಂತಿಸಿಕೊಂಡ, 'ನೀನು ಬೋಧಿಸುತ್ತಿರುವ ಈ ಸೂಕ್ತಿಗಳು ನನಗೆ ಗೊತ್ತಿರುವ ಯಾವ ಧರ್ಮಗ್ರಂಥಗಳಲ್ಲೂ ಇಲ್ಲ' ಎಂದ. ಬುದ್ಧ ನಕ್ಕ, 'ಇಲ್ಲದಿದ್ದರೆ ಏನಂತೆ? ನಿನಗೆ ಎಲ್ಲಿ ಅದನ್ನು ಅಳವಡಿಸಲು ಸಾಧ್ಯವೋ ಅಲ್ಲಿ ಅಳವಡಿಸಿಕೋ' ಎಂದ.

ಆ ಪಂಡಿತೋತ್ತಮನಿಗೆ ಮುಜುಗರ ಅನ್ನಿಸಿತು. 'ನೂರಾರು ವರ್ಷಗಳಿಂದ ನಿಂತ ಬೃಹತ್ ಮರದ ಹಾಗಿರುವ ಧರ್ಮಗ್ರಂಥವನ್ನು ಹೀಗೆ ಬದಲಾಯಿಸುವುದೇ? ಬುದ್ಧಗುರುವೇ ನಿನ್ನಲ್ಲಿ ಒಂದು ಅರಿಕೆ, ಹೀಗೆ ಬದಲಿಸುವುದು ಧರ್ಮ ಶಾಸ್ತ್ರಕ್ಕೆ ವಿರುದ್ಧವಲ್ಲವೇ? ನೀನು ಬೋಧಿಸುತ್ತಿರುವ ಕೆಲ ಸೂಕ್ತಿಗಳಂತೂ ಧರ್ಮ ಗ್ರಂಥಗಳಲ್ಲಿರುವ ಅನೇಕ ವಿಚಾರಗಳನ್ನು ವಿರೋಧಿಸುತ್ತವೆ. ಇದನ್ನು ಹೇಗೆ ಅಳವಡಿಸಲು ಸಾಧ್ಯ?' ಎನ್ನುತ್ತಾನೆ. ಬುದ್ಧ ನಕ್ಕು, 'ಹೌದೇ ನಿನ್ನ ಧರ್ಮ ಗ್ರಂಥದಲ್ಲಿ ಇದಕ್ಕೆ ಜಾಗವಿಲ್ಲವೇ? ಮನುಷ್ಯನಿಗೆ ಬೇಕಾದ ಸಂಗತಿಗಳನ್ನು ಅಲ್ಲಿ ಅಳವಡಿಸಲು ಸಾಧ್ಯವಿಲ್ಲ ಎಂದರೆ, ನಿನ್ನ ಧರ್ಮಗ್ರಂಥಕ್ಕೆ ತಿದ್ದುಪಡಿ ಅಗತ್ಯವಿದೆ' ಎನ್ನುತ್ತಾನೆ.

ಈ ಮಾತಿನಿಂದ ಹತಾಶಗೊಂಡ ಪಂಡಿತ ಕೇಳಿದ, 'ಇದು ಹೇಗೆ ಸಾಧ್ಯ?' ಬುದ್ಧ ನುಡಿದ, 'ಬೇಸಿಗೆ ನಂತರ ಮಳೆ, ಮಳೆ ನಂತರ ಚಳಿಗಾಲ ಬರುತ್ತದೋ ಇಲ್ಲವೋ?' ಪಂಡಿತ ಹೇಳಿದ 'ಅದು ಪ್ರಕೃತಿ ನಿಯಮ'. ಬುದ್ಧ ನಕ್ಕ, 'ಹಾಗಾದರೆ ಇರುವುದು ಮೂರೇ ಕಾಲವೋ? ವಸಂತ ಬಾರದಿದ್ದರೆ ಗಿಡ ಮರಗಳು ಚಿಗುರುವುದೇ ಇಲ್ಲ, ಗ್ರೀಷ್ಮ ಬಾರದಿದ್ದರೆ ಹಣ್ಣೆಲೆಗಳು ಉದುರುವುದೇ ಇಲ್ಲ. ಪ್ರಕೃತಿ ಎಂಥ ಚಲನಶೀಲ... ಮನುಷ್ಯ ಮಾತ್ರ ತಾನು ಬರೆದದ್ದು, ನಂಬಿದ್ದು ಮಾತ್ರ ಸರಿ ಎನ್ನುತ್ತಾನೆ' ಎಂದ. ಪಂಡಿತನಿಗೆ ಇನ್ನೂ ಅನುಮಾನ, 'ಅನುಭವ ಆಧ್ಯಾತ್ಮಿಕತೆ ಎಲ್ಲವನ್ನೂ ಹಾಸುಹೊಕ್ಕು ಬಂದ ವಿಚಾರ ಇಷ್ಟಲ್ಲದೆ ಎಲ್ಲವನ್ನೂ ಗ್ರಹಿಸಲು ಸಾಧ್ಯವಾ?' ಎನ್ನುತ್ತಾನೆ. ಅದಕ್ಕೆ ಬುದ್ಧ ಹೇಳುತ್ತಾನೆ, 'ಧರ್ಮ ಇರುವುದು ಮನುಷ್ಯನಿಗಾಗಿಯೇ ವಿನಾ, ಧರ್ಮಕ್ಕಾಗಿ ಮನುಷ್ಯ ಅಲ್ಲ. ಮನುಷ್ಯನಿಗೆ ಮಾರಕವಾದದ್ದು ಅನ್ನಿಸಿದರೆ ಅದನ್ನು ಬದಲಿಸುವುದರಲ್ಲಿ ತಪ್ಪಿಲ್ಲ. ಪರಿವರ್ತನೆ ಈ ಸೃಷ್ಟಿಯ ನಿಯಮ. ಒಳಿತಿಗಾಗಿ ಯಾವುದನ್ನು ಬೇಕಾದರೂ ಪರಿವರ್ತಿಸಬಹುದು' ಎಂದ.

ಕ್ರಿಸ್ತನೂ ಇದನ್ನೇ ಹೇಳುತ್ತಾನೆ, 'ಮನುಷ್ಯನ ಘನತೆ ಮರೆಸುವ ಯಾವ ಸಂಗತಿಗಳೂ ಅನಗತ್ಯ. ಅಂಥ ಸಂಗತಿಗಳು ಮಾರ್ಪಾಡಾಗದೆ ದಾರಿಯಿಲ್ಲ. ಇಲ್ಲದಿದ್ದರೆ ಮನುಷ್ಯನಲ್ಲಿ ಕ್ರೌರ್ಯ ತಲೆದೋರುತ್ತದೆ. ಅದಕ್ಕೆ ದಾರಿ ಕೊಡಬಾರದು ಎಂದರೆ ಕಾಲ ಕಾಲಕ್ಕೆ ನಮ್ಮ ಆಲೋಚನೆಗಳಲ್ಲಿ ಮಾರ್ಪಾಡು ಅನಿವಾರ್ಯ' ಎಂದು.

ಬುದ್ಧಿ ಮೌಢ್ಯಕ್ಕೆ ಬಲಿಯಾದರೆ ಕುರುಡು ನಂಬಿಕೆಗಳ ಹಿಂದೆ ಬೀಳುತ್ತೇವೆ. ಕಾಲ ಕಾಲಕ್ಕೆ ಬದಲಾವಣೆ ಅನಿವಾರ್ಯ ಎನ್ನುವುದನ್ನು ಎಲ್ಲ ಯುಗಪ್ರವರ್ತಕರೂ ಹೇಳಿದ್ದಾರೆ. ಅನುಸರಿಸುವವರು ಮಾತ್ರ ಕಡ್ಡಾಯಗಳಲ್ಲಿ ಉಳಿದಿದ್ದೇವೆ. ಹೇಳಿದವರ ಮಾತಿನ ಅರ್ಥ ದೊಡ್ಡದೆಂದು ಅರ್ಥಮಾಡಿಕೊಳ್ಳಬೇಕಲ್ಲವೇ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಮಂಗಳವಾರ ಜುಲೈ 16, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ದಶಮಿ ಗಂ. 20-34 ನಕ್ಷತ್ರ: ವಿಶಾಖಾ ಗಂ. 26-14 ಯೋಗ: ಸಾಧ್ಯ ಗಂ. 7-18 ಕರಣ: ತೈತಿಲ ಗಂ. 08-02, ಮಿಥುನ ಮಾಸದ 31 ನೇ ದಿನ, ಮಳೆನಕ್ಷತ್ರ: ಪುನರ್ವಸು 4.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-16 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 09 ಮೊಹರಮ್
ಅದೃಷ್ಟ ಸಂಖ್ಯೆ : 1, 7

ಮೇಷ: ನಿನ್ನೆಯ ಭೂರಿ ಭೋಜನದ ಸಲುವಾಗಿ ಅಜೀರ್ಣ ಮೊದಲಾದ ಸಮಸ್ಯೆಗಳನ್ನು ಎದುರಿಸುವಿರಿ. ನಿಮ್ಮ ವ್ಯವಹಾರಗಳ ಬಗ್ಗೆ ನೀವೇ ಹೆಚ್ಚಿನ ಗಮನ ಹರಿಸುವುದು ಸರಿ ಎನಿಸಲಿದೆ. ಧರ್ಮ ವಿರುದ್ಧ ಕಾರ್ಯಗಳನ್ನು ಮಾಡದಿರಿ.

ವೃಷಭ: ಆಯಾ ಋತುವಿನಲ್ಲಿ ಸಿಗುವ ಆಹಾರಗಳನ್ನು ಸಿದ್ಧಪಡಿಸಿ ಮಾರಾಟ ಮಾಡುವವರು ದೊಡ್ಡ ಮಟ್ಟದಲ್ಲಿ ಉದ್ಯೋಗವನ್ನು ಶುರುಮಾಡುವಿರಿ. ಹಿರಿಯರ ಮಾತಿನಂತೆ ನಡೆದುಕೊಳ್ಳುವುದರಿಂದ ಶುಭವಾಗುತ್ತದೆ.

ಮಿಥುನ: ನ್ಯಾಯವಾದಿಗಳಿಗೆ ಉತ್ತಮ ದಿನ, ಜಯ ಸಾಧಿಸುವ ಬಗ್ಗೆ ಉತ್ತಮವಾದ ಅಂಶ ಸಿಗಲಿದೆ. ಮನೆಯ ಪರಿಸ್ಥಿತಿ ಸುಧಾರಣೆ. ಹಣಕಾಸಿನ ಬಗ್ಗೆ ಚಿಂತಿಸಬೇಕಾಗಿಲ್ಲ. ವಾಸ್ತು ಶಿಲ್ಪದ ವಿದ್ಯಾರ್ಥಿಗಳಿಗೆ ಉತ್ತಮ ಬೇಡಿಕೆ ಬರಲಿದೆ.

ಕರ್ಕಾಟಕ: ಮನೆಯಲ್ಲಿ ನೆಡೆಯಬೇಕಾದ ಮಂಗಳ ಕಾರ್ಯದ ಕುರಿತು ಹಿರಿಯೊರೊಂದಿಗೆ ಹೆಚ್ಚಿನ ಸಮಾಲೋಚನೆ ನಡೆಸುವಿರಿ, ವ್ಯವಸ್ಥಿತವಾಗಿ ನೆಡೆಯುವುದು. ಸರಕಾರಿ ಅಧಿಕಾರಿಗಳಿಗೆ ಕೆಲಸದ ಒತ್ತಡ ಕಡಿಮೆಯಾಗಲಿದೆ.

ಸಿಂಹ: ಎಲ್ಲಾ ಕಾರ್ಯಗಳನ್ನು ಸಫಲತೆಗೆ ಮಾರ್ಪಡಿಸುವತ್ತ ಪ್ರಯತ್ನಿಸಬೇಕು, ಅದರಿಂದಾಗಿ ಒಂದು ರೀತಿಯ ಸ್ಪರ್ಧಾತ್ಮಕ ವಾತಾವರಣ ಇರಲಿದೆ. ಕೃಷಿಕರಿಗೆ ತೋಟದ, ಹೊಲದ ಕೆಲಸಗಳು ಸರಾಗವಾಗಿ ನೆಡೆಯುವಂತಾಗಲಿದೆ.

ಕನ್ಯಾ: ಊರಿನ ರಾಜಕಾರಣದ ವಿಷಯಗಳಲ್ಲಿ ಹೆಚ್ಚು ಸಮಯ ಕಳೆಯುವಂತಾಗುವುದು. ಮನೆ ದೇವರ ದರ್ಶನ, ಸೇವೆಗಳಿಂದ ಮಂಗಳ ಪ್ರದವಾಗಲಿದೆ. ಆರೋಗ್ಯದಲ್ಲಿ ಉತ್ತಮವಾದ ಸುಧಾರಣೆ ತೋರುವುದು.

ತುಲಾ: ಮುಂದಿನ ಗುರಿ ಸಾಧನೆಗೆ ಇಂದು ಅತಿ ಮುಖ್ಯವಾದ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಖಾದ್ಯ ತೈಲಗಳ ಮಾರಾಟ ಉತ್ತಮವಾಗಿದ್ದು, ಲಾಭಾಂಶ ಹೆಚ್ಚುವುದು. ಸಣ್ಣ ಮಕ್ಕಳಿಂದಾಗಿ ಮರ್ಯಾದೆ ಹೋಗಬಹುದು.

ವೃಶ್ಚಿಕ: ಮಾಡುವ ವೃತ್ತಿಯ ಬಗ್ಗೆ ಅಧ್ಯಯನ ನಡೆಸುವ ಅಥವಾ ಹೆಚ್ಚಿನ ಮಾಹಿತಿಯನ್ನು ಕಲೆಹಾಕಬೇಕಾಗಬಹುದು. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ ಕಂಡುಬರಲಿದೆ. ದಾಂಪತ್ಯದಲ್ಲಿ ಬಿರುಕು ಬರದಂತೆ ನೋಡಿಕೊಳ್ಳಿ.

ಧನು: ಯೋಜನೆಗಳ ಕುರಿತು ಸ್ಪಷ್ಟ ಮಾಹಿತಿಗಳನ್ನು ಕಲೆಹಾಕುವುದರಿಂದ ಮಾರ್ಗಮಧ್ಯದ ಅಡೆತಡೆಗಳು ನಿವಾರಣೆಯಾಗಲಿವೆ. ಸಮಾಜದಲ್ಲಿ ಬದಲಾವಣೆ ತರಲು ಕ್ರಾಂತಿಕಾರಿ ನಡೆಯೊಂದನ್ನು ಕೈಗೊಳ್ಳುವಿರಿ.

ಮಕರ: ಕೆಲ ದಿನಗಳ ಹಿಂದಿನ ತೀರ್ಮಾನ ಸರಿಯಾದುದೇ ಎಂಬುದರ ಬಗ್ಗೆ ಇಂದು ಆಲೋಚಿಸಿ ಮುಂದಿನ ಉತ್ತಮವಾದ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುವುದು. ಆಧ್ಯಾತ್ಮಿಕ ವಿಷಯಗಳತ್ತ ನಿಮ್ಮ ಮನಸ್ಸು ಹೊರಳುವುದು.

ಕುಂಭ: ಸಮಸ್ಯೆಗಳನ್ನು ಸುಲಭವಾಗಿ ಪರಿಹರಿಸಿಕೊಳ್ಳುವ ಉಪಾಯವನ್ನು ಆಪ್ತರು ತಿಳಿಸಿಕೊಡುವರು. ವಕೀಲರು, ನ್ಯಾಯಾಂಗ ಇಲಾಖಾ ಅಧಿಕಾರಿಗಳಿಗೆ ಹೆಚ್ಚಿನ ಪ್ರಗತಿ. ಭೋಜನದ ಸಮಯವು ಹೆಚ್ಚು ಕಡಿಮೆ ಆಗುತ್ತದೆ.


ಮೀನ: ನೂತನ ಮನೆ ನಿರ್ಮಾಣದಲ್ಲಿರುವ ಸಹೋದರರಿಗೆ ಸಹಾಯ ಹಸ್ತ ನೀಡುವ ಮನಸ್ಸಾಗುವುದು. ಯೋಗ ಪಟುಗಳಿಗೆ ದೊಡ್ಡ ಕಾರ್ಯಕ್ರಮದಲ್ಲಿ ಯೋಗ ಪ್ರದರ್ಶನ ಮಾಡುವ ಅವಕಾಶ ದೊರೆಯುವ ಸಾಧ್ಯತೆಗಳಿದೆ.

ಪದಬಂಧ 5743

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಒಳ್ಳೆತನದ ಸೋಗಿನಲ್ಲಿ ಮೋಸ ಮಾಡುವವನು (5)
3.ಅಗಲವಾದ ಹರಿವಾಣ (3)
5.ಮಲಗುವ ಮನೆಯಲ್ಲಿರುವ ಧಾನ್ಯ! (2)
6.ಗಳಿಸುವಾಗ ನೋಡಿದ ಚರ್ಮವಾದ್ಯ ಉಲ್ಟ ಆಗಿದೆ (2)
9.ಪ್ರಾತಃಕಾಲವಿದು (3)
10.ಕಿರೀಟಧಾರಣ ಮಹೋತ್ಸವವಿದು (5)
13.ಅಲೆ ಇಲ್ಲಿ ಕಾಣುತ್ತಿದೆ(3)
14.ಇಂದಿಯಗಳನ್ನು ಹಿಡಿತದಲ್ಲಿ ಇಟ್ಟುಕೊಂಡಿರುವವನು(2)
16.ಕಾದಲನ ನೋಡುತ್ತಾ ಕಳೆದ ಸಮಯ!(2)
17. ಬಂಗಾರ ಇಲ್ಲಿದೆ (3)
18.ಅಲ್ಪಮನುಷ್ಯ ಇಲ್ಲಿದ್ದಾನೆ (5)

ಮೇಲಿಂದ ಕೆಳಕ್ಕೆ
1.ಗಂಡಸುತನವಿಲ್ಲದಿರುವವನು (4)
2.ಮೋರಿ ಇಲ್ಲಿದೆ (3)
4.ಅಂತರವಿರುವ ತಲೆಮಾರು! (4)
8.ಕೆಟ್ಟ ಆಶಯವಿದು (5)
9.ಪ್ರತೀ ಸಲ ಕಾಣಿಸಿರುವ ಚಿಹ್ನೆ! (3)
10.ಹೂವಿನಲ್ಲಿರುವ ಹುಡಿ (3)
11.ಪರಮಾತ್ಮ ಇಲ್ಲಿಯೇ ಪ್ರತ್ಯಕ್ಷ! (4)
12.ಶ್ರೀಗಂಧ ಇಲ್ಲಿದೆ (4)
15.ಮನಸ್ಸಿನ ಅಸ್ವಾಸ್ಥತೆ (3)



5742ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಂತಃಪುರ 3.ವಕ್ರತುಂಡ
5.ಸವಾರ 6.ಜಲಜ
8.ಜಲ್ಲರಿ 9.ಪ್ರಧಾನಿ
10.ಮಧ್ಯಸ್ಥ 11.ಕನ್ನಡ
12.ತನಯ 14.ದಾಯಾದಿ
16.ಶಯ್ಯಾಗೃಹ 17.ನಖಹತಿ

ಮೇಲಿಂದ ಕೆಳಕ್ಕೆ:
1.ಅಂಡಜ 2.ರಸ
3.ವರ 4.ಡಬರಿ
7.ಜನನಿಬಿಡ 8.ಜನುಮದಾತ
11.ಕಳಶ 13.ಯಯಾತಿ
14.ದಾಹ 15.ದಿನ

ಸುಡೊಕು 6128

	4	2			7			
8			1			2		7
		3		8	4		5	
3		6						
	8			1				5
1		4	3		8		6	
	7			6				
2		8	4		3			1
				2		8		6

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6127 ಸುಡೊಕು

3	6	7	8	2	9	5	4	1
5	9	4	1	6	7	8	2	3
1	2	8	5	4	3	6	9	7
8	4	1	6	3	2	7	5	9
6	3	5	9	7	8	2	1	4
9	7	2	4	5	1	3	8	6
7	5	3	2	9	4	1	6	8
4	8	6	7	1	5	9	3	2
2	1	9	3	8	6	4	7	5

ಷೇರುಪೇಟೆ ವಹಿವಾಟು

145 ▲

80,664 ಇಂದಿನ ಅಂತ್ಯ
80,519 ಹಿಂದಿನ ಅಂತ್ಯ

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,502
ಇಂದಿನ ಅಂತ್ಯ	24,586
▲	84
ದಿನದ ಗರಿಷ್ಠ	24,635

ವಿನಿಮಯ ದರ

$ ಡಾಲರ್	83.61
£ ಪೌಂಡ್	108.48
€ ಯುರೊ	91.10
¥ ಯೆನ್ (100ಕ್ಕೆ)	53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹565
12 ಕ್ಕೆ	₹76
ಮೈಸೂರು	
100ಕ್ಕೆ	₹570

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1550 (1550)
ಸೋಯಾ (ರಿಫೈನ್ಡ್)	₹965 (970)
ಸೂರ್ಯಕಾಂತಿ (ರಿಫೈನ್ಡ್)	₹965 (965)
ಪಾಮೋಲಿನ್	₹904 (907)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹255-450
ದ್ವಿತಳಿ (ಬಿ.ವಿ)	₹222-599

ಮುಂಬೈ ಧಾರಣೆ

ಶೇಂಗಾ

15-07-2024

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1560)
ಒಂದು ವಾರದ ಡೆಲಿವರಿ	1555 (1555)
ಸೋಯಾ ಕಚ್ಚಾ	910 (925)
ಪಾಮ್ ವಾರದ ಡೆಲಿವರಿ	902 (905)
ಸೂರ್ಯಕಾಂತಿ ಎಣ್ಣೆ ಕಚ್ಚಾ	920 (920)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹72,550 (72,500)
ಬೆಳ್ಳಿ ಕೆ.ಜಿ ₹91,750 (92,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹2800-3200
ಮಧ್ಯಮ	₹2500-2800
ಸಣ್ಣ	₹2000-2500

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹8000-9300
ದಾವಣಗೆರೆ	₹6900-6900
ಕೆ.ಆರ್.ಪೇಟೆ	₹9550-9550
ಮಧುಗಿರಿ	₹8000-9000
ತಿಪಟೂರು	₹9100-9500
ತುರುವೇಕೆರೆ	₹8500-9300

ಬಿಒಎಂಗೆ ₹1,293 ಕೋಟಿ ಲಾಭ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಮಹಾರಾಷ್ಟ್ರ (ಬಿಒಎಂ) 2024–25ರ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ₹1,293 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹882 ಕೋಟಿ ಲಾಭ ದಾಖಲಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 47ರಷ್ಟು ಹೆಚ್ಚಳವಾಗಿದೆ. ವಸೂಲಾಗದ ಸಾಲದ ಪ್ರಮಾಣದ ಇಳಿಕೆ ಮತ್ತು ಬಡ್ಡಿ ವರಮಾನದಲ್ಲಿನ ಹೆಚ್ಚಳದಿಂದ ಲಾಭದಲ್ಲಿ ಏರಿಕೆಯಾಗಿದೆ ಎಂದು ಬ್ಯಾಂಕ್, ಷೇರುಪೇಟೆಗೆ ಸೋಮವಾರ ತಿಳಿಸಿದೆ.

ಒಟ್ಟು ವರಮಾನವು ₹5,417 ಕೋಟಿಯಿಂದ ₹6,769 ಕೋಟಿಗೆ ಹೆಚ್ಚಳವಾಗಿದೆ. ಬಡ್ಡಿ ವರಮಾನದ ಗಳಿಕೆಯು ₹4,789 ಕೋಟಿಯಿಂದ ₹5,875 ಕೋಟಿಗೆ ಏರಿಕೆಯಾಗಿದೆ.

ವಸೂಲಾಗದ ಸಾಲದ ಪ್ರಮಾಣ (ಎನ್‌ಪಿಎ) ಶೇ 2.28 ರಿಂದ ಶೇ 1.85ಕ್ಕೆ ಇಳಿದಿದೆ. ನಿವ್ವಳ ಎನ್‌ಪಿಎ ಶೇ 0.24ರಿಂದ ಶೇ 0.20ಕ್ಕೆ ತಗ್ಗಿದೆ. ಬಂಡವಾಳ ಅಪಾಯ ಅನುಪಾತವು ಶೇ 18.07ರಿಂದ ಶೇ 17.04ಕ್ಕೆ ಇಳಿಕೆಯಾಗಿದೆ ಎಂದು ತಿಳಿಸಿದೆ ಎಂದು ಬ್ಯಾಂಕ್ ತಿಳಿಸಿದೆ.

ಷೇರಿನ ಮೌಲ್ಯ ಏರಿಕೆ: ಜೂನ್ ತ್ರೈಮಾಸಿಕದಲ್ಲಿ ಹೆಚ್ಚಿನ ಲಾಭ ಗಳಿಸಿದ್ದರಿಂದ ಬ್ಯಾಂಕ್‌ನ ಷೇರಿನ ಮೌಲ್ಯ ಶೇ 6ರ ವರೆಗೆ ಏರಿಕೆಯಾಗಿದೆ. ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಷೇರಿನ ಬೆಲೆ ಕ್ರಮವಾಗಿ ₹68.75 ಮತ್ತು ₹68.70ಕ್ಕೆ ಮುಟ್ಟಿದೆ. ಷೇರಿನ ಮೌಲ್ಯ ಏರಿಕೆಯಿಂದ ಬ್ಯಾಂಕ್‌ನ ಮಾರುಕಟ್ಟೆ ಮೌಲ್ಯಕ್ಕೆ (ಎಂ–ಕ್ಯಾಪ್) ₹2,613 ಕೋಟಿ ಸೇರ್ಪಡೆಯಾಗಿದೆ. ಬ್ಯಾಂಕ್‌ನ ಒಟ್ಟು ಎಂ–ಕ್ಯಾಪ್ ₹48,684 ಕೋಟಿಗೆ ಏರಿಕೆಯಾಗಿದೆ.

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹204
ಆರ್‌ಎಸ್‌ಎಸ್-5	₹197
ಗುಡ್ ಲಾಟ್	₹184

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹16900
ಎಸಿ	₹10220
ಆರ್‌ಪಿ	₹18500
ಆರ್‌ಸಿ	₹10350

ಸಗಟು ಹಣದುಬ್ಬರ ಏರಿಕೆ

ಆಹಾರ ಪದಾರ್ಥಗಳ ಬೆಲೆ ಹೆಚ್ಚಳದಿಂದ ಏರಿಕೆ: ಕೇಂದ್ರ

ನವದೆಹಲಿ (ಪಿಟಿಐ): ದೇಶದಲ್ಲಿ ಸಗಟು ಹಣದುಬ್ಬರ ಜೂನ್ ತಿಂಗಳಲ್ಲಿ ಶೇ 3.36ಕ್ಕೆ ಏರಿಕೆಯಾಗಿದ್ದು, 16 ತಿಂಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ.

ಆಹಾರ ಪದಾರ್ಥಗಳು ಮತ್ತು ತಯಾರಿಸಿದ ವಸ್ತುಗಳ ದರ ಏರಿಕೆಯಿಂದ ಹಣದುಬ್ಬರ ಹೆಚ್ಚಳವಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಸೋಮವಾರ ತಿಳಿಸಿದೆ.

ಸಗಟು ಬೆಲೆ ಸೂಚ್ಯಂಕ (ಡಬ್ಲ್ಯುಪಿಐ) ಆಧಾರಿತ ಹಣದುಬ್ಬರವು ಸತತ ನಾಲ್ಕನೇ ತಿಂಗಳೂ ಏರಿಕೆಯ ಹಾದಿಯಲ್ಲಿದೆ. ಮೇ ತಿಂಗಳಲ್ಲಿ ಶೇ 2.61ರಷ್ಟು ದಾಖಲಾಗಿತ್ತು. 2023ರ ಜೂನ್ ತಿಂಗಳಲ್ಲಿ (–)ಶೇ 4.18ರಷ್ಟಿತ್ತು. ಫೆಬ್ರುವರಿಯಲ್ಲಿ ಸಗಟು ಹಣದುಬ್ಬರ ಗರಿಷ್ಠ ಶೇ 3.85ಕ್ಕೆ ಮುಟ್ಟಿತ್ತು.


ಆಹಾರ ಪದಾರ್ಥಗಳು, ತಯಾರಿಕಾ ಸರಕುಗಳು, ಕಚ್ಚಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಖನಿಜ ತೈಲ ಸೇರಿದಂತೆ ಇತರೆ ಬೆಲೆಗಳ ಏರಿಕೆಯಿಂದ ಹಣದುಬ್ಬರ ಜೂನ್‌ನಲ್ಲಿ ಹೆಚ್ಚಳವಾಗಿದೆ ಎಂದು ವಾಣಿಜ್ಯ ಸಚಿವಾಲಯ ತಿಳಿಸಿದೆ.

ಆಹಾರ ಪದಾರ್ಥಗಳ ಹಣದುಬ್ಬರವು ಮೇ ತಿಂಗಳಲ್ಲಿ ಶೇ 9.82ರಷ್ಟಿತ್ತು. ಇದು ಜೂನ್‌ನಲ್ಲಿ ಶೇ 10.87ಕ್ಕೆ ಹೆಚ್ಚಳವಾಗಿದೆ. ಹಣದುಬ್ಬರವು ತರಕಾರಿಗಳಿಗೆ ಶೇ 32.42ರಿಂದ 38.76ಕ್ಕೆ ಏರಿಕೆಯಾಗಿದೆ; ಈರುಳ್ಳಿ ಶೇ 93.35, ಆಲೂಗೆಡ್ಡೆ ಶೇ 66.37, ಬೇಳೆಕಾಳು ಬೆಲೆಯಲ್ಲಿ ಶೇ 21.64ರಷ್ಟು ಏರಿಕೆಯಾಗಿದೆ. ಹಣ್ಣುಗಳು ಶೇ 10.14, ಧಾನ್ಯಗಳು ಶೇ 9.27, ಹಾಲು ಶೇ 3.37ರಷ್ಟಕ್ಕೆ ಹೆಚ್ಚಳವಾಗಿದೆ.

ಇಂಧನ, ವಿದ್ಯುತ್ ಬಿಟ್ಟು ಉಳಿದಂತೆ ಎಲ್ಲ ದರಗಳ ಏರಿಕೆಯಿಂದ ಸಗಟು ಹಣದುಬ್ಬರ ಜೂನ್ ತಿಂಗಳಲ್ಲಿ ಏರಿಕೆಯಾಗಿದೆ. ಜುಲೈನಲ್ಲಿ ಸರಕುಗಳ ಬೆಲೆಯು ಇಳಿಕೆಯಾಗುವ ನಿರೀಕ್ಷೆಯಿದೆ ಎಂದು ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಇಂಧನ ಮತ್ತು ವಿದ್ಯುತ್‌ನ ಹಣದುಬ್ಬರವು ಶೇ 1.35ರಿಂದ ಶೇ 1.03ಕ್ಕೆ ಇಳಿದಿದೆ. ಆದರೆ, ಕಚ್ಚಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲದ ಹಣದುಬ್ಬರ ದರವು ಶೇ 12.55ಕ್ಕೆ ಏರಿಕೆಯಾಗಿದೆ. ತಯಾರಿಕಾ ಹಣದುಬ್ಬರವು ಶೇ 0.78 ರಿಂದ ಶೇ 1.43ಕ್ಕೆ ಹೆಚ್ಚಳವಾಗಿದೆ.

ಚಿಲ್ಲರೆ ಹಣದುಬ್ಬರ ಜೂನ್‌ನಲ್ಲಿ ಶೇ 5.1ರಷ್ಟು ದಾಖಲಾಗಿತ್ತು. ಇದು ನಾಲ್ಕು ತಿಂಗಳ ಗರಿಷ್ಠವಾಗಿತ್ತು ಎಂದು ಕಳೆದ ವಾರ ಕೇಂದ್ರ ಸರ್ಕಾರ ತಿಳಿಸಿತ್ತು.



ಸುದ್ದಿ 2 ನಿಮಿಷ

ರಫ್ತು ಪ್ರಮಾಣ ಶೇ 2.56 ಹೆಚ್ಚಳ

ನವದೆಹಲಿ (ಪಿಟಿಐ): ಜಾಗತಿಕ ಸವಾಲುಗಳ ನಡುವೆಯೂ ಜೂನ್ ತಿಂಗಳಲ್ಲಿ ₹2.94 ಲಕ್ಷ ಕೋಟಿ ಮೌಲ್ಯದ ಸರಕುಗಳು ದೇಶದಿಂದ ರಫ್ತಾಗಿವೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಸೋಮವಾರ ತಿಳಿಸಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹2.86 ಲಕ್ಷ ಕೋಟಿ ಮೌಲ್ಯದ ಸರಕುಗಳ ರಫ್ತು ಆಗಿತ್ತು. ಇದಕ್ಕೆ ಹೋಲಿಸಿದರೆ ರಫ್ತಿನಲ್ಲಿ ಶೇ 2.56ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

ಕಚ್ಚಾ ತೈಲ, ಎಲೆಕ್ಟ್ರಾನಿಕ್ ಸರಕುಗಳ ಆಮದು ಹೆಚ್ಚಳದಿಂದ, ಆಮದು ಪ್ರಮಾಣವು ಶೇ 5ರಷ್ಟು ಏರಿಕೆಯಾಗಿದೆ. ಇದರ ಒಟ್ಟು ಮೌಲ್ಯ ₹4.47 ಲಕ್ಷ ಕೋಟಿಯಿಂದ ₹4.69 ಲಕ್ಷ ಕೋಟಿಗೆ ಹೆಚ್ಚಳವಾಗಿದೆ. ಆಮದು ಮತ್ತು ರಫ್ತು ನಡುವಿನ ಅಂತರ (ವ್ಯಾಪಾರ ಕೊರತೆ) ₹1.75 ಲಕ್ಷ ಕೋಟಿಯಷ್ಟಿದೆ.



2024–25ರ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಸರಕು ಮತ್ತು ಸೇವೆಗಳ ರಫ್ತು ಮೌಲ್ಯ ₹16.72 ಲಕ್ಷ ಕೋಟಿಯಾಗಿದೆ. ಇದೇ ಪ್ರವೃತ್ತಿ ಮುಂದುವರಿದರೆ ಪ್ರಸಕ್ತ ಹಣಕಾಸು ವರ್ಷದ ಪೂರ್ಣಗೊಳ್ಳುವ ವೇಳೆಗೆ ಒಟ್ಟು ಸರಕು ಮತ್ತು ಸೇವೆಗಳ ರಫ್ತು ಮೌಲ್ಯ ₹66.88 ಲಕ್ಷ ಕೋಟಿ ದಾಟಲಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಕಾರ್ಯದರ್ಶಿ ಸುನಿಲ್ ಬರ್ತ್ವಾಲ್ ಹೇಳಿದ್ದಾರೆ.

ಮೇ ತಿಂಗಳಲ್ಲಿ ದೇಶದ ಸರಕುಗಳ ರಫ್ತು ಶೇ 9.1ರಷ್ಟು ಏರಿಕೆಯಾಗಿದ್ದು, ಇದರ ಮೌಲ್ಯ ₹3.18 ಲಕ್ಷ ಕೋಟಿಯಷ್ಟಾಗಿದೆ. ಏಪ್ರಿಲ್–ಜೂನ್ ಅವಧಿಯಲ್ಲಿ ರಫ್ತು ಮೌಲ್ಯ ₹9.19 ಲಕ್ಷ ಕೋಟಿಯಾಗಿದೆ. ಆಮದು ₹14.39 ಲಕ್ಷ ಕೋಟಿಯಾಗಿದ್ದು, ಶೇ 7.6ರಷ್ಟು ಹೆಚ್ಚಳ ಆಗಿದೆ ಎಂದು ತಿಳಿಸಿದೆ.

ಅಮೆರಿಕ, ಯುಎಇ, ಮಲೇಷ್ಯಾ, ಬಾಂಗ್ಲಾದೇಶ, ತಾಂಜಾನಿಯಾ, ನೆದರ್ಲೆಂಡ್ಸ್ ಮತ್ತು ಸಿಂಗಪುರಕ್ಕೆ ಜೂನ್‌ನಲ್ಲಿ ಹೆಚ್ಚಿನ ರಫ್ತಾಗಿದೆ ಎಂದು ತಿಳಿಸಿದೆ.

ಜೊಮಾಟೊ: ಶುಲ್ಕ ಹೆಚ್ಚಳ

ನವದೆಹಲಿ (ಪಿಟಿಐ): ಆನ್‌ಲೈನ್‌ನಲ್ಲಿ ಆಹಾರ ಪದಾರ್ಥ ಪೂರೈಸುವ ಜೊಮಾಟೊ ಕಂಪನಿಯು ತನ್ನ ಪ್ರತಿ ಆರ್ಡರ್ ಮೇಲೆ ವಿಧಿಸುವ ಶುಲ್ಕವನ್ನು (ಪ್ಲಾಟ್‌ಫಾರ್ಮ್ ಫೀ) ₹5ರಿಂದ ₹6ಕ್ಕೆ ಹೆಚ್ಚಿಸಿದೆ.

ನವದೆಹಲಿ, ಬೆಂಗಳೂರು, ಮುಂಬೈನಲ್ಲಿ ಈ ಶುಲ್ಕ ಏರಿಕೆಯು ಜಾರಿಗೆ ಬರಲಿದೆ. ಪ್ರತಿಸ್ಪರ್ಧಿ ಕಂಪನಿ ಸ್ವಿಗ್ಗಿ ಸಹ ಪ್ಲಾಟ್‌ಫಾರ್ಮ್ ಶುಲ್ಕವನ್ನು ಆಯ್ದ ನಗರಗಳಲ್ಲಿ ಭಾನುವಾರ ಹೆಚ್ಚಿಸಿತ್ತು. ಆದರೆ, ಸೋಮವಾರ ಈ ನಿರ್ಧಾರದಿಂದ ಹಿಂದೆ ಸರಿದಿದೆ. ಶುಲ್ಕ ಹೆಚ್ಚಳಕ್ಕೆ ಎರಡೂ ಕಂಪನಿಗಳು ಕಾರಣ ತಿಳಿಸಿಲ್ಲ.

ಕಳೆದ ವರ್ಷ ಕಂಪನಿಗಳು ಪ್ಲಾಟ್‌ಫಾರ್ಮ್ ಶುಲ್ಕವನ್ನು ಆರಂಭಿಸಿದ್ದವು. ಆರಂಭದಲ್ಲಿ ₹2 ನಿಗದಿಪಡಿಸಿತ್ತು. ನಂತರ ಇದನ್ನು ಹಂತ ಹಂತವಾಗಿ ಏರಿಕೆ ಮಾಡಲಾಗಿದೆ. ಕಂಪನಿಯು ಲಾಭವನ್ನು ಹೆಚ್ಚಿಸಿಕೊಳ್ಳಲು ಪ್ಲಾಟ್‌ಫಾರ್ಮ್ ಶುಲ್ಕ ಹೆಚ್ಚಳವು ಒಂದು ಮಾರ್ಗವಾಗಿದೆ.

ಹವಾಮಾನ ಬದಲಾವಣೆಗೆ ಒಗ್ಗಿಕೊಳ್ಳುವ ಬೀಜ

ಖಾರಿಫ್ ಭತ್ತ; ಶೇ 25ರ ಗುರಿ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಹವಾಮಾನದ ಬದಲಾವಣೆಗೆ ತಕ್ಕಂತೆ ಒಗ್ಗಿಕೊಳ್ಳುವಂತಹ ಬೀಜಗಳನ್ನು, ಖಾರಿಫ್ ಭತ್ತದ ಬೆಳೆಯ ಶೇ 25ರಷ್ಟು ಪ್ರದೇಶದಲ್ಲಿ ಬಳಸುವ ಗುರಿ ಹೊಂದಲಾಗಿದೆ ಎಂದು ಕೃಷಿ ಸಚಿವಾಲಯ ಸೋಮವಾರ ತಿಳಿಸಿದೆ.

ದೇಶದಲ್ಲಿ ಮಳೆ ಸುರಿಯುವ ಪ್ರಮಾಣ ಹಾಗೂ ಕಾಲದಲ್ಲೂ ವ್ಯತ್ಯಾಸಗಳಾಗಿದ್ದು, ಭತ್ತದ ಉತ್ಪಾದನೆಗೆ ಅಪಾಯವುಂಟಾಗುವುದನ್ನು ತಪ್ಪಿಸಲಿಕ್ಕಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದೆ.

‘ಗೋಧಿ ಕೃಷಿಯಲ್ಲಿ ಈಗಾಗಲೇ ಹವಾಮಾನದ ಬದಲಾವಣೆಗೆ ತಕ್ಕಂತೆ ಒಗ್ಗಿಕೊಳ್ಳುವಂತಹ ಬೀಜಗಳ ಬಳಕೆಯಲ್ಲಿ ಶೇ 75ರಷ್ಟು ಪ್ರಗತಿ ಸಾಧಿಸಲಾಗಿದ್ದರೂ, ಭತ್ತದಲ್ಲಿ ಇದರ ಅಳವಡಿಕೆ ಇನ್ನೂ ಸೀಮಿತವಾಗಿದೆ’ ಎಂದು ಭಾರತೀಯ ಕೃಷಿ ಸಂಶೋಧನಾ ಮಂಡಳಿಯ (ಐಸಿಎಆರ್) ಮಹಾನಿರ್ದೇಶಕ ಹಿಮಾಂಶು ಪಾಠಕ್ ಮಾಧ್ಯಮಗಳಿಗೆ ತಿಳಿಸಿದರು.

‘ಬರ ನಿರೋಧಕ ಹಾಗೂ ಬೆಳೆ ಬಾಗುವಿಕೆಯನ್ನು ತಡೆಗಟ್ಟುವ ಭತ್ತದ ಬೀಜಗಳನ್ನು ಐಸಿಎಆರ್ ಅಭಿವೃದ್ಧಿಪಡಿಸಿದೆ. ಈ ಬೀಜಗಳನ್ನು 2023ರ ಖಾರಿಫ್ ಋತುವಿನಲ್ಲಿ ಒಟ್ಟು ಭತ್ತದ ಬೆಳೆಯ ಪ್ರದೇಶದಲ್ಲಿ ಶೇ16ರಷ್ಟು ಬಿತ್ತಲಾಗಿದೆ. ಪ್ರಸಕ್ತ ಋತುವಿನಲ್ಲಿ ಇದನ್ನು ಶೇ 25ಕ್ಕೆ ಹೆಚ್ಚಿಸುವ ಗುರಿ ಹೊಂದಿದ್ದೇವೆ’ ಎಂದರು.

100 ಹೊಸ ಪ್ರಭೇದ–ತಂತ್ರಜ್ಞಾನ: ಕೃಷಿ ಕ್ಷೇತ್ರದ ಬಲವರ್ಧನೆಗಾಗಿ ಐಸಿಎಆರ್ 100 ದಿನದಲ್ಲಿ ತಲಾ 100 ಹೊಸ ಪ್ರಭೇದದ ಬೀಜ ಹಾಗೂ ಕೃಷಿ ತಂತ್ರಜ್ಞಾನಗಳನ್ನು ಅಭಿವೃದ್ಧಿ ಪಡಿಸುವ ಯೋಜನೆ ರೂಪಿಸಿದೆ ಎಂದು ಕೃಷಿ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಈ ವರ್ಷ ಹೆಚ್ಚಿನ ಇಳುವರಿ ನೀಡುವ ಎಣ್ಣೆ ಬೀಜಗಳು ಮತ್ತು ದ್ವಿದಳ ಧಾನ್ಯಗಳ ಪ್ರಭೇದಗಳಿಗೆ ಆದ್ಯತೆ ನೀಡಲಾಗಿದೆ. ಈ ಯೋಜನೆಯಡಿ 174 ಜಿಲ್ಲೆಗಳಿಗೆ ಎಣ್ಣೆ ಬೀಜಗಳ ಕೇಂದ್ರಗಳನ್ನು ವಿಸ್ತರಿಸುವುದು ಹಾಗೂ ನಾಟಿ ಬೀಜಗಳಿಗೆ 130 ಜಿಲ್ಲೆಗಳಲ್ಲಿ ಮಾದರಿ ಗ್ರಾಮ ಕೇಂದ್ರ ರಚಿಸುವುದು ಸೇರಿದೆ’ ಎಂದು ಪಾಠಕ್ ಹೇಳಿದರು.

ಹೊಸ ತಳಿ; ಬೆಲೆ ಏರಿಕೆಗೆ ಕಡಿವಾಣ

ಬೆಂಗಳೂರಿನಲ್ಲಿರುವ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯು (ಐಐಎಚ್‌ಆರ್) ಹೈಬ್ರಿಡ್ ತಳಿಯ ಟೊಮೆಟೊ ಸಸಿಗಳನ್ನು ಅಭಿವೃದ್ಧಿಪಡಿಸಿದ್ದು, ಭವಿಷ್ಯದಲ್ಲಿ ಬೆಲೆ ಏರಿಕೆಯ ಬಿಸಿ ತಗ್ಗುವ ಭರವಸೆ ಸಿಕ್ಕಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದೇಶದಾದ್ಯಂತ ಟೊಮೆಟೊ ಬೆಲೆ 1 ಕೆ.ಜಿ.ಗೆ ₹ 80ಕ್ಕೆ ತಲುಪಿರುವ ಹೊತ್ತಿನಲ್ಲಿ ಹೊಸ ಪ್ರಭೇದಗಳ ಅನ್ವೇಷಣೆಯಾಗಿದ್ದು, ಅರ್ಕಾ ರಕ್ಷಕ್ ಮತ್ತು ಅರ್ಕಾ ಅಬೇಧ್ ತಳಿಯ ಟೊಮೆಟೊವನ್ನು ಮೂರು ವಾರವಾದರೂ ಬಳಸಬಹುದಾಗಿದೆ ಎಂದು ಹಿಮಾಂಶು ಹೇಳಿದ್ದಾರೆ.

ತೆಲಂಗಾಣ: ರೈತರ ₹2 ಲಕ್ಷದವರೆಗಿನ ಸಾಲ ಮನ್ನಾ

ಪ್ರಜಾವಾಣಿ ವಾರ್ತೆ



ಹೈದರಾಬಾದ್: ತೆಲಂಗಾಣದ ಕಾಂಗ್ರೆಸ್ ಸರ್ಕಾರವು ತನ್ನ ಕೃಷಿ ಸಾಲ ಮನ್ನಾ ಯೋಜನೆ ಜಾರಿಗೆ ತರಲು ಬಹು ನಿರೀಕ್ಷಿತ ಮಾರ್ಗಸೂಚಿ ಗಳನ್ನು ಸೋಮವಾರ ಪ್ರಕಟಿಸಿದೆ.

ಈ ಮಾರ್ಗಸೂಚಿಗಳ ಪ್ರಕಾರ, ರೈತರು 2018ರ ಡಿಸೆಂಬರ್ 12 ಮತ್ತು 2023ರ ಡಿಸೆಂಬರ್ 9ರ ಅವಧಿಯ ನಡುವೆ ಪಡೆದಿರುವ ₹2 ಲಕ್ಷದವರೆಗಿನ ಕೃಷಿ ಸಾಲದ ಮನ್ನಾಕ್ಕೆ ಅರ್ಹರಾಗಿರುತ್ತಾರೆ.

ಕಳೆದ ವರ್ಷ ನಡೆದ ವಿಧಾನಸಭಾ ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷವು ಆರು ಗ್ಯಾರಂಟಿಗಳನ್ನು ನೀಡುವ ಭರವಸೆಯ ಜತೆಗೆ ರೈತರ ಸಾಲ ಮನ್ನಾ ಮಾಡುವುದಾಗಿ ಘೋಷಿಸಿತ್ತು. ಲೋಕಸಭೆ ಚುನಾವಣೆ ವೇಳೆ ಕೃಷಿ ಸಾಲ ಮನ್ನಾ ಯೋಜನೆ ಜಾರಿ ವಿಳಂಬವಾಗುತ್ತಿದ್ದಂತೆ ಮುಖ್ಯಮಂತ್ರಿ ಎ.ರೇವಂತ ರೆಡ್ಡಿ ಅವರು ಆಗಸ್ಟ್‌ನೊಳಗೆ ಜಾರಿಗೊಳಿಸುವುದಾಗಿ ಭರವಸೆ ನೀಡಿದ್ದರು.

ಸರ್ಕಾರ ಕಲೆಹಾಕಿದ ಮಾಹಿತಿ ಪ್ರಕಾರ ತೆಲಂಗಾಣದಲ್ಲಿ ಸುಮಾರು 47 ಲಕ್ಷ ರೈತರು ಕೃಷಿ ಸಾಲ ಮಾಡಿದ್ದಾರೆ. ಅದರಲ್ಲಿ ಬಹುತೇಕ ಮಂದಿ ₹1 ಲಕ್ಷಕ್ಕಿಂತ ಕಡಿಮೆ ಸಾಲ ಹೊಂದಿದ್ದಾರೆ. ಸಾಲ ಮನ್ನಾ ಯೋಜನೆ ಜಾರಿಗೆ ಸರ್ಕಾರಕ್ಕೆ ಕನಿಷ್ಠ ₹35 ಸಾವಿರ ಕೋಟಿ ಅಗತ್ಯವಿದೆ ಎಂದು ಅಂದಾಜಿಸಲಾಗಿದೆ. ಮಾರ್ಗಸೂಚಿಯ ಪ್ರಕಾರ ಪ್ರತಿ ಕುಟುಂಬದ ಒಂದು ಸಾಲ ಮಾತ್ರ ಮನ್ನಾ ಆಗಲಿದೆ. ₹2 ಲಕ್ಷಕ್ಕಿಂತ ಹೆಚ್ಚಿನ ಸಾಲ ಪಡೆದಿರುವ ಕುಟುಂಬಗಳು ಸಾಲ ಮನ್ನಾ ಯೋಜನೆಗೆ ಅರ್ಹತೆ ಪಡೆಯಲು ಹೆಚ್ಚುವರಿ ಮೊತ್ತ ಪಾವತಿಸಬೇಕು.

ಸೆನ್ಸೆಕ್ಸ್, ನಿಫ್ಟಿ ಏರಿಕೆ

ನವದೆಹಲಿ (ಪಿಟಿಐ): ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಷೇರುಗಳ ಖರೀದಿ ಮತ್ತು ವಿದೇಶಿ ಬಂಡವಾಳ ಒಳಹರಿವಿನ ಹೆಚ್ಚಳದಿಂದ ಷೇರು ಸೂಚ್ಯಂಕಗಳು ಸೋಮವಾರ ಏರಿಕೆಯಾಗಿವೆ.

ಸೆನ್ಸೆಕ್ಸ್ 145 ಅಂಶ ಏರಿಕೆಯಾಗಿ, 80,664ಕ್ಕೆ ಅಂತ್ಯಗೊಂಡಿತು. ನಿಫ್ಟಿ 84 ಅಂಶ ಹೆಚ್ಚಳವಾಗಿ 24,586ಕ್ಕೆ ಸ್ಥಿರಗೊಂಡಿತು.

ಎಸ್‌ಬಿಐ, ಎನ್‌ಟಿಪಿಸಿ, ಅಲ್ಟ್ರಾಟೆಕ್ ಸಿಮೆಂಟ್, ಮಹೀಂದ್ರಾ ಆ್ಯಂಡ್ ಮಹೀಂದ್ರಾ, ಬಜಾಜ್ ಫೈನಾನ್ಸ್, ಟಾಟಾ ಮೋಟರ್ಸ್, ಮಾರುತಿ ಮತ್ತು ಐಟಿಸಿ ಷೇರಿನ ಮೌಲ್ಯ ಗಳಿಕೆ ಕಂಡಿವೆ.

ರೂಪಾಯಿ ಮೌಲ್ಯ ಇಳಿಕೆ: ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 10 ಪೈಸೆಯಷ್ಟು ಕುಸಿದಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ವಹಿವಾಟಿನ ಅಂತ್ಯಕ್ಕೆ ₹83.61ಕ್ಕೆ ತಲುಪಿದೆ.

ಭಾರತ–ಅಮೆರಿಕ ನೌಕಾಪಡೆಗಳ ತಾಲೀಮು

ನವದೆಹಲಿ (ಪಿಟಿಐ): ಭಾರತ ನೌಕಾಪಡೆಯ ಯುದ್ಧನೌಕೆಗಳು ಮತ್ತು ಅಮೆರಿಕ ನೌಕಾಪಡೆಯು ಥಿಯೊಡೋರ್ ರೂಸ್‌ವೆಲ್ಟ್ ಯುದ್ಧನೌಕೆಯು ಹಿಂದೂ ಮಹಾಸಾಗರದಲ್ಲಿ ಸೇನಾ ತಾಲೀಮು ನಡೆಸಿದವು.

ಥಿಯೊಡೋರ್ ರೂಸ್‌ವೆಲ್ಟ್, ಅಮೆರಿಕ ನೌಕಾಪಡೆಯ ಪರಮಾಣು ಚಾಲಿತ ಯುದ್ಧನೌಕೆಗಳಲ್ಲಿ ಒಂದು.

‘ಥಿಯೊಡೋರ್ ರೂಸ್‌ವೆಲ್ಟ್ ಹಾಗೂ ಭಾರತೀಯ ನೌಕಾಪಡೆಗಳು ಜುಲೈ 12ರಂದು ಹಿಂದೂ ಮಹಾಸಾಗರದಲ್ಲಿ ಸಮರಾಭ್ಯಾಸ ನಡೆಸಿದವು’ ಎಂದು ಅಮೆರಿಕ ರಾಯಭಾರ ಕಚೇರಿ ಹೇಳಿದೆ. ಇಂಡೊ–ಪೆಸಿಫಿಕ್ ಪ್ರದೇಶದಲ್ಲಿ ಚೀನಾದ ಹಸ್ತಕ್ಷೇಪ ಹೆಚ್ಚುತ್ತಿರುವ ಬೆನ್ನಲ್ಲೇ ಉಭಯ ದೇಶಗಳು ಸೇನಾ ತಾಲೀಮು ನಡೆಸಿವೆ.



ಸನ್ ಫಾರ್ಮಾಸ್ಯೂಟಿಕಲ್ಸ್ ಅರ್ಜಿ ವಜಾ

ನವದೆಹಲಿ: ಸರ್ಕಾರ ನಿಗದಿಪಡಿಸಿದ ಬೆಲೆಗೆ ಔಷಧಗಳು ಸಿಗುವಂತೆ ಆಗಬೇಕು ಎಂಬ ಉದ್ದೇಶ ಹೊಂದಿರುವ ‘ಔಷಧಗಳ (ಬೆಲೆ ನಿಯಂತ್ರಣ) ಆದೇಶ 1995’ರ ವ್ಯಾಖ್ಯಾನವನ್ನು ಸೀಮಿತವಾಗಿ, ಸಂಕುಚಿತ ದೃಷ್ಟಿಯಿಂದ ಮಾಡಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರು ಇದ್ದ ನ್ಯಾಯಪೀಠವು, ಸನ್ ಫಾರ್ಮಾಸ್ಯೂಟಿಕಲ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸುವ ಸಂದರ್ಭದಲ್ಲಿ ಈ ಮಾತು ಹೇಳಿದೆ. ರೊಸಿಲಾಕ್ಸ್ ಔಷಧದ ವಿತರಕ ತಾನಲ್ಲ, ತಾನು ಅದರ ಡೀಲರ್ ಮಾತ್ರ ಎಂದು ಕಂಪನಿ ಹೇಳಿತ್ತು. ‘ವಿತರಕ ಹಾಗೂ ಡೀಲರ್ ಪದಗಳ ವ್ಯಾಖ್ಯಾನವು ಈ ನಿಯಮದ ಅಡಿಯಲ್ಲಿ ಸಂಪೂರ್ಣವಾಗಿ ಬೇರೆ ಬೇರೆ ಅಲ್ಲ. ಇಲ್ಲಿ ವಿತರಕರು ಸಗಟುದಾರ ಅಥವಾ ಚಿಲ್ಲರೆ ವ್ಯಾಪಾರಿಯ ಪಾತ್ರವನ್ನೂ ನಿರ್ವಹಿಸುವ ಸಾಧ್ಯತೆ ಇದೆ. ಆ ಮೂಲಕ, ಡೀಲರ್ ಎಂಬ ವ್ಯಾಖ್ಯಾನದ ಅಡಿಯಲ್ಲೂ ಬಂದಂತೆ ಆಗುತ್ತದೆ’ ಎಂದು ಪೀಠವು ತೀರ್ಪಿನಲ್ಲಿ ಹೇಳಿದೆ.



ತಡೆಗೋಡೆ ಧ್ವಂಸ

ಮಾದಕ ವಸ್ತುಗಳ ಕಳ್ಳಸಾಗಣೆ ವಿರುದ್ಧ ಕಾರ್ಯಾಚರಣೆ ಕೈಗೊಂಡಿರುವ ಬ್ರೆಜಿಲ್ ಪೊಲೀಸರು ರಾಜಧಾನಿ ರಿಯೊ ಡಿ ಜನೈರೊ ಬಳಿಯ ಸಿಡಾಡೆ ಡೆ ದೆವುಸ್‌ನಲ್ಲಿ ಕಳ್ಳಸಾಗಣೆದಾರರು ನಿರ್ಮಿಸಿದ್ದ ತಡೆಗೋಡೆಯನ್ನು ಸೋಮವಾರ ಧ್ವಂಸಗೊಳಿಸಿದರು –ಎಎಫ್‌ಪಿ ಚಿತ್ರ

ನೇಪಾಳ: 7 ಮೃತದೇಹ ಪತ್ತೆ

ಕಠ್ಮಂಡು (ಎಪಿ): ನೇಪಾಳದಲ್ಲಿ ಭೂಕುಸಿತದಿಂದಾಗಿ ಶುಕ್ರವಾರ ಎರಡು ಬಸ್‌ಗಳು ನದಿಗೆ ಬಿದ್ದ ಪರಿಣಾಮ ನೀರಿನಲ್ಲಿ ಕೊಚ್ಚಿಹೋಗಿದ್ದವರಲ್ಲಿ ಏಳು ಜನರ ಮೃತದೇಹಗಳನ್ನು ರಕ್ಷಣಾ ಸಿಬ್ಬಂದಿ ಪತ್ತೆಹಚ್ಚಿದ್ದಾರೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

‘ವಿವಿಧ ಪ್ರದೇಶಗಳಲ್ಲಿ ನದಿ ದಡದಲ್ಲಿ ಮೃತದೇಹಗಳು ಪತ್ತೆಯಾಗಿದ್ದು, ಕಾಣೆಯಾಗಿರುವ ಬಸ್ ಮತ್ತು ಇತರ ಪ್ರಯಾಣಿಕರ ಪತ್ತೆಗೆ ಕಾರ್ಯಾಚರಣೆ ನಡೆಯುತ್ತಿದೆ’ ಎಂದು ತಿಳಿಸಿದ್ದಾರೆ. ‘ಮೃತದೇಹಗಳ ಗುರುತು ಪತ್ತೆಯಾಗಿದ್ದು, ಸಂಬಂಧಪಟ್ಟವರಿಗೆ ಮಾಹಿತಿ ನೀಡಲಾಗಿದೆ. ಮೃತರಲ್ಲಿ ಮೂವರು ಭಾರತೀಯರಾಗಿದ್ದು, ಉಳಿದ ನಾಲ್ವರು ನೇಪಾಳಿ ಪ್ರಜೆಗಳು’ ಎಂದು ಅಧಿಕಾರಿ ಖೀಮಾ ನಂದ ಭುಸಾಲ್ ಮಾಹಿತಿ ನೀಡಿದ್ದಾರೆ. ನೇಪಾಳದ ರಾಜಧಾನಿ ಕಠ್ಮಂಡುವಿನಿಂದ ಉತ್ತರ ಭಾಗಗಳನ್ನು ಸಂಪರ್ಕಿಸುವ ರಸ್ತೆಯಲ್ಲಿ ಸಂಚರಿಸುತ್ತಿದ್ದ ಎರಡು ಬಸ್‌ಗಳು ಶುಕ್ರವಾರ ಮುಂಜಾನೆ ಸಿಮಾಲ್‌ತಾಲ್ ಬಳಿ ಸಂಭವಿಸಿದ ಭೂಕುಸಿತದಿಂದಾಗಿ ನದಿಗೆ ಬಿದ್ದಿದ್ದವು.

ಗುಂಡಿನ ದಾಳಿ ಕುರಿತು ಮಾಹಿತಿ ನೀಡಿದ ಮಾಜಿ ಅಧ್ಯಕ್ಷ ಟ್ರಂಪ್

‘ದೇವರ ದಯೆಯಿಂದ ಬದುಕುಳಿದಿರುವೆ’

ಮಿಲ್ವಾಕೀ/ವಾಷಿಂಗ್ಟನ್/ಬಟ್ಲರ್ (ಪಿಟಿಐ/ಎಪಿ): ‘ದೇವರ ದಯೆ ಅಥವಾ ಅದೃಷ್ಟದಿಂದ ನಾನು ಬದುಕುಳಿದಿದ್ದೇನೆ’ ಎಂದು ಅಮೆರಿಕದ ಮಾಜಿ ಅಧ್ಯಕ್ಷ ಮತ್ತು ಅಧ್ಯಕ್ಷ ಸ್ಥಾನದ ‘ರಿಪಬ್ಲಿಕನ್’ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.



ಡೊನಾಲ್ಡ್ ಟ್ರಂಪ್

ಪೆನ್ಸಿಲ್ವೇನಿಯಾದ ಬಟ್ಲರ್ ನಗರದಲ್ಲಿ ಶನಿವಾರ ಸಂಜೆ ನಡೆದಿದ್ದ ಚುನಾವಣಾ ರ‍್ಯಾಲಿಯಲ್ಲಿ ಗುಂಡಿನ ದಾಳಿಗೆ ಒಳಗಾಗಿದ್ದ ಟ್ರಂಪ್ ಅವರು ಘಟನೆಯ ಕುರಿತು ಭಾನುವಾರ ಮಾತನಾಡಿದ್ದಾರೆ.

ವಿಸ್ಕನ್‌ಸಿನ್ ರಾಜ್ಯದ ಮಿಲ್ವಾಕೀಯಲ್ಲಿ ಆರಂಭವಾಗಿರುವ ರಿಪಬ್ಲಿಕನ್ ಪಕ್ಷದ ರಾಷ್ಟ್ರೀಯ ಸಮಾವೇಶದಲ್ಲಿ ಪಾಲ್ಗೊಳ್ಳಲು ಸೋಮವಾರ ತೆರಳುತ್ತಿದ್ದ ಅವರು ‘ನ್ಯೂಯಾರ್ಕ್ ಪೋಸ್ಟ್’ಗೆ ನೀಡಿದ ಸಂದರ್ಶನದಲ್ಲಿ ಈ ಕುರಿತು ಮಾಹಿತಿ ನೀಡಿದ್ದಾರೆ.

‘ಪೆನ್ಸಿಲ್ವೇನಿಯಾದಲ್ಲಿ ಭಾಷಣ ಮಾಡುವಾಗ ನನ್ನ ತಲೆಯನ್ನು ಒಂದು ಕ್ಷಣ ತಿರುಗಿಸಿರದಿದ್ದರೆ ನಾನು ಇಲ್ಲಿ ಇರುತ್ತಿರಲಿಲ್ಲ, ಬದಲಿಗೆ ಸತ್ತಿರುತ್ತಿದ್ದೆ. ಸರಿಯಾದ ಸಮಯದಲ್ಲಿ, ಸರಿಯಾದ ಪ್ರಮಾಣದಷ್ಟು ತಲೆ ತಿರುಗಿದೆ. ಸ್ವಲ್ಪ ವ್ಯತ್ಯಾಸವಾಗಿದ್ದರೂ ಕಿವಿಗೆ ತಗುಲಿದ ಗುಂಡು, ನನ್ನನ್ನು ಕೊಲ್ಲಬಹುದಿತ್ತು’ ಎಂದು ಅವರು ವಿವರಿಸಿದ್ದಾರೆ.

‘ನಾನು ಸತ್ತೇ ಹೋದೆ ಎಂದು ಭಾವಿಸಲಾಗಿತ್ತು. ಆದರೆ, ದೇವರ ದಯೆ ಅಥವಾ ಅದೃಷ್ಟದಿಂದ ಬದುಕುಳಿದಿದ್ದೇನೆ’ ಎಂದು ಅವರು ಹೇಳಿದ್ದಾರೆ.

‘ದಾಳಿ ಬಳಿಕ ಮಾತನಾಡಲು ಬಯಸಿದ್ದೆ’: ‘ಗುಂಡಿನ ದಾಳಿಯ ಬಳಿಕ ನಾನು ಮಾತು ಮುಂದುವರಿಸಲು ಬಯಸಿದ್ದೆ. ಆದರೆ ಸೀಕ್ರೆಟ್ ಸರ್ವೀಸ್‌ನ ಸಿಬ್ಬಂದಿ ಆಸ್ಪತ್ರೆಗೆ ಹೋಗಬೇಕೆಂದು ಒತ್ತಾಯಿಸಿದರು’ ಎಂದು ಅವರು ತಿಳಿಸಿದ್ದಾರೆ.

ಈ ದಾಳಿಯಲ್ಲಿ ಟ್ರಂಪ್ ಅವರ ಬಲ ಕಿವಿಗೆ ಗಾಯವಾಗಿತ್ತು. ಘಟನೆಯಲ್ಲಿ ನಾಗರಿಕರೊಬ್ಬರು ಮೃತಪಟ್ಟಿದ್ದು, ಇಬ್ಬರಿಗೆ ಗಂಭೀರ ಗಾಯಗಳಾಗಿವೆ. ಟ್ರಂಪ್ ಹತ್ಯೆಗೆ ಯತ್ನಿಸಿದ ಬಂದೂಕುಧಾರಿ ಥಾಮಸ್ ಮ್ಯಾಥ್ಯೂ ಕ್ರೂಕ್ಸ್ ಎಂಬಾತನನ್ನು ಅಮೆರಿಕದ ಸೀಕ್ರೆಟ್ ಸರ್ವೀಸ್‌ನ ಭದ್ರತಾ ಸಿಬ್ಬಂದಿ ಹತ್ಯೆಗೈದಿದ್ದಾರೆ.

ಸಿಟಿ ಸ್ಕ್ಯಾನ್: ಮುನ್ನೆಚ್ಚರಿಕೆ ಕ್ರಮವಾಗಿ ಡೊನಾಲ್ಡ್ ಟ್ರಂಪ್ ಅವರಿಗೆ ‘ಸಿಟಿ ಸ್ಕ್ಯಾನ್’ ಪರೀಕ್ಷೆ ಮಾಡಲಾಗಿದ್ದು, ಯಾವುದೇ ಸಮಸ್ಯೆ ಪತ್ತೆಯಾಗಿಲ್ಲ ಎಂದು ಸಿಎನ್‌ಎನ್ ವರದಿ ಮಾಡಿದೆ. ಇದಲ್ಲದೆ ಅವರಿಗೆ ಇತರ ಯಾವ್ಯಾವ ಪರೀಕ್ಷೆಗಳನ್ನು ನಡೆಸಲಾಗಿದೆ ಎಂಬುದು ಸ್ಪಷ್ಟವಾಗಿಲ್ಲ ಎಂದು ಅದು ಹೇಳಿದೆ.

‘ಹಂತಕನ ಉದ್ದೇಶ ಇನ್ನೂ ನಿಗೂಢ’

ಬಟ್ಲರ್ (ಎಪಿ): ಡೊನಾಲ್ಡ್ ಟ್ರಂಪ್ ಅವರ ಮೇಲೆ ಗುಂಡಿನ ದಾಳಿ ನಡೆಸಿದ ಥಾಮಸ್ ಮ್ಯಾಥ್ಯೂ ಕ್ರೂಕ್ಸ್‌ನ ಉದ್ದೇಶ ಏನಾಗಿತ್ತು ಎಂಬುದು ಇನ್ನೂ ನಿಗೂಢವಾಗಿಯೇ ಉಳಿದಿದೆ. ಆತ ಏಕಾಂಗಿಯಾಗಿಯೇ ಈ ಕೃತ್ಯ ಎಸಗಿದಂತೆ ಕಂಡು ಬರುತ್ತಿದೆ ಎಂದು ತನಿಖಾ ಎಫ್‌ಬಿಐ ಅಧಿಕಾರಿಗಳು ಹೇಳಿದ್ದಾರೆ.

ಈ ದಾಳಿಯು ಭಯೋತ್ಪಾದನೆಯ ಕೃತ್ಯ ಆಗಿರುವ ಸಾಧ್ಯತೆಯ ಆಯಾಮದಲ್ಲಿ ತನಿಖೆ ನಡೆಸಲಾಗುತ್ತಿದೆ ಎಂದು ಎಫ್‌ಬಿಐ ತಿಳಿಸಿದೆ.

ಹಂತಕನ ಉದ್ದೇಶ ಸ್ಪಷ್ಟವಾಗಿಲ್ಲ. ಆತ ಎಫ್‌ಬಿಐನ ನಿಗಾದಲ್ಲೂ ಇರಲಿಲ್ಲ. ಏಕಾಂಗಿಯಾಗಿ ಈ ಕೃತ್ಯ ನಡೆಸಿದಂತೆ ಕಾಣುತ್ತಿದೆ ಎಂದು ಹೇಳಿದ ಅವರು, ತನಿಖಾಧಿಕಾರಿಗಳು ಕ್ರೂಕ್ಸ್‌ನ ಸಾಮಾಜಿಕ ಮಾಧ್ಯಮ ಜಾಲಾಡುತ್ತಿದ್ದಾರೆ ಎಂದು ವಿವರಿಸಿದ್ದಾರೆ.

‘ಕುಟುಂಬದ ರಕ್ಷಣೆಗಾಗಿ ಜೀವ ತೆತ್ತ ಕೋರಿ’

ಪೆನ್ಸಿಲ್ವೇನಿಯಾದಲ್ಲಿ ಶನಿವಾರ ನಡೆದ ಗುಂಡಿನ ದಾಳಿಯಲ್ಲಿ ಮೃತಪಟ್ಟ ವ್ಯಕ್ತಿಯನ್ನು ಕೋರಿ ಕಾಂಪರೇಟೋರ್ ಎಂದು ಗುರುತಿಸಲಾಗಿದೆ. ಅವರು ಈ ಪ್ರದೇಶದ ಅಗ್ನಿಶಾಮಕ ದಳದ ಮಾಜಿ ಮುಖ್ಯಸ್ಥರಾಗಿದ್ದರು.

‘ಗುಂಡಿನ ದಾಳಿಯಿಂದ ತಮ್ಮ ಕುಟುಂಬವನ್ನು ರಕ್ಷಿಸುವ ವೇಳೆ ಅವರು ಮೃತಪಟ್ಟಿದ್ದಾರೆ ಎಂಬುದಾಗಿ ಅವರ ಪತ್ನಿ ತಿಳಿಸಿದ್ದಾರೆ’ ಎಂದು ಪೆನ್ಸಿಲ್ವೇನಿಯಾದ ಗವರ್ನರ್ ಜೋಶ್ ಶಪಿರೊ ಮಾಹಿತಿ ನೀಡಿದ್ದಾರೆ.

> ಈ ಸಂದರ್ಭದಲ್ಲಿ ನಾವೆಲ್ಲರೂ ಒಗ್ಗಟ್ಟಿನಿಂದ ಇರಬೇಕು. ಇದು ರಾಜಕೀಯ ವೈಷಮ್ಯವನ್ನು ಶಮನಗೊಳಿಸುವ ಸಮಯ
>
> **ಜೋ ಬೈಡನ್,** ಅಮೆರಿಕ ಅಧ್ಯಕ್ಷ

ರಿಪಬ್ಲಿಕನ್ ರಾಷ್ಟ್ರೀಯ ಸಮಾವೇಶಕ್ಕೆ ಬಿಗಿ ಭದ್ರತೆ

ಮಿಲ್ವಾಕೀ (ಪಿಟಿಐ): ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ರಿಪಬ್ಲಿಕನ್ ಪಕ್ಷದ ರಾಷ್ಟ್ರೀಯ ಸಮಾವೇಶ ಸೋಮವಾರ ಭಾರಿ ಭದ್ರತೆಯೊಂದಿಗೆ ಇಲ್ಲಿ ಆರಂಭಗೊಂಡಿತು.

ಅಧ್ಯಕ್ಷ ಸ್ಥಾನದ ರಿಪಬ್ಲಿಕನ್ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ವಿರುದ್ಧ ಹತ್ಯೆಯ ವಿಫಲ ಯತ್ನ ನಡೆದ ಬೆನ್ನಲ್ಲೇ, ಮಿಲ್ವಾಕೀಯಲ್ಲಿ ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ.

ಅಧ್ಯಕ್ಷೀಯ ಚುನಾವಣೆಗೆ ಸಂಬಂಧಿಸಿದಂತೆ ನಾಮ ನಿರ್ದೇಶನವನ್ನು ಔಪಚಾರಿಕವಾಗಿ ಸಮಾವೇಶದಲ್ಲಿ ಸ್ವೀಕರಿಸುವ ಟ್ರಂಪ್ ಅವರು, ಇದೇ 18ರಂದು ಮಿಲ್ವಾಕೀಯ ಫಿಸರ್ವ್ ಫೋರಂನಲ್ಲಿ ಭಾಷಣ ಮಾಡಲಿದ್ದಾರೆ. ಜುಲೈ 17ರಂದು ಅವರು ಉಪಾಧ್ಯಕ್ಷ ಸ್ಥಾನಕ್ಕೆ ಪಕ್ಷದ ಅಭ್ಯರ್ಥಿಯನ್ನು ಘೋಷಿಸುವ ಸಾಧ್ಯತೆಯಿದೆ.

ನೇಪಾಳ: ಪ್ರಧಾನಿಯಾಗಿ ಓಲಿ ಪ್ರಮಾಣ ಸ್ವೀಕಾರ

ಕಠ್ಮಂಡು (ಪಿಟಿಐ): ಸಿಪಿಎನ್–ಯುಎಂಎಲ್ ಪಕ್ಷದ ಅಧ್ಯಕ್ಷ ಕೆ.ಪಿ. ಶರ್ಮ ಓಲಿ ಅವರು ನೇಪಾಳದ ಪ್ರಧಾನಿಯಾಗಿ ನಾಲ್ಕನೇ ಬಾರಿಗೆ ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು.



ರಾಷ್ಟ್ರಪತಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಧ್ಯಕ್ಷ ರಾಮ್‌ಚಂದ್ರ ಪೌಡೆಲ್ ಅವರು ಓಲಿ ಅವರಿಗೆ ಪ್ರಮಾಣ ವಚನ ಬೋಧಿಸಿದರು. ಇಬ್ಬರು ಉಪ ಪ್ರಧಾನಿಗಳು ಮತ್ತು 19 ಸಚಿವರು ಈ ವೇಳೆ ಪ್ರಮಾಣವಚನ ಸ್ವೀಕರಿಸಿದರು.

ಪುಷ್ಪಕಮಲ್ ದಹಲ್ ಪ್ರಚಂಡ ನೇತೃತ್ವದ ಮೈತ್ರಿ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಓಲಿ ನೇತೃತ್ವದ ಸಿಪಿಎನ್–ಯುಎಂಎಲ್ ಪಕ್ಷವು ಹಿಂಪಡೆದಿತ್ತು. ಆ ಬಳಿಕ, ಪ್ರಚಂಡ ಅವರು ಸಂಸತ್ತಿನಲ್ಲಿ ವಿಶ್ವಾಸಮತ ಗಳಿಸಲು ವಿಫಲರಾಗಿ ಅಧಿಕಾರ ಕಳೆದುಕೊಂಡರು. ಸದ್ಯ, ಸಿಪಿಎನ್– ಯುಎಂಎಲ್ ಪಕ್ಷವು ನೇಪಾಳಿ ಕಾಂಗ್ರೆಸ್ (ಎನ್‌ಸಿ) ಮತ್ತು ಇತರ ಚಿಕ್ಕ ಪಕ್ಷಗಳ ಜೊತೆ ಸೇರಿ ಸರ್ಕಾರ ರಚಿಸಿದೆ.

ಓಲಿ ಸಂಪುಟ ಸೇರಲಿರುವ ಸಂಸದರ ಕುರಿತು ನೇಪಾಳಿ ಕಾಂಗ್ರೆಸ್ ಪಕ್ಷದೊಳಗೆ ಗೊಂದಲಗಳಿದ್ದ ಕಾರಣ ಸಮಾರಂಭವು ಒಂದೂವರೆ ಗಂಟೆ ತಡವಾಗಿ ಆರಂಭವಾಯಿತು. ಪ್ರಚಂಡ ಅವರೂ ಸಮಾರಂಭದಲ್ಲಿ ಭಾಗಿಯಾಗಿದ್ದರು ಎಂದು ‘ಮೈ ರಿಪಬ್ಲಿಕಾ’ ಎಂಬ ಸುದ್ದಿ ಪೋರ್ಟಲ್ ವರದಿ ಮಾಡಿದೆ.

7 ಜಿಲ್ಲೆಗಳಲ್ಲಿ ಶಾಲಾ–ಕಾಲೇಜುಗಳಿಗೆ ರಜೆ ಘೋಷಣೆ; ವಾಹನ ಸಂಚಾರ ಅಸ್ತವ್ಯಸ್ತ

ಕೇರಳ, ಮುಂಬೈನಲ್ಲಿ ಭಾರಿ ಮಳೆ

ತಿರುವನಂತಪುರಂ (ಪಿಟಿಐ): ಕೇರಳದ ಹಲವೆಡೆ ಬಿರುಗಾಳಿ ಸಹಿತ ನಿರಂತರ ಮಳೆ ಸುರಿಯುತ್ತಿದ್ದು, ಸೋಮವಾರ ಏಳು ಜಿಲ್ಲೆಯಲ್ಲಿ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಯಿತು.

ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಉತ್ತರ ಮಲಪ್ಪುರಂ, ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಅತಿ ಹೆಚ್ಚು ಮಳೆಯಾಗುವ ಮುನ್ಸೂಚನೆ ನೀಡಿದ್ದು, ಉತ್ತರ ಜಿಲ್ಲೆಗಳಿಗೆ ರೆಡ್ ಅಲರ್ಟ್ ಘೋಷಿಸಿದೆ.

ಐಎಂಡಿಯು ಎರ್ನಾಕುಲಂ, ತ್ರಿಶ್ಶೂರ್, ಪಾಲಕ್ಕಾಡ್, ಇಡುಕ್ಕಿ, ಕೋಯಿಕ್ಕೋಡ್ ಮತ್ತು ವಯನಾಡ್ ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಿದ್ದಾರೆ.

ನಿರಂತರವಾಗಿ ಸುರಿಯುತ್ತಿರುವ ಮಳೆ ಹಿನ್ನೆಲೆಯಲ್ಲಿ ತ್ರಿಶೂರ್, ಮಲಪ್ಪುರಂ, ಕೋಯಿಕ್ಕೋಡ್, ಕಣ್ಣೂರು, ಕಾಸರಗೋಡು, ಎರ್ನಾಕುಲಂ ಮತ್ತು ವಯನಾಡ್‌ನ ಜಿಲ್ಲಾಧಿಕಾರಿಗಳು ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಿದ್ದಾರೆ.

ಮಳೆಯಿಂದಾಗಿ ವಿವಿಧ ಅಣೆಕಟ್ಟುಗಳ ಗೇಟ್ ತೆರೆಯಲಾಗಿದ್ದು, ಪತ್ತನಂತಿಟ್ಟದಲ್ಲಿ ಜಿಲ್ಲಾಡಳಿತವು ಮೂಳಿಯಾರ್ ಅಣೆಕಟ್ಟಿನ ಜಲಾನಯನ ಪ್ರದೇಶದಲ್ಲಿ ವಾಸಿಸುವ ಜನರಿಗೆ ಎಚ್ಚರಿಕೆ ನೀಡಿದೆ.

ಮಳೆಯಿಂದಾಗಿ ಪ್ರಮುಖ ರಸ್ತೆಗಳಲ್ಲಿ ನೀರು ನಿಲ್ಲುವುದು, ಸಂಚಾರ ದಟ್ಟಣೆ ಮತ್ತು ವಿದ್ಯುತ್ ಕಂಬಗಳಿಗೆ ಹಾನಿಯಾಗಬಹುದು ಎಂದು ಕೇರಳ ವಿಪತ್ತು ನಿರ್ವಹಣಾ ಪ್ರಾಧಿಕಾರ ಎಚ್ಚರಿಸಿದೆ.



ನವದೆಹಲಿಯಲ್ಲಿ ಸೋಮವಾರ ಮಳೆಯ ನಡುವೆ ರಸ್ತೆಯಲ್ಲಿ ಸಾಗಿದ ಕೂಲಿ ಕಾರ್ಮಿಕರು– ಪಿಟಿಐ ಚಿತ್ರ

ಭೂಕುಸಿತ: ಕೊಂಕಣ ರೈಲು ಸಂಚಾರ ಸ್ಥಗಿತ

ಮುಂಬೈ (ಪ್ರಜಾವಾಣಿ ವಾರ್ತೆ): ಮಹಾರಾಷ್ಟ್ರದ ಕರಾವಳಿ ಭಾಗದಲ್ಲಿ ಭಾರಿ ಮಳೆಯಿಂದಾಗಿ ರಾಯಗಡ ಮತ್ತು ರತ್ನಗಿರಿ ಜಿಲ್ಲೆಗಳಲ್ಲಿ ಭಾರಿ ಭೂಕುಸಿತ ಸಂಭವಿಸಿದ್ದು, ಕೊಂಕಣ ರೈಲ್ವೆಯ ರೈಲು ಸೇವೆಗಳು ಸಂಪೂರ್ಣ ಸ್ಥಗಿತಗೊಂಡಿವೆ.

ಭಾನುವಾರ ಸಂಜೆ ದಿಬಾಣಖಾವಟಿ-ವಿನ್ಹೆರೆ ಭಾಗದಲ್ಲಿ ಭೂ ಕುಸಿತವಾಗಿದೆ. ಕೊಂಕಣ ರೈಲ್ವೆ ಕಾರ್ಪೊರೇಷನ್ ಲಿಮಿಟೆಡ್‌ನ (ಕೆಆರ್‌ಸಿಎಲ್) ಉನ್ನತ ಅಧಿಕಾರಿಗಳು ಸ್ಥಳಕ್ಕೆ ತಲುಪಿದ್ದು, ದುರಸ್ತಿ ಕಾರ್ಯ ಮಾಡುತ್ತಿದ್ದಾರೆ. ಮಂಗಳವಾರದ ವೇಳೆಗೆ ರೈಲು ಸೇವೆಗಳು ಪುನರಾರಂಭವಾಗಲಿರುವ ನಿರೀಕ್ಷೆ ಇದೆ.

ದೆಹಲಿಯಲ್ಲಿ ಮಳೆ: ಸಂಚಾರ ಅಸ್ತವ್ಯಸ್ತ

ನವದೆಹಲಿ (ಪಿಟಿಐ): ದೆಹಲಿಯ ಕೆಲವು ಭಾಗಗಳು ಮಳೆಯಿಂದಾಗಿ ಜಲಾವೃತಗೊಂಡಿದ್ದು, ಸೋಮವಾರ ಬೆಳಿಗ್ಗೆ ರಸ್ತೆಯಲ್ಲಿ ಸಂಚರಿಸಲು ಪ್ರಯಾಣಿಕರು ಹರಸಾಹಸಪಟ್ಟರು.

ಚೌಧರಿ ಫತೇಹ್ ಸಿಂಗ್ ಮಾರ್ಗವೂ ಜಲಾವೃತಗೊಂಡಿದ್ದು, ಜನರು ಮಾಲ್ ರೋಡ್ ಸಿಗ್ನಲ್‌ನಿಂದ ಖೈಬರ್ ಪಾಸ್, ಮಜ್ನು ಕಾ ಟೀಲಾ, ವಜೀರಾಬಾದ್ ಮೇಲ್ಸೇತುವೆ ಮೂಲಕ ಬುರಾಡಿಗೆ ಹೋಗಲು ದೆಹಲಿ ಪೊಲೀಸರು ಸಲಹೆ ನೀಡಿದರು.

ಕೆಲವೆಡೆ ಮಳೆ: ಸೋಮವಾರ ದೆಹಲಿಯ ಕೆಲವೆಡೆ ಮಳೆ ಸುರಿದಿದ್ದು, ಕನಿಷ್ಠ ತಾಪಮಾನವು 29 ಡಿಗ್ರಿ ಸೆಲ್ಸಿಯಸ್‌ನಷ್ಟಿದೆ. ಇದು ಈ ವರ್ಷದಲ್ಲಿ ದಾಖಲಾದ ಸರಾಸರಿ ತಾಪಮಾನಕ್ಕಿಂತ 1.8 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿದೆ.

ಪ್ರವಾಹ ಮತ್ತು ಭಾರಿ ಮಳೆಗೆ ತುತ್ತಾಗಿರುವ ಅಸ್ಸಾಂ, ಉತ್ತರ ಪ್ರದೇಶ ಮತ್ತು ಗುಜರಾತ್ ರಾಜ್ಯಗಳಲ್ಲಿ ಪರಿಸ್ಥಿತಿಯನ್ನು ನಿಭಾಯಿಸಲು ಕೇಂದ್ರ ಸರ್ಕಾರದಿಂದ ಸಾಧ್ಯವಿರುವ ಎಲ್ಲ ನೆರವು ನೀಡಲಾಗುವುದು

ಅಮಿತ್ ಶಾ, ಕೇಂದ್ರ ಗೃಹ ಸಚಿವ

ಚೇತರಿಸಿಕೊಳ್ಳುತ್ತಿರುವ ಅಸ್ಸಾಂ

ಗುವಾಹಟಿ (ಪಿಟಿಐ): ಪ್ರವಾಹದಿಂದ ತತ್ತರಿಸಿದ್ದ ಅಸ್ಸಾಂನಲ್ಲಿ ಸೋಮವಾರ ಪರಿಸ್ಥಿತಿ ಸುಧಾರಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಬಾರಿಯ ಪ್ರವಾಹ, ಭೂಕುಸಿತ, ಬಿರುಗಾಳಿ ಮತ್ತು ಸಿಡಿಲಿಗೆ ಬಲಿಯಾದವರ ಒಟ್ಟು ಸಂಖ್ಯೆ 109ಕ್ಕೆ ಏರಿಕೆಯಾಗಿದೆ.

‘ರಾಜ್ಯದ ಬಹುತೇಕ ಜಲಾವೃತ ಪ್ರದೇಶಗಳಲ್ಲಿ ನೀರು ಇಳಿಮುಖವಾಗುತ್ತಿದೆ. ಮಳೆ ನಿಂತಿರುವುದರಿಂದ ಪರಿಸ್ಥಿತಿ ಮತ್ತಷ್ಟು ಸುಧಾರಿಸುವ ಸಾಧ್ಯತೆಯಿದೆ’ ಎಂದು ಎಎಸ್‌ಡಿಎಂಎ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮನೆಗಳಿಗೆ ಹಾನಿ: ಕೊಟ್ಟಾಯಂ ಜಿಲ್ಲೆಯಲ್ಲಿ ಮುಂಜಾನೆಯಿಂದ ಸುರಿದ ಭಾರಿ ಮಳೆ ಮತ್ತು ಬಿರುಗಾಳಿಯಿಂದ ಮರಗಳು ಬಿದ್ದಿದ್ದು, ಮನೆಗಳು ಮತ್ತು ವಾಹನಗಳಿಗೆ ಹಾನಿಯಾಗಿದೆ. ಒಂಚಿಯಂ, ಕೊಟ್ಟೂರು, ಪಯ್ಯೋಳಿ ಸೇರಿದಂತೆ ಉತ್ತರ ಕೋಯಿಕ್ಕೋಡ್‌ನ ಗ್ರಾಮಾಂತರ ಪ್ರದೇಶಗಳಲ್ಲಿ ಹಲವಾರು ಮನೆಗಳು ಭಾಗಶಃ ಹಾನಿಗೊಳಗಾಗಿವೆ.

‘ತ್ರಿಪುರಾದಲ್ಲಿ ಸಂವಿಧಾನ ಹತ್ಯೆ’



ಜೈರಾಮ್ ರಮೇಶ್

ನವದೆಹಲಿ (ಪಿಟಿಐ): ಪಂಚಾಯತ್ ರಾಜ್ ಚುನಾವಣೆಯನ್ನು ಘೋಷಿಸಿದ ಬಳಿಕ ತ್ರಿಪುರಾದಲ್ಲಿ ನಡೆದ ಹಿಂಸಾಚಾರ ಘಟನೆಗಳ ಕುರಿತು ಬಿಜೆಪಿ ವಿರುದ್ಧ ಕಿಡಿಕಾರಿರುವ ಕಾಂಗ್ರೆಸ್, ‘ತ್ರಿಪುರಾದಲ್ಲಿ ಹಾಡಹಗಲೇ ಪ್ರಜಾಪ್ರಭುತ್ವದ ಹತ್ಯೆಯಾಗಿದೆ’ ಇದು ‘ನಿಜವಾದ ಸಂವಿಧಾನ ಹತ್ಯೆ’ ಎಂದಿದೆ.

ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಕಾಂಗ್ರೆಸ್ ಸಂವಹನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು, ‘ಹಿಂಸಾಚಾರದ ಹಿಂದೆ ಸ್ವಯಂ ಘೋಷಿತ ಡಬಲ್ ಇಂಜಿನ್ ಸರ್ಕಾರದ (ಬಿಜೆಪಿ) ಮಾಸ್ಟರ್‌ಮೈಂಡ್ ಇದೆ ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ’ ಎಂದು ಆರೋಪಿಸಿದ್ದಾರೆ.

ತ್ರಿಪುರಾದಲ್ಲಿ ನಡೆಯುತ್ತಿರುವ ಹಿಂಸಾಚಾರದ ಕುರಿತು ರಾಜ್ಯ ಕಾಂಗ್ರೆಸ್ ಘಟಕದ ಉಸ್ತುವಾರಿ ಗಿರೀಶ್ ಚೋಡಂಕರ್ ಅವರು ‘ಎಕ್ಸ್’ನಲ್ಲಿ ಮಾಡಿದ್ದ ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ಜೈರಾಮ್ ರಮೇಶ್, ‘ಇದು ಭಾರತದ ಸಂವಿಧಾನದ ತತ್ವಗಳು, ಅದರ ಮೌಲ್ಯಗಳು ಮತ್ತು ನಿಬಂಧನೆಗಳ ಮೇಲೆ ಬಿಜೆಪಿಯ ಆಕ್ರಮಣವಾಗಿದೆ. ಇದೇ ನಿಜವಾದ ಸಂವಿಧಾನ ಹತ್ಯೆ’ ಎಂದು ಬರೆದಿದ್ದಾರೆ.

ಈ ಮೂಲಕ 1975ರಲ್ಲಿ ತುರ್ತು ಪರಿಸ್ಥಿತಿ ಹೇರಲಾದ ಜೂನ್ 25ರಂದು ‘ಸಂವಿಧಾನ ಹತ್ಯೆ ದಿವಸ್’ ಎಂದು ಘೋಷಿಸಿದ ಬಿಜೆಪಿ ಸರ್ಕಾರಕ್ಕೆ ಅವರು ತಿರುಗೇಟು ನೀಡಿದ್ದಾರೆ.

ಪ್ರತಿಪಕ್ಷದ ಪ್ರತಿನಿಧಿಗಳು ನಾಮಪತ್ರ ಸಲ್ಲಿಸುವುದನ್ನು ತಡೆಯಲು ತ್ರಿಪುರಾದಲ್ಲಿ ಬಿಜೆಪಿ ಹಿಂಸಾಚಾರವನ್ನು ಪ್ರಚೋದಿಸುತ್ತಿದೆ. ರಾಜ್ಯದಲ್ಲಿ ಪಂಚಾಯತ್ ಚುನಾವಣೆ ಘೋಷಿಸಿದಾಗಿನಿಂದ ಬಿಜೆಪಿ ಬೆಂಬಲಿತ ಕಿಡಿಗೇಡಿಗಳು ತಮ್ಮ ಪರವಾಗಿ ಚುನಾವಣಾ ಫಲಿತಾಂಶವನ್ನು ಅನ್ಯಾಯದ ಮಾರ್ಗದಿಂದ ಪಡೆಯಲು ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತರ ಮನೆಗಳ ಮೇಲೆ ದಾಳಿ ನಡೆಸುತ್ತಿದ್ದಾರೆ. ಕಾಂಗ್ರೆಸ್‌ನಿಂದ ಚುನಾವಣೆಗೆ ಸ್ಪರ್ಧಿಸುತ್ತಿರುವವರಿಗೆ ಬೆದರಿಕೆ ಹಾಕಲಾಗಿದೆ ಎಂದಿದ್ದಾರೆ.

‘ಪ್ರಧಾನಿನರೇಂದ್ರಮೋದಿಅವರೇ... ದಯವಿಟ್ಟು ತ್ರಿಪುರಾದಲ್ಲಿ ಹಿಂಸೆಯನ್ನು ನಿಲ್ಲಿಸಿ, ಪ್ರಜಾಪ್ರಭುತ್ವಕ್ಕೆ ಗೌರವ ನೀಡುವಂತೆ ನಿಮ್ಮ ಪಕ್ಷಕ್ಕೆ ನಿರ್ದೇಶಿಸಿ. ಇಲ್ಲದಿದ್ದರೆ ತ್ರಿಪುರಾ ಜನರು ಮಣಿಪುರದ ಜನರಂತೆ ನಿಮಗೆ ಶಿಕ್ಷೆ ನೀಡಲಿದ್ದಾರೆ’ ಎಂದು ಗಿರೀಶ್ ‘ಎಕ್ಸ್’ನಲ್ಲಿ ಹರಿಹಾಯ್ದಿದ್ದಾರೆ.

ತ್ರಿಪುರಾದಲ್ಲಿ ಆ.8ರಂದು ಪಂಚಾಯತ್ ಚುನಾವಣೆ ನಡೆಯಲಿದ್ದು, ಆ.10ರಂದು ಫಲಿತಾಂಶ ಹೊರಬೀಳಲಿದೆ.

ತ್ರಿಪುರಾದ ಧಾಲೈ ಜಿಲ್ಲೆಯಲ್ಲಿ ಜಾತ್ರೆಯೊಂದರಲ್ಲಿ ಎರಡು ಗುಂಪುಗಳ ನಡುವೆ ನಡೆದ ಘರ್ಷಣೆಯಲ್ಲಿ ಬುಡಕಟ್ಟು ಸಮುದಾಯದ ಯುವಕ ಸಾವಿಗೀಡಾದ ಘಟನೆ ಶುಕ್ರವಾರ ನಡೆದಿದೆ. ಇದಾದ ಬಳಿಕ ಸ್ಥಳದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ.

ಆಸ್ಪತ್ರೆಯಲ್ಲಿ ಗುಂಡಿನ ದಾಳಿ: ಇಬ್ಬರ ಬಂಧನ

ನವದೆಹಲಿ (ಪಿಟಿಐ): ಜಿಟಿಬಿ ಆಸ್ಪತ್ರೆಯ ರೋಗಿಯೊಬ್ಬನನ್ನು ಗುಂಡಿಕ್ಕಿ ಕೊಂದಿರುವ ಪ್ರಕರಣಕ್ಕೆ ಸಂಬಂಧಿಸಿ ದೆಹಲಿ ಪೊಲೀಸರು ಸೋಮವಾರ ಇಬ್ಬರನ್ನು ಬಂಧಿಸಿದ್ದಾರೆ.

ಉತ್ತರಪ್ರದೇಶ ಮೂಲದ ಫೈಜ್(20) ಮತ್ತು ದೆಹಲಿಯ ಚೌಹಾಣ್ ಬಂಗೇರ್ ನಿವಾಸಿ ಫರ್ಹಾನ್ ಎಂಬವರನ್ನು ಬಂಧಿಸಲಾಗಿದೆ. ಅವರು, ಆಸ್ಪತ್ರೆಯಲ್ಲಿ ಗುಂಡಿನ ದಾಳಿ ನಡೆಸಿದ ನಾಲ್ವರು ಆರೋಪಿಗಳಿಗೆ ಮೋಟರ್ ಸೈಕಲ್ ನೀಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

‘ಫಹೀಮ್ ಅಲಿಯಾಸ್ ಬಾದ್‌ಶಾ ಖಾನ್ ಪ್ರಕರಣದ ಪ್ರಮುಖ ಸಂಚುಕೋರ. ಹಸಿಮ್ ಬಾಬಾ ಗ್ಯಾಂಗ್‌ನ ನಂಟು ಹೊಂದಿದ್ದ ಫಹೀಮ್‌ನನ್ನು ಫೈಜ್ ಮತ್ತು ಆತನ ಇಬ್ಬರು ಸಹೋದರರು ಭೇಟಿಯಾಗುತ್ತಿದ್ದುದಾಗಿ ವಿಚಾರಣೆ ವೇಳೆ ಫೈಜ್ ಒಪ್ಪಿಕೊಂಡಿದ್ದಾನೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಫಹೀಮ್ ನಮ್ಮನ್ನೆಲ್ಲ ಅವನ ಫ್ಲ್ಯಾಟ್‌ಗೆ ಕರೆಯುತ್ತಿದ್ದ. ಭಾನುವಾರವೂ ನಾವೆಲ್ಲ ಫ್ಲ್ಯಾಟ್‌ನಲ್ಲಿ ಒಟ್ಟು ಸೇರಿದ್ದೆವು. ಆಸ್ಪತ್ರೆಗೆ ನುಗ್ಗಿ ಗುಂಡಿನ ದಾಳಿ ನಡೆಸುವಂತೆ ಮತ್ತು ಅಲ್ಲಿಂದ ತಪ್ಪಿಸಿಕೊಳ್ಳುವ ಬಗ್ಗೆ ಫಹೀಮ್ ನಾಲ್ವರಿಗೆ ಸೂಚನೆ ನೀಡುತ್ತಿದ್ದ ಎಂದು ಫೈಜ್ ತಿಳಿಸಿರುವುದಾಗಿ’ ಪೊಲೀಸರು ಮಾಹಿತಿ ನೀಡಿದ್ದಾರೆ.

ಪ್ರಕರಣ ನಡೆದ ಆಸ್ಪತ್ರೆಯಲ್ಲಿ ಸೂಕ್ತ ಭದ್ರತೆ ಒದಗಿಸಬೇಕು ಎಂದು ದೆಹಲಿ ಸರ್ಕಾರವನ್ನು ಆಗ್ರಹಿಸಿ, ಅಲ್ಲಿನ ವೈದ್ಯರು ಪ್ರತಿಭಟನೆ ನಡೆಸಿದರು.

ಕರ್ನಾಟಕ ನಿತ್ಯ ಒಂದು ಅಡಿ ಟಿಎಂಸಿ ನೀರು ಬಿಡದ ಬಗ್ಗೆ ಚರ್ಚೆ

ತಮಿಳುನಾಡು: ಸರ್ವಪಕ್ಷ ಸಭೆ ಇಂದು



ಎಂ.ಕೆ. ಸ್ಟಾಲಿನ್

ಚೆನ್ನೈ (ಪಿಟಿಐ): ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆಯ ವಿರುದ್ಧ ಕರ್ನಾಟಕ ಸರ್ಕಾರ ಕೈಗೊಂಡ ನಿರ್ಣಯವನ್ನು ತಮಿಳುನಾಡು ಸರ್ಕಾರ ತೀವ್ರವಾಗಿ ಖಂಡಿಸಿದೆ.

ಅಂತರರಾಜ್ಯ ನದಿ ನೀರು ಬಿಕ್ಕಟ್ಟು ಪರಿಹಾರಕ್ಕಾಗಿ ಮುಂದೆ ಯಾವ ಕ್ರಮ ಕೈಗೊಳ್ಳಬೇಕು ಎಂಬುದರ ನಿರ್ಧಾರಕ್ಕಾಗಿ ಮಂಗಳವಾರ ಶಾಸಕರ ಸರ್ವಪಕ್ಷಗಳ ಸಭೆ ಕರೆಯಲಾಗಿದೆ ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ತಿಳಿಸಿದ್ದಾರೆ.

ಜುಲೈ 15ರ ಪ್ರಕಾರ ಕರ್ನಾಟಕದ ನಾಲ್ಕು ಜಲಾಶಯಗಳಲ್ಲಿ 75.586 ಟಿಎಂಸಿ ಅಡಿ ನೀರು ಶೇಖರಣೆಯಾಗಿದೆ. ಆದರೆ, ತಮಿಳುನಾಡಿನ ಮೆಟ್ಟೂರು ಜಲಾಶಯದಲ್ಲಿ ಕೇವಲ 13.808 ಟಿಎಂಸಿ ಅಡಿ ನೀರಿದೆ ಎಂದು ಅವರು ಸೋಮವಾರ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

‘ಹವಾಮಾನ ಇಲಾಖೆಯ ಮುನ್ಸೂಚನೆ ಪ್ರಕಾರ, ಅಗತ್ಯವಿರುವಷ್ಟು ಮಳೆಯಾಗಲಿದೆ. ಆದಾಗ್ಯೂ, ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯುಆರ್‌ಸಿ) ನಿರ್ದೇಶನದ ಪ್ರಕಾರ ನೀರು ಬಿಡಲು ನಿರಾಕರಿಸುತ್ತಿದೆ. ಈ ಮೂಲಕ ತಮಿಳುನಾಡು ರೈತರಿಗೆ ದ್ರೋಹ ಬಗೆಯುತ್ತಿದೆ. ಇದನ್ನು ಯಾವುದೇ ಕಾರಣಕ್ಕೂ ಸಹಿಸಲಾಗದು’ ಎಂದಿದ್ದಾರೆ.

ಜುಲೈ ತಿಂಗಳ ಅಂತ್ಯದವರೆಗೆ ಪ್ರತಿದಿನ ಒಂದು ಟಿಎಂಸಿ ಅಡಿಯಷ್ಟು ನೀರು ಬಿಡಬೇಕು ಎಂದು ಸಿಡಬ್ಲ್ಯುಆರ್‌ಸಿ ಕರ್ನಾಟಕ ಸರ್ಕಾರಕ್ಕೆ ಸೂಚಿಸಿತ್ತು. ಆದರೆ, ‘ತಮಿಳುನಾಡಿಗೆ ಪ್ರತಿದಿನ 8 ಸಾವಿರ ಕ್ಯುಸೆಕ್ ನೀರು ಕರ್ನಾಟಕ ಸರ್ಕಾರ ಸಿದ್ಧವಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ ಹೇಳಿದ್ದರು.

ಮುಖ್ಯಾಂಶಗಳು

- ಸಿಡಬ್ಲ್ಯುಆರ್‌ಸಿ ನಿರ್ದೇಶನದಂತೆ ನೀರು ಹರಿಸಲು ಕರ್ನಾಟಕ ನಕಾರ
- ತಮಿಳುನಾಡು ರೈತರಿಗೆ ದ್ರೋಹ ಬಗೆಯುತ್ತಿರುವ ಕರ್ನಾಟಕ: ಸ್ಟಾಲಿನ್ ಕಿಡಿ

ಪರಿಶಿಷ್ಟ ಜಾತಿ ಪಟ್ಟಿ ಬದಲಿಸಲು ಸರ್ಕಾರಕ್ಕಿಲ್ಲ ಅಧಿಕಾರ: ‘ಸುಪ್ರೀಂ’

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂವಿಧಾನದ 341ನೆಯ ವಿಧಿಯ ಅಡಿಯಲ್ಲಿ ಪ್ರಕಟಿಸಲಾಗಿರುವ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಬದಲಾವಣೆ ತರುವ ಅಧಿಕಾರವು ಕೇಂದ್ರ ಅಥವಾ ರಾಜ್ಯ ಸರ್ಕಾರಗಳಿಗೆ ಇಲ್ಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ಸ್ಪಷ್ಟಪಡಿಸಿದೆ.

ಬಿಹಾರ ರಾಜ್ಯ ಸರ್ಕಾರವು 2015ರ ಜುಲೈ 1ರಂದು ಕೈಗೊಂಡ ನಿರ್ಣಯವನ್ನು ನ್ಯಾಯಮೂರ್ತಿಗಳಾದ ವಿಕ್ರಮನಾಥ್ ಮತ್ತು ಸತೀಶ್ ಚಂದ್ರ ಶರ್ಮ ಅವರು ಇದ್ದ ವಿಭಾಗೀಯ ಪೀಠವು ರದ್ದುಪಡಿಸಿದೆ. ಅತ್ಯಂತ ಹಿಂದುಳಿದಿರುವ ಜಾತಿಯಾದ ‘ತಾಂತಿ–ತತವಾ’ ಅನ್ನು ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಇರುವ ‘ಪಾನ್/ಸ್ವಾಸಿ’ ಜಾತಿಯ ಜೊತೆ ವಿಲೀನಗೊಳಿಸುವ ಈ ನಿರ್ಣಯವು ಅಕ್ರಮ ಎಂದು ಪೀಠವು ಹೇಳಿದೆ.

ರಾಜ್ಯ ಸರ್ಕಾರ ಕೈಗೊಂಡ ತೀರ್ಮಾನವು ಸದುದ್ದೇಶ ಹೊಂದಿರಲಿಲ್ಲ. ಆ ತೀರ್ಮಾನವು ಸಂವಿಧಾನದಲ್ಲಿ ಇರುವ ಅವಕಾಶಗಳ ವ್ಯಾಪ್ತಿಯನ್ನೂ ಮೀರಿದೆ. ಸರ್ಕಾರವು ಮಾಡಿದ ಕುಚೋದ್ಯಕ್ಕೆ ಕ್ಷಮೆ ಇಲ್ಲ ಎಂದು ಪೀಠವು ಹೇಳಿದೆ.

341ನೆಯ ವಿಧಿಯನ್ನು ಉಲ್ಲೇಖಿಸಿರುವ ಪೀಠವು, ಸಂಸತ್ತು ರೂಪಿಸಿದ ಕಾನೂನಿನ ಮೂಲಕ ಮಾತ್ರವೇ ಪರಿಶಿಷ್ಟ ಜಾತಿಗಳ ಪಟ್ಟಿಯನ್ನು ಬದಲಾಯಿಸಲು ಅವಕಾಶ ಇದೆ ಎಂದು ಹೇಳಿದೆ. ಪರಿಶಿಷ್ಟ ಜಾತಿಗಳನ್ನು ಹೆಸರಿಸಿ ಹೊರಡಿಸಿದ ಅಧಿಸೂಚನೆಯನ್ನು, ಸಂಸತ್ತು ರೂಪಿಸಿದ ಕಾನೂನು ಹೊರತುಪಡಿಸಿ, ಇನ್ನೊಂದು ಅಧಿಸೂಚನೆಯ ಮೂಲಕ ಬದಲಿಸಲು ಆಗದು ಎಂದು ಸ್ಪಷ್ಟಪಡಿಸಿದೆ.

ಛತ್ತೀಸಗಢ ಲೋಕಸೇವಾ ಆಯೋಗದಲ್ಲಿ ನಡೆದ ಹಗರಣ

ನೇಮಕಾತಿ ಹಗರಣ: ತನಿಖೆ ಸಿಬಿಐಗೆ

ನವದೆಹಲಿ (ಪಿಟಿಐ): ಛತ್ತೀಸಗಢದ ಲೋಕಸೇವಾ ಆಯೋಗದಲ್ಲಿ ನಡೆದಿದೆ ಎನ್ನಲಾದ ಹಗರಣದ ಕುರಿತ ತನಿಖೆಯನ್ನು ಸಿಬಿಐ ವಹಿಸಿಕೊಂಡಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

2020–22ರಲ್ಲಿ ಛತ್ತೀಸಗಢ ಲೋಕಸೇವಾ ಆಯೋಗದ ಆಗಿನ ಅಧ್ಯಕ್ಷ, ಅಧಿಕಾರಿಗಳು ಮತ್ತು ರಾಜಕೀಯ ಮುಖಂಡರ ಕುಟುಂಬಸ್ಥರು ಮತ್ತು ಸಂಬಂಧಿಕರನ್ನು ಜಿಲ್ಲಾ ಕಚೇರಿಗಳಲ್ಲಿ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ ಎಂಬ ಗಂಭೀರ ಸ್ವರೂಪದ ಆರೋಪವಿದೆ.

ರಾಯಪುರ ಮತ್ತು ಭಿಲಾಯ್‌ನಲ್ಲಿರುವ ಟಾಮನ್ ಸಿಂಗ್, ಕಾರ್ಯದರ್ಶಿ ಧ್ರುವ್ ಸೇರಿದಂತೆ ಇತರರ ನಿವಾಸಗಳ ಮೇಲೆ ದಾಳಿ ನಡೆಸಿ, ಪರಿಶೀಲನೆ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇದರ ಬೆನ್ನಲ್ಲೇ, ತಮ್ಮ ಮಕ್ಕಳು, ಮಗಳು ಮತ್ತು ಸಂಬಂಧಿಕರನ್ನು ಜಿಲ್ಲಾಧಿಕಾರಿ, ಡೆಪ್ಯುಟಿ ಎಸ್‌ಪಿ ಸೇರಿದಂತೆ ಪ್ರಮುಖ ಹುದ್ದೆಗಳಲ್ಲಿ ನೇಮಕ ಮಾಡಿಕೊಳ್ಳಲು ಸ್ವಜನ ಪಕ್ಷಪಾತ ಅನುಸರಿಸಿದ ಆರೋಪದ ಮೇರೆಗೆ ಸಿಜಿಪಿಎಸ್‌ಸಿಯ ಆಗಿನ ಅಧ್ಯಕ್ಷ ಟಾಮನ್ ಸಿಂಗ್ ಸೋನವಾನಿ, ಕಾರ್ಯದರ್ಶಿ ಜೆ.ಕೆ. ಧ್ರುವ್ ಮತ್ತು ಇತರರ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿಕೊಂಡಿದೆ.

ಸೋನವಾನಿ ಅವರ ಪುತ್ರ ನಿತೇಶ್ ಜಿಲ್ಲಾಧಿಕಾರಿಯಾಗಿ, ಅವರ ಹಿರಿಯ ಸಹೋದರನ ಮಗ ಸಾಹಿಲ್ ಅವರನ್ನು ಡೆಪ್ಯುಟಿ ಎಸ್‌ಪಿ ಆಗಿ, ತಂಗಿಯ ಮಗಳು ಸುನೀತಾ ಜೋಶಿ ಅವರನ್ನು ಕಾರ್ಮಿಕ ಅಧಿಕಾರಿ, ಮಗನ ಪತ್ನಿ ನಿಶಾ ಕೋಸಲೆ ಅವರನ್ನು ಜಿಲ್ಲಾಧಿಕಾರಿಯಾಗಿ ಮತ್ತು ತಮ್ಮನ ಸೊಸೆ ದೀಪಾ ಅದಿಲ್ ಅವರನ್ನು ಜಿಲ್ಲಾ ಅಬಕಾರಿ ಅಧಿಕಾರಿಯನ್ನಾಗಿ ನೇಮಿಸಿಕೊಳ್ಳಲಾಗಿತ್ತು ಎಂದು ಸಿಬಿಐ ಆರೋಪಿಸಿದೆ.

‘2 ಕೆ.ಜಿ. ಇಳಿದ ಕೇಜ್ರಿವಾಲ್ ತೂಕ’

ನವದೆಹಲಿ (ಪಿಟಿಐ): ಜೈಲಿನಲ್ಲಿ ಇರುವ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ದೇಹತೂಕವು 8.5 ಕೆ.ಜಿಯಷ್ಟು ಕಡಿಮೆಯಾಗಿದೆ ಎಂದು ಆಮ್ ಆದ್ಮಿ ಪಕ್ಷ (ಎಎಪಿ) ನೀಡಿರುವ ಹೇಳಿಕೆಗೆ ತಿಹಾರ್ ಜೈಲಿನ ಅಧಿಕಾರಿಗಳು ಪ್ರತಿಕ್ರಿಯಿಸಿದ್ದು, ಅವರ ತೂಕ 2 ಕೆ.ಜಿಯಷ್ಟು ಮಾತ್ರ ಕಡಿಮೆಯಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

‘ಎಎಪಿ ನೀಡಿರುವ ಮಾಹಿತಿ ಜನರಲ್ಲಿ ತಪ್ಪು ಭಾವನೆ ಮೂಡಿಸುತ್ತದೆ. ಹೀಗಾಗಿ ದೆಹಲಿ ಗೃಹ ಇಲಾಖೆಗೆ ಪತ್ರದ ಮೂಲಕ ಕೇಜ್ರಿವಾಲ್ ಅವರ ದೇಹದ ತೂಕ ಎಷ್ಟು ಕಡಿಮೆಯಾಗಿದೆ ಎಂದು ನಿಖರವಾಗಿ ತಿಳಿಸಿದ್ದೇವೆ’ ಎಂದು ಜೈಲಿನ ಅಧಿಕಾರಿಗಳು ಹೇಳಿರುವುದಾಗಿ ಮೂಲಗಳು ಸೋಮವಾರ ತಿಳಿಸಿವೆ.

ಏಪ್ರಿಲ್ 1ರಂದು ಕೇಜ್ರಿವಾಲ್ ತಿಹಾರ್ ಜೈಲಿಗೆ ಮೊದಲು ಬಂದಾಗ, ಅವರ ದೇಹತೂಕ 65 ಕೆ.ಜಿ. ಇತ್ತು. ಏಪ್ರಿಲ್ 8ರಿಂದ 29ರ ಅವಧಿಯಲ್ಲಿ 66 ಕೆ.ಜಿಯಷ್ಟಾಗಿತ್ತು. ಜಾಮೀನಿನ ಮೇಲೆ ಬಿಡುಗಡೆಯಾಗಿ, 21 ದಿನಗಳ ನಂತರ ಜೂನ್ 2ರಂದು ಜೈಲಿಗೆ ಮರಳಿದಾಗ ಅವರ ತೂಕ 63.5 ಕೆ.ಜಿ. ಇತ್ತು. ಜುಲೈ 14ರಂದು 61.5 ಕೆ.ಜಿಗೆ ಇಳಿದಿದೆ ಎಂದು ಅಧಿಕಾರಿಗಳು ಬರೆದ ಪತ್ರದಲ್ಲಿ ನಮೂದಿಸಲಾಗಿದೆ ಎಂದು ಹೇಳಿವೆ.

ಪೂಜಾ ತಾಯಿ ನಾಪತ್ತೆ



ತನಿಖೆಗಾಗಿ ಸರ್ಕಾರ ನೇಮಿಸಿರುವ ಸಮಿತಿ ಮುಂದೆ ಎಲ್ಲವನ್ನೂ ಹೇಳುವೆ. ಸಮಿತಿ ತೆಗೆದುಕೊಳ್ಳುವ ನಿರ್ಧಾರವನ್ನು ಎಲ್ಲರೂ ಒಪ್ಪಿಕೊಳ್ಳುವರು ಎಂದು ಭಾವಿಸುತ್ತೇನೆ

ಪೂಜಾ ಖೇಡ್ಕರ್

ಐಎಎಸ್ ಪ್ರೊಬೇಷನರಿ ಅಧಿಕಾರಿ

ಪುಣೆ (ಪಿಟಿಐ): ವಿವಾದಿತ ಐಎಎಸ್ ಪ್ರೊಬೇಷನರಿ ಅಧಿಕಾರಿ ಡಾ.ಪೂಜಾ ಖೇಡ್ಕರ್ ಅವರ ತಾಯಿ ಮನೋರಮಾ ಖೇಡ್ಕರ್ ಅವರನ್ನು ಇನ್ನೂ ಪತ್ತೆಹಚ್ಚಲು ಆಗಿಲ್ಲ ಎಂದು ಪುಣೆ ಪೊಲೀಸರು ಸೋಮವಾರ ತಿಳಿಸಿದ್ದಾರೆ.

ಭೂವಿವಾದಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಬಂದೂಕು ತೋರಿಸಿ ವ್ಯಕ್ತಿಯೊಬ್ಬರನ್ನು ಬೆದರಿಸಿದ ಆರೋಪದ ಕಾರಣಕ್ಕೆ ಮನೋರಮಾ, ಅವರ ಪತಿ ದಿಲೀಪ್ ಖೇಡ್ಕರ್ ಹಾಗೂ ಇನ್ನೂ ಐವರ ಮೇಲೆ ಪ್ರಕರಣ ದಾಖಲಾಗಿದೆ.

ಪುಣೆಯ ಬಾನೇರ್ ರಸ್ತೆಯಲ್ಲಿನ ಮನೋರಮಾ ಅವರ ಬಂಗಲೆಗೆ ಭಾನುವಾರ ಹಾಗೂ ಸೋಮವಾರ ಪೊಲೀಸರು ಭೇಟಿ ನೀಡಿದರು. ಆದರೆ, ಮನೋರಮಾ ಅವರು ಪತ್ತೆಯಾಗಲಿಲ್ಲ. ಅವರ ಮೊಬೈಲ್ ಕೂಡ ಸ್ವಿಚ್ ಆಫ್ ಆಗಿದೆ ಎಂದು ಪುಣೆ ಗ್ರಾಮಾಂತರ ಠಾಣೆಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಾಲೇಜಿಗೆ ಫಿಟ್‌ನೆಸ್ ಪ್ರಮಾಣಪತ್ರ ಸಲ್ಲಿಕೆ: (ಮುಂಬೈ ವರದಿ): ಪೂಜಾ ಖೇಡ್ಕರ್ ಅವರು 2007ರಲ್ಲಿ ಖಾಸಗಿ ವೈದ್ಯಕೀಯ ಕಾಲೇಜಿಗೆ ಪ್ರವೇಶ ಪಡೆಯುವಾಗ ಫಿಟ್‌ನೆಸ್ ಪ್ರಮಾಣಪತ್ರ ಸಲ್ಲಿಸಿದ್ದರು ಎಂದು ಸಂಸ್ಥೆಯ ನಿರ್ದೇಶಕ ಡಾ. ಅರವಿಂದ್ ಭೋರೆ ತಿಳಿಸಿದ್ದಾರೆ.

‘ಪುಣೆಯ ಕಾಶೀಬಾಯಿ ನವಲೆ ವೈದ್ಯಕೀಯ ಕಾಲೇಜಿಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಯಾವುದೇ ದೈಹಿಕ ಅಥವಾ ಮಾನಸಿಕ ಅಂಗವಿಕಲತೆ ಬಗ್ಗೆ ಉಲ್ಲೇಖ ಇರಲಿಲ್ಲ’ ಎಂದು ಭೋರೆ ಅವರು ಮರಾಠಿ ಟಿ.ವಿ ಚಾನೆಲ್ ಎಬಿಪಿ ಮಾಝಾಗೆ ಹೇಳಿದ್ದಾರೆ.

‘ವಲಸೆ ಹೋಗುವ ಬುಡಕಟ್ಟು ಜನಾಂಗಕ್ಕೆ ಸೇರಿದ ವಂಜಾರಿ ಸಮುದಾಯದವರು ಎಂದು ಪ್ರಮಾಣಪತ್ರದಲ್ಲಿ ತಿಳಿಸಿದ್ದರು. ಕುಟುಂಬದ ವಾರ್ಷಿಕ ಆದಾಯ 8 ಲಕ್ಷಕ್ಕಿಂತ ಕಡಿಮೆ ಎಂಬ ಆದಾಯ ಪ್ರಮಾಣಪತ್ರವನ್ನೂ ಸಲ್ಲಿಸಿದ್ದರು’ ಎಂದು ತಿಳಿಸಿದ್ದಾರೆ.

ಹಣಕಾಸು ಮಸೂದೆಗಳಂತೆ ಅಂಗೀಕಾರ ಪಡೆಯುವ ಕಾನೂನುಗಳ ಸಿಂಧುತ್ವ ಪರಿಶೀಲನೆಗೆ ಸಮ್ಮತಿ

ಸಂವಿಧಾನ ಪೀಠ ಸ್ಥಾಪನೆ: ವಿಚಾರಣೆಗೆ ಒಪ್ಪಿಗೆ



ನವದೆಹಲಿ (ಪಿಟಿಐ): ಆಧಾರ್ ಕಾಯ್ದೆಯಂತಹ ಕೆಲವೊಂದು ಹಣಕಾಸು ಮಸೂದೆಗಳು ರಾಜ್ಯಸಭೆಯಲ್ಲಿ ಚರ್ಚಿಸಲು ಅವಕಾಶ ಸಿಗದೆ ಅಂಗೀಕಾರವಾದುದರ ಸಿಂಧುತ್ವ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಗಾಗಿ ಸಂವಿಧಾನ ಪೀಠವೊಂದನ್ನು ಸ್ಥಾಪಿಸಬೇಕು ಎಂಬ ಮನವಿಯನ್ನು ಪರಿಗಣಿಸಲು ಸುಪ್ರೀಂ ಕೋರ್ಟ್ ಸೋಮವಾರ ಒಪ್ಪಿಕೊಂಡಿದೆ.

ಸುಪ್ರೀಂ ಕೋರ್ಟ್‌ನ ವಕೀಲರ ಸಂಘದ ಮುಖ್ಯಸ್ಥರೂ ಆಗಿರುವ ಹಿರಿಯ ವಕೀಲ ಕಪಿಲ್ ಸಿಬಲ್ ಅವರು ಈ ಕುರಿತು ಅರ್ಜಿಗಳನ್ನು ವಿಚಾರಣೆಗೆ ಪಟ್ಟಿ ಮಾಡುವಂತೆ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನೊಳಗೊಂಡ ಪೀಠಕ್ಕೆ ಮನವಿ ಮಾಡಿದರು.

ಸಾಂವಿಧಾನಿಕ ಪೀಠಗಳನ್ನು ರಚಿಸಿದಾಗ ಇದನ್ನು ಪರಿಶೀಲಿಸುವುದಾಗಿ ಈ ವೇಳೆ ಮುಖ್ಯ ನ್ಯಾಯಮೂರ್ತಿ ತಿಳಿಸಿದರು. ಇದಕ್ಕೂ ಮುನ್ನ, ಈ ಕುರಿತು ಏಳು ನ್ಯಾಯಮೂರ್ತಿಗಳ ಪೀಠವನ್ನು ರಚಿಸುವುದಾಗಿ ಪೀಠ ಹೇಳಿತ್ತು.

ಆಧಾರ್ ಕಾಯ್ದೆ, ಹಣ ಅಕ್ರಮ ವರ್ಗಾವಣೆ ಕಾಯ್ದೆ (ಪಿಎಂಎಲ್‌ಎ) ತಿದ್ದುಪಡಿಗಳನ್ನೂ ಹಣಕಾಸು ಮಸೂದೆಯಾಗಿ ಪರಿವರ್ತಿಸಲಾಗಿತ್ತು. ರಾಜ್ಯಸಭೆಯಲ್ಲಿ ಸರ್ಕಾರಕ್ಕೆ ಬಹುಮತ ಇಲ್ಲದಿದ್ದಾಗ, ಅಲ್ಲಿ ಅಂಗೀಕಾರ ಪಡೆಯುವುದನ್ನು ತಪ್ಪಿಸಲು ಸರ್ಕಾರ ಈ ರೀತಿ ನಡೆದುಕೊಂಡಿದೆ ಎಂಬ ಆರೋಪಗಳಿವೆ.

ಹಣಕಾಸು ಮಸೂದೆಯನ್ನು ಲೋಕಸಭೆಯಲ್ಲಿ ಮಾತ್ರ ಮಂಡಿಸಬೇಕು. ಅದಕ್ಕೆ ತಿದ್ದುಪಡಿ ಮಾಡುವ ಅಥವಾ ತಿರಸ್ಕರಿಸುವ ಅಧಿಕಾರ ರಾಜ್ಯಸಭೆಗೆ ಇಲ್ಲ. ಮೇಲ್ಮನೆಯು ಈ ಮಸೂದೆಗೆ ಶಿಫಾರಸುಗಳನ್ನು ಮಾತ್ರ ಮಾಡಬಹುದು. ಅದನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಕೆಳಮನೆಗೆ ಇರುತ್ತದೆ.

ಅದಾನಿ ವಿರುದ್ಧ ತನಿಖೆ: ಅರ್ಜಿ ವಜಾ

ನವದೆಹಲಿ (ಪಿಟಿಐ): ಅದಾನಿ ಸಮೂಹವು ಷೇರುಗಳ ಬೆಲೆಯನ್ನು ಕೃತಕವಾಗಿ ಹೆಚ್ಚಿಸುವ ಅಥವಾ ಕಡಿಮೆ ಮಾಡುವ ಕೆಲಸದಲ್ಲಿ ತೊಡಗಿದೆ ಎಂಬ ಆರೋಪದ ಕುರಿತ ತನಿಖೆಯನ್ನು ವಿಶೇಷ ತಂಡವೊಂದಕ್ಕೆ ಅಥವಾ ಸಿಬಿಐಗೆ ವಹಿಸಲು ನಿರಾಕರಿಸಿ ಜನವರಿ 3ರಂದು ನೀಡಿದ್ದ ತೀರ್ಪು ಮರುಪರಿಶೀಲಿಸಬೇಕು ಎಂಬ ಕೋರಿಕೆ ಇದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಜನವರಿ 3ರ ತೀರ್ಪು ಮರುಪರಿಶೀಲನೆಗೆ ಕೋರಿ ಅನಾಮಿಕಾ ಜೈಸ್ವಾಲ್ ಅವರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರು ಇದ್ದ ತ್ರಿಸದಸ್ಯ ಪೀಠವು ವಜಾಗೊಳಿಸಿತು.

ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಆರೋಪಗಳ ಬಗ್ಗೆ ಸಮಗ್ರವಾದ ತನಿಖೆ ನಡೆಸುತ್ತಿದೆ. ಸೆಬಿಯ ನಡೆಯು ವಿಶ್ವಾಸ ಮೂಡಿಸುವಂತೆ ಇದೆ ಎಂದು ಜನವರಿ 3ರ ತೀರ್ಪಿನಲ್ಲಿ ಕೋರ್ಟ್ ಹೇಳಿತ್ತು.

ಭೋಜಶಾಲಾ ಸಮೀಕ್ಷೆ: ಪರಿಶೀಲನೆಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಮಧ್ಯ ಪ್ರದೇಶದ ಧರ್ ಜಿಲ್ಲೆಯಲ್ಲಿ ಇರುವ ‘ಭೋಜಶಾಲಾ’ದ ವೈಜ್ಞಾನಿಕ ಸಮೀಕ್ಷೆಯನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಯನ್ನು ವಿಚಾರಣೆಗೆ ಪಟ್ಟಿ ಮಾಡಬಹುದೇ ಎಂಬುದನ್ನು ಪರಿಶೀಲಿಸಲು ಸುಪ್ರೀಂ ಕೋರ್ಟ್ ಸೋಮವಾರ ಸಮ್ಮತಿ ಸೂಚಿಸಿದೆ.

ಭೋಜಶಾಲಾ ತಮ್ಮದು ಎಂದು ಹಿಂದೂಗಳು ಹಾಗೂ ಮುಸ್ಲಿಮರು ಹಕ್ಕು ಪ್ರತಿಪಾದಿಸಿದ್ದಾರೆ. ಭೋಜಶಾಲಾ ಯಾವ ಸಮುದಾಯಕ್ಕೆ ಸೇರಿದ್ದು ಎಂಬುದನ್ನು ತೀರ್ಮಾನಿಸಲು ಅಲ್ಲಿ ವೈಜ್ಞಾನಿಕ ಸಮೀಕ್ಷೆ ಆಗಬೇಕು ಎಂದು ಮಧ್ಯಪ್ರದೇಶ ಹೈಕೋರ್ಟ್ ಮಾರ್ಚ್ 11ರಂದು ಆದೇಶಿಸಿದೆ. ಇದನ್ನು ಮೌಲಾನಾ ಕಮಾಲುದ್ದೀನ್ ವೆಲ್‌ಫೇರ್ ಸೊಸೈಟಿಯು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದೆ.

ಭೋಜಶಾಲಾ ಸಂಕೀರ್ಣದ ಸಮೀಕ್ಷೆಯನ್ನು ಆರು ವಾರಗಳಲ್ಲಿ ನಡೆಸಬೇಕು ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ (ಎಎಸ್‌ಐ) ಮಾರ್ಚ್ 11ರ ಆದೇಶದಲ್ಲಿ ಸೂಚಿಸಲಾಗಿದೆ.

ಹಿಂದೂಗಳ ಪರವಾಗಿ ಹಾಜರಿದ್ದ ವಕೀಲ ವಿಷ್ಣುಶಂಕರ್ ಜೈನ್ ಅವರು, ಎಎಸ್‌ಐ ತನ್ನ ವರದಿಯನ್ನು ಈಗಾಗಲೇ ಸಲ್ಲಿಸಿದೆ ಎಂದು ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್ ಮತ್ತು ಎಸ್.ವಿ.ಎನ್. ಭಟ್ಟಿ ಅವರಿದ್ದ ಸುಪ್ರೀಂ ಕೋರ್ಟ್‌ನ ವಿಭಾಗೀಯ ಪೀಠಕ್ಕೆ ತಿಳಿಸಿದರು.

ವರದಿ ಸಲ್ಲಿಸಿದ ಎಎಸ್‌ಐ: ವಿವಾದಿತ ಭೋಜಶಾಲಾ–ಕಮಲ್ ಮೌಲಾ ಮಸೀದಿ ಸಂಕೀರ್ಣದ ವೈಜ್ಞಾನಿಕ ಸಮೀಕ್ಷೆಯ ವರದಿಯನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು (ಎಎಸ್‌ಐ) ಮಧ್ಯಪ್ರದೇಶ ಹೈಕೋರ್ಟ್‌ನ ಇಂದೋರ್ ಪೀಠಕ್ಕೆ ಸೋಮವಾರ ಸಲ್ಲಿಸಿದೆ

ಸಂಕ್ಷಿಪ್ತ ಸುದ್ದಿ

ಡ್ರಗ್ಸ್ ಪ್ರಕರಣ: ರಕುಲ್ ಪ್ರೀತ್ ಸಿಂಗ್ ಸಹೋದರನ ಬಂಧನ

ಹೈದರಾಬಾದ್: ಬಾಲಿವುಡ್ ನಟಿ ರಕುಲ್ ಪ್ರೀತ್ ಸಿಂಗ್ ಸಹೋದರ ಅಮನ್ ಪ್ರೀತ್ ಸಿಂಗ್ ಸೇರಿದಂತೆ ನಾಲ್ವರು ಮಾದಕ ವಸ್ತು ವ್ಯಸನಿಗಳು ಹಾಗೂ ಐವರು ಡ್ರಗ್ ಪೆಡ್ಲರ್‌ಗಳನ್ನು ಸೋಮವಾರ ಬಂಧಿಸಲಾಗಿದೆ.

ತೆಲಂಗಾಣ ಮಾದಕವಸ್ತು ವಿರೋಧಿ ದಳ ಮತ್ತು ಸೈಬರ್ ಪೊಲೀಸರು ಕಾರ್ಯಾಚರಣೆ ನಡೆಸಿ ಸೆರೆ ಹಿಡಿದಿದ್ದಾರೆ.

ಈ ಸಂದರ್ಭದಲ್ಲಿ ಆರೋಪಿಗಳ ಬಳಿ ಇದ್ದ 35 ಲಕ್ಷ ಮೌಲ್ಯದ 200 ಗ್ರಾಂ ಕೊಕೇನ್, ಎರಡು ಪಾಸ್‌ಪೋರ್ಟ್, ಎರಡು ಬೈಕ್, 10 ಮೊಬೈಲ್‌ಗಳು ಇತರ ವಸ್ತುಗಳನ್ನು ವಶಕ್ಕೆ ಪಡೆದಿದ್ದಾರೆ.

‘ಬಂಧಿತ ಪೆಡ್ಲರ್‌ಗಳ ಗ್ರಾಹಕರ ಪಟ್ಟಿಯಲ್ಲಿದ್ದವರ ಪೈಕಿ ಅಮನ್ ಸೇರಿದಂತೆ ಆರು ಮಂದಿಯ ಮೂತ್ರದ ಮಾದರಿಯನ್ನು ಪರಿಶೀಲಿಸಿದ ನಂತರ ಅವರನ್ನು ಬಂಧಿಸಲಾಗಿದೆ. ಸದ್ಯ ಅವರನ್ನು ವೈದ್ಯಕೀಯ ಪರೀಕ್ಷೆಗೆ ಕಳುಹಿಸಲಾಗಿದೆ’ ಎಂದು ಶಂಶಾಬಾದ್ ಉಪ ಪೊಲೀಸ್ ಆಯುಕ್ತ ಶ್ರೀನಿವಾಸ್ ತಿಳಿಸಿದರು.

ಬಂಧಿತ ಪೆಡ್ಲರ್‌ಗಳು ನೈಜೀರಿಯಾದಿಂದ ಡ್ರಗ್ಸ್ ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದರು.

ಡ್ರಗ್ಸ್ ಪೂರೈಕೆ ಮತ್ತು ಸೇವನೆ ಪ್ರಕರಣದಲ್ಲಿ ರಕುಲ್ ಅವರಿಗೆ ಜಾರಿ ನಿರ್ದೇಶನಾಲಯ ಸಮನ್ಸ್ ಜಾರಿ ಮಾಡಿ, 2021 ಮತ್ತು 2022ರಲ್ಲಿ ಹೇಳಿಕೆ ದಾಖಲಿಸಿಕೊಂಡಿತ್ತು

ಬಾನೆಟ್ ಮೇಲೆ ಬಿದ್ದ ನೌಕರ; ಕಾರು ನಿಲ್ಲಿಸದೆ ಸಂಚಾರ

ಕಣ್ಣೂರು (ಕೇರಳ) (ಪಿಟಿಐ): ಪೆಟ್ರೋಲ್‌ಗೆ ಹಣ ಪಾವತಿಸುವಂತೆ ಕೇಳಿದ ಬಂಕ್‌ನಲ್ಲಿ ಕೆಲಸ ಮಾಡುತ್ತಿದ್ದ ನೌಕರನ ಮೇಲೆ ಪೊಲೀಸ್ ವಾಹನ ಚಾಲಕನೊಬ್ಬ ಕಾರು ಹರಿಸಲು ಪ್ರಯತ್ನಿಸಿ, ಬಾನೆಟ್ ಮೇಲೆ ಬಿದ್ದಿದ್ದ ಆತನನ್ನು ಅದೇ ಸ್ಥಿತಿಯಲ್ಲಿ ಒಂದು ಕಿ.ಮೀಯಷ್ಟು ದೂರದವರೆಗೆ ಚಾಲನೆ ಮಾಡಿಕೊಂಡು ಸಾಗಿದ ಘಟನೆ ಕಣ್ಣೂರಿನಲ್ಲಿ ನಡೆದಿದೆ.

‘ಭಾನುವಾರ ಸಂಜೆ ಘಟನೆ ನಡೆದಿದ್ದು, ಆರೋಪಿ ಸಂತೋಷ್‌ಕುಮಾರ್ ವಿರುದ್ಧ ಕೊಲೆ ಯತ್ನ ಸೇರಿದಂತೆ ವಿವಿಧ ಪ್ರಕರಣಗಳನ್ನು ದಾಖಲಿಸಲಾಗಿದೆ ಮತ್ತು ಸೋಮವಾರ ಸೇವೆಯಿಂದ ಅಮಾನತುಗೊಳಿಸಲಾಗಿದೆ’ ಎಂದು ಕಣ್ಣೂರು ನಗರ ಪೊಲೀಸ್ ಆಯುಕ್ತ ಅಜಿತ್ ಕುಮಾರ್ ತಿಳಿಸಿದ್ದಾರೆ.

ಸಂತೋಷ್ ಪೆಟ್ರೋಲ್ ತುಂಬಿಸಿಕೊಂಡು, ಹಣ ಪಾವತಿಸದೆ ಅಲ್ಲಿಂದ ತೆರಳಲು ಪ್ರಯತ್ನಿಸಿದ್ದಾನೆ. ತಡೆಯಲು ಮುಂದಾದ ಪೆಟ್ರೋಲ್ ಬಂಕ್ ಸಿಬ್ಬಂದಿ ಅನಿಲ್ ಎಂಬುವವರ ಮೇಲೆ ಸಂತೋಷ್ ಕಾರು ಹರಿಸಲು ಪ್ರಯತ್ನಿಸಿದ್ದಾನೆ. ಕಾರು ಗುದ್ದಿದೊಡನೆ ಅನಿಲ್ ಬಾನೆಟ್‌ನ ಮೇಲೆ ಬಿದ್ದರು. ಆದರೂ ದಟ್ಟಣೆಯಿರುವ ರಸ್ತೆಯಲ್ಲಿ ಒಂದು ಕಿ.ಮೀನಷ್ಟು ದೂರದವರೆಗೆ ಕಾರನ್ನು ಚಲಿಸಿಕೊಂಡು ಸಾಗಿದ.

ಅನಿಲ್ ಮತ್ತು ಸಂತೋಷ್ ನಡುವಿನ ವಾಗ್ವಾದ ಮತ್ತು ಕಾರಿನಲ್ಲಿ ಎಳೆದೊಯ್ದಿರುವ ಸಿ.ಸಿ.ಟಿ.ವಿ ದೃಶ್ಯಾವಳಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಅನಿಲ್ ಕೈಗೆ ಗಾಯಗಳಾಗಿದ್ದು, ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ವಿಚ್ಛೇದನ ಕೋರಿ ‘ಸುಪ್ರೀಂ’ಗೆ ಒಮರ್

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಮತ್ತು ನ್ಯಾಷನಲ್ ಕಾನ್ಫರೆನ್ಸ್ ನಾಯಕ ಒಮರ್ ಅಬ್ದುಲ್ಲಾ ಅವರು ಕ್ರೌರ್ಯದ ಆಧಾರದ ಮೇಲೆ ವಿಚ್ಛೇದನ ಕೋರಿ ಸಲ್ಲಿಸಿರುವ ಮೇಲ್ಮನವಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಸೋಮವಾರ ಒಮರ್ ಅವರ ಪತ್ನಿ ಪಾಯಲ್ ಅಬ್ದುಲ್ಲಾ ಅವರಿಗೆ ನೋಟಿಸ್ ನೀಡಿದೆ.

ನ್ಯಾಯಮೂರ್ತಿಗಳಾದ ಸುಧಾಂಶು ಧುಲಿಯಾ ಮತ್ತು ಅಹ್ಸಾನುದ್ದೀನ್ ಅಮಾನುಲ್ಲಾ ಅವರ ಪೀಠವು, ಆರು ವಾರಗಳಲ್ಲಿ ಪ್ರತಿಕ್ರಿಯಿಸುವಂತೆ ಪಾಯಲ್ ಅವರಿಗೆ ಸೂಚಿಸಿದೆ.



ಮುಖ್ಯಮಂತ್ರಿಯಾಗಿ ಪುನಃ ಅಧಿಕಾರ ವಹಿಸಿಕೊಂಡ ಬಳಿಕ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ಪ್ರಧಾನಿ ಮೋದಿ ಅವರನ್ನು ದೆಹಲಿಯಲ್ಲಿ ಸೋಮವಾರ ಭೇಟಿ ಮಾಡಿ ಮಾತುಕತೆ ನಡೆಸಿದರು –ಪಿಟಿಐ ಚಿತ್ರ

ಲಿಫ್ಟ್‌ನಲ್ಲಿ ಸಿಲುಕಿದ್ದ ವ್ಯಕ್ತಿ: 2 ದಿನದ ಬಳಿಕ ರಕ್ಷಣೆ

ತಿರುವನಂತಪುರ (ಪಿಟಿಐ): ಇಲ್ಲಿನ ಸರ್ಕಾರಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯ ಲಿಫ್ಟ್‌ನಲ್ಲಿ ಎರಡು ದಿನ ಸಿಲುಕಿಕೊಂಡಿದ್ದ 59 ವರ್ಷದ ವ್ಯಕ್ತಿಯನ್ನು ಸೋಮವಾರ ಬೆಳಿಗ್ಗೆ ರಕ್ಷಣೆ ಮಾಡಲಾಗಿದೆ. ಈ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸಿದ್ದ ಮೂರು ಮಂದಿಯನ್ನು ಅಮಾನತುಗೊಳಿಸಲಾಗಿದೆ.

ಉಲ್ಲೂರ್‌ನ ನಿವಾಸಿ ರವೀಂದ್ರನ್ ನಾಯರ್ ಅವರು ಶನಿವಾರ ಆಸ್ಪತ್ರೆಗೆ ಆರೋಗ್ಯ ತಪಾಸಣೆಗೆ ಹೊರರೋಗಿ ವಿಭಾಗಕ್ಕೆ ಬಂದಿದ್ದರು. ಲಿಫ್ಟ್‌ನಲ್ಲಿ ತೆರಳಿದ್ದ ವೇಳೆ ಅಲ್ಲಿಯೇ ಸಿಲುಕಿಕೊಂಡಿದ್ದರು. ಸೋಮವಾರ ಲಿಫ್ಟ್ ಆಪರೇಟರ್ ಎಂದಿನಂತೆ ಕೆಲಸಕ್ಕೆ ಹಾಜರಾದ ವೇಳೆ ಈ ವಿಷಯ ಬೆಳಕಿಗೆ ಬಂದಿದ್ದು, ರಕ್ಷಣೆ ಮಾಡಿದ್ದಾರೆ.

‘ಮೊದಲು ಮಹಡಿಗೆ ತೆರಳಲು ಶನಿವಾರ ಮಧ್ಯಾಹ್ನ 12ಕ್ಕೆ ಲಿಫ್ಟ್ ಪ್ರವೇಶಿಸಿದ್ದರು. ಆದರೆ ಮೇಲೆ ಹೋಗಿದ್ದ ಲಿಫ್ಟ್ ಕೆಳಗಡೆ ಬಂದ ನಂತರ ಬಾಗಿಲು ತೆರೆಯಲಿಲ್ಲ. ನೆರವಿಗಾಗಿ ಕಿರುಚಾಡಿದರೂ ಯಾರೂ ಸಹಾಯಕ್ಕೆ ಬಂದಿರಲಿಲ್ಲ. ಅವರ ಮೊಬೈಲ್ ಫೋನ್ ಸ್ವಿಚ್ ಆಫ್ ಆಗಿತ್ತು’ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದರು.

ತಕ್ಷಣವೇ ಅವರನ್ನು ಆಸ್ಪತ್ರೆಗೆ ದಾಖಲಿಸಿ, ವಿವರವಾದ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ.

ಘಟನೆ ಕುರಿತಂತೆ ರಾಜ್ಯ ಆರೋಗ್ಯ ಸಚಿವೆ ವೀಣಾ ಜಾರ್ಜ್ ತನಿಖೆಗೆ ಆದೇಶಿಸಿದ್ದು, ವರದಿ ನೀಡುವಂತೆ ಸೂಚಿಸಿದ್ದಾರೆ.ಇಬ್ಬರು ಲಿಫ್ಟ್ ಆಪರೇಟರ್, ಒಬ್ಬ ಅಧಿಕಾರಿಯನ್ನು ಅಮಾನತುಗೊಳಿಸಿ, ಇಲಾಖೆ ಆದೇಶಿಸಿದೆ.

ನಾಯರ್ ಕುಟುಂಬದ ಸದಸ್ಯರು ಭಾನುವಾರ ರಾತ್ರಿಯೇ ಮೆಡಿಕಲ್ ಕಾಲೇಜು ಪೊಲೀಸ್ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಿಸಿದ್ದರು.

ಕಸ ತುಂಬಿದ್ದ ಚರಂಡಿ ಸ್ವಚ್ಛಗೊಳಿಸುವಾಗ ನಾಪತ್ತೆ

ನಾಪತ್ತೆಯಾದ ವ್ಯಕ್ತಿಯ ಮೃತದೇಹ ಚರಂಡಿಯಲ್ಲಿ ಪತ್ತೆ

ತಿರುವನಂತಪುರ (ಪಿಟಿಐ): ಕಸ ಮತ್ತು ಹೊಲಸು ತುಂಬಿಕೊಂಡಿದ್ದ ಚರಂಡಿ ಶುಚಿಗೊಳಿಸುವ ವೇಳೆ ನಾಪತ್ತೆಯಾಗಿದ್ದ ಪೌರ ಕಾರ್ಮಿಕ ಜಾಯ್ ಅವರ ಮೃತದೇಹವು ಎರಡು ದಿನಗಳ ಬಳಿಕ ಪತ್ತೆಯಾಗಿದೆ ಎಂದು ಕೇರಳ ಸರ್ಕಾರ ಸೋಮವಾರ ತಿಳಿಸಿದೆ.

ಅಮಯಿಳಂಚನ್ ಚರಂಡಿಯಲ್ಲಿ ಸೋಮವಾರ ಬೆಳಿಗ್ಗೆ ಪತ್ತೆಯಾದ ಮೃತದೇಹವು ಪೌರ ಕಾರ್ಮಿಕ ಜಾಯ್ (47) ಅವರದ್ದೇ ಎಂದು ಅಧಿಕಾರಿಗಳು ಖಚಿತಪಡಿಸಿದ್ದಾರೆ.

ಪಳವಂಗಡಿ–ಥಕರಪರಂಬು–ವಂಚಿಯೂರ್ ರಸ್ತೆಯಲ್ಲಿನ ಚರಂಡಿಯಲ್ಲಿ ಕೊಳೆತ ಸ್ಥಿತಿಯಲ್ಲಿ ಪತ್ತೆಯಾದ ಮೃತದೇಹದ ಬಗ್ಗೆ ಪೌರ ಕಾರ್ಮಿಕರು ಪೊಲೀಸರಿಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಬಂದ ಪೊಲೀಸರು, ಮೃತದೇಹವನ್ನು ಹೊರತೆಗೆದು, ವೈದ್ಯಕೀಯ ಪರೀಕ್ಷೆಗಾಗಿ ಆಸ್ಪತ್ರೆಗೆ ರವಾನಿಸಿದರು.

ಶನಿವಾರ ಚರಂಡಿ ಶುಚಿಗೊಳಿಸುತ್ತಿದ್ದ ಜಾಯ್ ಅವರು ನಾಪತ್ತೆಯಾಗಿದ್ದರು. ಅವರ ರಕ್ಷಣೆಗಾಗಿ ಪೊಲೀಸರು, ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ (ಎನ್‌ಡಿಆರ್‌ಎಫ್) 46 ಗಂಟೆಗಳ ಕಾಲ ನಿರಂತರ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು.

ಪ್ರಕರಣ: ಕಸ ಮತ್ತು ಕೊಳಕು ತುಂಬಿದ್ದ ಚರಂಡಿ ಶುಚಿಗೊಳಿಸಲು ತಿರುವನಂತಪುರ ನಗರ ಪಾಲಿಕೆಯೊಂದಿಗೆ ದಕ್ಷಿಣ ರೈಲ್ವೆ ವಲಯ ಕೈಜೋಡಿಸದೆ ಇರುವುದರಿಂದಲೇ ಚರಂಡಿಯಲ್ಲಿ ಭಾರಿ ಪ್ರಮಾಣದ ಕಸ ಶೇಖರಣೆಗೆ ಕಾರಣವಾಗಿತ್ತು ಎಂದು ಕೇರಳ ಸರ್ಕಾರ ಆರೋಪಿಸಿದೆ.

ಇದೇ ಚರಂಡಿ ಶುಚಿಗೊಳಿಸುವ ವೇಳೆ ಜುಲೈ 13ರಂದು ಚರಂಡಿಯಲ್ಲಿ ಮುಳಿಗಿದ್ದ ಪೌರಕಾರ್ಮಿಕ ಸೋಮವಾರ ಶವವಾಗಿ ಪತ್ತೆಯಾಗಿದ್ದಾರೆ.



ಕೇರಳದ ಅಮಯಿಳಂಚನ್‌ನಲ್ಲಿ ಶನಿವಾರ ಚರಂಡಿ ಶುಚಿಗೊಳಿಸುವ ವೇಳೆ ಮಳೆ ನೀರಿನಲ್ಲಿ ಕೊಚ್ಚಿಹೋಗಿದ್ದ ಪೌರ ಕಾರ್ಮಿಕನ ರಕ್ಷಣೆಗಾಗಿ ಅಗ್ನಿಶಾಮಕ ಹಾಗೂ ಇತರೆ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ತೊಡಗಿದ್ದರು –ಪಿಟಿಐ ಚಿತ್ರ

ಯುರೋ ಕಪ್: ದೀರ್ಘಕಾಲದ ನಂತರ ಪ್ರಮುಖ ಪ್ರಶಸ್ತಿ ಗೆಲ್ಲುವ ಇಂಗ್ಲೆಂಡ್ ಕನಸು ಭಗ್ನ

ಸ್ಪೇನ್ 'ಯುರೋಪ್ ಸಾಮ್ರಾಟ'

ಬರ್ಲಿನ್ (ಎಪಿ/ ಎಎಫ್‌ಪಿ): ಸ್ಪೇನ್ ದಾಖಲೆಯ ನಾಲ್ಕನೇ ಬಾರಿ ಯುರೋಪ್‌ನ ಫುಟ್‌ಬಾಲ್ ಸಾಮ್ರಾಟನಾಯಿತು. ಪ್ರಮುಖ ಪ್ರಶಸ್ತಿಗಾಗಿ 58 ವರ್ಷಗಳಿಂದ ಕಾಯುತ್ತಿದ್ದ ಇಂಗ್ಲೆಂಡ್ ತಂಡ ಮತ್ತೆ ನಿರಾಸೆ ಅನುಭವಿಸಬೇಕಾಯಿತು. ಭಾನುವಾರ ರಾತ್ರಿ ನಡೆದ ಯುರೊ ಕಪ್ ಫೈನಲ್ ಪಂದ್ಯದಲ್ಲಿ ಸ್ಪೇನ್ 2–1 ಗೋಲುಗಳಿಂದ ಇಂಗ್ಲೆಂಡ್ ತಂಡವನ್ನು ಸೋಲಿಸಿತು.

ಪಂದ್ಯ ಮುಗಿಯಲು ನಾಲ್ಕು ನಿಮಿಷಗಳಿರುವಾಗ (86ನೇ ನಿಮಿಷ) ಮೈಕೆಲ್ ಒಯರ್‌ಜಬಾಲ್ ಗೋಲು ಗಳಿಸಿ ಸ್ಪೇನ್ 'ಗೆಲುವಿನ ರೂವಾರಿ' ಎನಿಸಿದರು. ಪಂದ್ಯದ 67ನೇ ನಿಮಿಷ ನಾಯಕ ಅಲ್ವಾರೊ ಮೊರಾಟಾ ಅವರಿಗೆ ಸಬ್‌ಸ್ಟಿಟ್ಯೂಟ್ ಆಗಿ ಆಡಲಿಳಿದ ಒಯರ್‌ಜಬಾಲ್, ಪ್ರತಿ ದಾಳಿಯೊಂದರ ವೇಳೆ ಲೆಫ್ಟ್ ವಿಂಗ್ ಮಾರ್ ಕುಕುರೆಲ್ಲಾ ಅವರ ಕ್ರಾಸ್‌ನಲ್ಲಿ ನಿರ್ಣಾಯಕ ಗೋಲು ಗಳಿಸಿದರು.

ತವರಿನಲ್ಲಿ 1966ರ ವಿಶ್ವಕಪ್ ಗೆದ್ದ ನಂತರ ಯಾವುದೇ ಪ್ರಮುಖ ಪ್ರಶಸ್ತಿ ಗೆಲ್ಲಲು ಇಂಗ್ಲೆಂಡ್‌ಗೆ ಸಾಧ್ಯವಾಗಿಲ್ಲ. ಈ ಹಿಂದಿನ (2021) ಯುರೊ ಕಪ್‌ನಲ್ಲೂ ಇಂಗ್ಲೆಂಡ್ ಫೈನಲ್ ತಲುಪಿದ್ದರೂ ಇಟಲಿ ಎದುರು ಪೆನಾಲ್ಟಿ ಶೂಟೌಟ್‌ನಲ್ಲಿ ಸೋಲನುಭವಿಸಿತ್ತು. 1936ರ ಒಲಿಂಪಿಕ್‌ಗಾಗಿ ನಿರ್ಮಿಸಲಾಗಿದ್ದ ಬರ್ಲಿನ್‌ನ ಒಲಿಂಪಿಯ ಕ್ರೀಡಾಂಗಣದಲ್ಲಿ ಸುಡುಮದ್ದುಗಳ ಹಿನ್ನೆಲೆಯಲ್ಲಿ ಮೊರಾಟ ಅವರು ಬೆಳ್ಳಿಯ ದೊಡ್ಡ ಟ್ರೋಫಿ ಎತ್ತಿ ಹಿಡಿಯುವುದನ್ನು ಇಂಗ್ಲೆಂಡ್ ಆಟಗಾರರು ಹತಾಶೆಯಿಂದ ನೋಡಬೇಕಾಯಿತು.

ಈ ಹಿಂದೆ 1964, 2008 ಮತ್ತು 2012ರಲ್ಲಿ ಸ್ಪೇನ್ ಯುರೋ ಚಾಂಪಿಯನ್ ಆಗಿತ್ತು. ಉದಯೋನ್ಮುಖ ಆಟಗಾರ ನಿಕೊ ವಿಲಿಯಮ್ಸ್ ಅವರು 47ನೇ ನಿಮಿಷ ಸ್ಪೇನ್‌ಗೆ ಮುನ್ನಡೆ ಒದಗಿಸಿದ್ದರು. ಆದರೆ 73ನೇ ನಿಮಿಷ, ಇಂಗ್ಲೆಂಡ್ ಪರ ಸಬ್‌ಸ್ಟಿಟ್ಯೂಟ್ ಕೋಲ್ ಪಾಮರ್ ಸ್ಕೋರ್ ಸಮ ಮಾಡಿದ್ದರು. ಪಂದ್ಯ ಹೆಚ್ಚುವರಿ ಅವಧಿಯತ್ತ ಸಾಗುವಂತೆ ಕಂಡಾಗಲೇ ಸ್ಪೇನ್ ಗೋಲು ಗಳಿಸಿತು.

ಯುರೋಪಿಯನ್ ಚಾಂಪಿಯನ್‌ಷಿಪ್‌ನಲ್ಲಿ ಗೋಲು ಗಳಿಸಿದ ಅತಿ ಕಿರಿಯ ಆಟಗಾರ ಎನಿಸಿದ್ದ ಲಮಿನ್ ಯಮಾಲ್ ಅವರು ವಿಲಿಯಮ್ಸ್ ಅವರಿಗೆ ಗೋಲು ಗಳಿಸಲು ಒಳ್ಳೆಯ ಪಾಸ್ ಪೂರೈಸಿದ್ದರು.

ಸ್ಪೇನ್‌ನ 'ಇಬ್ಬರು ತಾರೆ'ಗಳು...: ಲಮಿನ್ ಯಮಾಲ್ ಮತ್ತು ವಿಲಿಯಮ್ಸ್ ಪ್ರಸಕ್ತ ಯುರೊ ಕೂಟದಲ್ಲಿ ಸ್ಪೇನ್ ತಂಡದ 'ಪೋಸ್ಟರ್ ಬಾಯ್'ಗಳೆನಿಸಿದರು. ಯಮಾಲ್ ಈ 'ಟೂರ್ನಿಯ ಶ್ರೇಷ್ಠ ಯುವ ಆಟಗಾರ' ಪ್ರಶಸ್ತಿಗೆ ಪಾತ್ರರಾದರು. ಒಂದು ದಿನ ಹಿಂದಷ್ಟೇ (ಶನಿವಾರ) ಅವರು 17ನೇ ವರ್ಷದ ಹುಟ್ಟುಹಬ್ಬ ಆಚರಿಸಿದ್ದರು. ಯಮಾಲ್ ಅವರ ತಾಯಿ ಮಧ್ಯ ಆಫ್ರಿಕದ ಇಕ್ವೆಟೋರಿಯಲ್ ಗಿನಿ ದೇಶದವರು. ತಂದೆ ಮೊರಾಕ್ಕೊದವರು.

22 ವರ್ಷದ ವಿಲಿಯಮ್ಸ್ ಅವರ ಪೋಷಕರು ಘಾನಾ ದೇಶದಿಂದ ವಲಸೆ ಬಂದವರು. ಹುಟ್ಟಿದಾಗಿನಿಂದ ಅವರು ಕಿಕ್ಕಿರಿದ್ದ ಟ್ರಕ್‌ನಲ್ಲಿ ಹೇಗೋ ಜಾಗ ಪಡೆದು ಯುರೋಪ್‌ಗೆ ಪಯಣಿಸಿದ್ದರು. ಸಹರಾ ಮರುಭೂಮಿಯ ಉರಿಬಿಸಿಲಲ್ಲಿ ಬರಿಗಾಲಲ್ಲೇ ನಡೆದಿದ್ದರು.

ಮುಂಚೂಣಿ ಪಡೆಯಲ್ಲಿ ಚುರುಕಿನಿಂದ ಓಡಾಡಿದ ವಿಲಿಯಮ್ಸ್ ಯುರೊ ಕಪ್‌ನಲ್ಲಿ ಎರಡನೇ ಗೋಲು ಗಳಿಸಿದರು. ಪಂದ್ಯದ ಆಟಗಾರ ಗೌರವವೂ ಅವರದಾಯಿತು.

'ನಾನು ಈ ಹಂತಕ್ಕೆ ಬರಲು ನನ್ನ ತಂದೆ-ತಾಯಿ ಇನ್ನಿಲ್ಲದ ಸಂಕಷ್ಟಗಳನ್ನು ಎದುರಿಸಿದರು. ನನ್ನಲ್ಲಿ ಗೌರವ ಮತ್ತು ಸ್ವಾಭಿಮಾನ ಮೂಡಲು ಅವರೇ ಕಾರಣ. ನಮ್ಮ ತಂಡ ಈಗ ಇತಿಹಾಸ ನಿರ್ಮಿಸುತ್ತಿರುವುದು ಸಂತಸ ಮೂಡಿಸಿದೆ' ಎಂದು ವಿಲಿಯಮ್ಸ್ ಹೇಳಿದರು.

ವಿಲಿಯಮ್ಸ್ ಸೋದರ ಇನಾಕಿ ಘಾನಾ ತಂಡಕ್ಕೆ ಆಡುತ್ತಿದ್ದಾರೆ. ನಿಕೊ ಸ್ಪೇನ್‌ಗೆ ಆಡುವುದನ್ನು ಆಯ್ಕೆ ಮಾಡಿದರು. ಈಗ ಅವರಿಗೆ 'ರಾಷ್ಟ್ರೀಯ ಹೀರೊ' ರೀತಿಯ ಆದರ ಸಿಗುತ್ತಿದೆ.

ಪ್ರಬಲ ಶಕ್ತಿ: ಸ್ಪೇನ್ ಈಗ ಯುರೋಪ್‌ನಲ್ಲಿ ಪ್ರಬಲ ಫುಟ್‌ಬಾಲ್ ಶಕ್ತಿಯಾಗಿ ಹೊಮ್ಮಿದೆ. ಮಹಿಳಾ ವಿಶ್ವಕಪ್ ನಂತರ ಪುರುಷರ ತಂಡ ಯುರೊ ಕಪ್ ಗೆದ್ದುಕೊಂಡಿದೆ. ಕಳೆದ ವರ್ಷ ಪುರುಷರ ತಂಡ ಯುಇಎಫ್‌ಎ ನೇಷನ್ಸ್ ಲೀಗ್ ಕಪ್ ಗೆದ್ದುಕೊಂಡಿತ್ತು. 2001ರಿಂದೀಚೆ ಸ್ಪೇನ್ ಪುರುಷರ ತಂಡ ಕ್ಲಬ್ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಒಟ್ಟು 23 ಪ್ರಮುಖ ಟೂರ್ನಿಗಳಲ್ಲಿ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದೆ.

ಈ ಬಾರಿಯ ಚಾಂಪಿಯನ್‌ಷಿಪ್‌ನಲ್ಲಿ ಸ್ಪೇನ್ ಆಡಿದ ಎಲ್ಲ ಏಳೂ ಪಂದ್ಯಗಳನ್ನು ಗೆದ್ದುಕೊಂಡಿದೆ. ಇದು ಅಭೂತಪೂರ್ವ ಸಾಧನೆ. ಅದು ಈ ಸಲ ಗಳಿಸಿದ 15 ಗೋಲುಗಳು ಒಂದೇ ಟೂರ್ನಿಯಲ್ಲಿ ದಾಖಲಾದ ಗರಿಷ್ಠ ಗೋಲುಗಳ ದಾಖಲೆ ಎನಿಸಿತು.

ಇಮ್ಮಡಿಸಿದ ಖುಷಿ: ಸ್ಪೇನ್ ರಾಜಧಾನಿ ಮ್ಯಾಡ್ರಿಡ್‌ನಲ್ಲಿ ಸಾವಿರಾರು ಮಂದಿ ಫುಟ್‌ಬಾಲ್ ಅಭಿಮಾನಿಗಳು ದೈತ್ಯ ಪರದೆಯಲ್ಲಿ ಫೈನಲ್ ವೀಕ್ಷಿಸಿ 'ಚಾಂಪಿಯನ್ಸ್, ಚಾಂಪಿಯನ್ಸ್' ಎಂದು ಸ್ಪ್ಯಾನಿಷ್ ನಲ್ಲಿ ಘೋಷಣೆಗಳನ್ನು ಕೂಡಿದರು. ವಿಂಬಲ್ಡನ್ ಟೆನಿಸ್‌ನಲ್ಲಿ ಇದೇ ದೇಶದ ಕಾರ್ಲೋಸ್ ಅಲ್ಕರಾಜ್ ಅವರೂ ಭಾನುವಾರ ಚಾಂಪಿಯನ್ ಆಗಿದ್ದು ಸ್ಪೇನ್ ದೇಶದ ಸಂತಸವನ್ನು ಇಮ್ಮಡಿಸಿತು.

ಪಂದ್ಯ ವೀಕ್ಷಿಸಿದವರಲ್ಲಿ ಇಂಗ್ಲೆಂಡ್‌ನ ರಾಜಮನೆತನದ ಪ್ರಿನ್ಸ್ ವಿಲಿಯಮ್ಸ್, ಸ್ಪೇನ್‌ನ ರಾಜ ಫಿಲಿಪ್ ಅವರೂ ಒಳಗೊಂಡಿದ್ದರು.


ಸ್ಪೇನ್ ತಂಡ ಭಾನುವಾರ ಯುರೋ ಕಪ್ ಫೈನಲ್ ಗೆದ್ದ ನಂತರ ವಿಜಯೋತ್ಸವದ ವೇಳೆ ಡಿಫೆಂಡರ್ ಅಲೆಜಾಂಡ್ರೊ ಗ್ರಿಮಲ್ಡೊ ಅವರು ಟ್ರೋಫಿಯನ್ನು ಎತ್ತಿಹಿಡಿದು ಸಹ ಆಟಗಾರರೊಂದಿಗೆ ಸಂಭ್ರಮಿಸಿದರು —ಎಎಫ್‌ಪಿ ಚಿತ್ರ

ಯುರೋ ಕಪ್ 2024 ಜರ್ಮನಿ

ಬಹುಮಾನದ ಮೊತ್ತ

₹254 ಕೋಟಿ
ಸ್ಪೇನ್ ಗೆದ್ದ ಬಹುಮಾನ

₹218 ಕೋಟಿ
ಇಂಗ್ಲೆಂಡ್ ಗೆದ್ದ ಬಹುಮಾನ

ಯುರೋ ಕಪ್ ಹೆಚ್ಚು ಬಾರಿ ಪ್ರಶಸ್ತಿ ಗೆದ್ದವರು

ತಂಡ	ಪ್ರಶಸ್ತಿ
ಸ್ಪೇನ್	4
ಜರ್ಮನಿ	3
ಇಟಲಿ	2
ಫ್ರಾನ್ಸ್	2

ಮುಲ್ಲರ್ ನಿವೃತ್ತಿ



ಮ್ಯೂನಿಚ್ (ಎಪಿ): ಜರ್ಮನಿಯ ಫಾರ್ವರ್ಡ್ ಆಟಗಾರ ಥಾಮಸ್ ಮುಲ್ಲರ್ 14 ವರ್ಷಗಳ ಅಂತರರಾಷ್ಟ್ರೀಯ ಫುಟ್‌ಬಾಲ್ ಜೀವನಕ್ಕೆ ವಿದಾಯ ಹೇಳಿದರು. 2014ರ ವಿಶ್ವಕಪ್‌ನಲ್ಲಿ ಗೆದ್ದ ಜರ್ಮನಿ ತಂಡದಲ್ಲಿ ಅವರು ಆಡಿದ್ದರು.

ಬಯರ್ನ್ ಮ್ಯೂನಿಕ್‌ನ ಆಟಗಾರರಾದ ಮುಲ್ಲರ್ 131 ಅಂತರರಾಷ್ಟ್ರೀಯ ಪಂದ್ಯಗಳನ್ನಾಡಿದ್ದು 45 ಗೋಲು ಗಳಿಸಿದ್ದಾರೆ.

'ದೇಶಕ್ಕೆ ಆಡುವುದು ನನ್ನಲ್ಲಿ ಹೆಮ್ಮೆ ಮೂಡಿಸುತ್ತದೆ. ನಾವು ಒಟ್ಟಾಗಿ ಸಂಭ್ರಮ ಆಚರಿಸಿದ್ದೇವೆ. ಕಣ್ಣೀರು ಹರಿಸಿದ್ದೂ ಇದೆ' ಎಂದು ಅವರು ಯುಟ್ಯೂಬ್‌ನಲ್ಲಿ ಪೋಸ್ಟ್ ಮಾಡಿದ ವಿಡಿಯೊದಲ್ಲಿ ತಿಳಿಸಿದ್ದಾರೆ. 34 ವರ್ಷದ ಮಿಲ್ಲರ್ ತಮ್ಮ ಕೊನೆಯ ಪಂದ್ಯ ಆಡಿದ್ದು ಈ ಬಾರಿಯ ಯುರೊ ಕ್ವಾರ್ಟರ್‌ಫೈನಲ್‌ನಲ್ಲಿ. ಜರ್ಮನಿ ಆ ಪಂದ್ಯದಲ್ಲಿ ಸ್ಪೇನ್‌ಗೆ ಮಣಿದಿತ್ತು.

ಮುಖ್ಯಮಂತ್ರಿ ಕಪ್ ಕ್ವಾರ್ಟರ್ ಇಂದು

ಬೆಂಗಳೂರು: ಮುಖ್ಯಮಂತ್ರಿ ಕಪ್ ಫುಟ್‌ಬಾಲ್ ಟೂರ್ನಿಯ ಕ್ವಾರ್ಟರ್ ಫೈನಲ್ ಪಂದ್ಯಗಳು ಮಂಗಳವಾರ ನಡೆಯಲಿವೆ.

ಶಾಂತಿನಗರ ವಿಧಾನಸಭಾ ಕ್ಷೇತ್ರ ತಂಡ ಮತ್ತು ಪುಲಕೇಶಿ ನಗರ ವಿಧಾನ ಸಭಾ ಕ್ಷೇತ್ರ; ರಾಜಾಜಿನಗರ ವಿಧಾನಸಭಾ ಕ್ಷೇತ್ರ ಮತ್ತು ಯಲಹಂಕ ವಿಧಾನಸಭಾ ಕ್ಷೇತ್ರ ತಂಡಗಳು ಸೆಣಸಲಿವೆ.


ಅರ್ಜೆಂಟೀನಾ ಸೋಮವಾರ ಕೊಪಾ ಅಮೆರಿಕ ಫೈನಲ್ ಗೆದ್ದ ನಂತರ ವಿಜಯೋತ್ಸವದ ವೇಳೆ ನಾಯಕ ಲಯೊನೆಲ್ ಮೆಸ್ಸಿ ಮತ್ತು ಸಹ ಆಟಗಾರರು ಟ್ರೋಫಿಯೊಂದಿಗೆ ಸಂಭ್ರಮಿಸಿದರು —ಎಎಫ್‌ಪಿ ಚಿತ್ರ

ದಾಖಲೆ 16ನೇ ಸಲ ಪ್ರಶಸ್ತಿ • ಕೊಲಂಬಿಯಾಕ್ಕೆ ನಿರಾಸೆ

ಅರ್ಜೆಂಟೀನಾಗೆ 'ಕೊಪಾ' ಕಿರೀಟ

ಮಯಾಮಿ (ಅಮೆರಿಕ), (ಎಎಫ್‌ಪಿ): ಹೆಚ್ಚುವರಿ ಅವಧಿಯ ಆಟದಲ್ಲಿ ಲೊತಾರೊ ಮಾರ್ಟಿನೆಜ್ ಹೊಡೆದ ಗೋಲಿನಿಂದ ಅರ್ಜೆಂಟೀನಾ ಸೋಮವಾರ 1–0 ಯಿಂದ ಕೊಲಂಬಿಯಾ ತಂಡವನ್ನು ಸೋಲಿಸಿ ಕೊಪಾ ಅಮೆರಿಕ ಟೂರ್ನಿಯಲ್ಲಿ ದಾಖಲೆ 16ನೇ ಬಾರಿ ಚಾಂಪಿಯನ್ ಕಿರೀಟ ಧರಿಸಿತು.

ಹಾರ್ಡ್‌ರಾಕ್ ಕ್ರೀಡಾಂಗಣದಲ್ಲಿ ಫೈನಲ್ ಪಂದ್ಯ 82 ನಿಮಿಷ ತಡವಾಗಿ ಆರಂಭವಾಯಿತು. ಟಿಕೆಟ್ ಪಡೆದವರು ಒಳಗೆ ಹೋಗುತ್ತಿದ್ದಂತೆ, ಕ್ರೀಡಾಂಗಣದ ಹೊರಗೆ ಜಮಾಯಿಸಿದ್ದ ಇತರ ಅಭಿಮಾನಿಗಳೂ ಒಮ್ಮೆಲೇ ಒಳಗೆ ನುಗ್ಗಿದರು. ಪರಿಸ್ಥಿತಿಯನ್ನು ತಹಬಂದಿಗೆ ತರಲು ಭದ್ರತಾ ಸಿಬ್ಬಂದಿ ಪರದಾಡಿದರು. ನೂಕುನುಗ್ಗಲಿನಲ್ಲಿ ಕೆಲವರು ಅಸ್ವಸ್ಥರಾದರು.

ಅರ್ಜೆಂಟೀನಾ ಗೆಲುವಿನ ಸಂಭ್ರಮಕ್ಕೆ ಮುನ್ನ ಆ ತಂಡಕ್ಕೆ ದುಗುಡದ ಕ್ಷಣವೂ ಎದುರಾಯಿತು. ನಾಯಕ ಲಯೊನೆಲ್ ಮೆಸ್ಸಿ, ಪಂದ್ಯದ 66ನೇ ನಿಮಿಷ ಕಾಲಿನ ಗಾಯದಿಂದ ಹೊರನಡೆದರು. ಪಂದ್ಯದ ಉಳಿದ ಭಾಗವನ್ನು ಬೆಂಚ್‌ನಿಂದ ವೀಕ್ಷಿಸಿದರು.

ಇತ್ತಂಡಗಳಿಗೆ ಪಂದ್ಯದಲ್ಲಿ ಉತ್ತಮ ಗೋಲು ಅವಕಾಶಗಳು ದೊರಕಿದ್ದು ಕಡಿಮೆ. ಸಬ್‌ಸ್ಟಿಟ್ಯೂಟ್ ಮಾರ್ಟಿನೆಜ್ ಹೆಚ್ಚುವರಿ ಅವಧಿಯ 23ನೇ ನಿಮಿಷ ಆಕರ್ಷಕ ಗೋಲು ಗಳಿಸಿದರು. ಟೂರ್ನಿಯಲ್ಲಿ ಅವರು ಐದು ಗೋಲುಗಳೊಂದಿಗೆ 'ಟಾಪ್ ಸ್ಕೋರರ್' ಎನಿಸಿದರು.

ಇದು ಅರ್ಜೆಂಟೀನಾ ಗೆಲ್ಲುತ್ತಿರುವ ಸತತ ಮೂರನೇ ಪ್ರಮುಖ ಪ್ರಶಸ್ತಿ ಆಗಿದೆ. 2021ರ ಕೊಪಾ ಅಮೆರಿಕ ಟೂರ್ನಿಯಲ್ಲಿ ವಿಜೇತರಾಗಿದ್ದ ಅರ್ಜೆಂಟೀನಾ, ಎರಡು ವರ್ಷಗಳ ಹಿಂದೆ ಕತಾರ್‌ನಲ್ಲಿ ನಡೆದ ವಿಶ್ವಕಪ್‌ನಲ್ಲಿ ಚಾಂಪಿಯನ್ ಆಗಿ ಮೆರೆದಿತ್ತು. ಅದರ ಕಿರೀಟಕ್ಕೆ ಈಗ ಇನ್ನೊಂದು ತುರಾಯಿ.

ಕೊನೆಯ ಪಂದ್ಯ ಆಡಿದ ಅರ್ಜೆಂಟೀನಾದ ತಾರೆ ಏಂಜೆಲ್ ಫ್ಯಾಬಿಯನ್ ಡಿ ಮರಿಯಾ ಅವರಿಗೆ ಭಾವನಾತ್ಮಕ ವಿದಾಯ ದೊರೆಯಿತು.

28 ಪಂದ್ಯಗಳಿಂದ ಅಜೇಯವಾಗಿದ್ದ ಕೊಲಂಬಿಯಾ ನಿರಾಸೆ ಕಂಡಿತು. ನೆಸ್ಟರ್ ಲೊರೆಂಜೊ ಗರಡಿಯ ತಂಡ ಅಂದುಕೊಂಡಂತೆ ಏನೂ ನಡೆಯಲಿಲ್ಲ. ನೆಸ್ಟರ್ ಅರ್ಜೆಂಟೀನಾ ಮೂಲದವರು.

ಪಂದ್ಯದ ಏಳನೇ ನಿಮಿಷ ಕೊಲಂಬಿಯಾದ ಜಾನ್ ಕಾರ್ಡೋಬಾ ಅವರ ಅಮೋಘ ಯತ್ನದಲ್ಲಿ ಚೆಂಡು ಗೋಲುಗಂಬದ ಕೆಳಗೆ ಬಡಿದು ಆಚೆಹೋಯಿತು. ಆದರೆ ಯಾವುದೇ ತಂಡ ಸ್ಪಷ್ಟ ಮೇಲುಗೈ ಸಾಧಿಸಲು ಆಗಲಿಲ್ಲ. ಅರ್ಜೆಂಟೀನಾಕ್ಕೂ ಉತ್ತಮ ಅವಕಾಶ ದೊರಕಿತ್ತು. ಡಿ ಮಾರಿಯಾ ಅವರು ಗೋಲಿನ ಎದುರು ನಿಂತಿದ್ದ ಮೆಸ್ಸಿ ಅವರಿಗೆ ಪಾಸ್ ನೀಡಿದರು. ಆದರೆ ಮೆಸ್ಸಿ ಎಡಗಾಲಿನಲ್ಲಿ ಒದ್ದ ಚೆಂಡನ್ನು ಗೋಲ್‌ಕೀಪರ್ ಕ್ಯಾಮಿಲೊ ವರ್ಗಾಸ್ ಸುರಕ್ಷಿತವಾಗಿ ತಡೆದರು. ಮೆಸ್ಸಿ ಮತ್ತೊಂದು ಯತ್ನದಲ್ಲಿ ಗೋಲಿನತ್ತ ಸಾಗುತ್ತಿದ್ದಾಗ ಸಾಂಟಿಯಾಗೊ ಅರಿಯಾಸ್ ಅವರನ್ನು ಜಾರಿ ತಡೆದರು. ಈ ಯತ್ನದಲ್ಲಿ ಎಡವಿ ಬಿದ್ದ ಮೆಸ್ಸಿ ಅವರಿಗೆ ಚಿಕಿತ್ಸೆ ಬೇಕಾಯಿತು.

ನೀರಸ ಮೊದಲಾರ್ಧದ ನಂತರ ವಿರಾಮದ ವೇಳೆ ಕೊಲಂಬಿಯಾದ ಗಾಯಕಿ ಶಕೀರಾ ಅವರ ಹಾಡುಗಳಿಂದ ಪ್ರೇಕ್ಷಕರಿಗೆ ಮನೋರಂಜನೆ ಒದಗಿತು.

ಕೊಪಾ ಅಮೆರಿಕ: ಹೆಚ್ಚು ಬಾರಿ ಪ್ರಶಸ್ತಿ ಗೆದ್ದವರು

ತಂಡ	ಪ್ರಶಸ್ತಿ
ಅರ್ಜೆಂಟೀನಾ	16
ಉರುಗ್ವೆ	15
ಬ್ರೆಜಿಲ್	9
ಚಿಲಿ	2
ಪೆರುಗ್ವೆ	2
ಪೆರು	2

ಬಹುಮಾನದ ಮೊತ್ತ

₹133.66 ಕೋಟಿ
ಅರ್ಜೆಂಟೀನಾ ಗೆದ್ದ ಬಹುಮಾನ

₹58.47 ಕೋಟಿ
ಕೊಲಂಬಿಯಾ ಗೆದ್ದ ಬಹುಮಾನ

ಪ್ಯಾರಿಸ್ ಒಲಿಂಪಿಕ್ಸ್: ಬ್ಯಾಡ್ಮಿಂಟನ್ ಪುರುಷರ ಡಬಲ್ಸ್ ಡ್ರಾ ಪ್ರಕಟ

ಸಾತ್ವಿಕ್–ಚಿರಾಗ್‌ಗೆ ಸುಲಭದ ಗುಂಪು


ನವದೆಹಲಿ (ಪಿಟಿಐ): ಭಾರತದ ತಾರಾ ಬ್ಯಾಡ್ಮಿಂಟನ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರಿಗೆ ಇದೇ ತಿಂಗಳ 26ರಂದು ಪ್ಯಾರಿಸ್‌ನಲ್ಲಿ ಆರಂಭವಾಗುವ ಒಲಿಂಪಿಕ್ ಕ್ರೀಡೆಗಳ ಗುಂಪು ಹಂತದಲ್ಲಿ ಅನುಕೂಲಕರ 'ಡ್ರಾ' ದೊರಕಿದೆ.

ಥಾಮಸ್ ಕಪ್ ಟೂರ್ನಿಯಲ್ಲಿ ಚಿನ್ನ ಗೆದ್ದಿರುವ ಸಾತ್ವಿಕ್-ಚಿರಾಗ್ ಜೋಡಿ ಮೂರನೇ ಶ್ರೇಯಾಂಕ ಗಳಿಸಿದ್ದು 'ಸಿ' ಗುಂಪಿನಲ್ಲಿದೆ.

ವಿಶ್ವ ಮಾಜಿ ಅಗ್ರಕ್ರಮಾಂಕದ ಆಟಗಾರರು, ಚಿನ್ನದ ಪದಕ ಗೆಲ್ಲುವ ನೆಚ್ಚಿನ ಜೋಡಿಯಾಗಿ ಗುರುತಿಸಿಕೊಂಡಿದೆ. ಇದೇ ಗುಂಪಿನಲ್ಲಿ ವಿಶ್ವ ಆರನೇ ಕ್ರಮಾಂಕದ ಜೋಡಿ ಇಂಡೋನೇಷ್ಯಾದ ಫಜರ್ ಅಲ್ಫಿಯಾನ್ -ಮುಹಮ್ಮದ್ ರಿಯಾನ್ ಅರ್ಡಿಯಾಂಟೊ ಕೂಡಾ ಇದ್ದಾರೆ. ಸಾತ್ವಿಕ್ ಮತ್ತು ಚಿರಾಗ್ ಅವರಿಗೆ ಇಂಡೋನೇಷ್ಯಾದ ಈ ಜೋಡಿ ಕಠಿಣ ಸ್ಪರ್ಧೆ ನೀಡಬಹುದು.

ಇದೇ ಗುಂಪಿನಲ್ಲಿರುವ ವಿಶ್ವ 31ನೇ ಕ್ರಮಾಂಕದ ಮಾರ್ಕ್ ಲ್ಯಾಮ್ಸ್‌ಫಸ್ ಮತ್ತು ಮಾರ್ವಿನ್ ಸೀಡೆಲ್ (ಜರ್ಮನಿ) ಹಾಗೂ 43ನೇ ಕ್ರಮಾಂಕದ ಜೋಡಿ ಲ್ಯೂಕಾಸ್ ಕಾರ್ವಿ ಮತ್ತು ರೊನಾನ್ ಲ್ಯಾಬರ್ (ಫ್ರಾನ್ಸ್) ಅವರನ್ನು ಸಾತ್ವಿಕ್-ಚಿರಾಗ್ ಎದುರಿಸಬೇಕಾಗುತ್ತದೆ. ಡ್ರಾನಲ್ಲಿ ಜೋಡಿಗಳ ಸಂಖ್ಯೆಗೆ ಸಂಬಂಧಿಸಿ ಕ್ರೀಡಾ ನ್ಯಾಯಾಲಯ ವಿಚಾರಣೆ ನಡೆಸುತ್ತಿದ್ದ ಕಾರಣ ಪುರುಷರ ಡಬಲ್ಸ್ ಡ್ರಾ ಪ್ರಕ್ರಿಯೆಯನ್ನು ಶುಕ್ರವಾರ ಮುಂದೂಡಲಾಗಿತ್ತು.

ಕಾರ್ವಿ-ಲ್ಯಾಬರ್ ಜೋಡಿಯನ್ನು ಒಲಿಂಪಿಕ್ಸ್‌ಗೆ ಸೇರಿಸಿಕೊಳ್ಳಲು ಅಂತರರಾಷ್ಟ್ರೀಯ ಒಲಿಂಪಿಕ್ಸ್ ಸಂಸ್ಥೆಗೆ ಶಿಫಾರಸು ಮಾಡಬೇಕು ಎಂದು ಕ್ರೀಡಾ ನ್ಯಾಯಮಂಡಳಿ (ಸಿಎಎಸ್) ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್‌ಗೆ ಆದೇಶ ನೀಡಿತ್ತು. ಹೀಗಾಗಿ ಪುರುಷರ ಡಬಲ್ಸ್ ಡ್ರಾ ಪ್ರಕ್ರಿಯೆಯನ್ನು ಮುಂದೂಡಲಾಗಿತ್ತು. ಒಲಿಂಪಿಕ್ಸ್‌ಗೆ ಅರ್ಹತೆ ಪಡೆದ 16 ಜೋಡಿಗಳ ಬದಲಿಗೆ ಪರಿಷ್ಕೃತ 17 ಜೋಡಿ ಪುರುಷರ ಡಬಲ್ಸ್ ಡ್ರಾನಲ್ಲಿ ಫ್ರೆಂಚ್ ಜೋಡಿಯು ಸೇರ್ಪಡೆ ಸೇರ್ಪಡೆಗೊಂಡಿದೆ.


ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ

ಒಲಿಂಪಿಕ್ಸ್‌ಗೆ ಸೇನೆಯ 13 ಅಥ್ಲೀಟ್‌ಗಳು

ನವದೆಹಲಿ: ಭಾರತೀಯ ಸೇನೆಯ 13 ಅಥ್ಲೀಟ್‌ಗಳು ಪ್ಯಾರಿಸ್ ಒಲಿಂಪಿಕ್ಸ್‌ನ ಏಳು ವಿಭಾಗಗಳಲ್ಲಿ ಸ್ಪರ್ಧಿಸಲಿದ್ದಾರೆ ಎಂದು ಸೇನೆಯ ಹೆಚ್ಚುವರಿ ಸಾರ್ವಜನಿಕ ಮಾಹಿತಿ ಮಹಾನಿರ್ದೇಶನಾಲಯ ಸೋಮವಾರ 'ಎಕ್ಸ್'ನಲ್ಲಿ ತಿಳಿಸಿದೆ.

ಸೇನೆಯ ಅಥ್ಲೀಟ್‌ಗಳೊಂದಿಗೆ ಜನರಲ್ ಉಪೇಂದ್ರ ದ್ವಿವೇದಿ ಅವರು ವಿಡಿಯೊ ಸಂವಾದ ನಡೆಸಿ, ಶುಭಹಾರೈಸಿದರು. ಕ್ರೀಡಾಪಟುಗಳ ಸಮರ್ಪಣೆ ಮತ್ತು ಕಠಿಣ ಪರಿಶ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಭಾರತದ ಸ್ಪರ್ಧಿಗಳಿಗೆ ಶುಭಹಾರೈಸಿದ ವಿರಾಟ್ ಕೊಹ್ಲಿ




ನವದೆಹಲಿ (ಪಿಟಿಐ): ಇದೇ 26 ರಿಂದ ಪ್ಯಾರಿಸ್‌ನಲ್ಲಿ ನಡೆಯುವ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುತ್ತಿರುವ ಭಾರತದ ಕ್ರೀಡಾಪಟುಗಳಿಗೆ ದೃಢ ಸಂಕಲ್ಪದೊಡನೆ ಸ್ಪರ್ಧೆಗಳಿಗೆ ಸಜ್ಜಾಗಿದ್ದು, ಅವರಿಗೆ ಬೆಂಬಲವಾಗಿ ನಿಲ್ಲುವಂತೆ ಕ್ರಿಕೆಟ್ ತಂಡದ ತಾರೆ ವಿರಾಟ್ ಕೊಹ್ಲಿ ಕ್ರೀಡಾಭಿಮಾನಿಗಳಿಗೆ ಮನವಿ ಮಾಡಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಸುಮಾರು ಒಂದು ನಿಮಿಷದ ವಿಡಿಯೊದಲ್ಲಿ ಅವರು ಭಾರತ ಜಾಗತಿಕ ಕ್ರೀಡಾಶಕ್ತಿಯಾಗಿ ಗುರುತಿಸಿಕೊಳ್ಳಲು ಇದು ಸೂಕ್ತ ಸಮಯ ಎಂದಿದ್ದಾರೆ. ಈ ವಿಡಿಯೊದಲ್ಲಿ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುತ್ತಿರುವ ಜಾವೆಲಿನ್ ತಾರೆ ನೀರಜ್ ಚೋಪ್ರಾ ಮತ್ತು ಬಾಕ್ಸಿಂಗ್ ಪಟು ನಿಶಾಂತ್ ದೇವ್ ಇದ್ದಾರೆ.

'ಒಂದು ಕಾಲದಲ್ಲಿ ವಿಶ್ವ, ಭಾರತವನ್ನು ಹಾವಾಡಿಗರು ಮತ್ತು ಆನೆಗಳನ್ನು ಪಳಗಿಸುವವರ ದೇಶ ಎಂದು ಪರಿಗಣಿಸಿತ್ತು. ಆದರೆ ಈಗ ಕಾಲ ಬದಲಾಗಿದೆ. ಈಗ ನಾವು ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶವಾಗಿದ್ದು, ತಂತ್ರಜ್ಞಾನದಲ್ಲೂ ಜಾಗತಿಕ ಶಕ್ತಿಯಾಗಿ ಬೆಳೆದಿದ್ದೇವೆ' ಎಂದಿದ್ದಾರೆ.

'ನಾವು ಕ್ರಿಕೆಟ್, ಬಾಲಿವುಡ್‌ನಿಂದ ಹೆಸರಾಗಿದ್ದೇವೆ. ನವೋದ್ಯಮಗಳೂ ಹೇರಳವಾಗಿವೆ. ಅತಿ ವೇಗದ ಆರ್ಥಿಕ ಶಕ್ತಿಯಾಗಿ ಬೆಳವಣಿಗೆ ಕಾಣುತ್ತಿದ್ದೇವೆ. ಈ ಮಹಾನ್ ದೇಶ ಮುಂದೇನು ಸಾಧಿಸಬೇಕು? ಇನ್ನಷ್ಟು ಚಿನ್ನ, ಬೆಳ್ಳಿ ಮತ್ತು ಕಂಚು' ಎಂದಿದ್ದಾರೆ. ಈ ಹಿಂದಿನ ಟೋಕಿಯೊ ಕ್ರೀಡೆಗಳಲ್ಲಿ ಗಳಿಸಿದ್ದ ಏಳು ಪದಕಗಳನ್ನು ಮೀರಿ ನಿಲ್ಲುವ ಗುರಿಹೊಂದಿರುವ ಭಾರತದ 118 ಕ್ರೀಡಾಪಟುಗಳನ್ನು ಬೆಂಬಲಿಸಿ ಎಂದು ಕ್ರೀಡಾಪ್ರೇಮಿಗಳನ್ನು ಉದ್ದೇಶಿಸಿ ಕೊಹ್ಲಿ ಮನವಿ ಮಾಡಿದ್ದಾರೆ.



ಚೋಪ್ರಾಗೆ ಯಶಸ್ಸು: ಅಥ್ಲೆಟಿಕ್ಸ್ ವಿಭಾಗಕ್ಕೆ ಹೆಚ್ಚಿದ ನೆರವು

ನವದೆಹಲಿ: ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಜಾವೆಲಿನ್ ಥ್ರೋಪಟು ನೀರಜ್ ಚೋಪ್ರಾ ಚಿನ್ನ ಗೆದ್ದ ಬಳಿಕ ಕೇಂದ್ರ ಸರ್ಕಾರವು ಟ್ರ್ಯಾಕ್ ಮತ್ತು ಫೀಲ್ಡ್ ವಿಭಾಗಗಳಿಗೆ ವಿಶೇಷ ಉತ್ತೇಜನ ನೀಡಿದೆ.

ಭಾರತೀಯ ಕ್ರೀಡಾ ಪ್ರಾಧಿಕಾರದ ಮಿಷನ್ ಒಲಿಂಪಿಕ್ ಸೆಲ್‌ನ ಅಧಿಕೃತ ಮಾಹಿತಿಯ ಪ್ರಕಾರ ಸರ್ಕಾರವು ಪ್ಯಾರಿಸ್ ಒಲಿಂಪಿಕ್ಸ್‌ನ ಸಿದ್ಧತೆಗಾಗಿ ಟ್ರ್ಯಾಕ್ ಮತ್ತು ಫೀಲ್ಡ್ ವಿಭಾಗಕ್ಕೆ ₹96.08 ಕೋಟಿ ಖರ್ಚು ಮಾಡಿದೆ ಎಂಬ ಮಾಹಿತಿ ಪಿಟಿಐಗೆ ಲಭ್ಯವಾಗಿದೆ. ಹಿಂದಿನ ಒಲಿಂಪಿಕ್ಸ್ ಸಂದರ್ಭದಲ್ಲಿ ಅಥ್ಲೆಟಿಕ್ಸ್ ಕ್ಷೇತ್ರಕ್ಕೆ ಕೇವಲ ₹5.38 ಕೋಟಿ ಬಳಸಲಾಗಿತ್ತು.

ಒಲಿಂಪಿಕ್ಸ್ ದೃಷ್ಟಿಯಿಂದ 16 ವಿಭಾಗಗಳಿಗೆ ಸುಮಾರು ₹470 ಕೋಟಿ ವ್ಯಯಿಸಲಾಗಿದೆ. ಅದರಲ್ಲಿ ಅಥ್ಲೆಟಿಕ್ಸ್‌ಗೆ ಅತಿ ಹೆಚ್ಚು ಬಳಕೆಯಾದರೆ, ಬ್ಯಾಡ್ಮಿಂಟನ್ ಕ್ಷೇತ್ರಕ್ಕೆ ₹72.02 ಕೋಟಿ, ಬಾಕ್ಸಿಂಗ್‌ಗೆ ₹60.93 ಕೋಟಿ, ಶೂಟಿಂಗ್‌ಗೆ ₹60.42 ಕೋಟಿ ವ್ಯಯಿಸಲಾಗಿದೆ.

ಜುಲೈ 26ರಿಂದ ಪ್ರಾರಂಭವಾಗುವ ಪ್ಯಾರಿಸ್ ಕೂಟದಲ್ಲಿ ಚೋಪ್ರಾ ನೇತೃತ್ವದ ಅಥ್ಲೆಟಿಕ್ಸ್ ತಂಡದಲ್ಲಿ 28 ಮಂದಿ ಇದ್ದಾರೆ. ಒಟ್ಟಾರೆ 118 ಕ್ರೀಡಾಪಟುಗಳು ಭಾರತವನ್ನು ಪ್ರತಿನಿಧಿಸುವರು.

ಚಾಂಪಿಯನ್ಸ್ ಟ್ರೋಫಿ: ಬಿಸಿಸಿಐಗೆ ಪಿಸಿಬಿ ಒತ್ತಾಯ

'ಪಾಕಿಸ್ತಾನಕ್ಕೆ ಬರಲು ಸರ್ಕಾರದ ಅನುಮತಿ ಇಲ್ಲವೆಂದು ಬರೆದುಕೊಡಿ'

ಕರಾಚಿ (ಪಿಟಿಐ): ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಪಾಲ್ಗೊಳ್ಳಲು ಭಾರತ ತಂಡಕ್ಕೆ ಸರ್ಕಾರವು ಭದ್ರತೆಯ ಕಾರಣ ನೀಡಿ ಅನುಮತಿ ನಿರಾಕರಿಸಿದ್ದರೆ ಅದಕ್ಕೆ ಲಿಖಿತ ಪುರಾವೆ ನೀಡಿ ಎಂದು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಗೆ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಹೇಳಿದೆ ಎಂದು ಮೂಲಗಳು ತಿಳಿಸಿವೆ.

ಟೂರ್ನಿಯು ಮುಂದಿನ ಫೆಬ್ರುವರಿ-ಮಾರ್ಚ್‌ನಲ್ಲಿ ನಿಗದಿಯಾಗಿರುವುದರಿಂದ ವಿಷಯವನ್ನು ಆದಷ್ಟು ಬೇಗ ಇತ್ಯರ್ಥಪಡಿಸಲು ಪಿಸಿಬಿ ಮುಂದಾಗಿದೆ.

ಜುಲೈ 19ರಂದು ಕೊಲಂಬೊದಲ್ಲಿ ಐಸಿಸಿ ವಾರ್ಷಿಕ ಸಭೆ ನಡೆಯಲಿದೆ. ಭಾರತವು ಯುಎಇಯಲ್ಲಿ ಆಡುವ 'ಹೈಬ್ರಿಡ್ ಮಾದರಿ' ಕುರಿತ ಚರ್ಚೆ ಕಾರ್ಯಸೂಚಿಯಲ್ಲಿ ಇಲ್ಲ. ಒಂದು ವೇಳೆ ಟೂರ್ನಿಯಲ್ಲಿ ಎರಡು ರಾಷ್ಟ್ರಗಳಲ್ಲಿ ನಡೆದರೆ ತಗಲಬಹುದಾದ ಹೆಚ್ಚುವರಿ ನಿಧಿಯನ್ನು ತೆಗೆದಿರಿಸಿದೆ.

'ಭಾರತ ಸರ್ಕಾರವು ಅನುಮತಿ ನಿರಾಕರಿಸಿದರೆ ಅದು ಲಿಖಿತವಾಗಿರಬೇಕು. ಆ ಪತ್ರವನ್ನು ಬಿಸಿಸಿಐ, ಐಸಿಸಿಗೆ ನೀಡುವುದು ಕಡ್ಡಾಯ' ಎಂದು ಪಿಸಿಬಿ ಮೂಲಗಳು ಪಿಟಿಐಗೆ ತಿಳಿಸಿವೆ.

'ಪಾಕಿಸ್ತಾನಕ್ಕೆ ಪ್ರಯಾಣ ಯೋಜನೆಯ ಬಗ್ಗೆ ಬಿಸಿಸಿಐ ಕನಿಷ್ಠ ಪಕ್ಷ 5-6 ತಿಂಗಳ ಮೊದಲು ಲಿಖಿತವಾಗಿ ಐಸಿಸಿಗೆ ತಿಳಿಸಬೇಕು ಎಂದು ನಾವು ಒತ್ತಾಯಿಸುತ್ತೇವೆ' ಎಂದು ಪಿಸಿಬಿ ಉನ್ನತ ಮೂಲಗಳು ತಿಳಿಸಿವೆ.

ಪಿಸಿಬಿ ಆತಿಥ್ಯ ವಹಿಸಿದ 2023ರ ಏಕದಿನ ಏಷ್ಯಾ ಕಪ್ ಕೂಡ 'ಹೈಬ್ರಿಡ್ ಮಾದರಿ'ಯಲ್ಲಿ ನಡೆದಿತ್ತು. ಭಾರತ ತನ್ನ ಎಲ್ಲಾ ಪಂದ್ಯಗಳನ್ನು ಶ್ರೀಲಂಕಾದಲ್ಲಿ ಆಡಿತ್ತು.

ಪಿಸಿಬಿ ಈಗಾಗಲೇ ವೇಳಾಪಟ್ಟಿಯನ್ನು ಐಸಿಸಿಗೆ ಸಲ್ಲಿಸಿದೆ. ಸೆಮಿಫೈನಲ್ ಮತ್ತು ಫೈನಲ್ ಸೇರಿದಂತೆ ಭಾರತದ ಎಲ್ಲಾ ಪಂದ್ಯಗಳನ್ನು ಲಾಹೋರ್‌ನಲ್ಲಿ ನಿಗದಿಪಡಿಸಲಾಗಿದೆ. ಮಾರ್ಚ್ 1ರಂದು ಭಾರತ ಮತ್ತು ಪಾಕಿಸ್ತಾನ ಪಂದ್ಯ ನಿಗದಿಯಾಗಿದೆ.

ಟೂರ್ನಿಯು ಫೆಬ್ರುವರಿ 19ರಂದು ಪ್ರಾರಂಭವಾಗಿ ಮಾರ್ಚ್ 9ರ ವರೆಗೆ ನಡೆಯಲಿದೆ.

ಕ್ಯುರೇಟರ್ ಆಗಿ ಹೆಮ್ಮಿಂಗ್

ಲಾಹೋರ್ (ಪಿಟಿಐ): ಆಸ್ಟ್ರೇಲಿಯಾದ ಟೋನಿ ಹೆಮ್ಮಿಂಗ್ ಅವರನ್ನು ಪಾಕಿಸ್ತಾನ ಕ್ರಿಕೆಟ್ ಮಂಡಳಿಯು ಎರಡು ವರ್ಷಗಳ ಅವಧಿಗೆ ಮುಖ್ಯ ಕ್ಯುರೇಟರ್ ಆಗಿ ನೇಮಿಸಿದೆ. ಐಸಿಸಿ ಜೊತೆ ಈ ಹಿಂದೆ ಕೆಲಸ ಮಾಡಿರುವ ಹೆಮ್ಮಿಂಗ್, ಪಿಚ್ ಮತ್ತು ಔಟ್‌ಫೀಲ್ಡ್ ನಿರ್ವಹಣೆಯಲ್ಲಿ ನಾಲ್ಕು ದಶಕಗಳ ಅನುಭವ ಹೊಂದಿದ್ದಾರೆ.

'ಪಾಕಿಸ್ತಾನದಲ್ಲಿ ನಡೆಯಲಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಗೆ ಪಿಚ್‌ಗಳ ಸಿದ್ಧತೆಗಳನ್ನೂ ಹೆಮ್ಮಿಂಗ್ ನೋಡಿಕೊಳ್ಳುತ್ತಾರೆ' ಎಂದು ಪಿಸಿಬಿ ಹೇಳಿಕೆಯಲ್ಲಿ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಅನಾಹತ್, ಶೌರ್ಯ ಕ್ವಾರ್ಟರ್‌ಗೆ

ನವದೆಹಲಿ (ಪಿಟಿಐ): ಭಾರತದ ಅನಾಹತ್ ಸಿಂಗ್ ಮತ್ತು ಶೌರ್ಯ ಬಾವಾ ಅವರು ಹೂಸ್ಟನ್‌ನಲ್ಲಿ ನಡೆಯುತ್ತಿರುವ ವಿಶ್ವ ಜೂನಿಯರ್ ಸ್ಕ್ವಾಷ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಬಾಲಕಿಯರ ಮತ್ತು ಬಾಲಕರ ಸಿಂಗಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ರಾಷ್ಟ್ರೀಯ ಚಾಂಪಿಯನ್, 16 ವರ್ಷದ ಅನಾಹತ್ ಅವರು ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ 11-6, 13-11, 11-2 ರಿಂದ ಜಪಾನ್‌ನ ಅಕಾರಿ ಮಿಡೋರಿಕಾವಾ ಅವರನ್ನು ಮಣಿಸಿ ದರು. ಶೌರ್ಯ ಅವರು 11-9, 5-11, 11-5, 13-11ರಿಂದ ಅರ್ಜೆಂಟೀನಾದ ಸೆಗುಂಡೊ ಪೋರ್ಟಾಬ್ಲೆಸ್ ಅವರನ್ನು ಹಿಮ್ಮೆಟ್ಟಿಸಿದರು. ಅವರು ಕ್ವಾರ್ಟರ್ ಫೈನಲ್‌ನಲ್ಲಿ ಮಲೇಷ್ಯಾದ ಲೋ ವಾ-ಸರ್ನ್ ಅವರನ್ನು ಎದುರಿಸಲಿದ್ದಾರೆ.

ಬ್ಯಾಸ್ಕೆಟ್‌ಬಾಲ್: ಒರಿಯನ್ಸ್‌ಗೆ ಜಯ

ಬೆಂಗಳೂರು: ಯಂಗ್ ಒರಿಯನ್ಸ್ ಸ್ಪೋರ್ಟ್ಸ್ ಕ್ಲಬ್ ತಂಡವು ರಾಜ್ಯ ಮಹಿಳಾ ಬ್ಯಾಸ್ಕೆಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್ ಲೀಗ್ ಪಂದ್ಯದಲ್ಲಿ 60–51ರಿಂದ ಡಿವೈಇಎಸ್ ಮಂಡ್ಯ ತಂಡದ ವಿರುದ್ಧ ಜಯ ಗಳಿಸಿತು.

ಸೌಥರ್ನ್ ಬ್ಲ್ಯೂ ತಂಡವು 75–58ರಿಂದ ಬೆಂಗಳೂರು ವ್ಯಾನ್‌ಗಾರ್ಡ್ಸ್ ತಂಡವನ್ನು ಸೋಲಿಸಿತು. ಮೌಂಟ್ಸ್ ಕ್ಲಬ್ ತಂಡವು 67–48ರಿಂದ ಧಾರವಾಡದ ರೋವರ್ಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವನ್ನು ಸೋಲಿಸಿತು. ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆ ಮೈಸೂರು ತಂಡವು 74–18ರ ಬೃಹತ್ ಅಂತರದಲ್ಲಿ ಡಿಆರ್‌ಡಿಒ ಕಾಲೋನಿ ತಂಡವನ್ನು ಮಣಿಸಿತು. ಬೀಗಲ್ಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವು 57–26ರಿಂದ ಅಪ್ಪಯ್ಯ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವನ್ನು ಸೋಲಿಸಿತು. ವಿಮಾನಪುರ ಸ್ಪೋರ್ಟ್ಸ್ ಕ್ಲಬ್ ತಂಡವು 43–40ರಿಂದ ದೇವಾಂಗ್ ಯೂನಿಯನ್ ತಂಡದ ವಿರುದ್ಧ ಜಯ ಗಳಿಸಿತು. ರಾಜ್‌ಮಹಲ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವು 59–28ರಿಂದ ಕೋರಮಂಗಳ ಬ್ಯಾಸ್ಕೆಟ್‌ಬಾಲ್ ಕ್ಲಬ್ ವಿರುದ್ಧ ಜಯಗಳಿಸಿತು. ಜೆಎಸ್‌ಸಿ 49–26ರಿಂದ ಮಲ್ಲಸಜ್ಜನ ಬ್ಯಾಸ್ಕೆಟ್‌ಬಾಲ್ ತಂಡದ ವಿರುದ್ಧ ಜಯಗಳಿಸಿತು.

ಗೌತಮ್‌ಗೆ ಡಬಲ್ ಪ್ರಶಸ್ತಿ

ಬೆಂಗಳೂರು: ಅಗ್ರ ಶ್ರೇಯಾಂಕದ ಗೌತಮ್ ಎಸ್. ನಾಯರ್ ಅವರು 'ಯೋನೆಕ್ಸ್ ಸನ್‌ರೈಸ್ ಕರ್ನಾಟಕ ರಾಜ್ಯ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ 13 ವರ್ಷದೊಳಗಿನವರ ಬಾಲಕರ ಸಿಂಗಲ್ಸ್ ಮತ್ತು ಡಬಲ್ಸ್‌ನಲ್ಲಿ ಪ್ರಶಸ್ತಿ ಗೆದ್ದರು.

ಸಿಂಗಲ್ಸ್ ಫೈನಲ್‌ನಲ್ಲಿ 21-19, 21-12 ರಿಂದ ಸಿದ್ಧಾರ್ಥ್ ಎಸ್. ನಾಯರ್ ಅವರನ್ನು ಮಣಿಸಿದರು. ಡಬಲ್ಸ್‌ನಲ್ಲಿ ಸಿದ್ಧಾರ್ಥ್ ಜೊತೆಗೂಡಿ 21-11, 21-13 ರಿಂದ ವಿಶಾಲ್ ಉತ್ತಪ್ಪ ಮತ್ತು ವಿಶಾಲ್ ಡಿ. ಆನಂದ್ ಅವರನ್ನು ಮಣಿಸಿದರು.

13 ವರ್ಷದೊಳಗಿನವರ ಬಾಲಕಿಯರ ಸಿಂಗಲ್ಸ್‌ನಲ್ಲಿ ಅಗ್ರ ಶ್ರೇಯಾಂಕದ ಸ್ಮೃತಿ ಎಸ್. 21-13, 11-21, 21-16ರಿಂದ ಮಹಿತಾ ನಾಯ್ಡು ಅವರನ್ನು ಸೋಲಿಸಿ ಪ್ರಶಸ್ತಿ ಗೆದ್ದರು. ನಂತರ ಅವರು ಸಿರಿ ಟಿ.ಆರ್. ಅವರ ಜೊತೆಗೂಡಿ ಡಬಲ್ಸ್‌ನಲ್ಲಿ ರನ್ನರ್ ಅಪ್ ಆದರು. ಅದಿತಿ ಸುಶಾಂತ್ ಮತ್ತು ಹನ್ಸಿಕಾ ರಾಕೇಶ್ ಜೋಡಿ 24-22, 21-19ರಿಂದ ಗೆದ್ದಿತು.

11 ವರ್ಷದೊಳಗಿನವರ ಬಾಲಕರ ಸಿಂಗಲ್ಸ್ ಫೈನಲ್‌ನಲ್ಲಿ ಅರ್ಜುನ್ ಅರಳಗುಂಡಗಿ 21-10, 21-17ರಿಂದ ಜ್ಞಾನ್ ರಿಷಿಕ್ ಬೋಳಿಗಾರ್ಲ ಅವರನ್ನು ಮಣಿಸಿದರು. ಬಾಲಕಿಯರ ಸಿಂಗಲ್ಸ್‌ನಲ್ಲಿ ಶಾಂಭವಿ ಶರ್ಮಾ 21-14, 16-21, 23-21ರಿಂದ ಸ್ತುತಿ ಎಸ್. ಶೆಟ್ಟಿ ಅವರನ್ನು ಸೋಲಿಸಿದರು.

ಅಂಗವಿಕಲರನ್ನು ವಿಡಿಯೊದಲ್ಲಿ ಅಣಕಿಸಿದ ಆರೋಪ

ಯುವಿ, ಭಜ್ಜಿ ಸೇರಿ ನಾಲ್ವರ ವಿರುದ್ಧ ದೂರು

ನವದೆಹಲಿ (ಪಿಟಿಐ): ಇನ್‌ಸ್ಟಾಗ್ರಾಂನಲ್ಲಿ ಅಪ್‌ಲೋಡ್ ಮಾಡಿದ ವಿಡಿಯೊ ಒಂದರಲ್ಲಿ ಅಂಗವಿಕಲರನ್ನು ಅಣಕಿಸಿದ ಆರೋಪದ ಮೇಲೆ ಮಾಜಿ ಕ್ರಿಕೆಟಿಗರಾದ ಹರಭಜನ್ ಸಿಂಗ್, ಸುರೇಶ್ ರೈನಾ, ಯುವರಾಜ್ ಸಿಂಗ್ ಮತ್ತು ಗುರುಕೀರತ್ ಮಾನ್ ಅವರ ವಿರುದ್ಧ ಇಲ್ಲಿನ ಪೊಲೀಸ್ ಠಾಣೆಯೊಂದರಲ್ಲಿ ದೂರು ದಾಖಲಾಗಿದೆ.

ವಿಡಿಯೊ ಹರಿದಾಡುತ್ತಿದ್ದಂತೆ ಆಕ್ರೋಶ ಕೇಳಿಬಂದಿದೆ. ಇದರ ಬೆನ್ನಲ್ಲೇ ಹರಭಜನ್ ಅವರು 'ಎಕ್ಸ್'ನಲ್ಲಿ ಸ್ಪಷ್ಟೀಕರಣ ನೀಡಿದ್ದು, ಯಾರನ್ನೂ ಅವಮಾನಿಸುವ ಉದ್ದೇಶ ತಮ್ಮದಾಗಿರಲಿಲ್ಲ ಎಂದು ಪೋಸ್ಟ್ ಹಾಕಿದ್ದಾರೆ.

ಅಂಗವಿಕಲರ ರಾಷ್ಟ್ರೀಯ ಉದ್ಯೋಗಾವಕಾಶ ಉತ್ತೇಜನ ಕೇಂದ್ರದ (ಎನ್‌ಸಿಪಿಇಡಿಪಿ) ಕಾರ್ಯನಿರ್ವಾಹಕ ನಿರ್ದೇಶಕ ಅರ್ಮಾನ್ ಅಲಿ ಅವರು ಇಲ್ಲಿನ ಅಮರ್ ಕಾಲೊನಿ ಠಾಣೆಗೆ ದೂರು ಸಲ್ಲಿಸಿದ್ದಾರೆ. ಕ್ರಿಕೆಟಿಗರ ಜೊತೆ ಮೆಟಾ ಇಂಡಿಯಾದ ಉಪಾಧ್ಯಕ್ಷೆ ಹಾಗೂ ಆಡಳಿತ ನಿರ್ದೇಶಕಿ ಸಂಧ್ಯಾ ದೇವನಾಥನ್ ವಿರುದ್ಧವೂ ದೂರು ನೀಡಲಾಗಿದೆ.

ಮೆಟಾ ಒಡೆತನದಲ್ಲಿರುವ ಇನ್‌ಸ್ಟಾಗ್ರಾಮ್, ಇಂಥ ವಿಷಯದ ವಿಡಿಯೊಕ್ಕೆ ಅವಕಾಶ ಕಲ್ಪಿಸುವ ಮೂಲಕ ಮಾಹಿತಿ ತಂತ್ರಜ್ಞಾನ ಕಾಯ್ದೆ (2000) ಉಲ್ಲಂಘಿಸಿದೆ ಎಂದೂ ದೂರಿನಲ್ಲಿ ಆರೋಪಿಸಲಾಗಿದೆ.

ದೂರು ದಾಖಲಾಗಿರುವುದನ್ನು ಖಚಿತಪಡಿಸಿರುವ ಪೊಲೀಸ್ ಅಧಿಕಾರಿಯೊಬ್ಬರು, ಮತ್ತಷ್ಟು ತನಿಖೆಗೆ ಜಿಲ್ಲೆಯ ಸೈಬರ್ ಸೆಲ್ ಜೊತೆ ಹಂಚಿಕೊಂಡಿರುವುದಾಗಿ ತಿಳಿಸಿದ್ದಾರೆ.

ಲೆಜೆಂಡ್ಸ್ ವಿಶ್ವ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಭಾರತ ಚಾಂಪಿಯನ್ಸ್ ತಂಡ ಭಾನುವಾರ ಐದು ವಿಕೆಟ್‌ಗಳಿಂದ ಪಾಕಿಸ್ತಾನ ಚಾಂಪಿಯನ್ಸ್ ಮೇಲೆ ಗೆದ್ದ ನಂತರ ಈ ಆಟಗಾರರು ವಿಡಿಯೊ ಶೇರ್ ಮಾಡಿದ್ದರು. ವಿಡಿಯೊದಲ್ಲಿ ಯುವರಾಜ್, ಹರಭಜನ್ ಮತ್ತು ರೈನಾ ಕುಂಟುತ್ತಿದ್ದು, ಬಾಗಿ ನಡೆಯುತ್ತಿರುವ ದೃಶ್ಯವಿದೆ. ಸತತ ಪಂದ್ಯಗಳನ್ನು ಆಡಿ ಉಂಟಾಗಿರುವ ದೈಹಿಕ ಸುಸ್ತನ್ನು ಸೂಚ್ಯವಾಗಿ ಹೊರಹಾಕಿದ್ದಾರೆ.

15 ದಿನಗಳ ಲೆಜೆಂಡ್ ಕ್ರಿಕೆಟ್ ಆಡಿ ದೇಹ ಬಳಲಿ ಬೆಂಡಾಗಿದೆ. ತೋಬಾ.. ತೋಬಾ ಎನ್ನುವ ಅರ್ಥದ ಶೀರ್ಷಿಕೆಯನ್ನು ನೀಡಲಾಗಿದೆ.

ವಿಡಿಯೊ ಕೀಳು ಅಭಿರುಚಿಯಿಂದ ಕೂಡಿದೆ ಎಂದು ಅಂಗವಿಕಲರ ಹಕ್ಕುಗಳಿಗೆ ಹೋರಾಡುತ್ತಿರುವವರು ದೂರಿದ್ದಾರೆ. ಸಂವಿಧಾನದ 21ನೇ ವಿಧಿಯ ಸ್ಪಷ್ಟ ಉಲ್ಲಂಘನೆ ಇದು ಎಂದಿದ್ದಾರೆ. ಈ ವಿಧಿಯು ಎಲ್ಲರಿಗೂ ಘನತೆಯಿಂದ ಬದುಕುವ ಹಕ್ಕನ್ನು ನೀಡುತ್ತದೆ.

'ಕ್ರಿಕೆಟಿಗರು ಬರೇ ಕ್ಷಮೆ ಕೇಳಿದರೆ ಸಾಲದು. ಅವರ ಈ ಕೃತ್ಯಕ್ಕಾಗಿ ಶಿಕ್ಷೆ ಅನುಭವಿಸಬೇಕು' ಎಂದು ಅಲಿ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ನಾವು ಯಾರದೇ ಭಾವನೆಯನ್ನು ನೋಯಿಸಲು ಬಯಸಿಲ್ಲ. ನಾವು ಪ್ರತಿಯೊಬ್ಬರನ್ನೂ ಮತ್ತು ಪ್ರತಿ ಸಮುದಾಯವನ್ನು ಗೌರವಿಸುತ್ತೇವೆ. 15 ದಿನಗಳ ಕ್ರಿಕೆಟ್ ಆಟದಿಂದ ದೇಹದ ಮೇಲಾದ ಪರಿಣಾಮ ತೋರಿಸುವ ಉದ್ದೇಶವಷ್ಟೇ ಇದರ ಹಿಂದಿತ್ತು' ಎಂದು ಹರಭಜನ್ ಎಕ್ಸ್‌ನಲ್ಲಿ ಬರೆದಿದ್ದಾರೆ.


ಲೆಜೆಂಡ್ಸ್ ಕ್ರಿಕೆಟ್ ವಿಶ್ವ ಚಾಂಪಿಯನ್‌ಷಿಪ್ ಟ್ರೋಫಿಯೊಂದಿಗೆ ಯೂಸುಫ್ ಪಠಾಣ್, ಯುವರಾಜ್ ಸಿಂಗ್ ಮತ್ತು ಇರ್ಫಾನ್ ಪಠಾಣ್ —ಎಕ್ಸ್ ಚಿತ್ರ

ಶೂಟಿಂಗ್: ಭವತೇಗ್‌ಗೆ ಬೆಳ್ಳಿ

ನವದೆಹಲಿ: ಭಾರತದ ಭವತೇಗ್ ಸಿಂಗ್ ಗಿಲ್ ಅವರು ಇಟಲಿಯಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್‌ನ ಅಂತಿಮ ದಿನವಾದ ಸೋಮವಾರ ಪುರುಷರ ಸ್ಕೀಟ್ ಸ್ಪರ್ಧೆಯಲ್ಲಿ ಬೆಳ್ಳಿ ಗೆದ್ದರು.

ಕಳೆದ ವರ್ಷ ಜೂನಿಯರ್ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ವಿಜೇತರಾಗಿರುವ ಭವತೇಗ್ ಇಲ್ಲಿ ಫೈನಲ್‌ನಲ್ಲಿ 52 ಸ್ಕೋರ್‌ನೊಂದಿಗೆ ಎರಡನೇ ಸ್ಥಾನ ಪಡೆದರು. ಅಮೆರಿಕದ ಬೆಂಜಮಿನ್ ಕೆಲ್ಲರ್ (56) ಚಿನ್ನ ಗೆದ್ದರು. ಫೈನಲ್‌ನಲ್ಲಿ 6 ಮಂದಿ ಸ್ಪರ್ಧಿಗಳಿದ್ದರು.

ಜೂನಿಯರ್ ಮಹಿಳೆಯರ ಟ್ರ್ಯಾಪ್‌ನಲ್ಲಿ ಸಬೀರಾ ಹ್ಯಾರಿಸ್ ಅವರು ಇದಕ್ಕೂ ಮುಂಚೆ ಕಂಚು ಗೆದ್ದರು. ಎರಡು ಪದಕಗಳೊಂದಿಗೆ ಭಾರತವು ಪದಕ ಪಟ್ಟಿಯಲ್ಲಿ ಕ್ರಮವಾಗಿ ಅಮೆರಿಕ ಮತ್ತು ಇಟಲಿ ನಂತರ ಮೂರನೇ ಸ್ಥಾನದಲ್ಲಿದೆ.